ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

(ಪರಿಷ್ಕೃತ – 2022)

## ಭಾಗ – 2

## 10

## ಹತ್ತನೆಯ ತರಗತಿ

@KTBS
NOT TO BE REPUBLISHED

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

N8H9Q9

## ಪರಿವಿಡಿ


| ಅಧ್ಯಾಯದ ಸಂಖ್ಯೆ | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 17. | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857) | 1 |
| 18. | ಸ್ವಾತಂತ್ರ್ಯ ಹೋರಾಟ | 5 |
| 19. | ಸ್ವಾತಂತ್ರ್ಯೋತ್ತರ ಭಾರತ | 29 |
| 20. | ಮಹಾಯುದ್ಧಗಳು ಹಾಗೂ ಭಾರತದ ಪಾತ್ರ | 34 |
| | **ರಾಜ್ಯಶಾಸ್ತ್ರ** | |
| 21. | ಜಾಗತಿಕ ಸವಾಲುಗಳು ಹಾಗೂ ಭಾರತದ ಪಾತ್ರ | 43 |
| 22. | ಜಾಗತಿಕ ಸಂಸ್ಥೆಗಳು | 49 |
| | **ಸಮಾಜಶಾಸ್ತ್ರ** | |
| 23. | ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು | 60 |
| 24. | ಸಾಮಾಜಿಕ ಸವಾಲುಗಳು | 66 |
| | **ಭೂಗೋಳಶಾಸ್ತ್ರ** | |
| 25. | ಭಾರತದ ಭೂ ಬಳಕೆ ಹಾಗೂ ಕೃಷಿ | 76 |
| 26. | ಭಾರತದ ಖನಿಜ ಹಾಗೂ ಶಕ್ತಿಸಂಪನ್ಮೂಲಗಳು | 86 |
| 27. | ಭಾರತದ ಸಾರಿಗೆ ಹಾಗೂ ಸಂಪರ್ಕ | 94 |
| 28. | ಭಾರತದ ಪ್ರಮುಖ ಕೈಗಾರಿಕೆಗಳು | 103 |
| 29. | ಭಾರತದ ನಿಸರ್ಗ ವಿಕೋಪಗಳು | 109 |
| | **ಅರ್ಥಶಾಸ್ತ್ರ** | |
| 30. | ಗ್ರಾಮೀಣಾಭಿವೃದ್ಧಿ | 117 |
| 31. | ಸಾರ್ವಜನಿಕ ಹಣಕಾಸು ಹಾಗೂ ಆಯ-ವ್ಯಯ | 124 |
| | **ವ್ಯವಹಾರ ಅಧ್ಯಯನ** | |
| 32. | ಉದ್ಯಮಶೀಲತೆ | 134 |
| 33. | ಗ್ರಾಹಕ ಶಿಕ್ಷಣ ಮತ್ತು ರಕ್ಷಣೆ | 141 |


©KTBS NOT TO BE REPUBLISHED

## ಇತಿಹಾಸ

## ಅಧ್ಯಾಯ – 17

# ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

X7I7J2

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳು.
- ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣ.
- ಸಂಗ್ರಾಮದ ವಿಸ್ತರಣೆ ಮತ್ತು ಸ್ವರೂಪ.
- ಸಂಗ್ರಾಮದ ವಿಫಲತೆ ಮತ್ತು ಪರಿಣಾಮಗಳು.

ಭಾರತದಲ್ಲಿ ತಮ್ಮ ಅಧಿಕಾರ ವಿಸ್ತರಣೆ ಉದ್ದೇಶದಿಂದ ಇಂಗ್ಲಿಷರು ಸಹಾಯಕ ಸೈನ್ಯ ಪದ್ಧತಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗಳನ್ನು ಜಾರಿಗೆ ತಂದಿದ್ದರು. ಈ ನೀತಿಗಳಿಂದ ಹಲವು ಸಂಸ್ಥಾನಗಳು ಬ್ರಿಟಿಷರ ವಶವಾಗಿದ್ದವು. ಇದರಿಂದಾಗಿ ಭಾರತೀಯರು ಅಸಮಾಧಾನಗೊಂಡರು. ಇವರ ಆಡಳಿತದ ಬಗ್ಗೆಯೂ ಕೂಡಾ ಜನರಲ್ಲಿ ಅಸಮಾಧಾನವಿತ್ತು. ಈ ಅಸಮಾಧಾನವು 1857ರಲ್ಲಿ ಮಹಾಪ್ರತಿಭಟನೆಯ ರೂಪದಲ್ಲಿ ಸ್ಫೋಟಿಸಿತ್ತು. ಇದನ್ನು ಕೆಲವು ಭಾರತೀಯ ಇತಿಹಾಸಕಾರರು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆದರೆ, ಇಂಗ್ಲಿಷ್ ಇತಿಹಾಸಕಾರರು ಇದೊಂದು 'ಸಿಪಾಯಿ ದಂಗೆ' ಮಾತ್ರ ಎಂದಿದ್ದಾರೆ.

### ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳು :

**ರಾಜಕೀಯ ಕಾರಣಗಳು :** ಬ್ರಿಟಿಷರು ಜಾರಿಗೆ ತಂದಿದ್ದ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯಿಂದಾಗಿ ಹಲವು ದೇಶೀ ಸಂಸ್ಥಾನಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಯಿತು. ಈ ನೀತಿಯಿಂದಾಗಿ ಸತಾರ, ಜೈಪುರ, ಝಾನ್ಸಿ, ಉದಯಪುರ ಮೊದಲಾದ ಸಂಸ್ಥಾನಗಳು ಬ್ರಿಟಿಷರ ವಶವಾದವು. ಡಾಲ್‌ಹೌಸಿಯು ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ದ ರಾಜ ಪದವಿಗಳನ್ನು ರದ್ದುಪಡಿಸಿದನು. ಮೊಘಲ್ ಚಕ್ರವರ್ತಿ, ಔದ್‌ನ ನವಾಬ ಮೊದಲಾದ ರಾಜರುಗಳನ್ನು ಇಂಗ್ಲಿಷರು ಅಧಿಕಾರದಿಂದ ಪದಚ್ಯುತಗೊಳಿಸಿದರು. ಪರಿಣಾಮವಾಗಿ ಇವರನ್ನು ಅವಲಂಬಿಸಿದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು. ಇದು ಬ್ರಿಟಿಷರ ವಿರುದ್ಧದ 1857ರ ಪ್ರತಿಭಟನೆಗೆ ಪ್ರೇರಕವಾಯಿತು.

**ನಿಮಗಿದು ತಿಳಿದಿರಲಿ:**

**ದತ್ತು ಮಕ್ಕಳಿಗೆ ಹಕ್ಕಿಲ್ಲ :** ಈ ನೀತಿಯನ್ನು ಇಂಗ್ಲಿಷರ ಕಾಲದಲ್ಲಿ ಲಾರ್ಡ್ ಡಾಲ್ ಹೌಸಿಯು ಜಾರಿಗೆ ತಂದಿದ್ದನು. ಯಾವುದೇ ದೇಶೀಯ ಸಂಸ್ಥಾನದ ರಾಜನು ತನಗೆ ಮಕ್ಕಳಿಲ್ಲದಿದ್ದರೆ ರಾಜ್ಯವನ್ನು ದತ್ತು ಮಕ್ಕಳಿಗೆ ನೀಡುವಂತಿರಲಿಲ್ಲ. ಇದರಿಂದಾಗಿ ಆ ಸಂಸ್ಥಾನವು ಸಹಜವಾಗಿ ಇಂಗ್ಲಿಷರ ಆಳ್ವಿಕೆಗೆ ಒಳಪಡುತ್ತಿತ್ತು.

**ಆರ್ಥಿಕ ಕಾರಣಗಳು :** ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು. ಇಂಗ್ಲೆಂಡ್ ವ್ಯಾಪಾರಿ ರಾಷ್ಟ್ರವಾಗಿರದೆ ಕೈಗಾರಿಕೆಗಳ ಕಾರ್ಯಾಗಾರವಾಯಿತು. ಭಾರತದಲ್ಲಿದ್ದಂತಹ ಕರಕುಶಲಗಾರರು ನಿರುದ್ಯೋಗಿಗಳಾದರು. ವಿಶೇಷವಾಗಿ ಬಟ್ಟೆ ಮತ್ತು ಉಣ್ಣೆ ಕೈಗಾರಿಕೆಗಳು ಅವನತಿ ಹೊಂದಿ ನೇಕಾರಿಕೆ ವೃತ್ತಿಯವರು ಉದ್ಯೋಗ ಕಳೆದುಕೊಂಡರು. ಗೃಹಕೈಗಾರಿಕೆಗಳು ಇದೇ ಬಗೆಯ ತೀವ್ರ ಆರ್ಥಿಕನಷ್ಟ ಅನುಭವಿಸಿ ಶಿಥಿಲಗೊಂಡವು. ಭಾರತದ ವಸ್ತುಗಳನ್ನು ಇಂಗ್ಲೆಂಡಿನಲ್ಲಿ ಮಾರಲು ಇಂಗ್ಲಿಷರು ದುಬಾರಿ ಸುಂಕವನ್ನು ಹೇರಿದರು. ಜಮೀನ್ದಾರಿ ಪದ್ಧತಿಯಿಂದಾಗಿ ಸರ್ಕಾರ ಮತ್ತು ರೈತನ ಮಧ್ಯೆ ಇದ್ದ ಮಧ್ಯವರ್ತಿ

NOT TO BE REPUBLISHED ©KTBS

ಜಮೀನ್ದಾರನು ಕೃಷಿಕರನ್ನು ಶೋಷಿಸುತ್ತಿದ್ದನು. ಕಂದಾಯ ವಸೂಲಿ ಮಾಡಲು ತಾಲ್ಲೂಕುದಾರರಿಗೆ ನೀಡಿದ್ದ ಹಕ್ಕುಗಳನ್ನು ಹಿಂಪಡೆಯಲಾಯಿತು. ಇನಾಂ ಆಯೋಗ ನೇಮಿಸಿ ಇನಾಂ ಭೂಮಿಯನ್ನು ವಾಪಸ್ ಪಡೆಯಲಾಯಿತು. ಇದರಿಂದಾಗಿ ಕೃಷಿಕರು ತೀವ್ರವಾಗಿ ಅವಮಾನ ಮತ್ತು ಆರ್ಥಿಕಸಂಕಷ್ಟ ಅನುಭವಿಸಿದರು. ಇದೂ ಕೂಡ ರೈತರ ಮಹಾನ್ ಪ್ರತಿಭಟನೆಗೆ ಕಾರಣವಾಯಿತು.

**ಆಡಳಿತಾತ್ಮಕ ಕಾರಣಗಳು :** ಇಂಗ್ಲಿಷರು ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿಗೆ ತಂದರು. ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು. ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಯಿತು. ಇಂಗ್ಲಿಷ್ ನ್ಯಾಯಾಧೀಶರು ಬಹುತೇಕವಾಗಿ ಇಂಗ್ಲಿಷರ ಪರವಾಗಿ ನ್ಯಾಯ ನೀಡುತ್ತಿದ್ದರು. ಹೊಸ ಕಾನೂನಿನ ಆಶಯಗಳು ಜನರಿಗೆ ಅರಿವಾಗಲಿಲ್ಲ.

**ಸೈನಿಕ ಕಾರಣಗಳು :** ಬ್ರಿಟಿಷರ ಸೈನ್ಯದಲ್ಲಿ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರವಾಗಿತ್ತು. ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ. ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.

## ಹೋರಾಟದ ಸ್ಫೋಟ ಮತ್ತು ಹರಡುವಿಕೆ

ಇಂಗ್ಲಿಷ್ ಸೇನೆಯಲ್ಲಿದ್ದ ಹೆಚ್ಚಿನ ಪ್ರಮಾಣದ ಭಾರತೀಯ ಸಿಪಾಯಿಗಳು ತಾವೆಲ್ಲರೂ ಒಂದಾಗಿ ಹೋರಾಡಿದರೆ ಇಂಗ್ಲಿಷರನ್ನು ಭಾರತದಿಂದ ಓಡಿಸಬಹುದು ಎಂಬ ಆತ್ಮವಿಶ್ವಾಸವನ್ನು ಹೊಂದಿದ್ದರು. ಈ ಸನ್ನಿವೇಶದಲ್ಲಿ ಸೈನಿಕರಿಗೆ 'ರಾಯಲ್ ಎನ್‌ಫೀಲ್ಡ್' ಎಂಬ ನವೀನ ಬಂದೂಕುಗಳನ್ನು ನೀಡುತ್ತಿದ್ದರು. ಬಂದೂಕುಗಳಿಗೆ ಉಪಯೋಗಿಸುತ್ತಿದ್ದ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತ್ತು. ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು. ಇದರಿಂದಾಗಿ ಈ ಘಟನೆಯು ದಂಗೆಗೆ ತಕ್ಷಣದ ಕಾರಣವಾಯಿತು.

ಬ್ಯಾರಕ್‌ಪುರದಲ್ಲಿನ ಸೈನಿಕ ಪಡೆಯಲ್ಲಿ ಹಬ್ಬಿದ ಈ ವದಂತಿಯು ತೀವ್ರ ಅಸಮಾಧಾನಕ್ಕೆ ಕಾರಣವಾಯಿತು. ಸೈನಿಕರಿಗೆ ತುಪಾಕಿಯನ್ನು ಹಲ್ಲಿನಿಂದ ಕಚ್ಚಿ ತೆಗೆಯುವಂತೆ ಇಂಗ್ಲಿಷರು ಆದೇಶಿಸಿದಾಗ ಇದನ್ನು ನಿರಾಕರಿಸಿ ಮೇಲಾಧಿಕಾರಿಗಳ ವಿರುದ್ಧ ಬ್ಯಾರಕ್‌ಪುರದ ಸೈನಿಕರು ಬಂಡಾಯವೆದ್ದರು. ಇದೇ ಸಂದರ್ಭದಲ್ಲಿ ಮಂಗಲಪಾಂಡೆ ಎಂಬ ಸೈನಿಕನು ಬ್ರಿಟಿಷ್ ಸೈನ್ಯದ ಅಧಿಕಾರಿಯೊಬ್ಬನನ್ನು ಕೊಂದನು. ಇದರ ಪರಿಣಾಮವಾಗಿ ಮಂಗಲ ಪಾಂಡೆಯನ್ನು ಬಂಧಿಸಿ ವಿಚಾರಣೆಗೊಳಪಡಿಸಿ ಗಲ್ಲಿಗೇರಿಸಲಾಯಿತು.

ಮೀರತ್ ಬ್ರಿಟಿಷರ ಪ್ರಬಲ ಸೇನಾ ನೆಲೆಯಾಗಿತ್ತು. ಇಲ್ಲಿಯೂ ಕೂಡಾ ಇಂಗ್ಲಿಷರು ಭಾರತೀಯ ಸೈನಿಕರಿಗೆ ತುಪಾಕಿಗಳನ್ನು ಬಳಸಲು ಆದೇಶಿಸಿದಾಗ ಭಾರತೀಯ ಸೈನಿಕರು ಅದನ್ನು ನಿರಾಕರಿಸಿದರು. ಆಗ ಸಿಪಾಯಿಗಳನ್ನು ಬಂಧಿಸಲಾಯಿತು. ಇದರಿಂದಾಗಿ ಮೀರತ್‌ನಲ್ಲಿ ದಂಗೆ ಉಂಟಾಯಿತು. ಪರಿಣಾಮವಾಗಿ ಸೈನಿಕರು ಸೆರೆಮನೆಗೆ ನುಗ್ಗಿ ಈಗಾಗಲೇ ಬಂಧಿತರಾಗಿದ್ದ ಭಾರತೀಯ ಸಿಪಾಯಿಗಳನ್ನು ಬಿಡುಗಡೆಗೊಳಿಸಿದರು. ಇದು ಸ್ವಾತಂತ್ರ್ಯ ಸಂಗ್ರಾಮದ ಬೀಜಾಂಕುರಕ್ಕೆ ನಾಂದಿಯಾಯಿತು. ನಂತರ ಸೈನಿಕರ ಗುಂಪು ಮೀರತ್‌ನಿಂದ ದೆಹಲಿಗೆ ತಲುಪಿತು. ಅವರು ಕೆಂಪುಕೋಟೆಗೆ ಮುತ್ತಿಗೆ ಹಾಕಿ ಮೊಘಲ್ ದೊರೆ ಎರಡನೇ ಬಹದ್ದೂರ ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿದರು. ಹಲವಾರು ಭಾಗಗಳಿಂದ ಪ್ರತಿಭಟನಾ ನಿರತ ಸಿಪಾಯಿಗಳು ದೆಹಲಿಗೆ ತಲುಪಿದರು. ಇದರಿಂದಾಗಿ ಪ್ರತಿಭಟನೆಯು ತೀವ್ರ ಸ್ವರೂಪ ತಾಳಿತು. ಕಾಳ್ಗಿಚ್ಚಿನಂತೆ ಪ್ರತಿಭಟನೆಯು ದೆಹಲಿ, ಕಾನ್ಪುರ ಮತ್ತು ಝಾನ್ಸಿಗಳಲ್ಲಿ ಹರಡಿತು.

© KTBS NOT TO BE REPUBLISHED

ಕಾನ್ಪುರದಲ್ಲಿ ನಾನಾ ಸಾಹೇಬನು ಸಿಡಿದೆದ್ದನು. ಈತನಿಗೆ ತಾತ್ಯಾ ಟೋಪೆಯು ಸಹಾಯಕನಾಗಿದ್ದನು. ಝಾನ್ಸಿಯಲ್ಲಿ ರಾಣಿ ಲಕ್ಷ್ಮಿಬಾಯಿಯ ನಾಯಕತ್ವದಲ್ಲಿ ದಂಗೆ ಉಂಟಾಯಿತು. ಕಾನ್ಪುರ ಬ್ರಿಟಿಷರ ವಶವಾದ ನಂತರ ತಾತ್ಯಾಟೋಪೆಯು ಝಾನ್ಸಿರಾಣಿಯ ಸಹಾಯಕ್ಕೆ ಬಂದನು.


ತಾತ್ಯಾಟೋಪೆ

ಪ್ರತಿಭಟನೆಯ ಕಾವು ಲಕ್ನೋವಿನಲ್ಲಿಯೂ ಉಂಟಾಯಿತು. ಆದರೆ ಅಂತಿಮವಾಗಿ ಲಕ್ನೋ ಇಂಗ್ಲಿಷರ ವಶವಾಯಿತು. ಇಲ್ಲಿಂದ ಸಂಗ್ರಾಮವು ಯಮುನಾ ನದಿಯ ದಕ್ಷಿಣಕ್ಕೆ ಹಬ್ಬಿತು. ಇದರಿಂದಾಗಿ ಝಾನ್ಸಿಯಲ್ಲಿನ ಸಿಪಾಯಿಗಳು ಪ್ರಭಾವಿತರಾದರು. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ಕೆರಳಿದ ಝಾನ್ಸಿರಾಣಿ ಲಕ್ಷ್ಮಿಬಾಯಿಯು ಇಂಗ್ಲಿಷರ ವಿರುದ್ಧ ಯುದ್ಧ ಸಾರಿದಳು. ಯುದ್ಧ ಮಾಡಿ ಗ್ವಾಲಿಯರ್‌ನ್ನು ವಶಕ್ಕೆ ಪಡೆದಳು. ಮತ್ತೊಮ್ಮೆ ಬ್ರಿಟಿಷರ ವಿರುದ್ಧ ನಡೆದ ಹೋರಾಟದಲ್ಲಿ ಶೌರ್ಯದಿಂದ ಹೋರಾಡಿ ರಾಣಿಯು ಅಸುನೀಗಿದಳು. ಇಂದಿಗೂ ರಾಣಿಯು ಸ್ವಾತಂತ್ರ್ಯ ಸಂಗ್ರಾಮ ಇತಿಹಾಸದಲ್ಲಿ ಹೆಮ್ಮೆಯ ಸ್ಥಾನವನ್ನು ಹೊಂದಿದ್ದಾಳೆ.


ಝಾನ್ಸಿರಾಣಿ ಲಕ್ಷ್ಮಿಬಾಯಿ

**ದಂಗೆಯ ವಿಫಲತೆಗೆ ಕಾರಣಗಳು :**

1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವಾರು ಕಾರಣಗಳಿಂದ ವಿಫಲವಾಯಿತು. ಇದು ಇಡೀ ಭಾರತವನ್ನು ವ್ಯಾಪಿಸಿದ ಹೋರಾಟವಾಗಿರಲಿಲ್ಲ. ಇದು ದೇಶದ ಬಿಡುಗಡೆಗಾಗಿ ನಡೆದದ್ದಕ್ಕಿಂತ ಅವರ ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗಾಗಿ ನಡೆದಿತ್ತು. ಇದು ಯೋಜಿತ ಹೋರಾಟವಾಗಿರದೆ ಅನಿರೀಕ್ಷಿತ ಕಾರಣಗಳಿಂದ ಪ್ರೇರೇಪಿತವಾಗಿತ್ತು. ಬ್ರಿಟಿಷ್ ಸೈನಿಕರಲ್ಲಿನ ಒಗ್ಗಟ್ಟು ಮತ್ತು ಭಾರತೀಯ ಸೈನಿಕರಲ್ಲಿದ್ದ ಭಿನ್ನತೆಯು ಹೋರಾಟದ ವಿಫಲತೆಗೆ ಕಾರಣವಾಗಿದೆ. ಅಲ್ಲದೆ ಸೂಕ್ತ ಮಾರ್ಗದರ್ಶನ ಮತ್ತು ವ್ಯವಸ್ಥಿತ ಸಂಘಟನೆಯ ಕೊರತೆ ಇತ್ತು. ಹಾಗೆಯೇ ಯುದ್ಧ ತಂತ್ರ, ಸೈನಿಕ ಪರಿಣತಿ, ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತಿನ ಕೊರತೆ ಇತ್ತು, ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ. ಹಲವಾರು ದೇಶೀಯ ಸಂಸ್ಥಾನಗಳ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆಯಿಂದಾಗಿ ಸಿಪಾಯಿಗಳಿಗೆ ಬೆಂಬಲ ನೀಡಲಿಲ್ಲ. ಸಿಪಾಯಿಗಳು ಮಾಡಿದಂತಹ ಲೂಟಿ, ದರೋಡೆ ಮೊದಲಾದ ಗಂಭೀರವಾದ ತಪ್ಪುಗಳಿಂದಾಗಿ ಜನರ ವಿಶ್ವಾಸ ಕಳೆದುಕೊಂಡರು.

**ದಂಗೆಯ ಪರಿಣಾಮಗಳು :**

ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡು ಬ್ರಿಟನ್ ಸಾಮ್ರಾಜ್ಞಿಗೆ ಆಡಳಿತವು ವರ್ಗಾವಣೆಗೊಂಡಿತು. ಭಾರತದ ವ್ಯವಹಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು. 1858ರಲ್ಲಿ ಬ್ರಿಟನ್ ರಾಣಿಯು ಘೋಷಣೆ ಹೊರಡಿಸಿದರು. ಈ ಘೋಷಣೆಯನ್ನು ಭಾರತೀಯ ಮಹಾಸನ್ನದು ಎಂದು ಕರೆಯಲಾಗಿದೆ. ಅದರಲ್ಲಿ ಈ ಕೆಳಗಿನ ಅಂಶಗಳನ್ನು ಪ್ರಸ್ತಾಪಿಸಲಾಗಿತ್ತು.

- ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
- ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.

©KTBS NOT TO BE REPUBLISHED

- ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.
- ಕಾನೂನಿನ ಮುಂದೆ ಸಮಾನತೆ.
- ಧಾರ್ಮಿಕ ಸಹಿಷ್ಣುತೆಯೊಂದಿಗೆ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.

ಭಾರತೀಯರ ಪ್ರೀತಿ, ಬೆಂಬಲ, ವಿಶ್ವಾಸವಿಲ್ಲದಿದ್ದರೆ ನಾವು ಶಾಂತಿಯಿಂದ ಆಳ್ವಿಕೆ ಮಾಡಲು ಸಾಧ್ಯವಿಲ್ಲವೆಂಬುದನ್ನು ಬ್ರಿಟಿಷರು ಅರಿತರು. ಇದು ಭಾರತೀಯರ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿಯನ್ನು ನೀಡಿತು. ಭಾರತೀಯರು ಇನ್ನು ಮುಂದೆ ಹೋರಾಟದ ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳುವ ಅನಿವಾರ್ಯತೆಯನ್ನು ಕಂಡುಕೊಂಡರು.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳವನ್ನು ಸೂಕ್ತ ಪದದಿಂದ ತುಂಬಿರಿ.**

1. 1857ರ ಹೋರಾಟವನ್ನು ಬ್ರಿಟಿಷ್ ಇತಿಹಾಸಕಾರರು ____________ ಎಂದು ಕರೆದಿದ್ದಾರೆ.
2. ಡಾಲ್ ಹೌಸಿಯು ಜಾರಿಗೆ ತಂದ ನೀತಿ ____________ .
3. 1857ರ ಹೋರಾಟದ ಸಮಯದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದವನು ____________ .
4. ಝಾನ್ಸಿ ರಾಣಿಯು ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ____________ ನ್ನು ವಶಕ್ಕೆ ಪಡೆದಳು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :**

1. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯಿಂದಾದ ಪರಿಣಾಮಗಳು ಯಾವುವು? ವಿಶ್ಲೇಷಿಸಿ.
2. 1857ರ ಹೋರಾಟಕ್ಕೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು? ವಿವರಿಸಿ.
3. 1857ರ ಹೋರಾಟದಲ್ಲಿ ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವುವು?
4. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣಗಳಾವುವು?
5. ಹೋರಾಟದ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿ.
6. 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?

**III. ಚಟುವಟಿಕೆಗಳು :**

1. ಭಾರತದ ಭೂಪಟದಲ್ಲಿ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದ ಬ್ರಿಟಿಷರ ವಶವಾದ ಸಂಸ್ಥಾನಗಳನ್ನು ಗುರುತಿಸಿ.
2. 1857ರ ಹೋರಾಟವು ಭಾರತೀಯರಿಗೆ 'ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' – ಈ ವಿಷಯದ ಬಗ್ಗೆ ತಜ್ಞರಿಂದ ಉಪನ್ಯಾಸ ಏರ್ಪಡಿಸಿ.

NOT TO BE REPUBLISHED
© KTBS

## ಅಧ್ಯಾಯ – 18

# ಸ್ವಾತಂತ್ರ್ಯ ಹೋರಾಟ

P3A3R9

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್
- ಮಂದಗಾಮಿಗಳು, ತೀವ್ರವಾದಿಗಳು ಮತ್ತು ಕ್ರಾಂತಿಕಾರಿಗಳು
- ಅಸಹಕಾರ ಚಳವಳಿ, ಸವಿನಯ ಕಾನೂನು ಭಂಗ ಚಳವಳಿ, ಕ್ವಿಟ್ ಇಂಡಿಯಾ ಚಳವಳಿ.
- ರೈತರು ಮತ್ತು ಕಾರ್ಮಿಕರ ಪ್ರತಿಭಟನೆಗಳು.
- ಸುಭಾಷ್ ಚಂದ್ರಬೋಸ್, ಡಾ. ಬಿ.ಆರ್. ಅಂಬೇಡ್ಕರ್, ಪಂಡಿತ್ ಜವಾಹರಲಾಲ್ ನೆಹರು ಮತ್ತು ಮಹಮದ್ ಅಲಿ ಜಿನ್ನಾ.
- ಭಾರತದ ವಿಭಜನೆ.

ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಯನ್ನು ವಿರೋಧಿಸಿದ ಸನ್ನಿವೇಶಗಳು ಹಲವು. ಅನೇಕ ರಾಜಪ್ರಭುತ್ವಗಳು ಬ್ರಿಟಿಷರ ವಿರುದ್ಧ ಹೋರಾಡಿದ್ದು ಅವರ ಸ್ವಹಿತಾಸಕ್ತಿಗಾಗಿತ್ತು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಹಲವಾರು ಬದಲಾವಣೆಗಳು ಹಾಗೂ ಪರಿಣಾಮಕಾರಿ ಸುಧಾರಣೆಗಳು ಕಂಡು ಬಂದವು. ಸಾರಿಗೆ ಮತ್ತು ಸಂಪರ್ಕ, ಪತ್ರಿಕೋದ್ಯಮ, ಸಂಘಗಳ ಸ್ಥಾಪನೆ, ಆಡಳಿತ ಸುಧಾರಣೆಗಳಲ್ಲಿ ಬದಲಾವಣೆಗಳು ಕಂಡುಬಂದವು. ಜನರು ಅಲ್ಲಲ್ಲಿ ಸಂಘಟಿತರಾಗಿ ತಮ್ಮ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಸಂಸ್ಥೆಗಳನ್ನು ಅನೇಕ ಪ್ರಾಂತ್ಯಗಳಲ್ಲಿ ಹುಟ್ಟುಹಾಕಿದರು. ಲಾರ್ಡ್ ಲಿಟ್ಟನ್ ಪತ್ರಿಕೋದ್ಯಮದಲ್ಲಿ ಜನರನ್ನು ನಿಯಂತ್ರಿಸಲು 1878ರಲ್ಲಿ 'ದೇಶೀಯ ಪತ್ರಿಕೆಗಳ ನಿಯಂತ್ರಣ ಕಾಯ್ದೆ' ಒಂದೆಡೆ ಜಾರಿಗೆ ತಂದರೆ, ಮತ್ತೊಂದೆಡೆ ಲಾರ್ಡ್ ರಿಪ್ಪನ್ ಇಲ್ಬರ್ಟ್ ಮಸೂದೆಯನ್ನು ಜಾರಿಗೆ ತಂದು, ಏಕರೂಪ ಕಾನೂನು ವ್ಯವಸ್ಥೆಗೆ ದಾರಿ ಮಾಡಿಕೊಟ್ಟನು. ಈ ಮಸೂದೆಯನ್ನು ವಿರೋಧಿಸಿ ಭಾರತದಲ್ಲಿನ ಬ್ರಿಟಿಷರು ಸಂಘಟಿತ ಪ್ರಯತ್ನ ನಡೆಸಿ ಜಯಶೀಲರಾದರು.

ದೇಶಾದ್ಯಂತ ಹಲವಾರು ರೀತಿಯ ಹೋರಾಟಗಳ ಫಲವಾಗಿ ಸ್ವಾತಂತ್ರ್ಯ ಹೋರಾಟವು ಒಂದು ಸ್ವರೂಪವನ್ನು ಪಡೆಯಲು ಸಾಧ್ಯವಾಯಿತು. ಇನ್ನು ಮುಂದೆ ಸಶಸ್ತ್ರ ಹೋರಾಟಗಳು ಉದ್ಭವವಾಗಬಾರದೆಂದು ಬ್ರಿಟಿಷರು ಕಾರ್ಯತಂತ್ರವನ್ನು ರೂಪಿಸಿದರು. ಪರಿಣಾಮವಾಗಿ 1858ರ ರಾಣಿ ಮಹಾಸನ್ನದನ್ನು ಬ್ರಿಟಿಷ್ ಸರ್ಕಾರವು ಘೋಷಿಸಿ ಭಾರತೀಯರನ್ನು ಬ್ರಿಟನ್ನಿನ ಪ್ರಜೆಗಳೆಂದು ಪರಿಗಣಿಸಿತು. ಆ ಮೂಲಕ ಭಾರತೀಯರಿಗೆ ಅನೇಕ ಬಗೆಯ ಸವಲತ್ತುಗಳನ್ನು ನೀಡುವುದಾಗಿ ಬ್ರಿಟಿಷ್ ಸರ್ಕಾರ ಘೋಷಿಸಿತು. ನಂತರದ ಬೆಳವಣಿಗೆಯಲ್ಲಿ ಉನ್ನತ ವರ್ಗದ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಕಲಿತ ಹೊಸ ಪೀಳಿಗೆಯ ಭಾರತೀಯರು ಸಂವಿಧಾನಾತ್ಮಕವಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಲು ಆರಂಭಿಸಿದರು. ಇವರ ಒಟ್ಟಾರೆ ಪ್ರಯತ್ನಗಳ ಪ್ರತಿಫಲವೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ನಾಂದಿಯಾಯಿತು.

© KTBS NOT TO BE REPUBLISHED

## ಭಾರತೀಯ ರಾಷ್ಟ್ರೀಯ ಕಾಂಗ್ರೆಸ್

ರಾಮ್ ಮೋಹನ್ ರಾಯರವರ ಕಾಲದಿಂದಲೂ ಮಧ್ಯಮ ವರ್ಗದ ಭಾರತೀಯರ ಮನಸ್ಸು ಹೊಸ ಹೊಸ ಸಂದರ್ಭಗಳಲ್ಲಿ ಹೊಸ ಸವಾಲುಗಳನ್ನು ಎದುರಿಸಲು ಸಜ್ಜಾಗುತ್ತಿತ್ತು. ಈ ನಿಟ್ಟಿನಲ್ಲಿ ದೇಶಾದ್ಯಂತ ಹಲವಾರು ಸಂಘ ಸಂಸ್ಥೆಗಳು ಹುಟ್ಟಿದವು. ಹೀಗೆ ಸ್ಥಾಪನೆಯಾದ ಸಂಘಟನೆಗಳಲ್ಲಿ 'ದಿ ಹಿಂದೂ ಮೇಳ', 'ದಿ ಈಸ್ಟ್ ಇಂಡಿಯಾ ಅಸೋಸಿಯೇಷನ್', 'ಪೂನಾ ಸಾರ್ವಜನಿಕ ಸಭಾ' ಮತ್ತು 'ದಿ ಇಂಡಿಯನ್ ಅಸೋಸಿಯೇಷನ್' ಪ್ರಮುಖವಾಗಿದ್ದವು. ಇವುಗಳು ಸೀಮಿತ ಎಲ್ಲೆ ಮತ್ತು ಹಿತಾಸಕ್ತಿಗಳನ್ನು ಒಳಗೊಂಡಿದ್ದವು. ಕಾಲಾಂತರದಲ್ಲಿ ರಾಷ್ಟ್ರಮಟ್ಟದಲ್ಲಿ ಒಗ್ಗೂಡಲು ಕಾತುರದಿಂದ ಕಾಯುತ್ತಿದ್ದವು. ಇಂತಹ ಒಂದು ಅಖಿಲ ಭಾರತೀಯ ಮಟ್ಟದ ಸಂಘಟನೆಯನ್ನು ಸ್ಥಾಪಿಸುವ ಸಂದರ್ಭವು ಬಂದಿತು. ಅದು 1885ರಲ್ಲಿ ಎ.ಓ. ಹ್ಯೂಮ್ ಎಂಬ ನಿವೃತ್ತ ಸಿವಿಲ್ ಸರ್ವಿಸ್ ಅಧಿಕಾರಿಯ ಮೂಲಕ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯೊಂದಿಗೆ ಈಡೇರಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾರತೀಯರಲ್ಲಿ ರಾಜಕೀಯ ಪ್ರಜ್ಞೆ ಮತ್ತು ರಾಷ್ಟ್ರೀಯತೆಯ ಮನೋಭಾವನೆಯನ್ನು ವೃದ್ಧಿಸಲು ಶ್ರಮಿಸಿತು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾರತೀಯರಲ್ಲಿದ್ದ ಹಲವಾರು ವೈವಿಧ್ಯಗಳ ನಡುವೆಯೂ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸಲು ಪ್ರಯತ್ನಿಸಿತು. ದೇಶೀ ಭಾಷೆಗಳಲ್ಲಿ ಪತ್ರಿಕೆಗಳನ್ನು ಪ್ರಕಟಿಸಿ ಆ ಮೂಲಕ ರಾಜಕೀಯ ಸಮಸ್ಯೆಗಳ ಚರ್ಚೆ ಆರಂಭಿಸಿತು. ಇದರಿಂದಾಗಿ ರಾಜಕೀಯ ಸಮಸ್ಯೆಗಳು ಮತ್ತು ವಿಚಾರಗಳು ಜನರ ಮನಮುಟ್ಟಿದವು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಲವರ್ಧನೆಯನ್ನು ಗಮನಿಸಿದ ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಯನ್ನು ಜಾರಿಗೆ ತಂದರು. ಹಿಂದೂ–ಮುಸ್ಲಿಮರನ್ನು ಬೇರ್ಪಡಿಸಿದರು. ಆದರೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ರಾಷ್ಟ್ರೀಯ ವಿಚಾರಗಳಿಗೆ ಸಂಬಂಧಪಟ್ಟಂತೆ ರಚನಾತ್ಮಕವಾದ ಕಾರ್ಯತಂತ್ರಗಳನ್ನು ರೂಪಿಸಿತು.

19ನೆಯ ಶತಮಾನದ ಕೊನೆಯ ಭಾಗದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಭಿನ್ನಮತ ಕಾಣಿಸಿಕೊಂಡಿತು. ಕಾರ್ಯತಂತ್ರ, ನಂಬಿಕೆಗಳು ಮತ್ತು ಹೋರಾಟದ ಮಾದರಿಯಿಂದಾಗಿ ಅವರುಗಳನ್ನು ಮಂದಗಾಮಿಗಳು ಮತ್ತು ತೀವ್ರವಾದಿಗಳೆಂದು ಗುರುತಿಸುತ್ತಾರೆ.

### ಮೊದಲನೇ ಹಂತ : ಮಂದಗಾಮಿಗಳು (1885 – 1906)

ಸಾಂಪ್ರದಾಯಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿಯುಗ' ಎನ್ನುತ್ತಾರೆ. ಮಂದಗಾಮಿಗಳಲ್ಲಿ ಎಂ.ಜಿ. ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ದಾದಾ ಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಇವರುಗಳನ್ನು ಪ್ರಮುಖವಾಗಿ ಗುರುತಿಸಬಹುದು. ಮಂದಗಾಮಿಗಳು ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ ಇಟ್ಟಿದ್ದರು.



ದಾದಾಬಾಯಿ ನವರೋಜಿ



ಗೋಪಾಲಕೃಷ್ಣ ಗೋಖಲೆ

@KTBS
NOT TO BE REPUBLISHED

**ಚಟುವಟಿಕೆ :**


ಮಂದಗಾಮಿ ಹೋರಾಟಗಾರರ ಚಿತ್ರಗಳನ್ನು ಸಂಗ್ರಹಿಸಿ ಮತ್ತು ಅವರ ಜೀವನ ಚರಿತ್ರೆ ಪುಸ್ತಕಗಳನ್ನು ಓದಿ ಹೆಚ್ಚಿನ ಮಾಹಿತಿ ತಿಳಿಯಿರಿ.

ಸಾಂವಿಧಾನಿಕ ಚೌಕಟ್ಟಿನೊಳಗೆ ಪ್ರಾರ್ಥನೆ ಮತ್ತು ಮನವಿಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು. ಮಂದಗಾಮಿಗಳು ಜನರಿಗೆ ರಾಜಕೀಯ ಶಿಕ್ಷಣವನ್ನು ನೀಡುವ ಪ್ರಯತ್ನ ಮಾಡಿದರು. ಇವರು ಸಮಸ್ಯೆಗಳ ಬಗ್ಗೆ ಸಭೆಗಳನ್ನು ನಡೆಸಿ, ಚರ್ಚಿಸಿ, ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದರು. ದೇಶದ ಕೈಗಾರಿಕೆಗಳ ಅಭಿವೃದ್ಧಿ, ಸೈನಿಕ ವೆಚ್ಚ ಕಡಿಮೆ ಮಾಡುವುದು, ಉತ್ತಮ ಶಿಕ್ಷಣ ಕೊಡುವುದು, ಬಡತನದ ಬಗ್ಗೆ ಅಧ್ಯಯನ ನಡೆಸಲು ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸುವುದು ಇವೇ ಮೊದಲಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರು.

ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯಿಂದಾದ ದುಷ್ಪರಿಣಾಮಗಳನ್ನು ಮೊಟ್ಟಮೊದಲನೆಯ ಬಾರಿಗೆ ಮಂದಗಾಮಿಗಳು ಕೂಲಂಕಷವಾಗಿ ಅವಲೋಕಿಸುವ ಪ್ರಯತ್ನ ಮಾಡಿದರು. ಭಾರತದ ಸಂಪತ್ತು ಯಾವ ರೀತಿಯಲ್ಲಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ ಎಂಬುದನ್ನು ಅಂಕಿ ಅಂಶಗಳೊಂದಿಗೆ ಅವರು ವಿವರಿಸಿದರು. ದಾದಾಬಾಯಿ ನವರೋಜಿಯವರು ಇಂಗ್ಲೆಂಡಿಗೆ ಸೋರಿಹೋಗುವ ಸಂಪತ್ತಿನ ಬಗ್ಗೆ ವಿಶ್ಲೇಷಿಸಿದರು. ಅವರು ಅದನ್ನು 'ಸಂಪತ್ತಿನ ಸೋರುವಿಕೆ ಸಿದ್ಧಾಂತ' (Drain Theory) ಎಂದು ಕರೆದರು. ಆಮದನ್ನು ಹೆಚ್ಚಿಸಿ ರಫ್ತನ್ನು ಕಡಿಮೆ ಮಾಡಿದ್ದರಿಂದ ಪ್ರತಿಕೂಲ ಸಂದಾಯ ಉಂಟಾಗಿ ದೇಶದ ಸಂಪತ್ತು ಇಂಗ್ಲೆಂಡಿಗೆ ಹರಿಯಲು ಕಾರಣವಾಯಿತೆಂದು ಅವರು ಪ್ರತಿಪಾದಿಸಿದರು. ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನ, ನಿವೃತ್ತಿ ವೇತನ ಮತ್ತು ಆಡಳಿತಾತ್ಮಕ ವೆಚ್ಚವನ್ನು ಭಾರತವೇ ಭರಿಸಬೇಕಾದ ಹಿನ್ನೆಲೆಯಲ್ಲಿ ಅಪಾರವಾದ ಸಂಪತ್ತು ಬ್ರಿಟನ್ನಿಗೆ ಹರಿದು ಹೋಗುತ್ತಿತ್ತು ಎಂಬುದನ್ನು ಅವರು ವಿವರವಾಗಿ ಜನರ ಮುಂದಿಟ್ಟರು. ಮಂದಗಾಮಿಗಳ ಕಾಲವನ್ನು ಉದಾರ ರಾಷ್ಟ್ರವಾದದ ಕಾಲವೆಂದು ಹೇಳಲಾಗಿದೆ.

### ಎರಡನೇ ಹಂತ : ತೀವ್ರವಾದಿಗಳು (1906 – 1920)

ಮಂದಗಾಮಿಗಳ ಮೃದು ಧೋರಣೆಯಿಂದ ಕಾಂಗ್ರೆಸಿಗರಲ್ಲೇ ಅಸಂತುಷ್ಟರಾಗಿದ್ದ ಇನ್ನೊಂದು ಗುಂಪು ಇವರನ್ನು 'ರಾಜಕೀಯ ಭಿಕ್ಷುಕರು' ಎಂದು ಕರೆದರು. ಮಂದಗಾಮಿಗಳ ಮೃದುಧೋರಣೆಯನ್ನು ಟೀಕೆ ಮಾಡುತ್ತಾ, ತೀವ್ರವಾದ ನಿಲುವುಗಳನ್ನು ಪ್ರತಿಪಾದಿಸುತ್ತಾ ಬಂದ ಬಣವನ್ನು ತೀವ್ರವಾದಿಗಳೆಂದು ಗುರುತಿಸಲಾಗಿದೆ. ಅರಬಿಂದೋ ಘೋಷ್, ಬಿಪಿನ್‌ಚಂದ್ರ ಪಾಲ್, ಲಾಲ ಲಜಪತ ರಾಯ್ ಮತ್ತು ಬಾಲಗಂಗಾಧರ್ ತಿಲಕ್ ಮುಂತಾದವರು ಈ ಬಣದ ಪ್ರಮುಖರಾಗಿದ್ದರು.


ಅರಬಿಂದೋ ಘೋಷ್


ಬಾಲಗಂಗಾಧರ ತಿಲಕ


ಲಾಲ ಲಜಪತ್ ರಾಯ್


ಬಿಪಿನ್ ಚಂದ್ರಪಾಲ್

@KTBS NOT TO BE REPUBLISHED

**ಬಂಗಾಳದ ವಿಭಜನೆ :** ಬಂಗಾಳವು ಬ್ರಿಟಿಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು. ಇದನ್ನು ಹತ್ತಿಕ್ಕಲು ವೈಸ್‌ರಾಯ್ ಲಾರ್ಡ್ ಕರ್ಜನ್ನನು ಆಡಳಿತಾತ್ಮಕ ನೆಪವನ್ನು ಮುಂದಿಟ್ಟುಕೊಂಡು ಬಂಗಾಳ ವಿಭಜನೆಯ ಯೋಜನೆಯನ್ನು ರೂಪಿಸಿದನು. ಪೂರ್ವ ಮತ್ತು ಪಶ್ಚಿಮ ಬಂಗಾಳವನ್ನು ಹಿಂದೂ ಮತ್ತು ಮುಸ್ಲಿಂ ಬಹುಸಂಖ್ಯಾತ ಪ್ರದೇಶಗಳಾಗಿ ವಿಂಗಡಿಸಿದನು. ಹೀಗೆ ಸಮುದಾಯಗಳ ನಡುವೆ ಕಂದಕವನ್ನುಂಟುಮಾಡಿ ಸ್ವಾತಂತ್ರ್ಯ ಹೋರಾಟದ ತೀವ್ರತೆಯನ್ನು ಕುಗ್ಗಿಸುವ ಸಂಚನ್ನು ರೂಪಿಸಿದನು.

ಬ್ರಿಟಿಷರ ಒಡೆದು ಆಳುವ ನೀತಿಯ ಪ್ರತೀಕವಾಗಿದ್ದ 1905ರ ಬಂಗಾಳ ವಿಭಜನೆಯನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವಿರೋಧಿಸಿತು. ಆದರೆ 1906ರಲ್ಲಿ ಸ್ಥಾಪನೆಯಾದ ಮುಸ್ಲಿಂ ಲೀಗ್ ಬಂಗಾಳ ವಿಭಜನೆಯನ್ನು ಬೆಂಬಲಿಸಿತು. ಬಂಗಾಳದ ವಿಭಜನೆಯ ವಿರುದ್ಧ ದೇಶದಾದ್ಯಂತ ಪ್ರತಿರೋಧಗಳು ವ್ಯಕ್ತವಾದವು. ಪ್ರತಿರೋಧದ ಒಂದು ಬಗೆಯಾಗಿ ಸ್ವದೇಶಿ ಚಳವಳಿಯನ್ನು ಪ್ರಾರಂಭಿಸಲಾಯಿತು. ಇದನ್ನು ದೇಶದಾದ್ಯಂತ ಕೊಂಡೊಯ್ದವರು ತೀವ್ರವಾದಿಗಳು. ವಿದೇಶಿ ವಸ್ತುಗಳು ಮತ್ತು ಅದನ್ನು ಪ್ರೋತ್ಸಾಹಿಸುವ ಸಂಸ್ಥೆಗಳನ್ನು ಬಹಿಷ್ಕರಿಸಲು ಸ್ವದೇಶಿ ಆಂದೋಲನವು ಕರೆ ನೀಡಿತು. ಸ್ವದೇಶಿ ವಸ್ತುಗಳನ್ನು ಬಳಸುವಂತೆ ಅವರು ಭಾರತೀಯರನ್ನು ಪ್ರೇರೇಪಿಸಿದರು. ಭಾರತೀಯರ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಬಂಗಾಳದ ವಿಭಜನೆಯನ್ನು 1911ರಲ್ಲಿ ಬ್ರಿಟಿಷ್ ಸರ್ಕಾರವು ಹಿಂಪಡೆಯಿತು.

ತೀವ್ರವಾದಿಗಳು ಉತ್ತಮ ಆಳ್ವಿಕೆಯು ಎಂದೂ ಕೂಡ ಸ್ವಯಂ ಆಳ್ವಿಕೆಗೆ ಪರ್ಯಾಯವಾಗಲಾರದೆಂದು ಪ್ರತಿಪಾದಿಸಿದರು. ತಿಲಕರು 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಿಸಿದರು. ಪೂರ್ಣ ಸ್ವರಾಜ್ಯವನ್ನು ಪಡೆಯುವುದು ತೀವ್ರವಾದಿಗಳ ಗುರಿಯಾಗಿತ್ತು. ಇವರು ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವ ಪ್ರಯತ್ನ ಮಾಡಿದರು. ಈ ಹಿನ್ನೆಲೆಯಲ್ಲಿ ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಅವರನ್ನು ಸಜ್ಜುಗೊಳಿಸಿದರು. ತಿಲಕರು ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳನ್ನು ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಬಳಸಿಕೊಂಡರು. ಈ ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು. ಅವರ ಕ್ರಾಂತಿಕಾರಕ ಬರವಣಿಗೆಗಳು ಜನರ ಉದ್ರೇಕಕ್ಕೆ ಕಾರಣವಾಯಿತು ಎಂಬ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರವು ತಿಲಕರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿತು. 'ಗೀತಾ ರಹಸ್ಯ'ವನ್ನು ಜೈಲಿನಲ್ಲಿ ಇದ್ದಾಗ ರಚಿಸಿದರು.

**ನಿಮಗಿದು ತಿಳಿದಿರಲಿ :**

ತಿಲಕರು ಗಣೇಶಹಬ್ಬ ಮತ್ತು ಶಿವಾಜಿ ಉತ್ಸವಗಳ ಮೂಲಕ ಜನರನ್ನು ರಾಷ್ಟ್ರೀಯತೆಗೆ ಪ್ರಚೋದಿಸಿದರು.

**ನಿಮಗಿದು ತಿಳಿದಿರಲಿ :**

"ರಾಷ್ಟ್ರಗಳ ವಿಕಾಸದಲ್ಲಿ ಕೆಟ್ಟ ಆಡಳಿತಗಾರರಿಂದಲೂ ಒಂದು ಉಪಯೋಗವಿದೆ. ಅವರು ಉದಾಸೀನವಾಗಿ ಮಲಗಿರುವ ಸಿಂಹವನ್ನು ಬಡಿದೆಬ್ಬಿಸುತ್ತಾರೆ; ಜನಗಳಿಗೆ ಸ್ಫೂರ್ತಿ ನೀಡಿ ರಾಷ್ಟ್ರೀಯ ಐಕ್ಯವನ್ನು ರೂಪಿಸುವಲ್ಲಿ ಸಹಾಯಕರಾಗುತ್ತಾರೆ" – ಎಸ್. ಎನ್. ಬ್ಯಾನರ್ಜಿಯವರ ಈ ಮಾತುಗಳನ್ನು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕ್ರಾಂತಿಕಾರಿಗಳಿಗೆ ಅನ್ವಯಿಸಬಹುದಾಗಿದೆ.

©KTBS NOT TO BE REPUBLISHED

## ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರ

ಕ್ರಾಂತಿಕಾರಿಗಳು ಪೂರ್ಣ ಸ್ವಾತಂತ್ರ್ಯದ ಕನಸನ್ನು ಕಂಡಿದ್ದರು. ಭಾರತೀಯರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಮಾತ್ರ ಭಾರತದಿಂದ ಓಡಿಸಬಹುದೆಂದು ಅವರು ಬಲವಾಗಿ ನಂಬಿದ್ದರು. ಇವರುಗಳು ರಹಸ್ಯ ಸಂಘಗಳ ಮೂಲಕ ಭಾರತದಲ್ಲಿ ಮತ್ತು ವಿದೇಶಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿ ಹಣಕಾಸು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಕಾರ್ಯದೊಂದಿಗೆ ಕ್ರಾಂತಿಕಾರಿಗಳಿಗೆ ತರಬೇತಿ ನೀಡುವಲ್ಲಿ ನಿರತರಾಗಿದ್ದರು. 'ಅನುಶೀಲನ ಸಮಿತಿ' ಮತ್ತು 'ಅಭಿನವ ಭಾರತ' ಇಂತಹ ರಹಸ್ಯ ಸಂಘಟನೆಗಳಲ್ಲಿ ಮುಖ್ಯವಾದವು. ಇವರು ತಮ್ಮ ಗುರಿ ಸಾಧನೆಗಾಗಿ ಬಾಂಬುಗಳು ಮತ್ತು ಬಂದೂಕುಗಳ ಪ್ರಯೋಗ ಮಾಡಿದರು. ಸರ್ಕಾರವು ಇವರನ್ನು ಹತ್ತಿಕ್ಕುವ ಸರ್ವ ಪ್ರಯತ್ನವನ್ನು ಮಾಡಿತು. ಕ್ರಾಂತಿಕಾರಿಗಳನ್ನು ಕೊಲೆ ಸಂಚಿನ ಆರೋಪದ ಮೇಲೆ ಬಂಧಿಸಿ, ಅವರುಗಳನ್ನು ತಪ್ಪಿತಸ್ಥರನ್ನಾಗಿ ಗುರುತಿಸಿ ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ಈ ಸಂದರ್ಭದಲ್ಲಿ ಅನೇಕರನ್ನು ಗಲ್ಲಿಗೇರಿಸಲಾಯಿತು. ವಿ.ಡಿ. ಸಾವರ್ಕರ್, ಅರಬಿಂದೋ ಘೋಷ್, ಶ್ಯಾಮಾಜಿ ಕೃಷ್ಣವರ್ಮ, ಮೇಡಮ್ ಕಾಮಾ, ಖುದಿರಾಮ್ ಬೋಸ್, ರಾಮ್‌ಪ್ರಸಾದ ಬಿಸ್ಮಿಲ್, ಭಗತ್ ಸಿಂಗ್, ಚಂದ್ರಶೇಖರ ಆಜಾದ್ –ಇವರುಗಳು ಕ್ರಾಂತಿಕಾರಿಗಳಲ್ಲಿ ಪ್ರಮುಖರಾಗಿದ್ದರು.


**ನಿಮಗಿದು ತಿಳಿದಿರಲಿ :**

ಅರವಿಂದ ಘೋಷರು 'ವರ್ತಮಾನ ರಣನೀತಿ' ಎಂಬ ಪುಸ್ತಕವನ್ನು ಪ್ರಕಟಿಸಿ ಅದರಲ್ಲಿ ಸೇನಾ ತರಬೇತಿ ಮತ್ತು ಯುದ್ಧ ಕೌಶಲ್ಯವನ್ನು ಪ್ರಸ್ತಾಪಿಸಿದ್ದರು. ಬಾರಿಂದರ್ ಕುಮಾರ್ ಘೋಷ್‌ರವರು 'ಯುಗಾಂತರ' ಎಂಬ ನಿಯತಕಾಲಿಕೆಯನ್ನು ಇದೇ ಭಾವನೆಯೊಂದಿಗೆ ಪ್ರಕಟಿಸಿದ್ದರು.

NOT TO BE REPUBLISHED @KTBS



ಭಗತ್ ಸಿಂಗ್



ಚಂದ್ರಶೇಖರ್ ಆಜಾದ್



ವಿ.ಡಿ. ಸಾವರ್ಕರ್

### ಗಾಯಿಡಿನ್ ಲೂ


ಆಂಗ್ಲಪ್ರಭುತ್ವ ಮತ್ತು ಕ್ರೈಸ್ತ ಮಿಶನರಿಗಳ ದುಷ್ಟಕೂಟವು ಭಾರತದ ಇಡಿಯ ಈಶಾನ್ಯ ಭಾಗವನ್ನೇ ಬಲಿ ತೆಗೆದುಕೊಳ್ಳುತ್ತಿರುವ ಸಂಗತಿಯನ್ನು ಅರಿತುಕೊಂಡ ಜಾದೋನಾಂಗ್ ಎಂಬ ನಾಗಾಬುಡಕಟ್ಟಿನ ತರುಣ ಯೋಧಪಡೆಯೊಂದನ್ನು ಕಟ್ಟಿದರು. ಬ್ರಿಟಿಷರ ವಿರುದ್ಧ ಹೋರಾಡಿದರು. ಅವರ ಸೇನೆಯಲ್ಲಿ ಮಹಿಳೆಯರಿಗೆ ಅವಕಾಶವಿರಲಿಲ್ಲ. ಆದ್ದರಿಂದ ಗಾಯಿಡಿನ್ ಲೂ ಎಂಬ ಯುವತಿಯು ಈಶಾನ್ಯ ಭಾರತದ ಮಹಿಳೆಯರನ್ನೇ ಸೇರಿಸಿಕೊಂಡು ಒಂದು ಹೊಸ ಪಡೆಯನ್ನು ಕಟ್ಟಿ ಜಾದೋನಾಂಗ್

ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಟವನ್ನು ಮಾಡಿದಳು. ಧಾರ್ಮಿಕ ಜಾಗೃತಿಗಾಗಿ ಗಾಯಿಡಿನ್ 'ಹರಕ್ಕಾ' ಎಂಬ ಸಂಸ್ಥೆಯನ್ನು ಕಟ್ಟಿದರು. ಆಂಗ್ಲಸರಕಾರ ಜಾದೋನಾಂಗರನ್ನು ಬಂಧಿಸಿ ಸಿಲ್ಚರ್ ಜೈಲಲ್ಲಿಟ್ಟು ದೇಶದ್ರೋಹದ ಆಪಾದನೆ ಹೊರಿಸಿ 1931ರ ಆಗಸ್ಟ್ 29ರಂದು ಗಲ್ಲಿಗೇರಿಸಿತು. ಅದಾದ ಬಳಿಕ ಎರಡೂ ಸೈನ್ಯಗಳಿಗೆ ನೇತೃತ್ವ ನೀಡಿದ ಗಾಯಿಡಿನ್ ಲೂ ಶಿವಾಜಿ ರೀತಿಯಲ್ಲಿ ರಣತಂತ್ರ ರೂಪಿಸಿ ಗೆರಿಲ್ಲಾ ಬಗೆಯಲ್ಲಿ ಹೋರಾಡಿದಳು. ಆಕೆಯ ಈ ಹೋರಾಟದಿಂದ ಎಂಟೇ ತಿಂಗಳಲ್ಲಿ ಆಂಗ್ಲರು ತತ್ತರಿಸಿಹೋದರು. ಆಕೆಯ ಹೋರಾಟಕ್ಕೆ ಹಳ್ಳಿಹಳ್ಳಿಗಳೇ ಸಾಥ್ ನೀಡಿದವು. ಸಾವಿರಾರು ಸ್ತ್ರೀ ಪುರುಷರು ಆಕೆಯ ಸೈನ್ಯವನ್ನು ಸೇರಿಕೊಂಡರು. ಕೆಲವರು ಆಕೆಗೆ ಆಂಗ್ಲ ಸೈನ್ಯದ ಕುರಿತು ಮಾಹಿತಿ ನೀಡಿದರು. ಆಕೆಯ ವಿರುದ್ಧ ಕಮಾಂಡೋ ಕಾರ್ಯಾಚರಣೆಗೆ ಇಳಿದಿದ್ದ ಮ್ಯಾಕ್ ಡೊನಾಲ್ಡನು ಡಾ. ಹರಾಲು ಎಂಬಾತನ ಸಹಕಾರದಿಂದ ಆಕೆಯನ್ನು ಬಂಧಿಸಿದ. ಹಾಗೆ ಬಂಧನವಾದ ಆಕೆ 1932ರ ಅಕ್ಟೋಬರ್ 12ರಿಂದ ಸ್ವಾತಂತ್ರ್ಯ ಸಿಗುವವರೆಗೂ ಜೈಲಲ್ಲೇ ಇರಬೇಕಾಯಿತು. ಆಕೆಯ ಸುಳಿವು ನೀಡಿದ ಹರಾಲುವಿಗೆ ಆಂಗ್ಲ ಸರಕಾರವು 'ಕೈಸರ್-ಇ-ಹಿಂದ್' ಬಿರುದನ್ನು ನೀಡಿತು.

### ಅಂತಿಮ ಹಂತ : ಗಾಂಧೀಜೀಯವರ ನೇತೃತ್ವದ ಕಾಲ (1920 – 1947)

ಮಹಾತ್ಮ ಗಾಂಧೀಜಿಯವರು ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ್ ಪದವಿ ಪಡೆದು ವಕೀಲಿ ವೃತ್ತಿಯನ್ನು ದಕ್ಷಿಣ ಆಫ್ರಿಕಾದಲ್ಲಿ ಆರಂಭಿಸಿದರು. ದಕ್ಷಿಣ ಆಫ್ರಿಕಾವನ್ನು ಆಳುತ್ತಿದ್ದ ಬ್ರಿಟಿಷರು ವರ್ಣಭೇದ ನೀತಿಯನ್ನು ಅನುಸರಿಸುತ್ತ ಮುಖ್ಯವಾಗಿ ಭಾರತೀಯರನ್ನು ಮತ್ತು ಆಫ್ರಿಕನ್ನರನ್ನು ಬಹಳ ಕೀಳಾಗಿ ಕಾಣುತ್ತಿದ್ದರು. ಕೂಲಿ ಕೆಲಸಗಳನ್ನು ಮಾಡುತ್ತಿದ್ದ ಬಹಳಷ್ಟು ಇಂತಹ ಜನರು ಬಿಳಿಯರೊಂದಿಗೆ ರೈಲಿನಲ್ಲಿ ಪ್ರಯಾಣಿಸಬಾರದಾಗಿತ್ತು, ಸಹ ಭೋಜನ ಮಾಡಬಾರದಾಗಿತ್ತು. ಬಿಳಿಯರು ಕೂಲಿ ಜನರೊಂದಿಗೆ ಹಿಂಸಾತ್ಮಕವಾಗಿ ನಡೆದುಕೊಳ್ಳುತ್ತಿದ್ದರು. ಗಾಂಧೀಜಿಯವರು ಅಂತಹವರನ್ನು ಸಂಘಟಿಸಿ ಅವರ ಸುಖದುಃಖಗಳಲ್ಲಿ ಪಾಲ್ಗೊಂಡು ಬ್ರಿಟಿಷರ ವಿರುದ್ಧ ಶಾಂತಿಯುತವಾದ ಚಳವಳಿಗಳನ್ನು, ಪ್ರತಿಭಟನೆಗಳನ್ನು ಕೈಗೊಂಡರು. ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷರ ವಿರುದ್ಧ ಮಾಡಿದ ಚಳವಳಿಯ ಸ್ಫೂರ್ತಿಯು ಮುಂದೆ ಭಾರತೀಯರನ್ನು ಬ್ರಿಟಿಷರಿಂದ ವಿಮೋಚನೆ ಮಾಡಲು ಸಹಕಾರಿಯಾಯಿತು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ 1920ರಿಂದ 1947ರ ಕಾಲವನ್ನು 'ಗಾಂಧಿಯುಗ' ವೆಂದೂ ಕೆಲವರು ಗುರುತಿಸುತ್ತಾರೆ. ಭಾರತವು ಸ್ವಾತಂತ್ರ್ಯ ಪಡೆಯುವವರೆಗೂ ನಡೆದ ಘಟನಾವಳಿಗಳಲ್ಲಿ ಗಾಂಧೀಜಿಯವರು ಮುಖ್ಯ ಭೂಮಿಕೆಯಲ್ಲಿದ್ದರು.

ಮಹಾತ್ಮ ಗಾಂಧೀಜಿಯವರ ಪ್ರವೇಶದಿಂದಾಗಿ ಸ್ವಾತಂತ್ರ್ಯ ಚಳವಳಿಯು ಹೊಸ ಆಯಾಮವನ್ನು ಪಡೆಯಿತು. ಗಾಂಧೀಜಿಯುವರು ತಮ್ಮ ಹೋರಾಟದಲ್ಲಿ 'ಪರೋಕ್ಷ ಪ್ರತಿರೋಧ', 'ಅಹಿಂಸೆ' ಮತ್ತು 'ಸತ್ಯಾಗ್ರಹವನ್ನು' ಪ್ರಮುಖ ತಂತ್ರಗಳನ್ನಾಗಿ ಬಳಸಿಕೊಂಡರು. ತಮ್ಮ ಸಿದ್ಧಾಂತಗಳನ್ನು ಅವರು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ವ್ಯಕ್ತಪಡಿಸುತ್ತಿದ್ದರು. ಸತ್ಯಾಗ್ರಹವು ಇವರ ಹೋರಾಟದ ಪ್ರಮುಖ ಅಸ್ತ್ರವಾಯಿತು.


ದಕ್ಷಿಣ ಆಫ್ರಿಕಾದಲ್ಲಿದ್ದಾಗ ಗಾಂಧೀಜಿ

ಭಾರತದಲ್ಲಿ ತೀವ್ರಗೊಂಡ ಕ್ರಾಂತಿಕಾರಕ ಚಟುವಟಿಕೆಗಳ ಹಿನ್ನೆಲೆಯಲ್ಲಿ ಅದನ್ನು ಹತ್ತಿಕ್ಕುವ ಉದ್ದೇಶದಿಂದ ಅನೇಕ ಕಾಯ್ದೆಗಳನ್ನು ತರಲಾಯಿತು. ಅವುಗಳಲ್ಲಿ ಫೆಬ್ರವರಿ 1919ರಲ್ಲಿ ಜಾರಿಗೆ ತರಲಾದ ರೌಲತ್ ಕಾಯಿದೆಯು

@KTBS NOT TO BE REPUBLISHED

**ನಿಮಗಿದು ತಿಳಿದಿರಲಿ :**

ಗಾಂಧೀಜಿಯ ಪ್ರವೇಶದೊಂದಿಗಿನ ಹೊಸ ಕಾಂಗ್ರೆಸ್ ತನ್ನ ಸದಸ್ಯತ್ವವನ್ನು ಎಲ್ಲರಿಗೂ ಮುಕ್ತಗೊಳಿಸಿ, ಜನಸಾಮಾನ್ಯರ ಸಂಘಟನೆಯನ್ನಾಗಿಸಿತು. ಸಂಘವು ತೆಗೆದುಕೊಳ್ಳುವ ತೀರ್ಮಾನಗಳನ್ನು ಒತ್ತಾಯಿಸಲು ಅಸಹಕಾರ ಮತ್ತು ಸವಿನಯ ಕಾನೂನು ಭಂಗ ಚಳವಳಿಯ ಕಾರ್ಯತಂತ್ರ ರೂಪಿಸಿತು. ಅದು ಸಾಮಾಜಿಕ ಉನ್ನತಿಗಾಗಿ ರಚನಾತ್ಮಕ ಕಾರ್ಯಕ್ರಮಗಳನ್ನು ಸೂಚಿಸಿತು. ತಮ್ಮ ಕಾರ್ಯಚರಣೆಯನ್ನು ನೆರವೇರಿಸಲು ಒಂದು ಕೋಟಿ ರೂಪಾಯಿ ಬಂಡವಾಳದ 'ತಿಲಕ್ ಸ್ವರಾಜ್ಯ ಫಂಡ್'ನ್ನು ಪ್ರಾರಂಭಿಸಿತು. ಹೀಗೆ ಮಹಾತ್ಮ ಗಾಂಧೀಜಿಯ ಪ್ರವೇಶದೊಂದಿಗೆ ಕಾಂಗ್ರೆಸ್‌ನಲ್ಲಿ ಸಂಪೂರ್ಣ ಬದಲಾವಣೆಯನ್ನು ಕಾಣಬಹುದು. ಈ ಎಲ್ಲಾ ಕಾರಣಗಳಿಗಾಗಿ ಈ ಕಾಲವನ್ನು ಗಾಂಧೀಯುಗವೆಂದೂ ಗುರುತಿಸಲಾಗಿದೆ.

ಮುಖ್ಯವಾದುದು. ಕೇವಲ ಗುಮಾನಿಯ ಮೇಲೆ ಜನರನ್ನು ಬಂಧಿಸಿ ವಿಚಾರಣೆ ನಡೆಸುವ ಅಧಿಕಾರವನ್ನು ನ್ಯಾಯಾಧೀಶರಿಗೆ ಇದು ನೀಡಿತು. ಗಾಂಧೀಜಿಯವರು ಈ ಅಮಾನವೀಯ ಕಾಯ್ದೆಯ ವಿರುದ್ಧ ತಮ್ಮ ಹೋರಾಟದ ಸಾತ್ವಿಕ ಅಸ್ತ್ರವಾದ ಸತ್ಯಾಗ್ರಹವನ್ನು ಬಳಸಿದರು. ದೇಶದಾದ್ಯಂತ ಇದಕ್ಕೆ ವ್ಯಾಪಕ ಬೆಂಬಲ ದೊರೆಯಿತು. ಸಹಸ್ರಾರು ಭಾರತೀಯರು ಈ ಮೂಲಕ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಭಾಗವಹಿಸಿದರು.

**ನಿಮಗಿದು ತಿಳಿದಿರಲಿ :**

**ಸತ್ಯಾಗ್ರಹ :** ವರ್ಣಭೇದ ನೀತಿಯ ವಿರುದ್ಧ ಹೋರಾಟದಲ್ಲಿ ಗಾಂಧೀಜಿಯವರು ಇದನ್ನು ಆಫ್ರಿಕಾದಲ್ಲಿ ಬಳಸಿ ಯಶಸ್ವಿಯಾದರು. ಇದೇ ಅಸ್ತ್ರವನ್ನು ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಬಳಸಿದರು. ಸತ್ಯಾಗ್ರಹ ಎನ್ನುವುದು ದೈಹಿಕ ಒತ್ತಡವಲ್ಲ. ಇದು ಆತ್ಮಾಭಿಮಾನದ ಹೋರಾಟ.

@KTBS NOT TO BE REPUBLISHED

### ಜಲಿಯನ್‌ವಾಲಾಬಾಗ್ ಹತ್ಯಾಕಾಂಡ

ರೌಲತ್ ಕಾಯ್ದೆಯ ವಿರುದ್ಧ ಪಂಜಾಬಿನಲ್ಲಿ ಚಳವಳಿಯು ವ್ಯಾಪಕವಾಗಿ ಹರಡಿತು. ಅಲ್ಲಲ್ಲಿ ಇದು ಹಿಂಸಾತ್ಮಕ ಸ್ವರೂಪಕ್ಕೆ ತಿರುಗಿದ ಹಿನ್ನೆಲೆಯಲ್ಲಿ ಸರ್ಕಾರವು ಅಮೃತಸರ ನಗರವನ್ನು ಜನರಲ್ ಡಯರ್ ಎಂಬ ಸೇನಾಧಿಕಾರಿಯ ಉಸ್ತುವಾರಿಗೆ ನೀಡಿತು. ಜನರಲ್ ಡಯರ್ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ನಗರವನ್ನು ಸೇನಾಳ್ವಿಕೆಗೆ ಒಳಪಡಿಸಿ ಸಭೆಗಳನ್ನು ನಿಷೇಧಿಸಿದನು. ಆದರೆ, ಜಲಿಯನ್‌ವಾಲಾಬಾಗ್‌ನಲ್ಲಿ ಸಭೆ ಸೇರಲು ಹೋರಾಟಗಾರರು ಮೊದಲೇ ನಿರ್ಧರಿಸಿದ್ದರು. ಅವರಿಗೆ ಈ ನಿಷೇಧದ ಬಗ್ಗೆ ಪೂರ್ಣ ತಿಳಿವಳಿಕೆ ಇರಲಿಲ್ಲ. ಸುಮಾರು 20 ಸಾವಿರ ಜನ ರೌಲತ್ ಕಾಯ್ದೆಯ ವಿರುದ್ಧದ ಪ್ರತಿಭಟನಾ ಸಭೆಯಲ್ಲಿ ಸೇರಿದ್ದರು. ಸುತ್ತಲೂ ಎತ್ತರವಾದ ಗೋಡೆಗಳಿಂದ, ಕಿರಿದಾದ ಪ್ರವೇಶದಿಂದ ಕೂಡಿದ ಜಲಿಯನ್ ವಾಲಾಬಾಗ್‌ನಲ್ಲಿ ಸಭೆಯು ಶಾಂತಿಯಿಂದ ನಡೆಯುತ್ತಿತ್ತು. ತನ್ನ ಸೈನ್ಯದೊಂದಿಗೆ ಬಂದ ಜನರಲ್ ಡಯರ್‌ನು ಯಾವ ಮುನ್ಸೂಚನೆಯನ್ನು ನೀಡದೆ ಶಾಂತಿಯುತವಾಗಿ ಪ್ರತಿಭಟನಾ ಸಭೆ ಸೇರಿದ್ದ ಜನರ ಮೇಲೆ ಅಮಾನುಷವಾಗಿ ಗುಂಡಿನ ಮಳೆಗರೆದನು. ಈ ಹತ್ಯಾಕಾಂಡದಲ್ಲಿ 379 ಪ್ರತಿಭಟನಾಕಾರರು ಪ್ರಾಣ ಕಳೆದುಕೊಂಡರು. ಸಹಸ್ರಾರು ಜನರು ಗಾಯಗೊಂಡರು. ಈ ಘಟನೆಯನ್ನು ಜಲಿಯನ್ ವಾಲಾಬಾಗ್ ದುರಂತ ಎಂದು ಕರೆಯುತ್ತಾರೆ.

ಸರ್ಕಾರವು ಜಲಿಯನ್‌ವಾಲಾಬಾಗ್ ದುರಂತದ ವಿಚಾರಣೆಗಾಗಿ ಹಂಟರ್ ಆಯೋಗವನ್ನು ನೇಮಿಸಿತು. ಇದರಿಂದ ಯಾವುದೇ ಪ್ರಯೋಜನವಾಗಲಿಲ್ಲ. ಭಾರತೀಯರ ಮೇಲಿನ ದೌರ್ಜನ್ಯ ಮತ್ತೂ ಕೂಡ ಮುಂದುವರಿಯಿತು.

**ನಿಮಗಿದು ತಿಳಿದಿರಲಿ :**

ಜಲಿಯನ್ ವಾಲಾಬಾಗ್ ದುರಂತದ ಅಮಾನುಷ ಘಟನೆಯ ಹಿನ್ನೆಲೆಯಲ್ಲಿ ರವೀಂದ್ರನಾಥ ಠಾಗೂರ್ ವೈಸ್‌ರಾಯಿಗೆ ಪತ್ರ ಬರೆದು ತಮಗೆ ನೀಡಲಾಗಿದ್ದ 'ನೈಟ್‌ಹುಡ್' ಗೌರವವನ್ನು ತ್ಯಜಿಸಿದರು. ಮುಗ್ಧ ಭಾರತೀಯ ಹೋರಾಟಗಾರರನ್ನು ಹತ್ಯೆಗೈದ ಜನರಲ್ ಡಯರ್‌ನನ್ನು ಭಾರತದ ಕ್ರಾಂತಿಕಾರಿ ಉದಮ್ ಸಿಂಗ್‌ನು ಹತ್ಯೆ ಮಾಡಿದನು.




ಜಲಿಯನ್‌ವಾಲಾಬಾಗ್ ಸ್ಮಾರಕ

## ಖಿಲಾಫತ್ ಚಳವಳಿ

ಟರ್ಕಿಯ ಸುಲ್ತಾನರು ಮುಸ್ಲಿಮರ ಧಾರ್ಮಿಕ ಮುಖಂಡರೂ ಆಗಿದ್ದು, ಖಲೀಫರೆಂದು ಕರೆಸಿಕೊಳ್ಳುತ್ತಿದ್ದರು. ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಖಲೀಫರ ಮೇಲೆ ನಡೆಯುತ್ತಿದ್ದ ಬ್ರಿಟಿಷರ ದೌರ್ಜನ್ಯವನ್ನು ಖಂಡಿಸಿ ಮುಸ್ಲಿಮರು ಜಗತ್ತಿನಾದ್ಯಂತ ಪ್ರತಿಭಟಿಸಿದರು. ಅಂತೆಯೇ ಮಹಮದ್ ಅಲಿ ಮತ್ತು ಶೌಕತ್ ಅಲಿ ಸಹೋದರರು ಭಾರತದಲ್ಲಿ ಟರ್ಕರ ಪರವಾದ ಖಿಲಾಫತ್ ಚಳವಳಿ ಪ್ರಾರಂಭಿಸಿದರು. ಹಿಂದೂ ಮುಸ್ಲಿಮರು ಒಗ್ಗಟ್ಟಾಗಿ ಬ್ರಿಟಿಷರ ವಿರುದ್ಧ ಬಂಡೆದ್ದರೆ ಮಾತ್ರ ಬ್ರಿಟಿಷರು ಹಿಮ್ಮೆಟ್ಟುತ್ತಾರೆ ಎನ್ನುವುದು ಗಾಂಧೀಜಿಯವರ ನಂಬಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಮುಸ್ಲಿಮರ ಸಹಭಾಗಿತ್ವ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಬಹಳ ಮುಖ್ಯ ಎಂದು ಗಾಂಧೀಜಿ ಭಾವಿಸಿದ್ದರು. ಪರಿಣಾಮವಾಗಿ ಗಾಂಧೀಜಿ ಖಿಲಾಫತ್ ಚಳವಳಿಗೆ ತಮ್ಮ ಬೆಂಬಲವನ್ನು ನೀಡಿದರು. ಈ ಚಳವಳಿಯು ಹಿಂದೂ ಮುಸ್ಲಿಮರು ಒಂದುಗೂಡಿ ನಡೆಸಿದ ರಾಷ್ಟ್ರವ್ಯಾಪೀ ಆಂದೋಲನವಾಗಿದೆ. ಅನೇಕ ರಾಷ್ಟ್ರೀಯ ನಾಯಕರು ಮತ್ತು ಕಾಂಗ್ರೆಸ್ ಸಂಘಟನೆಯು ಖಿಲಾಫತ್ ಚಳವಳಿಯ ಬೆಂಬಲಕ್ಕೆ ನಿಂತಿತು.

## ಅಸಹಕಾರ ಚಳವಳಿ

ಗಾಂಧೀಜಿ ಬ್ರಿಟಿಷರ ವಿರುದ್ಧ 1920ರಲ್ಲಿ ಅಸಹಕಾರ ಚಳವಳಿಗೆ ಕರೆಯಿತ್ತರು. ಅವರ ಕರೆಯನ್ನು ಬೆಂಬಲಿಸಿ ಶಾಲಾಕಾಲೇಜುಗಳನ್ನು ವಿದ್ಯಾರ್ಥಿಗಳು ಬಹಿಷ್ಕರಿಸಿದರು. ವಕೀಲರು ನ್ಯಾಯಾಲಯುಗಳನ್ನು ಬಹಿಷ್ಕರಿಸಿದರು. ಭಾರತೀಯ ಗಣ್ಯರು, ಬ್ರಿಟಿಷರು ನೀಡಿದ್ದ ಪುರಸ್ಕಾರಗಳನ್ನು ಹಿಂದಿರುಗಿಸಿದರು. ಈ ಚಳವಳಿಯನ್ನು




ಅಸಹಕಾರ ಚಳವಳಿ

© KTBS NOT TO BE REPUBLISHED

ಬೆಂಬಲಿಸಿ ಮೋತಿಲಾಲ್ ನೆಹರು, ಸಿ.ಆರ್.ದಾಸ್ ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿದರು. ಈ ಅವಧಿಯಲ್ಲಿ ಬ್ರಿಟನ್ ರಾಜಕುಮಾರನ ಭಾರತದ ಭೇಟಿಯನ್ನು ವಿರೋಧಿಸಲಾಯಿತು. ರಾಜಕುಮಾರನ ಭೇಟಿಯ ವಿರುದ್ಧವಾಗಿ ದೇಶಾದ್ಯಂತ ಹರತಾಳಗಳು ನಡೆದವು.

ಅಸಹಕಾರ ಚಳವಳಿಯ ಸ್ವರೂಪವನ್ನು ಮನಗಂಡ ಬ್ರಿಟಿಷ್ ಸರ್ಕಾರದಲ್ಲಿ ಆತಂಕದ ವಾತಾವರಣ ಉಂಟಾಯಿತು. ಇಂತಹ ಸಂದರ್ಭದಲ್ಲಿ ಉತ್ತರ ಪ್ರದೇಶದ ಚೌರಿಚೌರ ಎಂಬಲ್ಲಿ ಸಾವಿರಾರು ಸ್ವಾತಂತ್ರ್ಯ ಯೋಧರು ಚಳವಳಿಗೆ ಧುಮುಕಿದರು. 1922ರಲ್ಲಿ ಶಾಂತಿಯುತವಾಗಿ ಚಳವಳಿ ನಡೆಸುತ್ತಿದ್ದ ಚಳವಳಿಗಾರರ ಮೇಲೆ ಪೋಲಿಸರು ಹಲ್ಲೆ ಮಾಡಿದರು. ಇದರಿಂದ ರೊಚ್ಚಿಗೆದ್ದ ಜನರು ಠಾಣೆಗೆ ನುಗ್ಗಲೆತ್ನಿಸಿದಾಗ ಪೋಲಿಸರು ಗೋಲಿಬಾರ್ ನಡೆಸಿದರು. ಪೋಲಿಸರ ಬಳಿ ಇದ್ದ ಶಸ್ತ್ರಾಸ್ತ್ರಗಳು ಖಾಲಿಯಾದ ಕಾರಣದಿಂದ ಪೋಲಿಸರು ಠಾಣೆಯೊಳಗೆ ಓಡಿದರು. ಕುಪಿತರಾದ ಚಳವಳಿಗಾರರು ಪೋಲಿಸ್ ಠಾಣೆಗೆ ಬೆಂಕಿ ಹಚ್ಚಿದರು. ಇದರಿಂದ 22 ಜನ ಪೋಲಿಸರು ಸಜೀವ ದಹನವಾದರು. ಈ ಘಟನೆಯನ್ನು ಇತಿಹಾಸದಲ್ಲಿ ಚೌರಿಚೌರ ಘಟನೆ ಎನ್ನುತ್ತಾರೆ. ಈ ಘಟನೆಯು ಗಾಂಧೀಜಿಯವರನ್ನು ಖಿನ್ನರನ್ನಾಗಿಸಿತು. ಹಾಗೆಯೇ ಚಳವಳಿಗಾರರ ಹಿಂಸಾತ್ಮಕ ವರ್ತನೆಗಾಗಿ ಗಾಂಧೀಜಿಯವರು ವಿಷಾದ ವ್ಯಕ್ತಪಡಿಸಿ ಚಳವಳಿಯನ್ನು ಹಿಂತೆಗೆದುಕೊಂಡರು. ಬ್ರಿಟಿಷ್ ಸರ್ಕಾರವು ಈ ಹಿಂಸಾತ್ಮಕ ಘಟನೆಗೆ ಗಾಂಧೀಜಿಯವರನ್ನು ಹೊಣೆಗಾರರನ್ನಾಗಿಸಿತು. ಸರ್ಕಾರವು ಅವರಿಗೆ ಆರು ವರ್ಷಗಳ ಕಾಲ ಸೆರಮನೆವಾಸ ವಿಧಿಸಿತು. ಆದರೆ 1924ರಲ್ಲಿ ಅನಾರೋಗ್ಯ ಕಾರಣದಿಂದ ಗಾಂಧೀಜಿಯವರನ್ನು ಸರ್ಕಾರವು ಬಿಡುಗಡೆ ಗೊಳಿಸಿತು.


ಮೋತಿಲಾಲ್‌ನೆಹರು

1919 ರ ಕಾಯ್ದೆಯು ಚುನಾವಣೆಗಳಲ್ಲಿ ಭಾಗವಹಿಸುವ ಅವಕಾಶವನ್ನು ಭಾರತೀಯರಿಗೆ ನೀಡಿತು. ಆದರೆ ಈ ಕಾಯ್ದೆಯು ಸದುದ್ದೇಶವನ್ನು ಹೊಂದಿಲ್ಲವಾದ್ದರಿಂದ ಕೆಲವು ಕಾಂಗ್ರೆಸ್ಸಿಗರು ಅದನ್ನು ಬಹಿಷ್ಕರಿಸಿದರು. 1919ರ ಕಾಯ್ದೆಯುಡಿಯಲ್ಲಿ ಮುಂದೆ ನಡೆಯಲಿರುವ ಚುನಾವಣೆಗಳಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ಸಿ.ಆರ್.ದಾಸ್, ಮೋತಿಲಾಲ್ ನೆಹರು ಮತ್ತು ಇನ್ನಿತರ ಕೆಲವು ಕಾಂಗ್ರೆಸ್ಸಿಗರು 'ಸ್ವರಾಜ್ ಪಕ್ಷ'ವನ್ನು 1923ರಲ್ಲಿ ಸ್ಥಾಪಿಸಿದರು. ಹೀಗೆ ಸ್ಥಾಪನೆಗೊಂಡ ಸ್ವರಾಜ್ ಪಕ್ಷವು ಶಾಸನ ಸಭೆಯನ್ನು ಪ್ರವೇಶಿಸಿ ಒಳಗಿನಿಂದಲೇ ಸರ್ಕಾರದ ನೀತಿಯನ್ನು ವಿರೋಧಿಸಿ ಅದರ ಕೆಲಸಕ್ಕೆ ಅಡ್ಡಿಯನ್ನುಂಟು ಮಾಡುವ ಅಭಿಲಾಷೆಯನ್ನು ಹೊಂದಿತ್ತು. 1924ರಲ್ಲಿ ನಡೆದ ಬೆಳಗಾವಿ ಅಧಿವೇಶನದಲ್ಲಿ ಶಾಸನ ಸಭೆಯನ್ನು ಪ್ರವೇಶಿಸುವ ಸ್ವರಾಜ್ಯ ಪಕ್ಷದ ಕಾರ್ಯತಂತ್ರವನ್ನು ಗಾಂಧೀಜಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಕಾರ್ಯಕ್ರಮವಾಗಿ ಒಪ್ಪಿಕೊಂಡರು. ಹೀಗೆ ಸ್ವರಾಜ್ಯ ಪಕ್ಷವು ಕಾಂಗ್ರೆಸ್‌ನಲ್ಲಿ ಸೇರಿತು.

**ನಿಮಗಿದು ತಿಳಿದಿರಲಿ :**

1924 ರಲ್ಲಿ ಕಲ್ಕತ್ತಾದಲ್ಲಿ ನಡೆದ ಕಾರ್ಪೋರೇಷನ್ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷವು ಬಹುಮತವನ್ನು ಪಡೆಯಿತು. ಸಿ.ಆರ್.ದಾಸ್‌ರವರು ಮೇಯರ್ ಆಗಿ ಸಹ ಆಯ್ಕೆಯಾದರು. ಇವರನ್ನು ದೇಶಬಂಧು ಎಂದು ಕರೆದಿದ್ದಾರೆ.

@KTBS
NOT TO BE REPUBLISHED

1919ರ ಭಾರತ ಸರ್ಕಾರ ಕಾಯ್ದೆಯ ಪ್ರಕಾರ ಹತ್ತು ವರ್ಷದ ಕೊನೆಯಲ್ಲಿ ಒಂದು ಆಯೋಗವನ್ನು ನೇಮಿಸುವ ಪ್ರಸ್ತಾಪದ ಮುನ್ಸೂಚನೆಯನ್ನು ವ್ಯಕ್ತಪಡಿಸಲಾಗಿತ್ತು. 1919ರ ಕಾಯ್ದೆಯ ಕಾರ್ಯವೈಖರಿಯನ್ನು ತಿಳಿದು ಅವಶ್ಯಕತೆಗನುಸಾರವಾಗಿ ಸೂಕ್ತ ಬದಲಾವಣೆಯ ವರದಿಯನ್ನು ಅದು ಸರ್ಕಾರಕ್ಕೆ ಸಲ್ಲಿಸಬೇಕಿತ್ತು. ಅದರಂತೆ 1927ರಲ್ಲಿ ಜಾನ್ ಸೈಮನ್ ನೇತೃತ್ವದಲ್ಲಿ ಒಂದು ಆಯೋಗವನ್ನು ನೇಮಿಸಲಾಯಿತು. ಇದು ಬ್ರಿಟಿಷ್ ಸರ್ಕಾರದ ಸಂಸದೀಯ ಆಯೋಗ ಎಂಬ ನೆಪದಲ್ಲಿ ಒಬ್ಬ ಭಾರತೀಯನನ್ನೂ ಒಳಗೊಂಡಿರಲಿಲ್ಲ. ಇದರಿಂದ ಇದು ಭಾರತೀಯರಿಗೆ ಮಾಡಿದ ಅವಮಾನವೆಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾವಿಸಿ ಸೈಮನ್ ಆಯೋಗವನ್ನು ಬಹಿಷ್ಕರಿಸಿತು. ಸೈಮನ್ ಭಾರತಕ್ಕೆ ಬಂದಾಗ ಪ್ರತಿಭಟನೆಗಳು, ಪ್ರದರ್ಶನಗಳು ನಡೆದವು. "ಸೈಮನ್ ಹಿಂದಕ್ಕೆ ಹೋಗು" ಎಂದರು. ಸೈಮನ್ ಆಯೋಗ ಹೋದ ಕಡೆಯಲ್ಲೆಲ್ಲಾ ಪ್ರತಿಭಟನೆಗಳು, ಹರತಾಳಗಳು, ಪ್ರದರ್ಶನಗಳು ನಡೆದವು. ಈ ಸಮಯದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಲಾಲ ಲಜಪತ್ ರಾಯರು ಬ್ರಿಟಿಷ್ ಸಿಪಾಯಿಗಳ ಲಾಟಿ ಏಟಿನಿಂದ ಮರಣ ಹೊಂದಿದರು. ಇದರಿಂದಾಗಿ ಭಾರತೀಯರ ಹೋರಾಟ ಮತ್ತಷ್ಟು ತೀವ್ರವಾಯಿತು.

ಸರ್ಕಾರದ ವಿರುದ್ಧದ ಈ ಧ್ವನಿಯನ್ನು ತಿಳಿಗೊಳಿಸುವ ಉದ್ದೇಶದಿಂದ ಸೈಮನ್ ಆಯೋಗದ ಕಾರ್ಯವು ಕೊನೆಗೊಳ್ಳುತ್ತಿದ್ದ ಹಾಗೆ ಭಾರತೀಯ ಪ್ರತಿನಿಧಿಗಳ ಸಮಾವೇಶವೊಂದನ್ನು ಕರೆಯಲು ಸರ್ಕಾರವು ನಿಶ್ಚಯಿಸಿತು. ಈ ಸಮಾವೇಶದಲ್ಲಿ ಮುಂದಿನ ಸಾಂವಿಧಾನಿಕ ಬೆಳವಣಿಗೆಯ ಸ್ವರೂಪವನ್ನು ರೂಪಿಸಲು ಭಾರತೀಯರಿಗೆ ಅವಕಾಶವನ್ನು ಕಲ್ಪಿಸಲಾಗಿತ್ತು. ಇದರ ಫಲವೇ ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳು.

1929ರಲ್ಲಿ ಜವಾಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನ ಲಾಹೋರ್‌ನಲ್ಲಿ ನಡೆಯಿತು. ಈ ಅಧಿವೇಶನದಲ್ಲಿ 'ಸಂಪೂರ್ಣ ಸ್ವರಾಜ್ಯ' ನಮ್ಮ ಗುರಿ ಎಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಘೋಷಿಸಿತು. ಜನವರಿ 26, 1930ರಂದು ಇಡೀ ದೇಶ ಸ್ವಾತಂತ್ರ್ಯ ದಿನವನ್ನು ಆಚರಿಸಿ ಲಾಹೋರ್ ಘೋಷಣೆಗೆ ಬೆಂಬಲ ಸೂಚಿಸಿತು. ಸಂಪೂರ್ಣ ಸ್ವರಾಜ್ಯದ ಗುರಿಯ ಸಾಧನೆಗಾಗಿ ಈ ಅಧಿವೇಶನವು ಬ್ರಿಟಿಷರ ವಿರುದ್ಧ ಹಮ್ಮಿಕೊಳ್ಳಲಾಗುವ ಕಾನೂನು ಭಂಗ ಚಳವಳಿಯ ಪೂರ್ಣ ಜವಾಬ್ದಾರಿಯನ್ನು ಗಾಂಧೀಜಿಯವರಿಗೆ ವಹಿಸಿತು.

**ನಿಮಗಿದು ತಿಳಿದಿರಲಿ :**

ಜನವರಿ ಒಂದು, 1930ರಂದು ಜವಾಹರಲಾಲ್ ನೆಹರುರವರು ರಾವಿ ನದಿಯ ದಡದ ಮೇಲೆ ಸ್ವಾತಂತ್ರ್ಯದ ತ್ರಿವರ್ಣ ಧ್ವಜವನ್ನು ಹಾರಿಸಿದರು.

**ನಿಮಗಿದು ತಿಳಿದಿರಲಿ :**

- ಸಬರಮತಿಯಿಂದ ದಂಡಿಯವರೆಗೆ ನಡೆದ ತಂಡದಲ್ಲಿ ಕರ್ನಾಟಕದ 18 ವರ್ಷದ ತರುಣ ಮೈಲಾರ ಮಹಾದೇವಪ್ಪ ಸಹ ಇದ್ದದ್ದು ಇದರ ವಿಶೇಷ.
- ಕರ್ನಾಟಕ ಕಾಂಗ್ರೆಸ್ ಕೂಡ ಆರ್. ಆರ್. ದಿವಾಕರ್, ಕೌಜಲಗಿ ಹನುಮಂತರಾಯರು, ಗಂಗಾಧರ ದೇಶಪಾಂಡೆ, ಹರ್ಡೇಕರ್ ಮಂಜಪ್ಪ ಮತ್ತು ಕಾರ್ನಾಡು ಸದಾಶಿವರಾಯರನ್ನೊಳಗೊಂಡ ಸತ್ಯಾಗ್ರಹ ಸಮಿತಿಯನ್ನು ರಚಿಸಿ ಕಾರವಾರ ಜಿಲ್ಲೆಯ ಅಂಕೋಲ ತಾಲ್ಲೂಕಿನಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿತು.

@KTBS NOT TO BE REPUBLISHED

## ಸವಿನಯ ಕಾನೂನು ಭಂಗ ಚಳವಳಿ :



ಉಪ್ಪಿನ ಸತ್ಯಾಗ್ರಹ

ಕಾನೂನು ಭಂಗ ಚಳವಳಿಯ ನೇತೃತ್ವ ವಹಿಸಿಕೊಂಡ ಗಾಂಧೀಜಿಯವರು ವೈಸರಾಯ್ ಇರ್ವಿನ್ ಮುಂದೆ ಉಪ್ಪಿನ ಮೇಲಿನ ತೆರಿಗೆ ರದ್ದತಿಯು ಸೇರಿದಂತೆ ಹನ್ನೊಂದು ಬೇಡಿಕೆಗಳನ್ನು ಸಲ್ಲಿಸಿದ್ದರು. ಈ ಬೇಡಿಕೆಗಳು ಈಡೇರದೇ ಹೋದಲ್ಲಿ ಕಾನೂನು ಭಂಗ ಚಳವಳಿ ಆರಂಭಿಸುವುದಾಗಿ ಗಾಂಧೀಜಿಯವರು ಘೋಷಿಸಿದರು. ಆದರೆ ಇರ್ವಿನ್ ಅವರ ಬೇಡಿಕೆಗಳನ್ನು ಪರಿಗಣಿಸಲಿಲ್ಲ. ಇದರ ಪರಿಣಾಮವಾಗಿ ಗಾಂಧೀಜಿಯವರು 1930ರಲ್ಲಿ ಸಬರಮತಿ ಆಶ್ರಮದಿಂದ ಸೂರತ್ ಸಮೀಪದ ಸಮುದ್ರ ತೀರದ ದಂಡಿಯವರೆಗೆ ತಮ್ಮ ಅನುಯಾಯಿಗಳೊಂದಿಗೆ ಕಾಲ್ನಡಿಗೆಯಲ್ಲಿ ಹೊರಟು ದಂಡಿಯ ಕಡಲ ತೀರದಲ್ಲಿ ತಾವೇ ಉಪ್ಪು ತಯಾರಿಸಿ ಕಾನೂನು ಭಂಗ ಚಳವಳಿಯನ್ನು ಪ್ರಾರಂಭಿಸಿದರು. ಈ ಘಟನೆಯನ್ನು ಇತಿಹಾಸದಲ್ಲಿ 'ದಂಡಿ ಸತ್ಯಾಗ್ರಹ' ಎಂದು ಕರೆಯುತ್ತಾರೆ.

ಕಾನೂನು ಭಂಗ ಚಳವಳಿಯಲ್ಲಿ ಗಾಂಧೀಜಿಯವರೊಂದಿಗೆ ಭಾಗವಹಿಸಿದ್ದ ವಿಜಯಲಕ್ಷ್ಮಿ ಪಂಡಿತ್, ಕಮಲಾನೆಹರು, ವಲ್ಲಭಭಾಯಿ ಪಟೇಲ್, ರಾಜಗೋಪಾಲಚಾರಿ, ಬಾಬು ರಾಜೇಂದ್ರ ಪ್ರಸಾದ್ ಮೊದಲುಗೊಂಡು ಸಾವಿರಾರು ಜನರನ್ನು ಬ್ರಿಟಿಷರು ಬಂಧಿಸಿದರು. ಈ ಚಳವಳಿಯು ದೇಶದ ನಾನಾ ಭಾಗಗಳಲ್ಲಿ ವ್ಯಾಪಿಸಿತು.

ಇದರ ನಡುವೆ ಈ ಹಿಂದೆ ಪ್ರಸ್ತಾಪಿಸಿದಂತೆ ಲಂಡನ್ನಿನಲ್ಲಿ ಭಾರತೀಯ ಜನಪ್ರತಿನಿಧಿಗಳ ಸಮಾವೇಶವನ್ನು 1930ರಲ್ಲಿ ಕರೆಯಲಾಯಿತು. ಇದು ಮೊದಲನೆಯ ದುಂಡು ಮೇಜಿನ ಪರಿಷತ್ ಸಮಾವೇಶ. ಇದರಿಂದ ಭಾರತೀಯರನ್ನು ಹೊರತುಪಡಿಸಿ ಸರ್ಕಾರ ಏಕಮುಖವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂಬುದು ವ್ಯಕ್ತವಾಯಿತು. ಈ ಸಮಾವೇಶದಲ್ಲಿ ಮೊಟ್ಟಮೊದಲನೆಯ ಬಾರಿಗೆ ಅಸ್ಪೃಶ್ಯರನ್ನು ಪ್ರತ್ಯೇಕವಾಗಿ ಪ್ರತಿನಿಧಿಸುವ ಅವಕಾಶವನ್ನು ಕಲ್ಪಿಸಲಾಗಿತ್ತು. ಈ ಸಮಾವೇಶದಲ್ಲಿ ಭಾಗವಹಿಸಲು ಆ ಸಂದರ್ಭದಲ್ಲಿ ಬಂಧಿತರಾಗಿದ್ದ ಗಾಂಧೀಜಿ ಮತ್ತು ಹಲವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಾಯಕರನ್ನು ಬಿಡುಗಡೆಗೊಳಿಸಲಾಯಿತು. ಆದರೆ ಕಾಂಗ್ರೆಸ್ ಮತ್ತು ಗಾಂಧೀಜಿಯವರು ಈ ಸಮಾವೇಶದಲ್ಲಿ ಭಾಗವಹಿಸಲು ನಿರಾಕರಿಸಿದರು. ಈ ಸಮಾವೇಶದಲ್ಲಿ ದೇಶೀಯ ಸಂಸ್ಥಾನದ ಪ್ರತಿನಿಧಿಗಳು, ವಿವಿಧ ಸಮುದಾಯದ ಮುಖಂಡರುಗಳಾಗಿದ್ದ ಡಾ. ಬಿ.ಆರ್.ಅಂಬೇಡ್ಕರ್, ಎಂ.ಆರ್. ಜಯಕರ್, ತೇಜಬಹದ್ದೂರ್ ಸಪ್ರು, ಮಹಮದ್ ಅಲಿ ಜಿನ್ನಾ, ಶ್ರೀನಿವಾಸ ಶಾಸ್ತ್ರಿ ಮೊದಲಾದವರು ಭಾಗವಹಿಸಿದ್ದರು. ಡೊಮಿನಿಯನ್ ಸ್ಟೇಟಸ್, ಜವಾಬ್ದಾರಿಯುತ ಸರ್ಕಾರ ಮತ್ತು ಮತೀಯ ಪ್ರಾತಿನಿಧ್ಯಗಳನ್ನು ಕುರಿತಂತೆ ಈ ಸಮಾವೇಶದಲ್ಲಿ ಸಮ್ಮತಿಸಲಾಯಿತು. ಆದರೆ ಭಾರತೀಯ ರಾಷ್ಟ್ರೀಯ

NOT TO BE REPUBLISHED @KTBS

ಕಾಂಗ್ರೆಸ್ ಮೊದಲನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶದಲ್ಲಿ ಭಾಗವಹಿಸದ ಹಿನ್ನೆಲೆಯಲ್ಲಿ ಸಮಾವೇಶವು ಪೂರ್ಣಗೊಳ್ಳಲಿಲ್ಲ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮನವೊಲಿಸಿ ದುಂಡು ಮೇಜಿನ ಸಮಾವೇಶದ ಉದ್ದೇಶವನ್ನು ಯಶಸ್ವಿಗೊಳಿಸುವ ದೃಷ್ಟಿಯಿಂದ ಗಾಂಧಿ ಮತ್ತು ವೈಸರಾಯ್ ಇರ್ವಿನ್ ನಡುವೆ ಒಪ್ಪಂದವೊಂದು ಮಾರ್ಚ್ 1931ರಲ್ಲಿ ಜರುಗಿತು. ಇದನ್ನು ಗಾಂಧೀ–ಇರ್ವಿನ್ ಒಪ್ಪಂದ ಎಂದು ಕರೆಯುತ್ತಾರೆ. ಪರಿಣಾಮವಾಗಿ ಕಾಂಗ್ರೆಸ್ ಪಕ್ಷವು ಸವಿನಯ ಕಾನೂನು ಭಂಗ ಚಳವಳಿಯನ್ನು ನಿಲ್ಲಿಸಿ ಎರಡನೆಯ ದುಂಡುಮೇಜಿನ ಪರಿಷತ್ತಿನ ಸಮಾವೇಶದಲ್ಲಿ ಭಾಗವಹಿಸಲು ನಿರ್ಧರಿಸಿತು. ಮಹಮದ್ ಅಲಿ ಜಿನ್ನಾ ಮತ್ತು ಡಾ.ಬಿ.ಆರ್. ಅಂಬೇಡ್ಕರ್‌ರವರು ಈ ಸಭೆಯಲ್ಲಿ ಭಾಗವಹಿಸಿದ್ದರು.

ಎರಡನೆಯ ದುಂಡು ಮೇಜಿನ ಸಮಾವೇಶದಲ್ಲಿ ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವ ಪ್ರಸ್ತಾಪ ಮುಂದಿಟ್ಟರು. ಈ ಪ್ರಸ್ತಾಪವನ್ನು ಗಾಂಧೀಜಿಯವರು ಒಪ್ಪಲಿಲ್ಲ. ಇದರಿಂದ ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ನಡುವೆ ತಾತ್ವಿಕ ಭಿನ್ನಾಭಿಪ್ರಾಯ ಉಂಟಾಯಿತು. ಹೀಗಾಗಿ ಎರಡನೆಯ ದುಂಡು ಮೇಜಿನ ಪರಿಷತ್ತು ಸಮಾವೇಶ ಕೂಡ ಯಾವುದೇ ತೀರ್ಮಾನವಿಲ್ಲದೆ ಮುಕ್ತಾಯಗೊಂಡಿತು. ಆದರೆ ಬ್ರಿಟಿಷ್ ಸರ್ಕಾರವು ಅಸ್ಪೃಶ್ಯರನ್ನು ಪ್ರತ್ಯೇಕ ಮತಕ್ಷೇತ್ರವಾಗಿ ಪರಿಗಣಿಸುವುದಾಗಿ ಘೋಷಿಸಿತು. ಇದನ್ನು ವಿರೋಧಿಸಿ ಮಹಾತ್ಮ ಗಾಂಧೀಜಿಯವರು ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಈ ಸಮಯದಲ್ಲಿ ಅಂಬೇಡ್ಕರ್ ಅವರ ಮನವೊಲಿಸುವ ಪ್ರಯತ್ನಗಳು ನಡೆದವು. ಇದರ ಫಲವಾಗಿ ಪೂನಾ ಒಪ್ಪಂದವಾಯಿತು. ಇದರ ಪ್ರಕಾರ ಪ್ರತ್ಯೇಕ ಮತಕ್ಷೇತ್ರದ ಬದಲಾಗಿ ಸಾಮಾನ್ಯ ಮತಕ್ಷೇತ್ರಗಳಲ್ಲಿಯೇ ಕೆಲವು ಕ್ಷೇತ್ರಗಳನ್ನು ಅಸ್ಪೃಶ್ಯರಿಗೆ ಮೀಸಲಿಡಲಾಯಿತು. ಅಂತಹ ಕಡೆಗಳಲ್ಲಿ ಅಸ್ಪೃಶ್ಯ ಪ್ರತಿನಿಧಿ ಎಲ್ಲಾ ಜನರ ಪ್ರತಿನಿಧಿಯಾಗಿರುತ್ತಿದ್ದರು. ಪ್ರತ್ಯೇಕ ಮತಕ್ಷೇತ್ರಕ್ಕೆ ಬದಲಾಗಿ ಕೆಲವು ಕ್ಷೇತ್ರಗಳು ಅಸ್ಪೃಶ್ಯರಿಗಾಗಿ ಕಾದಿರಿಸಲ್ಪಟ್ಟವು.

ಬ್ರಿಟಿಷ್ ಸರ್ಕಾರವು ಕೇಂದ್ರದಲ್ಲಿ ಒಕ್ಕೂಟ ಸ್ವರೂಪದ ಸರ್ಕಾರ, ರಾಜ್ಯಗಳಲ್ಲಿ ಪ್ರಾಂತೀಯ ಸರ್ಕಾರವನ್ನು ರಚಿಸಲು ಸೂಚಿಸಿತು. ಈ ಹಿನ್ನೆಲೆಯಲ್ಲಿ ಮೂರನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶವನ್ನು 1932ರಲ್ಲಿ ಕರೆಯಿತು. ಸರ್ಕಾರವು ಪ್ರಸ್ತಾಪಿಸಿದ ವ್ಯವಸ್ಥೆಯನ್ನು ಧಿಕ್ಕರಿಸಿ ಕಾಂಗ್ರೆಸ್ ಸಮಾವೇಶದಲ್ಲಿ ಭಾಗವಹಿಸಲಿಲ್ಲ. ದುಂಡು ಮೇಜಿನ ಪರಿಷತ್ತುಗಳ ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು 1935ರ ಭಾರತ ಸರ್ಕಾರ ಶಾಸನವನ್ನು ಜಾರಿಗೊಳಿಸಿತು. ಈ ಶಾಸನವು ಭಾರತ ಒಕ್ಕೂಟ ರಚನೆ ಮತ್ತು ಪ್ರಾಂತೀಯ ಸ್ವಾಯತ್ತತೆಯ ಅವಕಾಶಗಳನ್ನು ಕಲ್ಪಿಸಿತ್ತು. ಭಾರತೀಯರಿಗೆ ರಾಜಕೀಯ ಹಕ್ಕುಗಳು ದೊರೆತವು. ಇದರಿಂದಾಗಿ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಚುನಾವಣೆಯಲ್ಲಿ ಸ್ಪರ್ಧಿಸಿದವು. ಕಾಂಗ್ರೆಸ್ ಬಹುಮತ ಪಡೆದು ಒಕ್ಕೂಟ ಸರ್ಕಾರವನ್ನು ರಚಿಸಿತು. ಈ ವೇಳೆಗೆ ಎರಡನೆಯ ಮಹಾಯುದ್ಧ ಆರಂಭಗೊಂಡಾಗ ಯುರೋಪಿನ ರಾಜಕೀಯ ವಿದ್ಯಮಾನಗಳ ಭಾಗವಾಗಿ ಭಾರತದ ವೈಸ್‌ರಾಯ್ ಏಕಪಕ್ಷೀಯವಾಗಿ ಭಾರತದ ಪರವಾಗಿ ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿದನು. ಇದನ್ನು ಕಾಂಗ್ರೆಸ್ ಪ್ರತಿಭಟಿಸಿ ಮಂತ್ರಿ ಮಂಡಲದಿಂದ ಹೊರಬಂದಿತು. ವೈಸ್‌ರಾಯನ ತೀರ್ಮಾನವನ್ನು ವಿರೋಧಿಸಿ ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹ ಸಾರಿದರು. ಆಗ ಭಾರತೀಯರನ್ನು ತೃಪ್ತಿ ಪಡಿಸಲು ಸ್ಟಾಫರ್ಡ್ ಕ್ರಿಪ್ಸ್ ಅವರನ್ನು ಸಂಧಾನಕ್ಕಾಗಿ ಕಳುಹಿಸಲಾಯಿತು.

NOT TO BE REPUBLISHED © KTBS

## ಕ್ವಿಟ್ ಇಂಡಿಯಾ ಚಳವಳಿ (1942)

ಬ್ರಿಟಿಷ್ ಸರ್ಕಾರವು ಭಾರತೀಯ ನಾಯಕರೊಂದಿಗೆ ಸಂಧಾನಕ್ಕಾಗಿ ಕಳುಹಿಸಿದ್ದ ಸ್ಟ್ಯಾಫರ್ಡ್ ಕ್ರಿಪ್ಸ್ ಆಯೋಗವು 1942ರಲ್ಲಿ ಕೆಲವು ಸಲಹೆಗಳನ್ನು ಭಾರತೀಯರ ಮುಂದಿಟ್ಟಿತು. ಈ ಆಯೋಗವು ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ನೀಡುವುದು, ಅದಕ್ಕಾಗಿ ಸಂವಿಧಾನ ರಚಿಸಲು ಸಭೆ ಕರೆಯುವುದು, ಹೊಸ ಸಂವಿಧಾನದಲ್ಲಿ ಭಾರತ ಒಕ್ಕೂಟವನ್ನು ಸೇರುವ ಅಥವಾ ಬಿಡುವ ಸ್ವಾತಂತ್ರ್ಯವನ್ನು ಸಂಬಂಧಿಸಿದ ರಾಜ್ಯಗಳಿಗೆ ಬಿಡುವಂತಹ ಸಲಹೆಗಳನ್ನು ನೀಡಿತು. ಈ ಸಲಹೆಗಳನ್ನು ಕಾಂಗ್ರೆಸ್ ಒಪ್ಪದೆ ಕ್ವಿಟ್ ಇಂಡಿಯಾ ಚಳವಳಿಗೆ ಕರೆ ನೀಡಿತು. 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎನ್ನುವುದು ಕ್ವಿಟ್ ಇಂಡಿಯಾ ಚಳವಳಿಯ ಆಶಯವಾಗಿತ್ತು.

**ಚರ್ಚಿಸಿ :**
ದೇಶದ ಜನರೇ ಹೆಚ್ಚಿನದಾಗಿ ಸ್ವಇಚ್ಛೆಯಿಂದ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದರು.

**ನಿಮಗಿದು ತಿಳಿದಿರಲಿ :**


**ಈಸೂರು ಘಟನೆ :** ಮೈಸೂರು ಸಂಸ್ಥಾನದ ಶಿಕಾರಿಪುರದ ಹತ್ತಿರದ ಒಂದು ಹಳ್ಳಿ ಈಸೂರು. ಸ್ವಾತಂತ್ರ್ಯ ಚಳವಳಿಯಲ್ಲಿ ಸ್ಥಾನವನ್ನು ಪಡೆದಿರುವ ಈ ಹಳ್ಳಿಗೆ 'ಸ್ವತಂತ್ರ ಹಳ್ಳಿ' ಎಂಬ ಹೆಸರನ್ನೂ ಇಡಲಾಯಿತು. ಇಲ್ಲಿ ಎಲ್ಲರೂ ಗಾಂಧಿ ಟೋಪಿ ಧರಿಸುತ್ತಿದ್ದರು. ಅಧಿಕಾರಿಗಳಿಗೆ ಹಳ್ಳಿಯ ಪ್ರವೇಶಕ್ಕೆ ನಿಷೇಧ ಇತ್ತು. ಆದರೆ 1942ರಲ್ಲಿ ಭೇಟಿ ನೀಡಿದ ಅಧಿಕಾರಿಗಳಿಗೆ ಗಾಂಧಿ ಟೋಪಿ ಧರಿಸಲು ಹಳ್ಳಿಗರು ಒತ್ತಾಯಿಸಿದರು. ಇದನ್ನು ವಿರೋಧಿಸಿದ ಅಧಿಕಾರಿಗಳ ಜೊತೆಯಲ್ಲಿದ್ದ ಪೋಲೀಸನು ಜನರತ್ತ ಗುಂಡು ಹಾರಿಸಿದನು. ಇದರಿಂದ ರೊಚ್ಚಿಗೆದ್ದ ಜನರು ಅವರುಗಳನ್ನು ಹತ್ಯೆ ಮಾಡಿದರು. ಇದನ್ನು ಚರಿತ್ರೆಯಲ್ಲಿ ಈಸೂರು ಘಟನೆ ಎಂದು ಕರೆಯುತ್ತಾರೆ.

© KTBS NOT TO BE REPUBLISHED

ಗಾಂಧೀಜಿಯವರು ದೇಶಬಾಂಧವರಿಗೆ 'ಮಾಡು ಇಲ್ಲವೇ ಮಡಿ' ಎನ್ನುವ ಕರೆ ನೀಡಿದರು. ಈ ಕರೆ ನೀಡಿದ ಹಿನ್ನೆಲೆಯಲ್ಲಿ ಗಾಂಧೀಜಿ, ನೆಹರು, ರಾಜೇಂದ್ರಪ್ರಸಾದ್, ಅಬುಲ್ ಕಲಾಂ ಆಜಾದ್, ಸರ್ದಾರ್ ವಲ್ಲಭಭಾಯಿ ಪಟೇಲ್, ಆಚಾರ್ಯ ಕೃಪಲಾನಿ, ಕಸ್ತೂರಬಾ ಗಾಂಧಿ ಮೊದಲಾದ ನಾಯಕರನ್ನು ಬ್ರಿಟಿಷ್ ಸರ್ಕಾರವು ಬಂಧಿಸಿ ಜೈಲಿನಲ್ಲಿಟ್ಟಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಹುತೇಕ ನಾಯಕರು ಬಂಧನದಲ್ಲಿದ್ದ ಕಾರಣ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು. ಹೊಸನಾಯಕರುಗಳ ಉದಯಕ್ಕೆ ಈ ಹೋರಾಟವು ಎಡೆ ಮಾಡಿಕೊಟ್ಟಿತು. ಈ ಸಂದರ್ಭದಲ್ಲಿ ಚಳವಳಿಯ ನೇತೃತ್ವವನ್ನು ಜಯಪ್ರಕಾಶ್ ನಾರಾಯಣರವರು ವಹಿಸಿಕೊಂಡರು. ಇವರು ಕಾಂಗ್ರೆಸ್‌ನ ಸಮಾಜವಾದಿ ಬಣದ ಪ್ರಮುಖ ನಾಯಕರಾಗಿದ್ದರು. ಇವರು ತಮ್ಮ ಬೆಂಬಲಿಗರೊಡನೆ ದೇಶದ ವಿವಿಧೆಡೆಯಲ್ಲಿ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ತೊಡಗಿದರು. ಸಮಾಜವಾದಿಗಳು 'ದಿ ಫ್ರೀಡಂ ಸ್ಟ್ರಗಲ್ ಫ್ರಾಂಟ್' ಎಂಬ ದಾಖಲೆ


ಕ್ವಿಟ್ ಇಂಡಿಯಾ ಚಳವಳಿ

(Document) ಮೂಲಕ ತಮ್ಮ ಕಾರ್ಯತಂತ್ರವನ್ನು ಅನುಷ್ಠಾನಕ್ಕೆ ತಂದರು. ಈ ಮೂಲಕ ಅವರು ಕಾರ್ಮಿಕರಿಗೆ ತರಬೇತಿಯನ್ನು ನೀಡಿದರು. ಜನತೆಗೆ ಹೋರಾಟದಲ್ಲಿ ಭಾಗವಹಿಸಲು ಕರೆಯನ್ನಿತ್ತರು. ಹಣವನ್ನು ಕ್ರೋಢೀಕರಿಸಿದರು. ಈ ಮೂಲಕವಾಗಿ ದಿಕ್ಕೆಟ್ಟ ಹೋರಾಟಕ್ಕೆ ದಿಕ್ಕು ಕೊಟ್ಟವರು ಇವರೇ. ಕುತೂಹಲದ ಸಂಗತಿಯೆಂದರೆ ಇದೇ ಸಂದರ್ಭದಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವು ಭಾರತದ ಗಡಿಯ ಹೊರಗೂ ಪ್ರಾರಂಭವಾಯಿತು. ಈ ದಿಸೆಯಲ್ಲಿ ಸುಭಾಷ್ ಚಂದ್ರ ಬೋಸರವರ ಪ್ರಯತ್ನ ಅದ್ವಿತೀಯವಾದದ್ದು. 1937ರ ಚುನಾವಣೆಗಳ ನಂತರ ಸರ್ಕಾರದ ಪಾಲ್ಗೊಳ್ಳುವಿಕೆಯಲ್ಲಿ ಮುಸ್ಲಿಂ ಲೀಗನ್ನು ಸರ್ಕಾರ ರಚನೆಯಿಂದ ಕೈಬಿಡಲಾಗಿತ್ತು. 1939ರಲ್ಲಿ ಭಾರತ ಸರ್ಕಾರವು ಏಕಮುಖವಾಗಿ ಎರಡನೆಯ ಮಹಾಯುದ್ಧಕ್ಕೆ ಭಾರತವನ್ನು ಭಾಗಿ ಮಾಡಿದ ಸಂದರ್ಭದಲ್ಲಿ ಮಂತ್ರಿಮಂಡಲದಲ್ಲಿದ್ದ ಕಾಂಗ್ರೆಸಿಗರೆಲ್ಲರು ಹೊರಬಂದಾಗ ಮುಸ್ಲಿಂ ಲೀಗ್ 'ವಿಮುಕ್ತಿ ದಿವಸ'ವನ್ನು ಆಚರಿಸಿತು. ಹೀಗಾಗಿ ಮುಸ್ಲಿಂ ಲೀಗ್ ಭಾರತ ಬಿಟ್ಟು ತೊಲಗಿ ಆಂದೋಲನದಲ್ಲಿ ಭಾಗವಹಿಸಲಿಲ್ಲ. ಅದು ಭಾರತದ ವಿಭಜನೆಯ ಪ್ರಸ್ತಾಪವನ್ನು ಮುಂದಿಟ್ಟಿತು.


ವಲ್ಲಭಭಾಯಿ ಪಟೇಲ್


ಮೌಲಾನ ಅಬುಲ್ ಕಲಾಂ ಅಜಾದ್

@KTBS NOT TO BE REPUBLISHED

### ರೈತರ ಪ್ರತಿಭಟನೆ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತ ಕಾರ್ಮಿಕ ಸಂಘಟನೆಗಳ ಪ್ರತಿಭಟನೆಗಳು ಕೂಡಾ ಪ್ರಮುಖವಾಗಿವೆ. ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಜಮೀನ್ದಾರರು ಮತ್ತು ಯುರೋಪಿಯನ್ ಪ್ಲಾಂಟರ್‌ಗಳ ವಿರುದ್ಧ ರೈತರು ಹಲವಾರು ಕಡೆ ದಂಗೆ ನಡೆಸಿದರು. ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು. ಭೂಕಂದಾಯದ ವಿರುದ್ಧ ಹರತಾಳ ನಡೆಸಿದರು. ಗಾಂಧೀಜಿಯವರು ಸತ್ಯಾಗ್ರಹದ ಮೂಲಕ ಬ್ರಿಟಿಷ್ ಅಧಿಕಾರಿಗಳ ಮನವೊಲಿಸಿ ತೆರಿಗೆ ರದ್ದುಗೊಳಿಸಿದರು.

ರಾಷ್ಟ್ರೀಯ ಹೋರಾಟದ ಭಾಗವಾಗಿ ರೈತರನ್ನು ಸಂಘಟಿಸುವ ಪ್ರಯತ್ನವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮಾಡಿತು. ಚಂಪಾರಣ್ಯ, ಖೇಡಾ ಮೊದಲಾದ ಪ್ರದೇಶಗಳ ರೈತರ ಕಾರ್ಯ ಚಟುವಟಿಕೆಗಳಲ್ಲಿ ಗಾಂಧೀಜಿಯವರ ಪ್ರಭಾವವಿತ್ತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರಭಾವದಿಂದ ತೇಭಾಗ, ಮಲಬಾರ್ ಮೊದಲಾದೆಡೆ ಶೋಷಣೆಗೊಳಗಾಗಿದ್ದ ರೈತರು ತೀವ್ರವಾಗಿ ಜಮೀನ್ದಾರರು ಹಾಗೂ ಬ್ರಿಟಿಷರ ವಿರುದ್ಧ ಬಂಡೆದ್ದರು. ಅಸಹಕಾರ ಆಂದೋಲನ, ಕರ ನಿರಾಕರಣೆ, ಕ್ವಿಟ್ ಇಂಡಿಯಾ ಚಳವಳಿಗಳಲ್ಲಿ ರೈತರ ಸಮಸ್ಯೆಗಳು ಬೆರೆತವು. ಹಲವಾರು ಹೋರಾಟಗಳು ಕಿಸಾನ್ ಸಭಾದಡಿಯಲ್ಲಿ ಸಂಘಟಿತವಾದವು. ಹೋರಾಟಗಳು ಕೆಲವೊಮ್ಮೆ ಕಾಂಗ್ರೆಸ್‌ನೊಂದಿಗೆ ಮತ್ತು ಕೆಲವೊಮ್ಮೆ ಕಾಂಗ್ರೆಸ್ ವಿರುದ್ಧವಾದ ನಿಲುವನ್ನು ಹೊಂದುತ್ತಿದ್ದವು. ತೆಲಂಗಾಣದ ರೈತ ಹೋರಾಟವು ಜಮೀನ್ದಾರರು ಹಾಗೂ ನಿಜಾಮನ ರಜಾಕಾರರು ವಿರುದ್ಧ ಪ್ರತಿಭಟಿಸಿತು. ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ ಎದ್ದರು. ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳವಳಿ ನಡೆಸಿದರು.

## ಕಾರ್ಮಿಕ ಬಂಡಾಯ

ಕಾರ್ಮಿಕರ ಹೋರಾಟವು 1827ರಲ್ಲಿ ಕಲ್ಕತ್ತದಲ್ಲಿ ಆರಂಭವಾಯಿತು. ಸೆಣಬು, ಬಟ್ಟೆಗಿರಣಿ ಕಾರ್ಮಿಕರು, ರೈಲ್ವೆ ಕೂಲಿಗಳು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾಗತೊಡಗಿದರು. ರೈಲ್ವೆ ಕೂಲಿಗಳು ನಿಲ್ದಾಣದಲ್ಲಿ ಮುಷ್ಕರ ನಡೆಸಿ ಹೆಚ್ಚಿನ ಕೂಲಿಗಾಗಿ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು. ಕಲ್ಕತ್ತದಲ್ಲಿ ಪ್ರಿಂಟರ್ಸ್ ಯೂನಿಯನ್‌ನವರು ಮತ್ತು ಬಾಂಬೆ ಬಟ್ಟೆ ಗಿರಣಿಯ ಕಾರ್ಮಿಕರು ರಾಷ್ಟ್ರೀಯ ಜಾಗೃತಿ ಉಂಟು ಮಾಡಿದರು. ಮದ್ರಾಸ್‌ನಲ್ಲಿ ಲೇಬರ್ ಯೂನಿಯನ್ ಸ್ಥಾಪನೆಗೊಂಡಿತು. ನಂತರದಲ್ಲಿ ಕಾರ್ಮಿಕ ಸಂಘಟನೆಗಳು ಸ್ಥಾಪನೆಗೊಂಡವು. ಕಾಂಗ್ರೆಸ್, ಕಾರ್ಮಿಕ ಸಂಘಟನೆಗಳ ಇಂತಹ ಚಳವಳಿಗೆ ಬೆಂಬಲ ನೀಡಿತು.

## ಬುಡಕಟ್ಟು ಬಂಡಾಯಗಳು

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿ ಜಾರಿಗೆ ತಂದ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗೆ ನೇರವಾಗಿ ಪ್ರೇರಣೆಯಾದವು. ಬುಡಕಟ್ಟು ಬಂಡಾಯಗಳಲ್ಲಿ ಸಂತಾಲರ ದಂಗೆ, ಮುಂಡ ಚಳವಳಿ ಪ್ರಮುಖವಾಗಿವೆ. ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯವು ಈ ನಿಟ್ಟಿನಲ್ಲಿ ಗಮನಾರ್ಹವಾಗಿದೆ.


ಸಂತಾಲ ಬುಡಕಟ್ಟು ದಂಗೆಯನ್ನು ಭಾರತದ ಆದ್ಯ ಹೋರಾಟ ಎಂದು ಗುರುತಿಸಲಾಗಿದೆ. ಈ ಬುಡಕಟ್ಟು ಜನರನ್ನು ಬಂಗಾಳಿ ಮತ್ತು ಒರಿಸ್ಸಾದ ಗುಡ್ಡಗಾಡು ಪ್ರದೇಶಗಳಲ್ಲಿ ಗುರುತಿಸಬಹುದು. ಬ್ರಿಟಿಷರು ಜಾರಿಗೆ ತಂದ ಖಾಯಂ ಜಮೀನ್ದಾರಿ ಪದ್ಧತಿಯಿಂದ ಈ ಬುಡಕಟ್ಟು ಜನರು ನಿರ್ಗತಿಕರಾದರು. ಬುಡಕಟ್ಟು ಜನರ ಭೂಮಿಯು ಜಮೀನ್ದಾರರ ಕೈಸೇರಿತು. ಬಂಗಾಳಿ ಜಮೀನ್ದಾರರು, ಲೇವಾದೇವಿಗಾರರು ಮತ್ತು ಕಂಪನಿ ಸರ್ಕಾರವು ಸಂತಾಲರ ನೇರ ಶೋಷಣೆಗೆ ಕಾರಣರಾದರು. ಸಂತಾಲರ ಶಾಂತಿ ಪ್ರಿಯತೆ ಮತ್ತು ಸಭ್ಯತೆಯನ್ನು ಕಂಪನಿ ಸರ್ಕಾರವು ಶೋಷಣೆಗೆ ಉಪಯೋಗಿಸಿಕೊಂಡಿತು. ಇದರಿಂದ ಅಸಮಾಧಾನಗೊಂಡ ಸಂತಾಲರು ರಹಸ್ಯ ಸಭೆಗಳನ್ನು ನಡೆಸಿ ಜಮೀನ್ದಾರರು ಮತ್ತು ಮಹಾಜನರನ್ನು ಲೂಟಿ ಮಾಡಲು ನಿರ್ಧರಿಸಿದರು. ದಂಗೆಯು ಬಾರಹತ್, ಬಾಗತಪುರ್ ಮತ್ತು ರಾಜಮಹಲ್‌ಗಳಲ್ಲಿ ತೀವ್ರವಾಯಿತು. ಪರಿಣಾಮವಾಗಿ ಬುಡಕಟ್ಟು ಜನರು ಅವರ ಶತ್ರುಗಳನ್ನು ಹತ್ಯೆ ಮಾಡಿದರು. ಇದರಿಂದಾಗಿ ಜಮೀನ್ದಾರರು, ಲೇವಾದೇವಿದಾರರು ಪಲಾಯನ ಮಾಡಿದರು. ಸಂತಾಲರ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ಸೈನ್ಯವನ್ನು ಬಳಸಿಕೊಂಡರು. ಸಂತಾಲರ ದಂಗೆಯು ಕೊನೆಗೊಂಡರೂ ಅದು ಮುಂದಿನ ಅನೇಕ ಹೋರಾಟಗಳಿಗೆ ಪ್ರೇರಣೆಯಾಯಿತು.

## ಸುಭಾಷ್ ಚಂದ್ರ ಬೋಸ್

ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಪಾತ್ರವು ಒಂದು ದಿಟ್ಟ ಮೈಲಿಗಲ್ಲು. ಭಾರತೀಯ ನಾಗರಿಕ ಸೇವಾ ಪರೀಕ್ಷೆಯಲ್ಲಿ (ICS) ನಾಲ್ಕನೇ ರ್‍ಯಾಂಕ್ ಗಳಿಸಿದ್ದರೂ, ದೇಶಾಭಿಮಾನದಿಂದಾಗಿ ಬ್ರಿಟಿಷ್ ಸರ್ಕಾರದ ಪ್ರತಿಷ್ಠಿತ ಹುದ್ದೆಯನ್ನು ತ್ಯಜಿಸಿ ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು. ಇವರು 'ನೇತಾಜಿ' ಎಂದು ಜನಪ್ರಿಯರಾದರು.

© KTBS NOT TO BE REPUBLISHED

ಗಾಂಧೀಜಿಯವರ ಸೌಮ್ಯ ಹೋರಾಟಕ್ಕೆ ಪರ್ಯಾಯವಾಗಿ 30ರ ದಶಕದ ಪ್ರಾರಂಭದಲ್ಲಿ ವಿದೇಶದಲ್ಲಿ ನೆಲೆಗೊಂಡ ಭಾರತೀಯರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಡುವ ಪ್ರಯತ್ನದಲ್ಲಿದ್ದರು. ಇವರು ವಿವಿಧ ದೇಶಗಳ ನಗರಗಳಾದ ವಿಯನ್ನಾ, ಬರ್ಲಿನ್, ರೋಮ್, ಇಸ್ತಾಂಬುಲ್ ಮುಂತಾದ ಕಡೆಗಳಲ್ಲಿ ಪ್ರವಾಸ ಬೆಳೆಸಿ ತಾಯ್ನಾಡಿಗೆ ತಮ್ಮ ಬೆಂಬಲವನ್ನು ನೀಡಲು ಪ್ರೇರೇಪಿಸಿದರು. ಯುರೋಪಿನಲ್ಲಿ ಉದಯಿಸಿದ ಕಮ್ಯೂನಿಸ್ಟ್ ಮತ್ತು ಸಮಾಜವಾದಿ ಅಲೆಯು ಭಾರತದಲ್ಲಿ ಕಾಂಗ್ರೆಸ್ ಸಂಘಟನೆಯನ್ನೂ ಕೂಡಾ ಬದಲಾವಣೆಗೆ ಒಳಪಡಿಸಿತು. ಕಾಂಗ್ರೆಸ್‌ನ ಒಳಗೂ ಸಹ ಸ್ಪಷ್ಟವಾಗಿ ಸಮಾಜವಾದಿ ಎಡಪಂಥೀಯತೆ ಗೋಚರಿಸತೊಡಗಿತು. ಈ ಹಿನ್ನೆಲೆಯಲ್ಲಿ ಭಾರತದಲ್ಲಿ 1934ರ ವೇಳೆಗೆ ಜವಾಹರಲಾಲ್ ನೆಹರು ಮತ್ತು ಸುಭಾಷ್‌ಚಂದ್ರಬೋಸರು ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು.



**ಸುಭಾಷ್ ಚಂದ್ರ ಬೋಸ್**

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದಲ್ಲಿ ಗಾಂಧೀಜಿ ಬೆಂಬಲದೊಂದಿಗೆ ಬೋಸರು ಅಧ್ಯಕ್ಷರಾದರು. ಬ್ರಿಟಿಷರ ಯುದ್ಧ ನೀತಿ ತಯಾರಿಗೆ ಸಂಬಂಧಿಸಿದಂತೆ ಮೃದು ಧೋರಣೆಯನ್ನು ಹೊಂದಿದ್ದ ಗಾಂಧೀಜಿ ಮತ್ತು ಬ್ರಿಟಿಷರ ವಿರುದ್ಧ ಕಠಿಣ ಧೋರಣೆ ಹೊಂದಿದ್ದ ಸುಭಾಷರ ನಡುವೆ ಬಾಂಧವ್ಯದಲ್ಲಿ ಬಿರುಕು ಮೂಡಿತು. ಗಾಂಧೀಜಿಯವರು ಅಂತರರಾಷ್ಟ್ರೀಯ ನೆರವನ್ನು ಈ ಸಂದರ್ಭದಲ್ಲಿ ಕೋರದೇ ಇದ್ದದ್ದನ್ನು ಬೋಸ್ ಆಕ್ಷೇಪಿಸಿದರು. 1938ರ ಕಾಂಗ್ರೆಸ್‌ನ ತ್ರಿಪುರ ಅಧಿವೇಶನದಲ್ಲಿ ಸುಭಾಷ್ ಚಂದ್ರಬೋಸರು ಗಾಂಧೀಜಿಯವರ ವಿರೋಧದ ನಡುವೆಯೂ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಆಯ್ಕೆಗೊಂಡರು. ನಂತರದ ದಿನಗಳಲ್ಲಿ ಗಾಂಧೀಜಿ ಮತ್ತು ಬೋಸರ ಭಿನ್ನಾಭಿಪ್ರಾಯಗಳು ತೀವ್ರಗೊಂಡವು. ಕಾಂಗ್ರೆಸ್‌ನ ಒಳಗಿದ್ದು ಬ್ರಿಟಿಷರನ್ನು ತೀವ್ರವಾಗಿ ಹಿಮ್ಮೆಟ್ಟಿಸಬೇಕೆನ್ನುವ ಸುಭಾಷ್ ಚಂದ್ರ ಬೋಸ್‌ರವರ ಕಾರ್ಯ ಚಟುವಟಿಕೆಗೆ ಹಿನ್ನಡೆಯುಂಟಾಯಿತು. ಸುಭಾಷ್ ಚಂದ್ರ ಬೋಸರು ಕಾಂಗ್ರೆಸ್‌ನ ಚಟುವಟಿಕೆಗಳು ಮತ್ತು ಗಾಂಧೀಜಿಯವರ ಕಾರ್ಯವಿಧಾನದಿಂದ ಬೇಸರಗೊಂಡು ಕಾಂಗ್ರೆಸ್‌ನಿಂದ ಹೊರಬಂದು 'ಫಾರ್ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಕಟ್ಟಿದರು. ಇದು ಕಾಂಗ್ರೆಸ್‌ನ ಒಳಗೆ ಇದ್ದು, ಪ್ರಗತಿಪರ ಮತ್ತು ತೀವ್ರತರ ಆಶಯಗಳನ್ನು ಹೊಂದಿತ್ತು. ಬ್ರಿಟಿಷರ ಯುದ್ಧ ತಯಾರಿಯನ್ನು ಹಾಗೂ ಜಾಗತಿಕ ಯುದ್ಧದಲ್ಲಿ ಭಾರತದ ಪಾಲ್ಗೊಳ್ಳುವಿಕೆಯನ್ನು ಸುಭಾಷರು ವಿರೋಧಿಸಿದರು. ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು ಸುಭಾಷ್ ಚಂದ್ರ ಬೋಸರನ್ನು ಬಂಧಿಸಿತು.

**ನಿಮಗಿದು ತಿಳಿದಿರಲಿ :**

"ಜರ್ಮನ್ನರು ಬರುವ ಮೊದಲೇ ಭಾರತ ಬಿಡುಗಡೆಗೊಳ್ಳಬೇಕು.... ಯುರೋಪಿನಲ್ಲಿ ಇಂಗ್ಲೆಂಡ್ ಪಡೆದುಕೊಂಡ ಪ್ರತಿ ಹೊಡೆತದೊಂದಿಗೆ ಭಾರತದ ಮೇಲಿನ ಬ್ರಿಟಿಷ್ ಸಾಮ್ರಾಜ್ಯಶಾಹಿ ಹಿಡಿತವು ಖಂಡಿತವಾಗಿಯೂ ಕುಗ್ಗುತ್ತದೆ.

**ಸುಭಾಷ್ ಚಂದ್ರ ಬೋಸ್**

**ನಿಮಗಿದು ತಿಳಿದಿರಲಿ :**

"ಭಾರತ ಮತ್ತು 38 ಕೋಟಿ ನನ್ನ ದೇಶಿಯರನ್ನು ವಿಮುಕ್ತಗೊಳಿಸುತ್ತೇನೆ ಎಂದು ದೇವರ ಹೆಸರಿನಲ್ಲಿ ಪ್ರಮಾಣಿಸುತ್ತೇನೆ.... ಸ್ವಾತಂತ್ರ್ಯ ಗಳಿಸಿದ ನಂತರವೂ ಸ್ವತಂತ್ರ ಭಾರತದ ಉಳಿವಿಗಾಗಿ ನನ್ನ ಕಟ್ಟಕಡೆಯ ರಕ್ತದ ತೊಟ್ಟನ್ನು ಹರಿಸಲು ಸದಾ ಸಿದ್ಧನಿರುವೆನು."

ಸುಭಾಷ್ ಚಂದ್ರ ಬೋಸ್

©KTBS NOT TO BE REPUBLISHED

**ನಿಮಗಿದು ತಿಳಿದಿರಲಿ :**

**ಭಾರತೀಯ ರಾಷ್ಟ್ರೀಯ ಸೇನೆ (INA) :**

ಅನೇಕ ಭಾರತೀಯ ಕ್ರಾಂತಿಕಾರಿಗಳು ದೇಶಕ್ಕಾಗಿ ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದರು ಅವರ ಪೈಕಿ ರಾಸ್ ಬಿಹಾರಿ ಬೋಸ್, ಜಪಾನ್‌ನಲ್ಲಿ 1915ರಿಂದ ಬ್ರಿಟಿಷರಿಂದ ಪಲಾಯನಗೈದವರಾಗಿ ವಾಸಿಸುತ್ತಿದ್ದರು. ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟಕ್ಕೆ ಭಾರತೀಯರನ್ನು ಸಜ್ಜುಗೊಳಿಸಲು ಯುದ್ಧವು ನೀಡಿದ ಅವಕಾಶವನ್ನು ಅವರು ಬಳಸಿಕೊಂಡರು. ಬ್ರಿಟಿಷರ ಪರವಾಗಿ ಹಲವಾರು ಭಾರತೀಯ ಸೈನಿಕರು ಹೋರಾಡುತ್ತಿದ್ದರು. ಆಗ್ನೇಯ ಏಷಿಯಾದಲ್ಲಿ ಬ್ರಿಟಿಷರನ್ನು ಸೋಲಿಸಿದ ನಂತರ ಜಪಾನಿಯರು ಹಲವಾರು ಭಾರತೀಯ ಸೈನಿಕರನ್ನು ಯುದ್ಧ ಕೈದಿಗಳಾಗಿ ತೆಗೆದುಕೊಂಡರು. ಜಪಾನಿನ ಸೈನ್ಯಾಧಿಕಾರಿ ಮೇಜರ್ ಪುಜಿವಾರ್, ಕ್ಯಾಪ್ಟನ್ ಮೋಹನ್ ಸಿಂಗ್‌ನನ್ನು ಯುದ್ಧ ಕೈದಿಗಳ ಜೊತೆ ಕೆಲಸ ಮಾಡಲು ಮನವೊಲಿಸಿದರು. 1942 ಮಾರ್ಚ್‌ನಲ್ಲಿ ಟೋಕಿಯೋದಲ್ಲಿ ಭಾರತೀಯರ ಸಮ್ಮೇಳನವನ್ನು ನಡೆಸಲಾಯಿತು ಮತ್ತು ಅವರು ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌ಅನ್ನು ರಚಿಸಿದರು. ಇದರ ನಂತರ ಬ್ಯಾಂಕಾಕ್‌ನಲ್ಲಿ ನಡೆದ ಸಮ್ಮೇಳನದಲ್ಲಿ ರಾಸ್ ಬಿಹಾರಿ ಬೋಸ್ ಲೀಗ್‌ನ ಅಧ್ಯಕ್ಷರಾಗಿ ಆಯ್ಕೆಯಾದರು ಮತ್ತು ಕ್ಯಾಪ್ಟನ್ ಮನಮೋಹನ ಸಿಂಗ್ ಅವರನ್ನು ಭಾರತೀಯ ರಾಷ್ಟ್ರೀಯ ಸೈನ್ಯದ (INA) ಕಮಾಂಡರ್ ಆಗಿ ನೇಮಕ ಮಾಡಿದರು. ಸುಮಾರು 40,000 ಜನ ಸೈನಿಕರನ್ನೊಳಗೊಂಡಿತ್ತು. ಅನಂತರ ಸುಭಾಷ್ ಚಂದ್ರ ಬೋಸರನ್ನು ಈ ಚಳವಳಿಯ ನೇತೃತ್ವ ವಹಿಸುವಂತೆ ಕೇಳಿಕೊಂಡಿತು.

NOT TO BE REPUBLISHED ©KTBS

ಬ್ರಿಟಿಷ್ ವಿರೋಧಿ ಶಕ್ತಿಗಳೊಡಗೂಡಿ ಬ್ರಿಟಿಷರ ವಿರುದ್ಧ ಹೋರಾಡಲು ಬಯಸಿ ಅವರು ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು. ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಇವರಿಗೆ ಎಲ್ಲಾ ಸಹಾಯವನ್ನು ನೀಡುವ ಭರವಸೆಯನ್ನು ವ್ಯಕ್ತಪಡಿಸಿದನು. ಬೋಸರು ಜರ್ಮನಿಯಲ್ಲಿ ಭಾರತೀಯ ಯುದ್ಧ ಕೈದಿಗಳನ್ನು ಸಂಘಟಿಸಿದರು. 'ಆಜಾದ್ಹಿಂದ್ರೇಡಿಯೋ' ಮೂಲಕ ತಮ್ಮ ಭಾಷಣಗಳನ್ನು ಭಾರತೀಯರಿಗೆ ಪ್ರಸರಣ ಮಾಡಿದರು. ಯುದ್ಧದಲ್ಲಿ ಜಪಾನಿನ ಯಶಸ್ಸನ್ನು ತಿಳಿದು ಅದರ ಸಹಾಯದಿಂದ ಭಾರತದ ಬಿಡುಗಡೆಯ ಸಾಧ್ಯತೆಗೆ ಸಂಬಂಧಿಸಿದಂತೆ ಭಾರತೀಯರನ್ನು ಸಂಘಟಿಸಿದ್ದ ರಾಸ್ ಬಿಹಾರಿ ಬೋಸರ ಜೊತೆಗೆ ಸುಭಾಷರು ಕೈಜೋಡಿಸಿದರು. ರಾಸ್ ಬಿಹಾರಿ ಬೋಸರವರು ಟೋಕಿಯೋದಲ್ಲಿ ಸ್ಥಾಪಿಸಿದ 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್'ನ ಸೇನಾವಿಭಾಗವನ್ನು 'ಭಾರತೀಯ ರಾಷ್ಟ್ರೀಯ ಸೇನೆ' (INA) ಎಂದು ಕರೆಯುತ್ತಿದ್ದರು. ನಂತರದ ದಿನಗಳಲ್ಲಿ ಐ.ಎನ್.ಎ ಯ ಮುಖಂಡತ್ವವನ್ನು ಸುಭಾಷ್ ಚಂದ್ರ ಬೋಸರವರಿಗೆ ವಹಿಸಿದರು. ಸುಭಾಷ್ ಚಂದ್ರ ಬೋಸರು ಈ ಸಂದರ್ಭದಲ್ಲಿ 'ದೆಹಲಿ ಚಲೋ'ಗೆ ಕರೆಯನ್ನು ನೀಡಿದರು. 'ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂಬ ಕರೆಯನ್ನಿತ್ತರು. ಭಾರತೀಯ ರಾಷ್ಟ್ರೀಯ ಸೇನೆಯಲ್ಲಿ ಝಾನ್ಸಿ ರೆಜಿಮೆಂಟ್ ಎಂಬ ವಿಭಾಗವೂ ಇತ್ತು. ಕ್ಯಾಪ್ಟನ್ ಲಕ್ಷ್ಮಿ ಈ ರೆಜಿಮೆಂಟಿನ ನೇತೃತ್ವವನ್ನು ವಹಿಸಿದ್ದರು.

ಸುಭಾಷರು ರಂಗೂನಿನ ಮೂಲಕ ಬ್ರಿಟಿಷರ ಕೈಯಲ್ಲಿದ್ದ ದೆಹಲಿಯನ್ನು ವಶಪಡಿಸಿಕೊಳ್ಳಲು ಯುದ್ಧ ತಂತ್ರವನ್ನು ರೂಪಿಸಿದ್ದರು. ಆ ಹೊತ್ತಿಗೆ ಭಾರತದಿಂದ ಐ.ಎನ್.ಎ ಗೆ ಸೇರ್ಪಡೆಯಾದ ಸಾವಿರಾರು ಯೋಧರು ದೆಹಲಿಯನ್ನು ಆಕ್ರಮಿಸಲು ತಯಾರಿ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಸುಭಾಷರ ಆದೇಶದಂತೆ ಸಶಸ್ತ್ರ ಹೋರಾಟವನ್ನು ಅವರು ಬರ್ಮಾದ ಗಡಿಯಲ್ಲಿ ಆರಂಭಿಸಿದರು. ಬ್ರಿಟಿಷರು ಮತ್ತು ಐ.ಎನ್.ಎ ನಡುವೆ ತೀವ್ರವಾದಂತಹ ಯುದ್ಧ ನಡೆದಿದ್ದ ಸಂದರ್ಭದಲ್ಲಿ ಸುಭಾಷರು ಆಕಸ್ಮಿಕವಾಗಿ

ವಿಮಾನ ಅಪಘಾತದಲ್ಲಿ ಮಡಿದರು (ಇದು ಇಂದಿಗೂ ಒಂದು ವಿವಾದಾತ್ಮಕ ಸುದ್ದಿಯಾಗಿಯೇ ಉಳಿದಿದೆ. ನೇತಾಜಿಯವರು ತೀರಿಕೊಂಡರು ಎಂಬುದು ಒಂದು ಸುಳ್ಳು ಸುದ್ದಿಯಾಗಿತ್ತು ಎಂದೂ ಹೇಳಲಾಗುತ್ತದೆ). ಬರ್ಮಾದ ರಾಜಧಾನಿ ರಂಗೂನ್ ಬ್ರಿಟಿಷರ ವಶವಾದ್ದರಿಂದ ಐ.ಎನ್.ಎ ಸೈನಿಕರನ್ನು ಬ್ರಿಟಿಷರು ಬಂಧಿಸಿದರು. ನಂತರದ ದಿನಗಳಲ್ಲಿ ಗಾಂಧೀಜಿಯವರು ಸೇರಿದಂತೆ ಕಾಂಗ್ರೆಸ್‌ನ ಬಹುತೇಕ ನಾಯಕರೆಲ್ಲರೂ ಐ.ಎನ್.ಎ ಸೈನಿಕರನ್ನು ಬಂಧಮುಕ್ತ ಮಾಡುವಲ್ಲಿ ಶ್ರಮಿಸಿದರು.

**ಡಾ. ಬಿ.ಆರ್. ಅಂಬೇಡ್ಕರ್ :** ಸಾಮಾಜಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಡಾ. ಬಿ.ಆರ್. ಅಂಬೇಡ್ಕರ್‌ರವರು ಬಲವಾಗಿ ನಂಬಿದ್ದರು. ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿರುವ ಕಟ್ಟಕಡೆಯ ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ; ಅದು ಕೇವಲ ಮರಿಚೀಕೆಯಾಗಿ ಉಳಿಯುತ್ತದೆ ಎಂದು ಅಂಬೇಡ್ಕರ್‌ರವರು ತಿಳಿದಿದ್ದರು. ಅವರು ಭಾರತವನ್ನು ಕೇವಲ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣದೆ ಅದರ ಭಾವನಾತ್ಮಕ ಮುಖವನ್ನು ಪರಿಚಯಿಸಿದರು. ಇವರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು. ಅಸ್ಪೃಶ್ಯರು ಕನಿಷ್ಠ ಮಟ್ಟದ ಅವಕಾಶಗಳಿಂದ ವಂಚಿತರಾಗಿರುವುದನ್ನು ನಿರೂಪಿಸಲು 'ಮಹಾಡ್' ಮತ್ತು 'ಕಾಲಾರಾಂ' ದೇವಾಲಯ ಚಳವಳಿಗಳನ್ನು ರೂಪಿಸಿದರು. ಇವರು ಮೂರೂ ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳಲ್ಲಿ ಭಾಗವಹಿಸಿ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿದರು. ಹರಿಜನೋದ್ಧಾರ ಮತ್ತು ಅಸ್ಪೃಶ್ಯರ ಮುಖಂಡತ್ವಕ್ಕೆ ಸಂಬಂಧಿಸಿದಂತೆ ಗಾಂಧೀಜಿ ಮತ್ತು ಅಂಬೇಡ್ಕರ್‌ರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದವು. ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ಬಯಸಿದ್ದು ಗಾಂಧಿ ಮತ್ತು ಅಂಬೇಡ್ಕರರ ನಡುವೆ ವಿವಾದಕ್ಕೂ ಕಾರಣವಾಯಿತು. ಇವರು ಬರೋಡ ಮಹಾರಾಜರಡಿಯಲ್ಲಿ ದಿವಾನರಾಗಿದ್ದರು. ಮುಂಬೈ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ನಂತರದಲ್ಲಿ ವೈಸ್‌ರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲೂ ಸಹ ಅತ್ಯಂತ ಮುತುವರ್ಜಿಯಿಂದ ಕಾರ್ಯಭಾರವನ್ನು ನಿಭಾಯಿಸಿದರು. ಅಂಬೇಡ್ಕರ್ ಕಾಂಗ್ರೆಸ್ ಪಕ್ಷವನ್ನು ಸೇರದೆ 'ಬಹಿಷ್ಕೃತ ಹಿತಕಾರಣಿ ಸಭಾ' ಎಂಬ ಸಂಘಟನೆಯನ್ನು ಹಾಗೂ 'ಸ್ವತಂತ್ರ ಕಾರ್ಮಿಕ ಪಕ್ಷ' ಎಂಬ ಸ್ವತಂತ್ರ ಪಕ್ಷವನ್ನು ಸ್ಥಾಪಿಸಿದರು. 'ಪ್ರಬುದ್ಧ ಭಾರತ', 'ಜನತಾ', 'ಮೂಕನಾಯಕ', 'ಬಹಿಷ್ಕೃತ ಭಾರತ' ಪತ್ರಿಕೆಗಳನ್ನು ಹೊರಡಿಸಿದರು. ಕಮ್ಯುನಿಸ್ಟ್ ಮತ್ತು ಸಮಾಜವಾದಿ ಧೋರಣೆಗಳಿಂದ ದೂರವೇ ಉಳಿದು ಕೃಷಿ ಕಾರ್ಮಿಕರ ಏಳಿಗೆಗಾಗಿಯೂ ಇವರು ದುಡಿದರು.


ಡಾ. ಬಿ.ಆರ್. ಅಂಬೇಡ್ಕರ್

**ನಿಮಗಿದು ತಿಳಿದಿರಲಿ :**

"ಪತ್ರಿಕೆಗಳಿಲ್ಲದ ನಾಯಕ ರೆಕ್ಕೆಯಿಲ್ಲದ ಪಕ್ಷಿಯಂತೆ".

**ಡಾ.ಬಿ.ಆರ್.ಅಂಬೇಡ್ಕರ್**

ಸ್ವತಂತ್ರ ಭಾರತದ ದಿಕ್ಸೂಚಿಯಾಗಿ ಭಾರತದ ಸಂವಿಧಾನವನ್ನು ರಚಿಸಬೇಕಾಯಿತು. ಸಂವಿಧಾನ ಸಭೆಯ ಅಧ್ಯಕ್ಷರಾಗಿ ಡಾ. ಬಾಬು ರಾಜೇಂದ್ರ ಪ್ರಸಾದ್‌ರವರನ್ನು ಆಯ್ಕೆ ಮಾಡಲಾಯಿತು. ಮುಂದುವರೆದು ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ಡಾ. ಬಿ.ಆರ್.ಅಂಬೇಡ್ಕರ್‌ರವರನ್ನು ಸಂವಿಧಾನ ರಚನಾ ಸಮಿತಿಯು ಸರ್ವಾನುಮತದಿಂದ ಆಯ್ಕೆ ಮಾಡಿತು. ಸಂವಿಧಾನದಲ್ಲಿ ಸಮಾನತೆಯನ್ನು ಪ್ರತಿಪಾದಿಸಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಕಾನೂನಿನ ರಕ್ಷಣೆಯನ್ನು ಒದಗಿಸಿದರು. ಅಸ್ಪೃಶ್ಯತಾ


NOT TO BE REPUBLISHED @KTBS

ಆಚರಣೆಯನ್ನು ಅಪರಾಧವೆಂದು ಭಾರತದ ಸಂವಿಧಾನವು ಪರಿಗಣಿಸಿದೆ. ಸ್ವತಂತ್ರ ಭಾರತದಲ್ಲಿ ಡಾ. ಬಿ.ಆರ್.ಅಂಬೇಡ್ಕರ್‌ರವರು ಕಾನೂನು ಮಂತ್ರಿಯಾದರು. ಆಧುನಿಕತೆ, ವೈಚಾರಿಕತೆ ಮತ್ತು ಪಾಶ್ಚಾತ್ಯ ವಿದ್ವಾಂಸರಿಂದ ಪ್ರೇರಣೆ ಪಡೆದರೂ ದೇಶೀಯ ಬೇರುಗಳ ಕಡೆಗೆ ಒಲವನ್ನು ತೋರಿದರು. ತಮ್ಮ ಇಳಿವಯಸ್ಸಿನಲ್ಲಿ ಇವರು ಹಿಂದೂ ಧರ್ಮವನ್ನು ತೊರೆದು ಭಾರತೀಯ ಸಂಸ್ಕೃತಿಯ ಭಾಗವಾಗಿದ್ದ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಮಾರ್ಕ್ಸ್‌ವಾದವು ಯಾವ ಬದಲಾವಣೆಯನ್ನು ರಕ್ತ ಮತ್ತು ಹಿಂಸೆಯಿಂದ ತರಬಹುದೋ ಅದನ್ನು ಬೌದ್ಧ ಧರ್ಮವು ಶಾಂತಿ ಮತ್ತು ಅಹಿಂಸಾತ್ಮಕವಾಗಿ ತರಬಲ್ಲದು ಎಂದು ಅವರು ನಂಬಿದ್ದರು. ಅವರ ಜೀವಮಾನದ ಸಾಧನೆಗಾಗಿ ಭಾರತ ಸರ್ಕಾರವು ಇವರಿಗೆ ಮರಣೋತ್ತರವಾಗಿ 'ಭಾರತರತ್ನ'ವನ್ನು ನೀಡಿ ಗೌರವಿಸಿದೆ.

> **ಚಟುವಟಿಕೆ :**
> ಡಾ. ಬಿ.ಆರ್. ಅಂಬೇಡ್ಕರ್ ರವರ ಜೀವನ ಚರಿತ್ರೆಯನ್ನು ಓದಿ.

## ಜವಾಹರಲಾಲ್ ನೆಹರು

ಪಂಡಿತ್ ಜವಾಹರಲಾಲ್ ನೆಹರುರವರು ಹೋಂರೂಲ್ ಚಳವಳಿಯೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸಿದರು. 1920ರಲ್ಲಿ ನಡೆದ ಅಸಹಕಾರ ಚಳವಳಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದ ನೆಹರುರವರು 1929ರಲ್ಲಿ ಲಾಹೋರ್ ಅಧಿವೇಶನದ ಅಧ್ಯಕ್ಷರಾಗಿದ್ದರು. ಈ ಅಧಿವೇಶನದಲ್ಲಿ ಸಂಪೂರ್ಣ ಸ್ವರಾಜ್ಯದ ಗುರಿಯನ್ನು ಘೋಷಿಸಲಾಯಿತು. ಗಾಂಧೀಜಿಯವರು ಅಸಹಕಾರ ಚಳವಳಿಯನ್ನು ಹಿಂದೆ ಪಡೆದದ್ದರಿಂದ ನೆಹರುರವರು ನಿರಾಶೆಯನ್ನು ವ್ಯಕ್ತಪಡಿಸಿದ್ದರು.


ಜವಾಹರಲಾಲ್ ನೆಹರು

ನೆಹರುರವರ ಚಿಂತನೆಗಳು ರಾಜಕೀಯ ಚಟುವಟಿಕೆಗಳಿಗೆ ಹೊಸ ತಿರುವನ್ನು ನೀಡಿದವು. ಇವರು ಕಮ್ಯೂನಿಸ್ಟರ ಸಿದ್ಧಾಂತಗಳಿಂದ ಪ್ರಭಾವ ಹೊಂದಿದ್ದರು. ಪರಿಣಾಮವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಎಡಪಂಥೀಯ ಆಶಯಗಳು ಪ್ರಬಲವಾದವು. ಇದರ ಫಲವಾಗಿ ನೆಹರು ಮತ್ತು ಸುಭಾಷ್ ಚಂದ್ರ ಬೋಸರು ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು.

ನೆಹರು ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 49ನೆಯ ಅಧಿವೇಶನದ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದ ಸಾಮ್ರಾಜ್ಯಶಾಹಿ ಯುದ್ಧದಿಂದ ದೂರವೇ ಉಳಿಯಬೇಕು ಎಂದು ಸಾರಿದರು. 'ಚರಕ' ಮತ್ತು 'ಹರಿಜನ' ಚಳವಳಿಗಳು ಅಷ್ಟೇನು

> **ನಿಮಗಿದು ತಿಳಿದಿರಲಿ :**
> ಮಹಾರಾಷ್ಟ್ರದ 'ಮಹಾಡ್' ಎನ್ನುವ ಊರಿನಲ್ಲಿದ್ದ ಕೆರೆಯ ನೀರನ್ನು ಅಸ್ಪೃಶ್ಯರು ಬಳಸುವಂತಿರಲಿಲ್ಲ. ನೀರಿನ ಬಳಕೆಯನ್ನು ಊರಿನ ಅಸ್ಪೃಶ್ಯರೂ ಉಪಯೋಗಿಸುವಂತೆ ರೂಪಿಸಿದ ಚಳವಳಿಯನ್ನು ಮಹಾಡ್ ಚಳವಳಿಯೆಂದು ಕರೆಯುತ್ತಾರೆ. ಹಾಗೆಯೇ 'ಕಾಲಾರಾಂ' ಎನ್ನುವ ದೇವಾಲಯದಲ್ಲಿ ಉಳಿದೆಡೆಯಲ್ಲಿದ್ದಂತೆ ಅಸ್ಪೃಶ್ಯರಿಗೆ ಪ್ರವೇಶವಿರಲಿಲ್ಲ. ಅಲ್ಲಿ ಕೂಡ ಅಸ್ಪೃಶ್ಯರು ದೇವಾಲಯವನ್ನು ಪ್ರವೇಶಿಸುವ ಕ್ರಾಂತಿಕಾರಕ ಯೋಜನೆಯನ್ನು ಅಂಬೇಡ್ಕರ್ ಅವರು ರೂಪಿಸುತ್ತಾರೆ. ಆದರೆ ಇವುಗಳು ಜನರಲ್ಲಿ ಜಾಗೃತಿಯನ್ನುಂಟುಮಾಡಿದರೂ ಚಳವಳಿಗಳು ಆ ಕಾಲಘಟ್ಟದಲ್ಲಿ ಯಶಸ್ವಿಯಾಗಲಿಲ್ಲ.

©KTBS NOT TO BE REPUBLISHED

ಪರಿಣಾಮಕಾರಿಯಲ್ಲವೆಂದು ಇವರು ವಾದಿಸಿದರು. ಈ ಅಧಿವೇಶನದಲ್ಲಿ ಗಾಂಧೀಜಿಯವರ ಚಿಂತನೆಗಳಿಂದ ದೂರ ಸರಿದಂತೆ ಇವರು ಕಂಡು ಬಂದರು.

50ನೆಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ನೆಹರುರವರು ತಮ್ಮ ಸಮಾಜವಾದಿ ಹಾಗೂ ಕಮ್ಯುನಿಸ್ಟ್ ವಿಚಾರಗಳ ಬಗ್ಗೆ ಮೃದು ಧೋರಣೆಯನ್ನು ತಳೆದರು. 'ಕಾಂಗ್ರೆಸ್ ಇಂದು ಭಾರತದಲ್ಲಿ ಪೂರ್ಣ ಪ್ರಜಾಪ್ರಭುತ್ವಕ್ಕಾಗಿ ನಿಂತಿದೆ ಹಾಗೂ ಪ್ರಜಾಪ್ರಭುತ್ವಕ್ಕಾಗಿಯೇ ಹೋರಾಡುತ್ತದೆಯೇ ಹೊರತು ಸಮಾಜವಾದಕ್ಕಲ್ಲ' ಎಂದರು.

ಕೈಗಾರಿಕೀಕರಣ ಮತ್ತು ನವಭಾರತದ ಶಿಲ್ಪಿಯಾಗಿ ಭಾರತದ ಮೊದಲ ಪ್ರಧಾನ ಮಂತ್ರಿಯಾಗಿದ್ದ ನೆಹರುರವರನ್ನು ನಾವು ಕಾಣುತ್ತೇವೆ. 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದ ಭಾರತದ ಮೊದಲ ಗೃಹಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರ ನೇತೃತ್ವದಲ್ಲಿ ಭಾರತದ ಅನೇಕ ದೇಶೀ ಸಂಸ್ಥಾನಗಳ ವಿಲೀನಿಕರಣಕ್ಕೆ ನೆಹರು ಅವರು ಕಾರಣರಾದರು. ನಂತರ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಭಾರತಕ್ಕೆ ಪ್ರಜಾಪ್ರಭುತ್ವೀಯ ತಳಹದಿಯನ್ನು ಹಾಕಿದರು. ಬಂಡವಾಳ ಹಾಗೂ ಸಮಾಜವಾದಿ ತತ್ವಗಳನ್ನೊಳಗೊಂಡ ಮಿಶ್ರ ಆರ್ಥಿಕ ನೀತಿಯು ನೆಹರು ಅವರ ಆಧುನಿಕ ಭಾರತದ ಮೈಲಿಗಲ್ಲಾಯಿತು. ಬೃಹತ್ ಕೈಗಾರಿಕೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು ಅವರು ಬಲವಾಗಿ ನಂಬಿದ್ದರು. ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಯ ಕನಸನ್ನು ಕಂಡರು. ಇವುಗಳ ರೂವಾರಿಯಾಗಿ ನಾವು ನೆಹರುರವರನ್ನು ಕಾಣಬಹುದು. ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಭಾರತವು ಬಣಗಳ ಧ್ರುವೀಕೃತ ವ್ಯವಸ್ಥೆಯಿಂದ ವಿಮುಕ್ತಗೊಂಡು ಅಲಿಪ್ತ ನೀತಿಯನ್ನು ಪ್ರತಿಪಾದಿಸಿತು. ಪಂಚಶೀಲ ತತ್ವಗಳ ಆಧಾರದ ಮೇಲೆ ಶಕ್ತಿ ರಾಜಕಾರಣದಿಂದ ದೂರವೇ ಉಳಿದು ಶಾಂತಿ ಸಹಬಾಳ್ವೆಯ ಸೂತ್ರಗಳನ್ನು ಅನುಷ್ಠಾನಕ್ಕೆ ತರಲು ಕಾರಣರಾದರು. 1964ರಲ್ಲಿ ಇವರು ನಿಧನ ಹೊಂದಿದರು.

**ಚಟುವಟಿಕೆ :**
ಪಂಡಿತ್ ಜವಾಹರಲಾಲ್ ನೆಹರುರವರು ಪ್ರಥಮ ಪ್ರಧಾನ ಮಂತ್ರಿಯಾಗಿ ರೂಪಿಸಿದ ವಿದೇಶಾಂಗ ನೀತಿಯ ಬಗ್ಗೆ ಹೆಚ್ಚಿನ ಮಾಹಿತಿ ಓದಿರಿ.

### ಮಹಮದ್ ಅಲಿ ಜಿನ್ನಾ

ಮಹಮದ್ ಅಲಿ ಜಿನ್ನಾರವರು 1906ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು ಹಾಗೂ ದಾದಾಬಾಯಿ ನವರೋಜಿಯವರ ಖಾಸಗಿ ಕಾರ್ಯದರ್ಶಿಯಾಗಿಯೂ ಕೆಲಸವನ್ನು ನಿರ್ವಹಿಸಿದ್ದರು. ತಿಲಕರ ವಿರುದ್ಧದ ಮೊಕದ್ದಮೆಗಳ ಸಂದರ್ಭದಲ್ಲಿ ಅವರ ಪರವಹಿಸಿದ್ದರಿಂದ, ಇದು ಜಿನ್ನಾರವರಿಗೆ ಅತೀವ ಪ್ರಶಂಸೆಯನ್ನು ತಂದುಕೊಟ್ಟಿತು. ಇವರು ಹೋಂ ರೂಲ್ ಲೀಗ್‌ನ್ನು ಸೇರಿದರು. 1916ರ ಅನೇಕ ಸಮಾವೇಶಗಳಲ್ಲಿ ಹಿಂದೂ ಮತ್ತು ಮಹಮದೀಯರ ನಡುವಿನ ಏಕತೆಯ


ಜಿನ್ನಾ ಮತ್ತು ಗಾಂಧೀಜಿ

© KTBS NOT TO BE REPUBLISHED

ಅಗತ್ಯವನ್ನು ತಿಳಿಸಿದರು. ಮುಸ್ಲಿಂ ಪರ ರಾಜಕಾರಣಿ ಎಂದು ಬಿಂಬಿತವಾಗಿದ್ದರಿಂದ ಬ್ರಿಟಿಷರ ಬಳುವಳಿಯನ್ನು ಜಿನ್ನಾ ಅವರು ವಿರೋಧಿಸಿದರು. ರೌಲತ್ ಕಾಯ್ದೆಯನ್ನು ವಿರೋಧಿಸಿ ಅವರು ತಮ್ಮ ಕೇಂದ್ರಿಯ ಶಾಸನ ಸಲಹಾ ಸಮಿತಿಗೆ ರಾಜೀನಾಮೆಯನ್ನಿತ್ತರು. ದುಂಡು ಮೇಜಿನ ಸಮಿತಿಗಳಲ್ಲಿ ಜಿನ್ನಾ ತಾನೊಬ್ಬ ರಾಷ್ಟ್ರೀಯವಾದಿ ಮುಸಲ್ಮಾನನೆಂದು ಘೋಷಿಸಿಕೊಂಡರು. 1937ರ ಚುನಾವಣೆಯ ನಂತರ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಸಮ್ಮಿಶ್ರ ಸರ್ಕಾರವನ್ನು ರೂಪಿಸಲು ವಿಫಲವಾದಾಗ ಜಿನ್ನಾ ತನ್ನ ಕಾರ್ಯತಂತ್ರವನ್ನು ಬದಲಾಯಿಸಿಕೊಂಡರು. ಬ್ರಿಟಿಷರು ಸ್ವಾತಂತ್ರ್ಯ ನೀಡುವ ಸಂದರ್ಭ ಹತ್ತಿರವಾದಂತೆ ಜಿನ್ನಾರವರು ಪಾಕಿಸ್ತಾನದ ಬೇಡಿಕೆಯನ್ನು ವಿವಿಧ ರೀತಿಯಲ್ಲಿ ತೀವ್ರಗೊಳಿಸಿದರು. ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವ ಸಮಯದಲ್ಲಿ ದೇಶವನ್ನು ವಿಭಜಿಸಿ ಪಾಕಿಸ್ತಾನವನ್ನು ಪಡೆದರು.

**ಭಾರತದ ವಿಭಜನೆ**

ಸ್ವಾತಂತ್ರ್ಯ ಚಳವಳಿಯ ಉದ್ದಕ್ಕೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಖಂಡ ರಾಷ್ಟ್ರದ ಕಲ್ಪನೆಯನ್ನು ಹೊಂದಿತ್ತು. ಆದರೆ ಮಹಮದ್ ಅಲಿ ಜಿನ್ನಾ ಅವರು ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಮಂಡಿಸುತ್ತಲೇ ಇದ್ದರು. 1940ರಲ್ಲಿ ನಡೆದ ಮುಸ್ಲಿಂ ಲೀಗ್‌ನ ಲಾಹೋರ್ ಅಧಿವೇಶನದಲ್ಲಿ ಜಿನ್ನಾ ಹಿಂದೂ ಮತ್ತು ಮುಸ್ಲಿಮರು ಒಂದು ದೇಶವಾಗಲು ಸಾಧ್ಯವೇ ಇಲ್ಲ ಎಂದು ಘೋಷಿಸಿದರು. ಎರಡನೆಯ ಮಹಾಯುದ್ಧ ಮುಗಿದು ಬ್ರಿಟನ್‌ನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತು. ಇದು ಭಾರತದಲ್ಲಿನ ರಾಜಕೀಯ ಬಿಕ್ಕಟ್ಟನ್ನು ಶಮನಗೊಳಿಸಲು ಕ್ರಮ ಕೈಗೊಂಡಿತು. ಇದು ಕ್ಯಾಬಿನೆಟ್ ನಿಯೋಗವನ್ನು ಭಾರತಕ್ಕೆ ಸ್ವಯಂ ಅಧಿಕಾರವನ್ನು ನೀಡುವ ಕುರಿತು ಚರ್ಚಿಸಲು ಕಳುಹಿಸಿತು. ಈ ನಿಯೋಗವು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನೊಂದಿಗೆ ಚರ್ಚಿಸಿತು. ಭಾರತಕ್ಕೆ ಫೆಡರಲ್ ಮಾದರಿ ಸರ್ಕಾರವನ್ನು ಸೂಚಿಸಿತು. ಸಂವಿಧಾನ ರಚನಾ ಸಭೆ ಕರೆಯುವುದಾಗಿ ಮತ್ತು ಮಧ್ಯಂತರ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತು. ಆದರೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಮಧ್ಯಂತರ ಸರ್ಕಾರ ರಚಿಸುವ ವಿಚಾರದಲ್ಲಿ ಭಿನ್ನತೆ ಉಂಟಾಯಿತು. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ 1946ರ ಆಗಸ್ಟ್ 16 ರಂದು ನೇರ ಕಾರ್ಯಾಚರಣೆ ದಿನಕ್ಕೆ (Direct Action Day) ಕರೆ ನೀಡಿತು. ಇದರಿಂದ ದೇಶಾದ್ಯಂತ ಕೋಮುಗಲಭೆಗಳು ನಡೆದವು. ಬಂಗಾಳ ಒಂದರಲ್ಲೇ ಸಾವಿರಾರು ಅಮಾಯಕ ಹಿಂದೂಗಳನ್ನು ಕೇವಲ 48 ತಾಸುಗಳ ಅವಧಿಯಲ್ಲಿ ಮೂಲಭೂತವಾದಿ ಮುಸ್ಲಿಮರು ಅಮಾನುಷವಾಗಿ ಕೊಂದರು. ಡಾ. ಬಾಬು ರಾಜೇಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ ಸೇರಿದ ಸಂವಿಧಾನ ಸಭೆಯಲ್ಲಿ ಮುಸ್ಲಿಂ ಲೀಗ್ ಭಾಗವಹಿಸಲಿಲ್ಲ.

ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಸಂಬಂಧ ತೀರ ಹದಗೆಟ್ಟಿತ್ತು. ಈ ಸಮಯದಲ್ಲಿ ಬ್ರಿಟಿಷ್ ಸರ್ಕಾರ ಶೀಘ್ರವಾಗಿ ಅಧಿಕಾರವನ್ನು ಹಸ್ತಾಂತರಿಸುವುದಾಗಿ ತಿಳಿಸಿ, 1946ರ ಮಾರ್ಚ್‌ನಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಭಾರತಕ್ಕೆ ವೈಸ್‌ರಾಯ್ ಆಗಿ ಕಳುಹಿಸಿತು. ಬ್ಯಾಟನ್‌ರವರು ಗಾಂಧೀಜಿ, ಜಿನ್ನಾ ಮತ್ತಿತರ ನಾಯಕರೊಂದಿಗೆ ಮಾತುಕತೆ ನಡೆಸಿ ಭಾರತವನ್ನು ವಿಭಜಿಸುವ ಯೋಜನೆಯನ್ನು ರೂಪಿಸಿದರು. 1947ರ ಜುಲೈನಲ್ಲಿ ಭಾರತ ಸ್ವಾತಂತ್ರ್ಯ ಮಸೂದೆಯು ಕಾಯ್ದೆಯ ರೂಪವನ್ನು ಪಡೆಯಿತು. ಕಾಯ್ದೆಯನ್ವಯ 1947ರ ಆಗಸ್ಟ್ 15ರಂದು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಪ್ರತ್ಯೇಕ ರಾಷ್ಟ್ರಗಳು ಉದಯಿಸಿದವು. ರ್‍ಯಾಡ್‌ಕ್ಲಿಫ್ ಆಯೋಗವು ಈ ದೇಶಗಳ ಗಡಿಗಳನ್ನು ಗುರುತಿಸಿತು. ಪಂಡಿತ್ ಜವಾಹರಲಾಲ್ ನೆಹರುರವರು ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿ ಪ್ರಮಾಣವಚನವನ್ನು ಸ್ವೀಕರಿಸಿದರು.

© KTBS NOT TO BE REPUBLISHED

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿಮಾಡಿ.**

1) ಭಾರತೀಯ ರಾಷ್ಟ್ರೀಯ ಕಾಂಗ್ರೆಸನ್ನು __________ ರಲ್ಲಿ ಸ್ಥಾಪಿಸಲಾಯಿತು.

2) ಸಂಪತ್ತಿನ ಸೋರುವಿಕೆ ಸಿದ್ಧಾಂತವನ್ನು ತಿಳಿಸಿದವರು __________.

3) ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು ಎಂದು __________ ರವರು ಘೋಷಿಸಿದರು.

4) ಅಲಿ ಸಹೋದರರು ನಡೆಸಿದ ಚಳವಳಿ __________ .

5) ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು __________ ರವರು ಮಂಡಿಸಿದರು.

6) 1929ರ ಲಾಹೋರ್‌ನಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದ ಅಧ್ಯಕ್ಷರಾಗಿದ್ದವರು __________ .

7) ಮಹಾಡ್ ಮತ್ತು ಕಾಲರಾಂ ದೇವಾಲಯ ಚಳವಳಿಯನ್ನು ರೂಪಿಸಿದವರು __________

8) ಭಾರತೀಯ ರಾಷ್ಟ್ರೀಯ ಸೇನೆಯ ಝಾನ್ಸಿ ರೆಜಿಮೆಂಟಿನ ನೇತೃತ್ವವನ್ನು __________ ರವರು ವಹಿಸಿದರು.

9) ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿ __________ ಎಂಬಲ್ಲಿ ನಡೆಸಿದರು.

10) ಕ್ವಿಟ್ ಇಂಡಿಯಾ ಚಳವಳಿಯು __________ ರಲ್ಲಿ ನಡೆಯಿತು.

**II ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳವನ್ನು ನೀಡಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಭರ್ತಿ ಮಾಡಿ.**

1) ಭಾರತೀಯ ರಾಷ್ಟ್ರೀಯ ಕಾಂಗ್ರೆಸನ ಸ್ಥಾಪಕರು __________ .

ಎ) ಮಹಾತ್ಮ ಗಾಂಧೀಜಿ  ಬಿ) ಎ.ಓ.ಹ್ಯೂಮ್

ಸಿ) ಬಾಲಗಂಗಾಧರ ತಿಲಕ್  ಡಿ) ಗೋಪಾಲಕೃಷ್ಣ ಗೋಖಲೆ

2) 'ಮರಾಠ' ಪತ್ರಿಕೆಯನ್ನು ಪ್ರಕಟಿಸಿದವರು __________ .

ಎ) ಜವಾಹರಲಾಲ್ ನೆಹರು  ಬಿ) ರಾಸ್ ಬಿಹಾರಿ ಬೋಸ್

ಸಿ) ಬಾಲಗಂಗಾಧರ ತಿಲಕ್  ಡಿ) ವಿ. ಡಿ. ಸಾವರ್ಕರ್

3) ಸ್ವರಾಜ್ ಪಕ್ಷ ಸ್ಥಾಪಿಸಿದ ವರ್ಷ __________ .

ಎ) 1924  ಬಿ) 1923

ಸಿ) 1929  ಡಿ) 1906

©KTBS NOT TO BE REPUBLISHED

4) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ಅಧ್ಯಕ್ಷರಾಗಿದ್ದವರು ______________ .

ಎ) ಸರ್ದಾರ್ ವಲ್ಲಭ ಬಾಯಿ ಪಟೇಲ್ ಬಿ) ಡಾ. ಬಿ.ಆರ್.ಅಂಬೇಡ್ಕರ್

ಸಿ) ಲಾಲ ಲಜಪತ ರಾಯ್ ಡಿ) ಸುಭಾಷ್ ಚಂದ್ರಬೋಸ್

5) ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾಗಿದ್ದವರು ______________ .

ಎ) ಭಗತ್ ಸಿಂಗ್ ಬಿ) ಚಂದ್ರಶೇಖರ್ ಅಜಾದ್

ಸಿ) ಅಬುಲ್ ಕಲಾಂ ಅಜಾದ್ ಡಿ) ಸರ್ದಾರ್ ವಲ್ಲಭ ಭಾಯಿ ಪಟೇಲ್

**III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ. ಉತ್ತರಿಸಿ.**

1) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಗೆ ಮೊದಲು ಇದ್ದ ಸಂಘಟನೆಗಳು ಯಾವುವು?
2) ಬ್ರಿಟಿಷ್ ಸರ್ಕಾರದ ಮುಂದಿಟ್ಟ ಮಂದಗಾಮಿಗಳ ಬೇಡಿಕೆಗಳಾವುವು?
3) ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ವಿಶ್ಲೇಷಿಸಿ.
4) ಭಾರತ ಸ್ವಾತಂತ್ರ್ಯ ಹೋರಾಟದಲ್ಲಿನ ಕ್ರಾಂತಿಕಾರಿಗಳನ್ನು ಹೆಸರಿಸಿ.
5) ಸ್ವಾತಂತ್ರ ಚಳವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.
6) ಬಂಗಾಳ ವಿಭಜನೆಯನ್ನು ಹಿಂಪಡೆಯಲು ಕಾರಣಗಳೇನು?
7) ಚೌರಿ ಚೌರ ಘಟನೆಯನ್ನು ವಿವರಿಸಿ.
8) ಉಪ್ಪಿನ ಸತ್ಯಾಗ್ರಹವನ್ನು ವಿವರಿಸಿ.
9) ಕ್ವಿಟ್ ಇಂಡಿಯಾ ಚಳವಳಿಯು ವಿಫಲವಾಗಲು ಕಾರಣಗಳೇನು?
10) ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖವಾಗಿ ಕಂಡುಬರುವ ತೀವ್ರಗಾಮಿಗಳ ಹೆಸರುಗಳನ್ನು ಬರೆಯಿರಿ.
11) ಎರಡನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶದ ಫಲಿತಾಂಶವೇನು?
12) ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಗಳನ್ನು ವಿವರಿಸಿ.
13) ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟುವರ್ಗಗಳ ಬಂಡಾಯಗಳನ್ನು ವಿವರಿಸಿ.

@KTBS NOT TO BE REPUBLISHED

**IV. ಚಟುವಟಿಕೆಗಳು :**

1) ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

2) ಅಂತರ್ಜಾಲದಲ್ಲಿ ಜಲಿಯನ್‌ವಾಲಾಬಾಗ್, ದಂಡಿ ಸತ್ಯಾಗ್ರಹಕ್ಕೆ ಸಂಬಂಧಿಸಿದ ಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ.

3) ಗಾಂಧೀಜಿಯವರ ಸತ್ಯಾಗ್ರಹ ಮತ್ತು ಅಹಿಂಸೆ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸಿ.

**V. ಯೋಜನೆ :**

1) ಶಾಲೆಯಲ್ಲಿ ದೇಶಪ್ರೇಮಕ್ಕೆ ಪೂರಕವಾದ ನಾಟಕಗಳನ್ನು ಆಯೋಜಿಸಿ.

@KTBS
NOT TO BE REPUBLISHED

## ಅಧ್ಯಾಯ – 19

# ಸ್ವಾತಂತ್ರ್ಯೋತ್ತರ ಭಾರತ

Y4E3Y8

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಭಾರತ ವಿಭಜನೆಯ ಪರಿಣಾಮಗಳು.
- ನಿರಾಶ್ರಿತರ ಸಮಸ್ಯೆ.
- ಸರ್ಕಾರ ರಚನಾ ಸಮಸ್ಯೆ.
- ಸಂಸ್ಥಾನಗಳ ವಿಲೀನೀಕರಣ.
- ರಾಜ್ಯಗಳ ಪುನರ್ ವಿಂಗಡಣೆ.

ಮೌಂಟ್‌ಬ್ಯಾಟನ್ ವರದಿಯನ್ನು ಆಧರಿಸಿ 1947ರ ಜೂನ್ 3ರಂದು ಬ್ರಿಟಿಷ್ ಸರ್ಕಾರ ಮಾಡಿದ ಘೋಷಣೆಯು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳ ಅಸ್ತಿತ್ವಕ್ಕೆ ಕಾರಣವಾಯಿತು. ಪ್ರತ್ಯೇಕ ರಾಷ್ಟ್ರಗಳು ಭಾರತೀಯರ ಬಯಕೆಯಾಗಿಲ್ಲದಿದ್ದರೂ ಬ್ರಿಟಿಷರ ಒಡೆದು ಆಳುವ ನೀತಿಯಿಂದಾಗಿ ಇಂತಹ ಪರಿಸ್ಥಿತಿ ಒದಗಿತು. ಭಾರತದ ಸ್ವಾತಂತ್ರ್ಯದ ಜೊತೆಯಲ್ಲೇ ಹಲವಾರು ಜ್ವಲಂತ ಸಮಸ್ಯೆಗಳು ರೂಪ ಪಡೆದವು. ಲಕ್ಷಾಂತರ ನಿರಾಶ್ರಿತರ ಸಮಸ್ಯೆ, ಕೋಮುಗಲಭೆಗಳು, ಸರ್ಕಾರದ ರಚನೆ, ದೇಶೀಯ ಸಂಸ್ಥಾನಗಳ ವಿಲೀನೀಕರಣ, ಆಹಾರದ ಉತ್ಪಾದನೆ, ಕೃಷಿ ಬೆಳವಣಿಗೆ, ಕೈಗಾರಿಕೆಗಳ ಬೆಳವಣಿಗೆ ಮುಂತಾದ ಸಮಸ್ಯೆಗಳನ್ನು ನಿವಾರಿಸಬೇಕಾಗಿತ್ತು.

### ನಿರಾಶ್ರಿತರ ಸಮಸ್ಯೆ

ಭಾರತದ ವಿಭಜನೆಯು ಸೃಷ್ಟಿಸಿದ ಘೋರ ಪರಿಣಾಮಗಳಲ್ಲಿ ನಿರಾಶ್ರಿತರ ಸಮಸ್ಯೆಯೂ ಒಂದು. ಭಾರತದಿಂದ ಪಾಕಿಸ್ತಾನಕ್ಕೆ ಮತ್ತು ಪಾಕಿಸ್ತಾನದಿಂದ ಭಾರತಕ್ಕೆ ಲಕ್ಷಾಂತರ ಜನ ತಮ್ಮ ತಮ್ಮ ಹುಟ್ಟಿದ ಊರುಗಳನ್ನು, ಬೆಳೆದ ಪರಿಸರವನ್ನು, ಆಸ್ತಿ–ಪಾಸ್ತಿಗಳನ್ನು ಕಳೆದುಕೊಂಡು ತಮ್ಮದಲ್ಲದ ಪ್ರದೇಶಗಳಿಗೆ ವಲಸೆ ಹೋಗಬೇಕಾಯಿತು. ಈ ರೀತಿಯಾಗಿ ನಿರಾಶ್ರಿತರಾದ ಜನರಿಗೆ ವಸತಿ, ಉದ್ಯೋಗ, ಭೂಮಿ, ಶಿಕ್ಷಣ, ಆರೋಗ್ಯ, ಸಾಮಾಜಿಕ ವಾತಾವರಣ ಎಲ್ಲವನ್ನೂ ನಿರ್ಮಿಸಿ ಕೊಡಬೇಕಾದ ಬೃಹತ್ ಜವಾಬ್ದಾರಿ ಸರ್ಕಾರದ ಮೇಲೆ ಬಿದ್ದಿತು. ಈ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳು ನಡೆದವು.

### ಮತೀಯ ಗಲಭೆಗಳು

ಕಾಲಾಂತರದಲ್ಲಿ ಬ್ರಿಟಿಷರು ನೆಟ್ಟ ಮತೀಯ ದ್ವೇಷದ ಬೀಜ ದೇಶ ವಿಭಜನೆಯ ಕಾಲಕ್ಕೆ ಚೆನ್ನಾಗಿ ಬೆಳೆದಿತ್ತು. ವಿಭಿನ್ನ ಧರ್ಮಗಳ ಜನರ ನಡುವೆ ಇದ್ದ ಸೌಹಾರ್ದತೆಯ ಕೊಂಡಿ ಸಡಿಲವಾಗಿತ್ತು. ಒಟ್ಟಿಗೆ ಬಾಳಿದವರ ನಡುವೆ ಮತೀಯ ದ್ವೇಷ ಉಲ್ಬಣಿಸಿ ಸಾಮಾನ್ಯ ಜನರು ಅಪಾರವಾದ ಕಷ್ಟ–ನಷ್ಟಗಳನ್ನು ಅನುಭವಿಸಿದರು. ವಲಸೆಯ ಸಂದರ್ಭದಲ್ಲಿ ನಡೆದ ಮತೀಯ ಗಲಭೆಗಳನ್ನು ನಿಯಂತ್ರಣಕ್ಕೆ ತರುವುದು ಸರ್ಕಾರಕ್ಕೆ ಹರಸಾಹಸದ ಕೆಲಸವಾಗಿತ್ತು. ಜನರ

**ಚಟುವಟಿಕೆ :**

ಭಾರತವು ಇಂದಿಗೂ ದೇಶದ ಶಾಂತಿಗೆ ಸಂಬಂಧಿಸಿದಂತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಶಿಕ್ಷಕರೊಂದಿಗೆ ಚರ್ಚಿಸಿ.

@KTBS NOT TO BE REPUBLISHED

ಮತ್ತು ದೇಶದ ಏಕತೆಯನ್ನು ನಾಶ ಮಾಡುವ ಮತೀಯ ಗಲಭೆಗಳನ್ನು ನಿಯಂತ್ರಣಕ್ಕೆ ತರಬೇಕೆಂದು ಮಹಾತ್ಮ ಗಾಂಧಿಯವರು ಬಹಳಷ್ಟು ಶ್ರಮಿಸಿದರು. ಎರಡೂ ದೇಶಗಳ ಜನರಲ್ಲಿ ಭಾವೋದ್ರೇಕದಿಂದ ಉಂಟಾಗಿದ್ದ ಆಕ್ರೋಶವು ಶಮನವಾಗಬೇಕೆಂದು ಗಾಂಧಿಯವರು ಕಲ್ಕತ್ತಾದಲ್ಲಿ ಭಗವದ್ಗೀತೆಯನ್ನು ಪಠಿಸುತ್ತಾ ಉಪವಾಸವನ್ನು ಕೈಗೊಂಡರು.


**ಸರ್ಕಾರದ ರಚನೆ**

1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ತಾತ್ಕಾಲಿಕ ಸರ್ಕಾರ ರಚನೆಯಾಯಿತು. ಮೌಂಟ್ ಬ್ಯಾಟನ್ ಭಾರತದ ಗವರ್ನರ್ ಜನರಲ್ ಆದರು. ಜವಾಹರಲಾಲ್ ನೆಹರೂರವರು ಭಾರತದ ಪ್ರಧಾನ ಮಂತ್ರಿಯಾಗಿ ಸರ್ಕಾರವನ್ನು ರಚಿಸಿದರು. 1950ರ ಜನವರಿ 26ರಂದು ಭಾರತದ ಸಂವಿಧಾನ ಜಾರಿಯಾಯಿತು. ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರ ಸ್ಥಾನವನ್ನು ಡಾ. ಬಿ.ಆರ್. ಅಂಬೇಡ್ಕರ್‌ರವರು ವಹಿಸಿಕೊಂಡರು. ಸಂವಿಧಾನ ಜಾರಿಯಾದ ನಂತರ ಡಾ. ಬಾಬು ರಾಜೇಂದ್ರ ಪ್ರಸಾದರವರು ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರಾದರು. ಸಂವಿಧಾನವು ಭಾರತವನ್ನು ಸಾರ್ವಭೌಮ, ಪ್ರಜಾಸತ್ತಾತ್ಮಕ, ಗಣರಾಜ್ಯವೆಂದು ಘೋಷಿಸಿತು. ಮುಂದೆ ಸಂವಿಧಾನಕ್ಕೆ 42ನೇ ತಿದ್ದುಪಡಿ ತಂದು 'ಜಾತ್ಯತೀತ' ಮತ್ತು 'ಸಮಾಜವಾದಿ' ಎಂಬ ಎರಡು ಅಂಶಗಳನ್ನು ಸೇರಿಸಲಾಯಿತು. ಇದರ ಆಧಾರದ ಮೇಲೆ ಭಾರತ ಸರ್ಕಾರವು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಿತು. ಭಾರತ ಸಂಸದೀಯ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿತು.

**ನಿಮಗಿದು ತಿಳಿದಿರಲಿ :**

**ಸಂಸದೀಯ ಪ್ರಜಾಪ್ರಭುತ್ವ** : ಜಗತ್ತಿನ ಹಲವು ಸಂವಿಧಾನಗಳನ್ನು ಮತ್ತು ಅನುಭವಗಳನ್ನು ಅಭ್ಯಾಸ ನಡೆಸಿದ ಸಂವಿಧಾನ ರಚನಾ ಸಮಿತಿಯು, ಜನರಿಂದ ಆಯ್ಕೆಯಾದ ಸಂಸದರಿಂದ ಕೂಡಿದ ಸಂಸತ್ತು ಶ್ರೇಷ್ಠ ಮತ್ತು ಅಂತಿಮವಾಗಿರಬೇಕೆಂದು ಅಭಿಪ್ರಾಯಪಟ್ಟು ಸಂಸದೀಯ ಪ್ರಜಾಪ್ರಭುತ್ವವನ್ನು ಜಾರಿಗೆ ತಂದಿತು. ಅಧ್ಯಕ್ಷೀಯ ಮಾದರಿಯನ್ನು ತಿರಸ್ಕರಿಸಿತು.

**ದೇಶೀಯ ಸಂಸ್ಥಾನಗಳ ವಿಲೀನೀಕರಣ**



ವಲ್ಲಭಭಾಯ್ ಪಟೇಲ್

ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ದೇಶದಲ್ಲಿ 562 ಸಂಸ್ಥಾನಗಳಿದ್ದವು. ಬ್ರಿಟಿಷರು ದೇಶ ವಿಭಜನೆಯನ್ನು ಮಾಡಿದ್ದರ ಜೊತೆಯಲ್ಲೇ ಈ ಸಂಸ್ಥಾನಗಳ ಮುಂದೆ ಮೂರು ಅವಕಾಶಗಳನ್ನು ತೆರೆದಿಟ್ಟರು. ಒಂದು, ಭಾರತ ಒಕ್ಕೂಟಕ್ಕೆ ಸೇರಬಹುದು, ಎರಡನೆಯದು, ಪಾಕಿಸ್ತಾನಕ್ಕೆ ಸೇರಬಹುದು, ಮೂರನೆಯದು, ಯಾವುದೇ ದೇಶಕ್ಕೂ ಸೇರ್ಪಡೆಯಾಗದೆ ಸ್ವತಂತ್ರರಾಗಿರಬಹುದಾಗಿತ್ತು. ಈ ಹಿನ್ನೆಲೆಯಲ್ಲಿ 1947ರ ವಿಲೀನ ಕಾಯ್ದೆಯ ಪ್ರಕಾರ ಭಾರತ ಸರ್ಕಾರ ಎಲ್ಲಾ ದೇಶೀಯ ಸಂಸ್ಥಾನಗಳನ್ನು ಭಾರತ ಒಕ್ಕೂಟಕ್ಕೆ ಸೇರಿಕೊಳ್ಳಲು ಆಹ್ವಾನ ನೀಡಿತು. ಈ ರೀತಿ ವಿಲೀನಗೊಂಡವರಿಗೆ ಪ್ರತಿಯಾಗಿ ರಾಜ್ಯಾದಾಯವನ್ನು ಆಧರಿಸಿ ರಾಜಧನವನ್ನು ನಿಗದಿಪಡಿಸಿತು. ಜೊತೆಗೆ ಕೆಲವೊಂದು ಸವಲತ್ತು ಮತ್ತು ಸ್ಥಾನಮಾನಗಳನ್ನು ಸಹ ಇವರಿಗೆ ನೀಡಲಾಯಿತು. ಮುಂದೆ 1969ರಲ್ಲಿ ಈ ರಾಜಧನ ಮತ್ತು ಇತರ ಸ್ಥಾನಮಾನಗಳನ್ನು ಸರ್ಕಾರ ರದ್ದುಗೊಳಿಸಿತು. ಸಂಸ್ಥಾನಗಳು ವಿಲೀನಗೊಳ್ಳುವ ಪ್ರಕ್ರಿಯೆಯಲ್ಲಿ ಜುನಾಗಢ್, ಹೈದರಾಬಾದ್

©KTBS NOT TO BE REPUBLISHED

ಮತ್ತು ಜಮ್ಮು ಕಾಶ್ಮೀರ, ಈ ಮೂರು ಸಂಸ್ಥಾನಗಳು ತೀವ್ರ ಪ್ರತಿರೋಧವನ್ನು ತೋರಿದವು. 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದ ಭಾರತದ ಪ್ರಥಮ ಗೃಹಮಂತ್ರಿ ವಲ್ಲಭ ಭಾಯಿ ಪಟೇಲರ ನೇತೃತ್ವದಲ್ಲಿ ಭಾರತದ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸುವ ಕಾರ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಲಾಯಿತು.

**ಜುನಾಗಢ್**

ಇದರ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿದ್ದನು. ಆಗ ಪ್ರಜೆಗಳು ಆತನ ವಿರುದ್ಧ ಬೀದಿಗಿಳಿದರು. ಇದನ್ನು ಎದುರಿಸಲಾಗದೆ ನವಾಬನು ರಾಜ್ಯ ಬಿಟ್ಟು ಪಲಾಯನ ಮಾಡಿದನು.ಅಲ್ಲಿನ ದಿವಾನ ಭಾರತ ಸರ್ಕಾರಕ್ಕೆ ಮಾಡಿದ ಮನವಿಯನ್ನು ಆಧರಿಸಿ ಸೈನ್ಯವನ್ನು ಕಳುಹಿಸಿ ಶಾಂತಿ ಸ್ಥಾಪನೆ ಮಾಡಲಾಯಿತು. 1949ರಲ್ಲಿ ಜುನಾಗಢ್ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

**ಹೈದರಾಬಾದ್**

ಈ ಸಂಸ್ಥಾನವು ನಿಜಾಮನ ಅಧೀನದಲ್ಲಿತ್ತು. ಈತನು ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತಕ್ಕೆ ಸೇರಲು ನಿರಾಕರಿಸಿದನು. ಇದೇ ಸಂದರ್ಭದಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟವು ನಿಜಾಮ ಮತ್ತು ಜಮೀನ್ದಾರರ ವಿರುದ್ಧ ನಡೆಯುತ್ತಿತ್ತು. ನಿಜಾಮನ ಕ್ರೂರ ಪಡೆಯಾದ ರಜಾಕರ ವಿರುದ್ಧ ಜನತೆಯಲ್ಲಿ ವ್ಯಾಪಕ ಪ್ರತಿರೋಧವಿತ್ತು. ಆಗ ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿ ಹೈದರಾಬಾದ್ ಸಂಸ್ಥಾನವನ್ನು 1948ರಲ್ಲಿ ಭಾರತದೊಂದಿಗೆ ವಿಲೀನಗೊಳಿಸಿತು.

**ಜಮ್ಮು-ಕಾಶ್ಮೀರ**

ಜಮ್ಮು ಕಾಶ್ಮೀರಿನ ರಾಜನಾಗಿದ್ದ ಹರಿಸಿಂಗ್‌ನು ಸ್ವತಂತ್ರವಾಗುಳಿಯಲು ನಿರ್ಧರಿಸಿದ್ದನು. ಜಮ್ಮು ಕಾಶ್ಮೀರವು ಭಾರತಕ್ಕೆ ಸೇರಿಬಿಡಬಹುದೆಂಬ ಆತಂಕದಿಂದ ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡುವಂತೆ ಪ್ರಚೋದಿಸಿತು. ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ದುಡಿದ ಷೇಕ್ ಅಬ್ದುಲ್ಲಾನ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಧಾರ್ಮಿಕ ಸಂವಿಧಾನವನ್ನು ಹೊಂದಿರುವ ಪಾಕಿಸ್ತಾನಕ್ಕಿಂತ ಪ್ರಜಾಪ್ರಭುತ್ವ ಗಣರಾಜ್ಯ ಸಂವಿಧಾನವನ್ನು ಹೊಂದಿರುವ ಭಾರತದೊಂದಿಗೆ ಗುರುತಿಸಿಕೊಳ್ಳುವುದೇ ಉತ್ತಮವೆಂದು ಹೋರಾಟ ನಡೆಸಿತು. ಇಂತಹದೊಂದು ಒತ್ತಡದಿಂದಾಗಿ ರಾಜಾ ಹರಿಸಿಂಗನು ಭಾರತ ಸರ್ಕಾರದ ಸಹಾಯವನ್ನು ಕೋರಿದನು. ಪಾಕಿಸ್ತಾನದ ಉದ್ದೇಶ ವಿಫಲವಾಗಿ ಕಾಶ್ಮೀರ ಕೆಲವು ಷರತ್ತುಗಳೊಂದಿಗೆ ಭಾರತದೊಂದಿಗೆ ವಿಲೀನವಾಯಿತು. ಆದರೆ, ಕಾಶ್ಮೀರದ ಒಂದು ಭಾಗ ಪಾಕಿಸ್ತಾನದ ವಶದಲ್ಲಿ ಉಳಿಯಿತು. ಇದರ ವಿರುದ್ಧ ಭಾರತವು ವಿಶ್ವಸಂಸ್ಥೆಗೆ ದೂರು ಸಲ್ಲಿಸಿತು. ವಿಶ್ವಸಂಸ್ಥೆ ಕದನ ವಿರಾಮದ ಆದೇಶವನ್ನು ಜನವರಿ 1, 1949 ರಂದು ನೀಡಿತು. ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯುವ್ಯ ಪ್ರದೇಶವನ್ನು 'ಪಾಕ್ ಆಕ್ರಮಿತ ಪ್ರದೇಶ'ವೆಂದು ಈಗಲೂ ಕರೆಯಲಾಗುತ್ತದೆ. ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ.

**ಪಾಂಡಿಚೇರಿ**

ಸ್ವಾತಂತ್ರ್ಯದ ನಂತರದಲ್ಲಿ ಫ್ರೆಂಚ್ ವಸಾಹತುಶಾಹಿಗಳು ಪಾಂಡಿಚೇರಿ, ಕಾರೈಕಲ್, ಮಾಹೆ ಮತ್ತು ಚಂದ್ರನಗರಗಳ ಮೇಲಿನ ಹಿಡಿತವನ್ನು ಮುಂದುವರಿಸಿದ್ದರು. ಇವು ಭಾರತಕ್ಕೆ ಸೇರಬೇಕೆಂದು

@KTBS NOT TO BE REPUBLISHED

ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ 1954ರಲ್ಲಿ ಈ ಪ್ರದೇಶಗಳು ಭಾರತಕ್ಕೆ ಸೇರ್ಪಡೆಗೊಂಡವು. 1962ರಲ್ಲಿ ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು.

### ಗೋವಾ

ಪೋರ್ಚುಗೀಸರ ವಸಾಹತು ಆಡಳಿತದಲ್ಲಿ ಮುಂದುವರಿದ ಗೋವಾ, ಭಾರತಕ್ಕೆ ಸೇರಬೇಕೆಂದು ನಿರಂತರವಾದ ಚಳವಳಿ ನಡೆಯಿತು. ಗೋವಾವನ್ನು ತೆರವುಗೊಳಿಸಬೇಕೆಂದು ಆದೇಶ ನೀಡಿದರೂ ಬಗ್ಗದ ಪೋರ್ಚುಗೀಸರು, ಆಫ್ರಿಕಾ ಮತ್ತು ಯುರೋಪಿನಿಂದ ಹೆಚ್ಚಿನ ಸೈನ್ಯವನ್ನು ತರಿಸಿಕೊಂಡು ಚಳವಳಿಯನ್ನು ದಮನ ಮಾಡಿ ಅಧಿಕಾರವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸಿದರು. 1955ರಲ್ಲಿ ಭಾರತದ ವಿವಿಧ ಭಾಗಗಳಿಂದ ಸತ್ಯಾಗ್ರಹಿಗಳು ಬಂದು ಗೋವಾದಿಂದ ವಸಾಹತುಶಾಹಿಗಳು ತೊಲಗಬೇಕೆಂದು ವಿಮೋಚನಾ ಹೋರಾಟ ಪ್ರಾರಂಭಿಸಿದರು. 1961ರಲ್ಲಿ ಭಾರತದ ಸೈನ್ಯ ಮಧ್ಯಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು. 1987ರವರೆಗೂ ಕೇಂದ್ರಾಡಳಿತ ಪ್ರದೇಶವಾಗಿದ್ದ ಗೋವಾ ನಂತರ ರಾಜ್ಯವಾಯಿತು.

### ಭಾಷಾವಾರು ರಾಜ್ಯಗಳ ರಚನೆ

ಭಾರತ ಸ್ವತಂತ್ರಗೊಂಡ ನಂತರ ಕಂಡುಬಂದ ಪ್ರಮುಖವಾದ ಪ್ರಜಾಸತ್ತಾತ್ಮಕ ಚಳವಳಿಯೆಂದರೆ ಭಾಷಾವಾರು ರಾಜ್ಯಗಳಿಗಾಗಿನ ಹೋರಾಟ. ಜನರಿಗೆ ಉತ್ತಮವಾದ ಆಡಳಿತವನ್ನು ನೀಡಲು ಜನರ ಭಾಷೆಯನ್ನು ಆಧರಿಸಿದ ಭೌಗೋಳಿಕ ಗಡಿಗಳನ್ನು ಗುರುತಿಸಬೇಕೆಂಬ ಒತ್ತಾಯ ತೀವ್ರವಾಗಿತ್ತು. ಬ್ರಿಟಿಷ್ ಮತ್ತು ದೇಶೀಯ ಸಂಸ್ಥಾನಗಳೆರಡರಲ್ಲೂ ಜನರಾಡುವ ಭಾಷೆಯಲ್ಲಿ ಆಡಳಿತ ನಡೆಸುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ದೇಶಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಗಿತ್ತು. ವಿಶಾಲಾಂಧ್ರ ರಾಜ್ಯ ರಚಿಸಬೇಕೆಂದು ಆಂಧ್ರಮಹಾಸಭಾದ ನೇತೃತ್ವದಲ್ಲಿ 1952ರಲ್ಲಿ ಪೊಟ್ಟಿ ಶ್ರೀರಾಮುಲು 58 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಅಸುನೀಗಿದ ನಂತರ ಈ ಬೇಡಿಕೆ ತೀವ್ರ ಸ್ವರೂಪವನ್ನು ಪಡೆಯಿತು. 1953ರಲ್ಲಿ ಸರ್ಕಾರವು ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ರಚಿಸಿತು. ಇದರಲ್ಲಿ ಫಜಲ್ ಅಲಿ ಅಧ್ಯಕ್ಷರಾಗಿ, ಕೆ.ಎಂ.ಫಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು ಸದಸ್ಯರಾಗಿದ್ದರು. ಮೊದಲ ಭಾಷಾವಾರು ರಾಜ್ಯವಾಗಿ 1953ರಲ್ಲಿ ಆಂಧ್ರಪ್ರದೇಶ ರಚನೆಯಾಯಿತು. ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದಿತು. ಈ ಕಾನೂನಿನ ಪ್ರಕಾರ ಅಂದು ದೇಶದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು.

**ಚಟುವಟಿಕೆ :**

1970ರ ನಂತರದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದ ರಾಜ್ಯಗಳ ಪಟ್ಟಿ ಸಿದ್ಧಪಡಿಸಿ.

©KTBS NOT TO BE REPUBLISHED

ಕನ್ನಡ ಮಾತನಾಡುವ ಪ್ರದೇಶಗಳು ಹಲವು ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿದ್ದವು. ಇವೆಲ್ಲವನ್ನೂ ಒಟ್ಟುಗೂಡಿಸುವ ಬೇಡಿಕೆಯಿಟ್ಟು 'ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು' ನೇತೃತ್ವದಲ್ಲಿ ಚಳವಳಿ ನಡೆಯಿತು. ಅಂತಿಮವಾಗಿ 1956 ನವೆಂಬರ್ 1 ರಂದು 'ಮೈಸೂರು ರಾಜ್ಯ'ವು ಅಸ್ತಿತ್ವಕ್ಕೆ ಬಂದಿತು. ಮುಂದೆ 1973ರಲ್ಲಿ 'ಕರ್ನಾಟಕ' ಎಂದು ಮರುನಾಮಕರಣ ಮಾಡಲಾಯಿತು. ಇಂದು ಭಾರತದಲ್ಲಿ ಒಟ್ಟು 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳು ಹಾಗೂ ಒಂದು ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶವಾಗಿದೆ.

### ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.**

1) ಕಂಪನಿಯ ಕೊನೆಯ ಗೌರ್ನರ್ ಜನರಲ್ ____________ ಆಗಿದ್ದನು.
2) ಭಾರತದ ಪ್ರಥಮ ಗೃಹ ಮಂತ್ರಿ ____________ ಆಗಿದ್ದರು.
3) ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ____________ .
4) ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಗಿ __________ರಲ್ಲಿ ಸೇರಿತು.
5) ರಾಜ್ಯ ಪುನರ್ವಿಂಗಡಣಾ ಕಾನೂನು ______________ ರಲ್ಲಿ ಜಾರಿಗೆ ಬಂದಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1) ಭಾರತವು ಸ್ವಾತಂತ್ರ್ಯಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು?
2) ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?
3) ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಗೊಳಿಸಿದ ರೀತಿಯನ್ನು ವಿವರಿಸಿ.
4) ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?
5) ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ಕ್ರಮವನ್ನು ಕುರಿತು ಬರೆಯಿರಿ.

**III. ಚಟುವಟಿಕೆ :**

1) ಭಾರತದ ಭೂಪಟವನ್ನು ಬಿಡಿಸಿ, ರಾಜ್ಯಗಳನ್ನು ಗುರುತಿಸಿ.

**IV. ಯೋಜನೆಗಳು :**

1) ಭಾರತದಲ್ಲಿರುವ ಪ್ರತಿ ರಾಜ್ಯಗಳ ಮಾತೃಭಾಷೆ, ರಾಜಧಾನಿಗಳ ಪಟ್ಟಿ ಸಿದ್ದಪಡಿಸಿ.
2) ನಮ್ಮ ನೆರೆ ರಾಜ್ಯಗಳ ಸಾಂಸ್ಕೃತಿಕ ವಿಶೇಷತೆಯ ಬಗ್ಗೆ ಶಿಕ್ಷಕರ ನೆರವಿನಿಂದ ಮತ್ತು ಅಂತರ್ಜಾಲದ ನೆರವಿನಿಂದ ವರದಿ ಸಿದ್ಧಪಡಿಸಿ.

NOT TO BE REPUBLISHED ©KTBS

ಅಧ್ಯಾಯ – 20

# ಮಹಾಯುದ್ಧಗಳು ಹಾಗೂ ಭಾರತದ ಪಾತ್ರ

A1S3T4

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಪ್ರಥಮ ಮಹಾಯುದ್ಧ
- ಸರ್ವಾಧಿಕಾರಿಗಳ ಉದಯ
- ಎರಡನೇ ಮಹಾಯುದ್ಧ
- ಮಹಾಯುದ್ಧಗಳಲ್ಲಿ ಭಾರತದ ಪಾತ್ರ

## ಪ್ರಥಮ ಮಹಾಯುದ್ಧ

1914ಕ್ಕೂ ಹಿಂದೆ ಯುರೋಪಿನ ಪ್ರಬಲ ರಾಷ್ಟ್ರಗಳಾದ ಬ್ರಿಟನ್, ಜರ್ಮನಿ, ಫ್ರಾನ್ಸ್, ಇಟಲಿ, ಆಸ್ಟ್ರೋ–ಹಂಗೇರಿಯನ್ ಸಾಮ್ರಾಜ್ಯ ಮತ್ತು ರಷ್ಯಾ ವಸಾಹತುಗಳ ಮೇಲೆ ಹಿಡಿತ ಸಾಧಿಸುವ ಕಾರಣಕ್ಕಾಗಿ ನಿರಂತರವಾದ ಸಂಘರ್ಷದಲ್ಲಿದ್ದವು. ಕೈಗಾರಿಕಾ ಕ್ರಾಂತಿ ಮತ್ತು ನೂತನ ಅವಿಷ್ಕಾರಗಳು ಯುರೋಪಿನ ದೇಶಗಳಲ್ಲಿ ತೀವ್ರವಾದ ಪೈಪೋಟಿಯನ್ನು ಸೃಷ್ಟಿಸಿದವು. ಭಾರತವನ್ನೂ ಒಳಗೊಂಡು ಜಗತ್ತಿನ ನೂರಾರು ದೇಶಗಳ ಮಾರುಕಟ್ಟೆಯನ್ನು ಮತ್ತು ಅಲ್ಲಿನ ಸಂಪನ್ಮೂಲವನ್ನು ಕಬಳಿಸಬೇಕೆಂಬ ದುರಾಲೋಚನೆಯಿಂದ ಈ ಯುರೋಪಿಯನ್ ದೇಶಗಳು ವಸಾಹತುವಿನ ಸಂಚನ್ನು ರೂಪಿಸಿದವು. ಈ ಪ್ರಕ್ರಿಯೆಯಲ್ಲಿ ಉಂಟಾದ ಸಂಕೀರ್ಣ ಒಪ್ಪಂದಗಳು ಭೌಗೋಳಿಕ ಗಡಿಗಳ ಸಮಸ್ಯೆಗಳನ್ನು ಜ್ವಲಂತಗೊಳಿಸಿದವು. ಇದು ಯುರೋಪಿನ ಬಲಾಢ್ಯ ದೇಶಗಳ ನಡುವಿನ ಶಕ್ತಿ ಸಮತೋಲನವನ್ನು ಏರುಪೇರು ಮಾಡುತ್ತಿತ್ತು.

ಇದರಿಂದಾಗಿ ಪ್ರತಿಯೊಂದು ಬಲಾಢ್ಯ ರಾಷ್ಟ್ರವೂ ಅತಿಯಾದ ಮಿಲಿಟರೀಕರಣವನ್ನು ಮಾಡಿತು. ಅನೇಕ ಮೈತ್ರಿಕೂಟಗಳು ಏರ್ಪಟ್ಟವು. ಅತಿಯಾದ ರಾಷ್ಟ್ರೀಯತೆಯು ಅಲ್ಲಲ್ಲಿ ಬೆಳೆಯಿತು. ಸಾಮ್ರಾಜ್ಯವಾದದ ನೀತಿಗಳು ಬಲಗೊಂಡವು. ಮೊದಲ ಮಹಾಯುದ್ಧವು ಈ ದೇಶಗಳನ್ನು ಎರಡು ವಿರುದ್ಧ ಬಣಗಳನ್ನಾಗಿ ವಿಭಜಿಸಿತು. ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ ಕದನ ಬಾಂಧವ್ಯತ್ರಯ (Triple Entente) ಮೈತ್ರಿಕೂಟ ಎನಿಸಿದರೆ ಜರ್ಮನಿ, ಆಸ್ಟ್ರಿಯಾ–ಹಂಗೇರಿ ಮತ್ತು ಇಟಲಿ ಕದನ ಸೌಹಾರ್ದತ್ರಯ (Triple Alliance) ಮೈತ್ರಿಕೂಟವನ್ನು ರಚಿಸಿಕೊಂಡವು. ಸ್ವಲ್ಪಕಾಲದಲ್ಲೇ ಇಟಲಿ ವಿರೋಧಿ ಬಣಕ್ಕೆ ಸೇರಿಕೊಂಡಿತು. ಯುದ್ಧ ಬೆಳೆದಂತೆಲ್ಲಾ ಗುಂಪುಗಳಲ್ಲಿ ಬದಲಾವಣೆಗಳಾದವು.

ಮೊದಲ ಮಹಾಯುದ್ಧ 1914 ರಿಂದ 1918ರವರೆಗೆ ನಡೆಯಿತು. ಯುದ್ಧ ಪ್ರಾರಂಭವಾಗುವುದಕ್ಕೆ ತಕ್ಷಣದ ಕಾರಣವೆಂದರೆ, ಜುಲೈ 28 ರಂದು ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆಯಾಯಿತು. ಈ ಘಟನೆಯು ಆಸ್ಟ್ರಿಯಾ ಮತ್ತು ಸರ್ಬಿಯಾ ದೇಶಗಳ ನಡುವೆ ತಕ್ಷಣವೇ ಬಿಕ್ಕಟ್ಟನ್ನು ಸೃಷ್ಟಿಸಿತು.

ಯುದ್ಧದ ಪ್ರಾರಂಭದಲ್ಲಿ ಅಮೆರಿಕ ತಟಸ್ಥವಾಗಿತ್ತು. ರಷ್ಯಾ ಜರ್ಮನಿಯ ವಿರುದ್ಧವಾಗಿತ್ತು. ಯುದ್ಧ ಕೊನೆ ಹಂತ ತಲುಪುವಾಗ ಪರಿಸ್ಥಿತಿ ಬದಲಾಯಿತು. ಅಮೆರಿಕವು ಬ್ರಿಟನ್ ಮತ್ತು ಫ್ರಾನ್ಸ್ ಜೊತೆ

NOT TO BE REPUBLISHED © KTBS

ಸೇರಿತು. ನವಂಬರ್ 1917ರಲ್ಲಿ ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಸಂಭವಿಸಿ ಜರ್ಮನಿಯೊಂದಿಗೆ ಯುದ್ಧ ನಿಲುಗಡೆ ಒಪ್ಪಂದವನ್ನು ಮಾಡಿಕೊಂಡು ಯುದ್ಧದಿಂದ ಹಿಂದೆ ಸರಿಯಿತು. ಮೈತ್ರಿಬಣದ ದಾಳಿಗಳಿಂದ ಜರ್ಜರಿತವಾದ ಜರ್ಮನಿ ಯುದ್ಧವನ್ನು ಮುಂದುವರಿಸಲಾಗದೆ ಸೋಲೊಪ್ಪಿಕೊಂಡಿತು.

ಮೈತ್ರಿಕೂಟವು 1919ರಲ್ಲಿ ಅತ್ಯಂತ ಅವಮಾನಕಾರಿಯಾದ ವರ್ಸೇಲ್ಸ್ ಒಪ್ಪಂದಕ್ಕೆ ಸಹಿ ಹಾಕಿತು. ಆಸ್ಟ್ರೋ–ಹಂಗೇರಿ ಮತ್ತು ಆಟೋಮನ್ ಸಾಮ್ರಾಜ್ಯಗಳು ತಮ್ಮ ಅಸ್ತಿತ್ವ ಕಳೆದುಕೊಂಡವು. ಜರ್ಮನಿ ತನ್ನ ಹೆಚ್ಚಿನ ಪ್ರದೇಶಗಳನ್ನು ಕಳೆದುಕೊಂಡಿತು. ಯುರೋಪಿನ ಭೂಪಟವೇ ಬದಲಾಗಿ ಹೋಯಿತು. ಹಲವಾರು ಸಣ್ಣ ಸ್ವತಂತ್ರ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದವು. ಮುಂದಿನ ದಿನಗಳಲ್ಲಿ ಸಂಭವನೀಯ ಯುದ್ಧಗಳನ್ನು ತಡೆಯುವ ದೃಷ್ಟಿಯಿಂದ ರಾಷ್ಟ್ರಸಂಘ (ಲೀಗ್ ಆಫ್ ನೇಷನ್ಸ್) ರಚನೆಯಾಯಿತು. ಸೋತ ರಾಷ್ಟ್ರಗಳೊಳಗೆ ಬೆಳೆದ ಅವಮಾನಕರ ಭಾವನೆಗಳು ಉಗ್ರ ರಾಷ್ಟ್ರೀಯತೆಗೆ ಕಾರಣವಾಯಿತು. ಜರ್ಮನಿಯ ಮೇಲೆ ಹೇರಲಾದ ಯುದ್ಧನಷ್ಟ ಪರಿಹಾರ ಮತ್ತು ಇತರ ತೀರ್ಮಾನಗಳು ಅಲ್ಲಿನ ಜನರ ಮೇಲೆ ಪರಿಣಾಮ ಬೀರಿದವು. ನಿರುದ್ಯೋಗ, ಬಡತನ, ಬೆಳವಣಿಗೆ ಕುಸಿತದಿಂದ ಉಂಟಾದ ಅತೃಪ್ತಿಯನ್ನು ಜರ್ಮನ್ ಕೈಗಾರಿಕೋದ್ಯಮಿಗಳು ತಮ್ಮ ಲಾಭಕ್ಕಾಗಿ ಬಳಸಿಕೊಂಡರು. ಎರಡನೆಯ ಪ್ರಪಂಚ ಯುದ್ಧಕ್ಕೆ ಕಾರಣವಾದ ಹಿಟ್ಲರ್‌ನಂತಹ ಸರ್ವಾಧಿಕಾರಿಯ ಬೆಳವಣಿಗೆಗೆ ಇದು ಸಹಾಯ ಮಾಡಿತು. ಬ್ರಿಟನ್, ಫ್ರಾನ್ಸ್, ಜರ್ಮನಿ ಮತ್ತು ಅಮೆರಿಕದ ಶಸ್ತ್ರಾಸ್ತ್ರ ತಯಾರಿಸುವ ವ್ಯಾಪಾರಸ್ಥರು ಅಪಾರ ಪ್ರಮಾಣದಲ್ಲಿ ಲಾಭವನ್ನು ಮಾಡಿದರು.

**ನಿಮಗಿದು ತಿಳಿದಿರಲಿ :**

ಮೊದಲ ಮಹಾಯುದ್ಧದಲ್ಲಿ ಎರಡೂ ಬಣಗಳ ನಾಗರಿಕರು ಮತ್ತು ಸೈನಿಕರೂ ಸೇರಿದಂತೆ ಸುಮಾರು 1,00,00,000 ಜನ ಪ್ರಾಣ ಕಳೆದುಕೊಂಡರು. 2,00,00,000 ಜನ ಗಾಯಗೊಂಡರು ಮತ್ತು 35,00,000 ಜನ ಶಾಶ್ವತವಾಗಿ ಅಂಗವಿಕಲರಾದರು. ಯಾವುದೇ ಯುದ್ಧದ ರೀತಿಯಲ್ಲಿ ಮೊದಲ ಮಹಾಯುದ್ಧವೂ ಸಹ ಕೆಲವರ ಲಾಭಕ್ಕಾಗಿನ ಪೈಪೋಟಿಯಿಂದ ನಡೆಯಿತು. ಆದರೆ ಅಪಾರವಾದ ಸಾವು–ನೋವುಗಳು ಸಂಭವಿಸಿದವು.

## ಸರ್ವಾಧಿಕಾರಿಗಳ ಉದಯ

**ಹಿಟ್ಲರ್ :** ಮೊದಲ ಮಹಾಯುದ್ಧದ ನಂತರ ಉಂಟಾದ ಪರಿಸ್ಥಿತಿಯು ಜರ್ಮನಿಯಲ್ಲಿ ಹಿಟ್ಲರ್ ಮತ್ತು ಇಟಲಿಯಲ್ಲಿ ಮುಸೊಲಿನಿಯ ಸರ್ವಾಧಿಕಾರಗಳನ್ನು ಅಸ್ತಿತ್ವಕ್ಕೆ ತಂದಿತು. ಹಿಟ್ಲರ್ ಜರ್ಮನಿಯ ಛಾನ್ಸಲರ್ ಆಗಿ, ನಂತರ ಅಧ್ಯಕ್ಷ ಹಿಂಡೆನ್‌ಬರ್ಗ್ ನಿಧನದ ನಂತರ ಸರ್ವಾಧಿಕಾರಿಯಾದನು. ಹಿಟ್ಲರ್ ಫ್ಯೂರರ್ ಆದನು. ಹಿಟ್ಲರ್ ಪ್ರಾಬಲ್ಯ ಪಡೆಯುವುದರ ವೇಳೆಗೆ ಜರ್ಮನಿಯಲ್ಲಿ ಕಮ್ಯುನಿಸ್ಟರು ಮತ್ತು ಸೋಷಿಯಲಿಸ್ಟರು ಬಲಿಷ್ಠರಾಗಿದ್ದರು. ಈ ಹಿನ್ನೆಲೆಯಲ್ಲಿ ಜರ್ಮನ್ ಉದ್ಯಮಿಗಳ ಸಂಪೂರ್ಣ ಸಹಾಯವನ್ನು ಪಡೆದ ಹಿಟ್ಲರ್ ಇವರನ್ನು ದಮನಿಸಿದನು. ಕಾರ್ಮಿಕ ಸಂಘಗಳನ್ನು ರದ್ದುಗೊಳಿಸಿದನು. ರಾಜಕೀಯ ಪಕ್ಷಗಳನ್ನು ನಿಷೇಧಿಸಿದನು. ನಾಜಿ ಪಕ್ಷ ಏಕೈಕ ರಾಜಕೀಯ ಪಕ್ಷವೆಂದು ಘೋಷಿಸಿದನು.



ಹಿಟ್ಲರ್

© KTBS NOT TO BE REPUBLISHED

ಯಹೂದಿಗಳು ಜಗತ್ತನ್ನು ನಿಯಂತ್ರಿಸುತ್ತಾರೆಂಬ ಭಯ ಮತ್ತು ಊಹಾತ್ಮಕವಾದ ವಿಚಾರಗಳನ್ನು ಬಿತ್ತಿ ಜನರನ್ನು ಭೀತಿಗೊಳಪಡಿಸಿದನು. ಜಗತ್ತಿನಲ್ಲಿ ಜರ್ಮನ್ ಆರ್ಯ ಜನಾಂಗವೇ ಶ್ರೇಷ್ಠವೆಂಬ ಜನಾಂಗ ವಾದವನ್ನು ಮುಂದಿಟ್ಟು ಪ್ರಬಲವಾಗಿ ಬೆಳೆದನು. ಇವೆಲ್ಲವನ್ನೂ ಮಾಡಲು ಹಿಟ್ಲರ್ ಅನುಸರಿಸಿದ್ದು ನಾಜಿವಾದ. ಇದರ ಸಾರಾಂಶವೇನೆಂದರೆ – ಜಗತ್ತಿನಲ್ಲಿ ಶ್ರೇಷ್ಠವಾದ ಜನಾಂಗವೆಂದರೆ ಆರ್ಯ ಜರ್ಮನ್ ಜನಾಂಗ. ಜಗತ್ತನ್ನು ಆಳ್ವಿಕೆ ಮಾಡಲು ಕೇವಲ ಜರ್ಮನ್ನರು ಮಾತ್ರ ಯೋಗ್ಯರು. ಉಳಿದ ಜನಾಂಗಗಳು ಕೇವಲ ಆಳಿಸಿಕೊಳ್ಳಲು ಮಾತ್ರ ಯೋಗ್ಯರು. ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೆ ಯಹೂದಿಗಳೇ ಕಾರಣ. ಇವರ ಜೊತೆಗೆ ಕಮ್ಯುನಿಸ್ಟರು, ಕ್ಯಾಥೋಲಿಕ್‌ರು, ಸೋಷಿಯಲಿಸ್ಟರು ಕೂಡಾ ಕಾರಣ. ಇವರು ಬದುಕಲು ಯೋಗ್ಯರಲ್ಲ – ಈ ರೀತಿಯಾಗಿ ರೂಪುಗೊಂಡ ಉಗ್ರ ರಾಷ್ಟ್ರೀಯವಾದವು ಅತ್ಯಂತ ಅಮಾನುಷವಾಗಿ ಜಾರಿಗೆ ಬಂದಿತು. ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು 'ಗೊಬೆಲ್ಸ್' ಎಂಬ ವಿಶೇಷವಾದ ಮಂತ್ರಿಯನ್ನು ನೇಮಕ ಮಾಡಿದ್ದನು. ಗಲಭೆಗಳನ್ನು ಮಾಡಿ ಜನರಲ್ಲಿ ಭೀತಿಯನ್ನು ಹುಟ್ಟಿಸಲು 'ಬೂದು ಅಂಗಿದಳ' (Brown Shirts) ಎಂಬ ಕ್ರೌರ್ಯಪಡೆಯೊಂದನ್ನು ರಚಿಸಿದ್ದನು.

ಈ ನಿಟ್ಟಿನಲ್ಲಿ ಹಿಟ್ಲರ್ ನಡೆಸಿದ ಸಾಮೂಹಿಕ ಕೊಲೆಗಳು ಮತ್ತು ನರಮೇಧಗಳು ಚರಿತ್ರೆಯಲ್ಲಿ ಅತ್ಯಂತ ಕುಖ್ಯಾತಿಯನ್ನು ಪಡೆದಿವೆ. ಒಂದು ಅಂದಾಜಿನ ಪ್ರಕಾರ 60 ಲಕ್ಷ ಯಹೂದಿಗಳನ್ನು, ಕೋಟಿಗೂ ಹೆಚ್ಚು ಇತರೆ ಜನರನ್ನು ಕೊಲ್ಲಿಸಿದನು. ಇವನ ಸಾಮೂಹಿಕ ಕಗ್ಗೊಲೆಗಳನ್ನು ಹೊಲೊಕಾಸ್ಟ್ (Holocaust) ಎಂದು ಕರೆಯಲಾಗಿದೆ. 1935ರಲ್ಲಿ ನ್ಯೂರೆಂಬರ್ಗ್ ಕಾನೂನುಗಳನ್ನು ಹಿಟ್ಲರ್ ಜಾರಿಗೊಳಿಸಿದನು. ಊಟ, ನೀರು ಯಾವುದನ್ನೂ ನೀಡದೆ ಗುಲಾಮರ ರೀತಿಯಲ್ಲಿ ದುಡಿಸಿಕೊಳ್ಳುವ 'ಕಾನ್ಸೆಂಟ್ರೇಷನ್ ಕ್ಯಾಂಪ್ಸ್' (Concentration Camps)ಗಳು, ಗಾಳಿ ಬೆಳಕಿಲ್ಲದ ಗ್ಯಾಸ್ ಛೇಂಬರ್‌ಗಳಲ್ಲಿ ಜನರನ್ನು ನೂಕಿ ವಿಷಗಾಳಿ ಬಿಟ್ಟು ಕೊಲ್ಲುತ್ತಿದ್ದನು. ಇದೇ ಅಲ್ಲದೆ ಸಾಮೂಹಿಕವಾಗಿ ಗುಂಡಿಟ್ಟು ಕೊಲ್ಲುವುದು (Mass Shootings) ಹೀಗೆ ಹಲವು ರೀತಿಗಳಲ್ಲಿ ನರಮೇಧವನ್ನು ನಡೆಸಿದನು. ಈ ರೀತಿಯಾಗಿ ಮಕ್ಕಳೆನ್ನದೆ, ಮಹಿಳೆಯರೆನ್ನದೆ, ಮುದುಕರೆನ್ನದೆ ಎಲ್ಲರನ್ನೂ ಸಾಮೂಹಿಕವಾಗಿ ಕೊಲ್ಲಲು ವಿಶೇಷ ಪಡೆಗಳನ್ನು ರೂಪಿಸಿದನು. ಇಡೀ ಪ್ರಭುತ್ವಯಂತ್ರವನ್ನು ನರಮೇಧ ನಡೆಸಲು ಬಳಸಿದನು. ಜಗತ್ತನ್ನೇ ಗೆಲ್ಲಬೇಕೆಂಬ ಮತ್ತು ಜರ್ಮನ್ನರ ಆರ್ಯ ಜನಾಂಗೀಯ ಶ್ರೇಷ್ಠತೆಯನ್ನು ಜಾರಿಗೊಳಿಸಬೇಕೆಂಬ ಮಹತ್ವಾಕಾಂಕ್ಷೆಯೇ ಎರಡನೆಯ ಮಹಾಯುದ್ಧಕ್ಕೆ ಮುಖ್ಯ ಕಾರಣಗಳಲ್ಲೊಂದಾಯಿತು. ಹಿಟ್ಲರ್‌ನ ಜನಾಂಗೀಯ ದ್ವೇಷದ ಅಧ್ಯಾಯವು ಯುದ್ಧದಲ್ಲಿ ಅವನ ಸಾವಿನೊಂದಿಗೆ ಅಂತ್ಯವಾಯಿತು.

**ಮುಸೋಲಿನಿ :** 20ನೆಯ ಶತಮಾನದ ಆರಂಭದ ಯುರೋಪಿನಲ್ಲಿ ಮೂಡಿಬಂದ ಸಾಮಾಜಿಕ ಚಳವಳಿಗಳು, ಮೊದಲ ಮಹಾಯುದ್ಧದ ದುಷ್ಪರಿಣಾಮಗಳು ಮತ್ತು ರಷ್ಯನ್ ಕ್ರಾಂತಿಯ ಹಿನ್ನೆಲೆಯಲ್ಲಿ ಪ್ರತಿಗಾಮಿ ರಾಜಕೀಯವಾಗಿ ಮುಸೋಲಿನಿಯ ಫ್ಯಾಸಿಸ್ಟ್‌ವಾದ ಬೆಳೆದು ಬಂದಿತು. ಉಗ್ರ ರಾಷ್ಟ್ರೀಯವಾದ, ಪರಕೀಯ ಶಕ್ತಿಗಳ ನಾಶ, ಹಿಂಸೆಯ ವೈಭವೀಕರಣ, ಜನಾಂಗೀಯ ಶ್ರೇಷ್ಠತೆ, ಸಾಮ್ರಾಜ್ಯವಾದದ ವಿಸ್ತರಣೆ, ನರಮೇಧಗಳಿಗೆ ಬೆಂಬಲ, ಇವು ಫ್ಯಾಸಿಸ್ಟ್‌ವಾದದ ಲಕ್ಷಣಗಳಾಗಿದ್ದವು.

1922 ರಿಂದ 1943ರವರೆಗೆ ಇಟಲಿಯ ಪ್ರಧಾನಿಯಾಗಿದ್ದ ಮುಸೋಲಿನಿ 'ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷ'ದ ಸ್ಥಾಪಕ. 1925ರಲ್ಲಿ ಇಟಲಿಯಲ್ಲಿ ಪ್ರಜಾಪ್ರಭುತ್ವವನ್ನು ವಿಸರ್ಜನೆ ಮಾಡಿ ಕಾನೂನುಬದ್ಧವಾಗಿಯೇ



© KTBS NOT TO BE REPUBLISHED

ಸರ್ವಾಧಿಕಾರವನ್ನು ಪಡೆದುಕೊಂಡನು. ತನ್ನ ಗುಪ್ತ ಪೋಲೀಸರ ಮುಖಾಂತರ ಎಲ್ಲಾ ರಾಜಕೀಯ ವಿರೋಧಿಗಳನ್ನು ನಾಶ ಮಾಡಿದನು. ಕಾರ್ಮಿಕರ ಮುಷ್ಕರಗಳನ್ನು ನಿಷೇಧಿಸಿದನು. ಏಕಪಕ್ಷದ ಸರ್ವಾಧಿಕಾರವನ್ನು ಸ್ಥಾಪಿಸಿದನು. ಹಿಟ್ಲರನ ಜೊತೆಗೂಡಿ ಎರಡನೇ ಯುದ್ಧದಲ್ಲಿ ಲಕ್ಷಾಂತರ ಜನರ ಸಾವಿಗೆ ಕಾರಣನಾದನು. 1945ರಲ್ಲಿ ಇವನನ್ನು ಹತ್ಯೆ ಮಾಡಲಾಯಿತು.

**ಎರಡನೆಯ ಮಹಾಯುದ್ಧ**

ಮೊದಲ ಮಹಾಯುದ್ಧದ ದುರಂತವನ್ನು, ಸಾವು-ನೋವುಗಳನ್ನು ಮರೆಯುವ ಮುನ್ನವೇ ಎರಡನೆಯ ಮಹಾಯುದ್ಧವು 1939ರ ಸೆಪ್ಟೆಂಬರ್ 1ರಂದು ನಾಜಿ ಜರ್ಮನಿಯು ಪೋಲೆಂಡಿನ ಮೇಲೆ ದಾಳಿ ಮಾಡುವುದರೊಂದಿಗೆ ಪ್ರಾರಂಭವಾಯಿತು. ಎರಡನೇ ಮಹಾಯುದ್ಧವು ಬಹುಶಃ ಮಾನವನ ಚರಿತ್ರೆಯಲ್ಲಿ ನಡೆದಿರಬಹುದಾದ ಯುದ್ಧಗಳಲ್ಲೇ ಅತ್ಯಂತ ಬೃಹತ್ತಾದುದು ಮತ್ತು ಬರ್ಬರವಾದುದು. 30ಕ್ಕೂ ಹೆಚ್ಚು ದೇಶಗಳು ಈ ಯುದ್ಧದಲ್ಲಿ ನೇರವಾಗಿ ಭಾಗವಹಿಸಿದ್ದವು. ಇದು 1939 ರಿಂದ 1945 ರವರೆಗೂ ನಡೆಯಿತು. ಶ್ರೀಮಂತ ದೇಶಗಳು ಮೊದಲನೆಯ ಮಹಾಯುದ್ಧದಲ್ಲಿ ಹಣ ವ್ಯಯಮಾಡಿದ ಪರಿಣಾಮವಾಗಿ 1930ರ ದಶಕದಲ್ಲಿ ಮಹಾನ್ ಆರ್ಥಿಕ ಕುಸಿತ (Great Depression) ಉಂಟಾಯಿತು. ಇದರಿಂದಾಗಿ ಯುರೋಪ್ ಮತ್ತು ಅಮೆರಿಕದಲ್ಲಿ ಸಂಕಷ್ಟದ ಪರಿಸ್ಥಿತಿಗಳು ನಿರ್ಮಾಣವಾದವು. ಜನರ ಜೀವನ ಮಟ್ಟ ತೀವ್ರವಾಗಿ ಕುಸಿಯಿತು; ಕೈಗಾರಿಕೆ ಮತ್ತು ಕೃಷಿ ಬೆಳವಣಿಗೆ ಸ್ಥಗಿತವಾಯಿತು, ನಿರುದ್ಯೋಗ ವಿಪರೀತವಾಯಿತು. ಮೊದಲ ಮಹಾಯುದ್ಧದ ಸೋಲು, ಅವಮಾನಕರ ಒಪ್ಪಂದಗಳು, ಅಪಾರವಾದ ನಷ್ಟಗಳ ಹಿನ್ನೆಲೆಯಲ್ಲಿ ಜರ್ಮನಿ ಮತ್ತು ಯುರೋಪಿನ ಹಲವು ದೇಶಗಳಲ್ಲಿ ರಾಷ್ಟ್ರೀಯವಾದದ ಉಗ್ರತೆ ತೀವ್ರಗೊಂಡಿತು. ಜರ್ಮನಿ ಮತ್ತು ಯುರೋಪಿನ ಇತರ ದೇಶಗಳಲ್ಲಿ ಬೃಹತ್ ಕೈಗಾರಿಕೋದ್ಯಮಿಗಳು ಉಗ್ರ ರಾಷ್ಟ್ರೀಯತೆಯನ್ನು ಬೆಳೆಸಲು ದೊಡ್ಡ ಪ್ರಮಾಣದಲ್ಲಿ ಹಣವನ್ನು ನೀಡಿದರು. ಇದನ್ನೇ ಬಳಸಿಕೊಂಡು ಸೇಡಿನ ಮತ್ತು ದುರಭಿಮಾನದ ಚಳವಳಿಗಳು ಬೆಳೆದವು. ಜರ್ಮನಿಯಲ್ಲಿ ಹಿಟ್ಲರ್ ಮತ್ತು ಇಟಲಿಯಲ್ಲಿ ಮುಸೋಲಿನಿಯಂತಹ ಸರ್ವಾಧಿಕಾರಿಗಳು ಬೆಳೆದರು. ಪೂರ್ವ ಏಷ್ಯಾದಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಚೀನಾದ ಮೇಲೆ ಜಪಾನ್ ದಾಳಿಗಳನ್ನು ನಡೆಸುತ್ತಿತ್ತು.

ಎರಡನೆಯ ಮಹಾಯುದ್ಧದಲ್ಲಿ ಎರಡು ವಿರುದ್ಧವಾದ ಶತ್ರುಬಣ (Axis) ಮತ್ತು ಮಿತ್ರಬಣ (Allies) ರೂಪುಗೊಂಡವು. ಆಕ್ಸೀಸ್ ಬಣದಲ್ಲಿ ಜರ್ಮನಿ, ಇಟಲಿ ಮತ್ತು ಜಪಾನ್ ದೇಶಗಳು, ಆಲೈಸ್ ಬಣದಲ್ಲಿ ಬ್ರಿಟನ್, ಫ್ರಾನ್ಸ್, ರಷ್ಯಾ ಮುಂತಾದ ದೇಶಗಳು ಇದ್ದವು. ಪೋಲೆಂಡಿನ ಮೇಲೆ ಜರ್ಮನಿ ದಾಳಿ ಮಾಡುತ್ತಿದ್ದಂತೆ, ಬ್ರಿಟನ್ ಪೋಲೆಂಡಿನ ಮಿತ್ರ ರಾಷ್ಟ್ರವಾದ್ದರಿಂದ ಜರ್ಮನಿಯ ವಿರುದ್ಧ ಯುದ್ಧ ಸಾರಿತು. ಆದರೆ ವಾಸ್ತವದಲ್ಲಿ ಬ್ರಿಟನ್ ತಕ್ಷಣದಲ್ಲೇ ಪೋಲೆಂಡಿನ ಸಹಾಯಕ್ಕೆ ಧಾವಿಸಲಿಲ್ಲ. ಅದು ಜರ್ಮನಿಯ ವಶವಾಯಿತು. ಇದೇ ಸಂದರ್ಭದಲ್ಲಿ ರಷ್ಯಾದಲ್ಲಿ ಕಮ್ಯುನಿಸ್ಟ್ ವ್ಯವಸ್ಥೆ ಜಾರಿಯಲ್ಲಿ ಇದ್ದುದರಿಂದ ಬ್ರಿಟನ್, ಫ್ರಾನ್ಸ್, ಅಮೆರಿಕ ಮುಂತಾದ ದೇಶಗಳು ಹಿಟ್ಲರನು ರಷ್ಯಾದ ಮೇಲೆ ದಾಳಿ ಮಾಡುವುದನ್ನು ಬಯಸುತ್ತಿದ್ದವು. ಇದನ್ನು ಮನಗಂಡ ರಷ್ಯಾ 1939 ಆಗಸ್ಟ್ 24ರಂದು ಜರ್ಮನಿಯ ಜೊತೆ ಯುದ್ಧರಹಿತ ಒಪ್ಪಂದ ಮಾಡಿಕೊಂಡಿತ್ತು. ಹೀಗಾಗಿ ಹಿಟ್ಲರ್ ಮೊದಲು ಪೂರ್ವದ ಬದಲಿಗೆ ಪಶ್ಚಿಮಕ್ಕೆ ದಾಳಿ ಮಾಡಿದನು. ಇಟಲಿಯ ಜೊತೆ ಒಪ್ಪಂದವನ್ನು ಮಾಡಿಕೊಂಡ ಹಿಟ್ಲರ್‌ನು ಡೆನ್ಮಾರ್ಕ್,

©KTBS NOT TO BE REPUBLISHED

ನಾರ್ವೆ, ಹಾಲೆಂಡ್ ದೇಶಗಳನ್ನೊಳಗೊಂಡ ಬಹುತೇಕ ಪಶ್ಚಿಮ ಯುರೋಪನ್ನು ತನ್ನ ವಶಕ್ಕೆ ತೆಗೆದುಕೊಂಡನು. 1941ರಲ್ಲಿ ಸೋವಿಯತ್ ರಷ್ಯಾದ ಕಡೆ ಹಿಟ್ಲರ್ ದೃಷ್ಟಿ ಹರಿಸಿದನು. ಇದರಿಂದ ರಷ್ಯಾ ಯುದ್ಧದಲ್ಲಿ ಭಾಗವಹಿಸಲೇ ಬೇಕಾಯಿತು. ಇದೇ ಸಂದರ್ಭದಲ್ಲಿ ಜಪಾನ್ ಹಿಟ್ಲರ್‌ನ ಬಣವನ್ನು ಸೇರಿಕೊಂಡಿತು. ಪೆಸಿಫಿಕ್ ಸಮುದ್ರದ ಪಶ್ಚಿಮ ಭಾಗದಲ್ಲಿದ್ದ ಅಮೆರಿಕ ಮತ್ತು ಯುರೋಪಿಯನ್ ಪ್ರದೇಶಗಳ ಮೇಲೆ ದಾಳಿ ಮಾಡಿ ಸಾಕಷ್ಟು ಪ್ರದೇಶಗಳನ್ನು ಜಪಾನ್ ಆಕ್ರಮಿಸಿಕೊಂಡಿತು.

ಇಟಲಿ ಮತ್ತು ಜರ್ಮನಿ ಉತ್ತರ ಆಫ್ರಿಕಾದ ಬ್ರಿಟಿಷ್ ವಸಾಹತುಗಳನ್ನು ಮತ್ತು ಸೂಯೆಜ್ ಕಾಲುವೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿ ಸೋತವು. 1942ರಲ್ಲಿ ಸ್ಟಾಲಿನ್‌ಗ್ರಾಡ್ ಯುದ್ಧದಲ್ಲಿ ಜರ್ಮನ್ ಪಡೆಗಳನ್ನು ರಷ್ಯಾ ಸೋಲಿಸಿತು. ಜರ್ಮನಿ 1943ರಲ್ಲಿ ಪೂರ್ವ ಯುರೋಪ್‌ನಲ್ಲಿ ಸಾಲು ಸಾಲು ಸೋಲುಗಳನ್ನು ಕಂಡಿತು. ಇದರಲ್ಲಿ ರಷ್ಯಾ ಪ್ರಮುಖ ಪಾತ್ರ ವಹಿಸಿತು. ಮಿತ್ರ ಪಡೆಗಳು ಇಟಲಿಯನ್ನು ಆಕ್ರಮಿಸಿದವು. ಜಪಾನ್‌ನನ್ನು ಸೋಲಿಸುವ ಮೂಲಕ ಪಶ್ಚಿಮ ಪೆಸಿಫಿಕ್ ದ್ವೀಪಗಳನ್ನು ಅಮೆರಿಕ ವಾಪಸ್ ಪಡೆಯಿತು. ರಷ್ಯಾದ ಕೆಂಪು ಸೈನಿಕರ ಮಹಾನ್ ಮುನ್ನಡೆ ಮತ್ತು ಪಶ್ಚಿಮ ರಾಷ್ಟ್ರಗಳ ದಾಳಿಯಿಂದ ಜರ್ಮನಿ ಶರಣಾಯಿತು ಮತ್ತು ಬರ್ಲಿನ್ ಪತನವಾಯಿತು. 1945ರಲ್ಲಿ ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡನು. ಇದರೊಂದಿಗೆ ಯುರೋಪಿನಲ್ಲಿ ಯುದ್ಧ ಕೊನೆಗೊಂಡಿತು. 1945ರಲ್ಲಿ ಜಪಾನಿನ ಹಿರೋಷಿಮಾ ಮತ್ತು ನಾಗಾಸಾಕಿ ಮೇಲೆ ಅಮೆರಿಕ ಜಗತ್ತಿನ ಮೊಟ್ಟಮೊದಲ ಅಣುಬಾಂಬನ್ನು ಹಾಕಿತು. ಇದರಿಂದ ಲಕ್ಷಾಂತರ ಜನ ಹತರಾದರು. ಇದರ ದುಷ್ಪರಿಣಾಮಗಳನ್ನು ಜಪಾನ್ ಇಂದಿಗೂ ಅನುಭವಿಸುತ್ತಿದೆ. 1945 ಆಗಸ್ಟ್ 15ರಂದು ಜಪಾನ್ ಪೂರ್ಣವಾಗಿ ಶರಣಾಯಿತು. ಇದರೊಂದಿಗೆ ಮಿತ್ರ ಬಣ ಯುದ್ಧದಲ್ಲಿ ಸಂಪೂರ್ಣವಾಗಿ ವಿಜಯಿಯಾಯಿತು.

**ನಿಮಗಿದು ತಿಳಿದಿರಲಿ :**

**ದ್ವಿತೀಯ ಮಹಾಯುದ್ಧದಲ್ಲಿ ಸತ್ತವರೆಷ್ಟು?**: ದ್ವಿತೀಯ ಜಾಗತಿಕ ಯುದ್ಧದಲ್ಲಿ ನಾಗರಿಕರು ಮತ್ತು ಸೈನಿಕರು ಸೇರಿದಂತೆ ಒಟ್ಟಾರೆ ಸುಮಾರು 4,82,00,000 ಜನ ಪ್ರಾಣಗಳನ್ನು ಕಳೆದುಕೊಂಡರು. ಜರ್ಮನಿಯ ನೇತೃತ್ವದ (*Axis*)ದೇಶಗಳಲ್ಲಿ 82,00,000 ಜನ ಮೃತರಾದರೆ, ಮಿತ್ರಕೂಟದ ದೇಶಗಳಲ್ಲಿ (*Allies*) 4 ಕೋಟಿ ಜನ ಜೀವತೆತ್ತರು. ಅತಿ ಹೆಚ್ಚು ಪ್ರಾಣಗಳನ್ನು ಕಳೆದುಕೊಂಡ ದೇಶ ರಷ್ಯಾ – 2,00,00,000, ಎರಡನೆಯದಾಗಿ ಚೀನಾ – 1,00,00,000. ಇವರುಗಳ ಈ ಅಪಾರ ತ್ಯಾಗವಿರದಿದ್ದರೆ ಹಿಟ್ಲರ್‌ನನ್ನು ಸೋಲಿಸಲು ಆಗುತ್ತಿರಲಿಲ್ಲ; ಮಾನವಕುಲವನ್ನು ನಾಜಿ ಜನಾಂಗೀಯ ಸರ್ವಾಧಿಕಾರದಿಂದ ರಕ್ಷಿಸಲಾಗುತ್ತಿರಲಿಲ್ಲ.

ಮಾನವ ಚರಿತ್ರೆಯಲ್ಲೇ ಅತಿ ಹೆಚ್ಚಿನ ಸಾವು–ನೋವುಗಳನ್ನು ಕಂಡ ಎರಡನೆ ಜಾಗತಿಕ ಯುದ್ಧವು ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ಸಂರಚನೆಯನ್ನು ಬದಲಾವಣೆ ಮಾಡಿತು. ರಾಷ್ಟ್ರ ಸಂಘದ ಜಾಗದಲ್ಲಿ ವಿಶ್ವಸಂಸ್ಥೆ ರಚನೆಯಾಯಿತು. ಯುದ್ಧದ ವಿಜಯಿ ರಾಷ್ಟ್ರಗಳಾದ ಅಮೆರಿಕ ಸಂಯುಕ್ತ ಸಂಸ್ಥಾನ, ಸೋವಿಯತ್ ರಷ್ಯಾ, ಚೀನಾ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ವಿಶ್ವಸಂಸ್ಥೆಯ ರಕ್ಷಣಾ ಮಂಡಳಿಯ ಖಾಯಂ ಸದಸ್ಯರಾದರು. ಸೋವಿಯತ್ ರಷ್ಯಾ ಮತ್ತು ಅಮೆರಿಕ ಪರಸ್ಪರ ವಿರೋಧಿಯಾದ ಶಕ್ತಿಶಾಲಿ ದೇಶಗಳಾದವು. ಶೀತಲ ಸಮರಕ್ಕೆ ಇದು ನಾಂದಿಯಾಯಿತು. ಏಷ್ಯಾ ಮತ್ತು ಆಫ್ರಿಕಾದ ವಸಾಹತುಗಳು ಸ್ವಾತಂತ್ರ್ಯ ಪಡೆಯಲು ವಾತಾವರಣ ಪೂರಕವಾಯಿತು. ಬ್ರಿಟನ್, ಫ್ರಾನ್ಸ್ ಮುಂತಾದ ರಾಷ್ಟ್ರಗಳು ತಮ್ಮ ಹಿಡಿತದಲ್ಲಿದ್ದ ಬಹುತೇಕ ವಸಾಹತುಗಳನ್ನು ಕಳೆದುಕೊಂಡವು. ಭಾರತದ ಸ್ವಾತಂತ್ರ್ಯವನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಅಮೆರಿಕ ಅಣ್ವಸ್ತ್ರ ಪ್ರಯೋಗಿಸಿದ್ದರಿಂದ ಬೃಹತ್ ದೇಶಗಳ ನಡುವೆ ಅಣ್ವಸ್ತ್ರ ಪೈಪೋಟಿಗೆ ದಾರಿಯಾಯಿತು.

© KTBS NOT TO BE REPUBLISHED

ವಿಶ್ವದ ಎರಡು ಮಹಾಯುದ್ಧಗಳಲ್ಲಿ ಬ್ರಿಟನ್ ಭಾರತೀಯ ಸೇನೆಯ ಸಹಕಾರವಿಲ್ಲದೆ ಜಯಗೊಳಿಸಲು ಸಾಧ್ಯವಾಗುತ್ತಿರಲಿಲ್ಲ. ಇದನ್ನು ಸೈನಿಕ ದಾಖಲೆಗಳು (ಮಿಲಿಟರಿ ರೆಕಾರ್ಡ್ಸ್) ಮತ್ತು ರಣಭೂಮಿಯಲ್ಲಿನ ಯುದ್ಧ ವರದಿಗಳು ಸಾಬೀತುಪಡಿಸಿವೆ. ಭಾರತೀಯ ಸೈನಿಕರ ಶೌರ್ಯ, ಸಾಹಸಗಾಥೆ, ಬಲಿದಾನಗಳು ಇಂದಿಗೂ ಅವರು ಹೋರಾಟ ಮಾಡಿರುವ ರಾಷ್ಟ್ರಗಳ ಸ್ಮೃತಿಯಲ್ಲಿ ಜೀವಂತವಾಗಿವೆ. ಮೊದಲನೆ ಮಹಾಯುದ್ಧವು ಆರಂಭಗೊಂಡ ಕೂಡಲೆ ಇಂಗ್ಲೆಂಡಿನ ದೊರೆ ಮತ್ತು ಭಾರತ ಚಕ್ರವರ್ತಿ ಐದನೆ ಜಾರ್ಜ್ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ ದೇಶ ಮತ್ತು ಜನಾಂಗಗಳಿಗೆ ಇಂಗ್ಲೆಂಡಿಗೆ ಸಹಾಯ ಮಾಡುವಂತೆ ವಿನಂತಿಸಿಕೊಂಡರು. ಇದೇ ಸಂದರ್ಭದಲ್ಲಿ ಗಾಂಧೀಜಿಯವರು ದಕ್ಷಿಣ ಆಫ್ರಿಕದಿಂದ ಬಂದಿದ್ದು ರಾಷ್ಟ್ರೀಯ ಚಳವಳಿಗೆ ಇಂಬು ನೀಡಿತ್ತು.

ಮೊದಲನೆ ಜಾಗತಿಕ ಯುದ್ಧದಲ್ಲಿ ಬ್ರಿಟನ್ ನೇತೃತ್ವ ಮತ್ತು ನಿರ್ಣಾಯಕ ಪಾತ್ರ ವಹಿಸಿತ್ತು. ಬ್ರಿಟನ್ ಸಾಮ್ರಾಜ್ಯವಾಗಿದ್ದ ಭಾರತ ಮತ್ತು ಅಲ್ಲಿನ ದೇಶೀಯ ಆಶ್ರಿತ ರಾಜರು ಈ ಮಹಾಯುದ್ಧಗಳಿಗೆ ಸೈನಿಕವಾಗಿ, ಆರ್ಥಿಕವಾಗಿ ಮತ್ತು ವಸ್ತು ಸ್ವರೂಪದಲ್ಲಿ ಅಪಾರ ಸಹಾಯವನ್ನು ನೀಡಿದರು. ಸುಮಾರು 15 ಲಕ್ಷ ಸಿಪಾಯಿಗಳು ಭಾರತದಿಂದ ಈ ಯುದ್ಧದಲ್ಲಿ ಭಾಗವಹಿಸಿದ್ದರು. ಅಲ್ಲದೆ 1,72,815 ಪ್ರಾಣಿಗಳು, ಅದರಲ್ಲಿ 85,953 ಕುದುರೆಗಳು, 10,781 ಒಂಟೆಗಳು, 5061 ಗಾಡಿಗಳು, 65,398 ಕತ್ತೆಗಳು, 7 ಕೋಟಿಯಷ್ಟು ಯುದ್ಧ ಸಾಮಗ್ರಿಗಳು, 6 ಲಕ್ಷ ರೈಫಲ್‌ಗಳು ಮುಂತಾದವುಗಳನ್ನು ಸರಬರಾಜು ಮಾಡಿತ್ತು. 1914–18ರ ನಡುವೆ ಸುಮಾರು 4,19,20,223 ಬಟ್ಟೆಗಳು ಸರಬರಾಜಾಗಿತ್ತು. ಅಲ್ಲದೆ ಕಚ್ಚಾವಸ್ತುಗಳು, ಮ್ಯಾಂಗನೀಸ್, ಅಭ್ರಕ, ಚಹ, ರಬ್ಬರ್ ಮುಂತಾದ ವಸ್ತುಗಳನ್ನು ಭಾರತದಿಂದ ಸರಬರಾಜು ಮಾಡಲಾಗಿತ್ತು.



**ಮೈಸೂರು ಲ್ಯಾನ್ಸರ್ಸ್**

ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಭಾರತದ ವೈಸರಾಯಿ ಅವರಿಗೆ 1914ರ ಆಗಸ್ಟ್‌ನಲ್ಲಿ ಪತ್ರ ಬರೆದು ಇಂತಹ ಆಪತ್ಕಾಲದಲ್ಲಿ ತಾವು ಬ್ರಿಟಿಷ್ ಸಾಮ್ರಾಜ್ಯದ ರಕ್ಷಣೆಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುವುದಾಗಿ ತಿಳಿಸಿದರು. ಕೂಡಲೇ 50 ಲಕ್ಷ ರೂಪಾಯಿಗಳನ್ನು ಸಂಸ್ಥಾನದ ವತಿಯಿಂದ ಭಾರತ ಯುದ್ಧ ನಿಧಿಗೆ ಒಪ್ಪಿಸಿದರು. ಸೆಪ್ಟೆಂಬರ್ 1914ರಲ್ಲಿ ಮೈಸೂರು ಲ್ಯಾನ್ಸರ್ಸ್ ರೆಜಿಮೆಂಟ್‌ನ್ನು ಯುದ್ಧಕ್ಕಾಗಿ ಈಜಿಪ್ಟಿಗೆ ಹೊರಡಲು ಸಿದ್ಧಪಡಿಸಬೇಕೆಂದು ಹುಕುಂ ತಲುಪಿತು. ಅಲ್ಲದೆ ಸೇನಾಧಿಕಾರಿ ಬಿ. ಚಾಮರಾಜ ಅರಸುರವರ

KTBS PUBLISHED

ನೇತೃತ್ವದಲ್ಲಿ ಮೈಸೂರು ಸೇನೆಯನ್ನು ರಣಭೂಮಿಗೆ ಕಳುಹಿಸಿದರು. ಹಾಗೂ ಕರ್ನಲ್ ಜೆ. ದೇಸಿರಾಜ ಅರಸುರವರನ್ನು ದರ್ಬಾರಿನ ಪ್ರತಿನಿಧಿಯಾಗಿ ಮಹಾರಾಜರು ಯುದ್ಧ ಭೂಮಿಗೆ ಕಳುಹಿಸಿದರು. ಇದರ ಜೊತೆಯಲ್ಲಿ 23 ಆಫೀಸರರು, 444 ಸಿಪಾಯಿಗಳೂ, 526 ಕುದುರೆಗಳೂ, 49 ಹೇಸರಕತ್ತೆಗಳು, 132 ಪರಿವಾರದವರು ಉಳ್ಳ ಈ ರೆಜಿಮೆಂಟು ಬೆಂಗಳೂರಿಂದ 1914 ಅಕ್ಟೋಬರ್ 13 ರಲ್ಲಿ ಹೊರಟಿತು. ಮೇಜರ್ ಎಂ.ಎಚ್. ಹೆಂಡರ್‌ಸನ್ ಕೂಡ ಇದರೊಡನೆ ಇದ್ದರು. ಕಬ್ಬಿಣ, ಅಭ್ರಕ, ಕ್ರೋಮೈಟ್ ಮರಮುಟ್ಟುಗಳು, ಕಂಬಳಿಗಳನ್ನು ಹೆಚ್ಚು ಹೆಚ್ಚಾಗಿ ಉತ್ಪಾದಿಸಿ ರಣರಂಗಕ್ಕೆ ಕಳುಹಿಸಿಕೊಟ್ಟಿತು.

1915ನೆಯ ನವೆಂಬರಿನಲ್ಲಿ ಸೂಯಜ್ ಕಾಲುವೆ ಪ್ರಾಂತ್ಯದಲ್ಲಿ ಮೂರು ಬಾರಿ ಶತ್ರುವಿನೊಂದಿಗೆ ಹೋರಾಡಿದುದಲ್ಲದೆ 1917ನೆಯ ನವೆಂಬರಿನಲ್ಲಿ ಪ್ಯಾಲಸ್ಟೈನಿನಲ್ಲಿರುವ ಗಾಜಾಪಟ್ಟಣದ ಮುತ್ತಿಗೆಯಲ್ಲಿ ಮುಂದಾಳಾಗಿದ್ದರು. ಗಾಜಾ ಕದನದಲ್ಲಿ ಸಾಹಸಪರರಾಗಿ ಯುದ್ಧಮಾಡಿ ಶತ್ರುಗಳನ್ನು ಬೆನ್ನಟ್ಟಿ ಓಡಿಸಿಬಿಟ್ಟರೆಂದು ಈಜಿಪ್ಟಿನ ಕಮಾಂಡರಿನ ಚೀಫ್‌ರವರಿಂದ ವೈಸರಾಯಿರವರಿಗೆ ವಿಷಯ ತಿಳಿಸಲಾಯಿತು.

ಟರ್ಕಿಯವರ ಸೈನ್ಯವನ್ನು ನಾಶಪಡಿಸಿ, ಪ್ಯಾಲಸ್ಟೈನ್, ಸಿರಿಯಾ, ಡಮಾಸ್ಕಸ್ ಮತ್ತು ಅಲೆಪ್ಪೊ ಪಟ್ಟಣಗಳನ್ನು ಆಕ್ರಮಿಸಿಕೊಂಡು ಹೈಫಾ ಪಟ್ಟಣವನ್ನು ಹಿಡಿದುಕೊಳ್ಳುವುದರಲ್ಲಿ ಮೈಸೂರು ಸೈನಿಕರು ಹಾಗೂ ಜೋಧ್‌ಪುರದ ಸೈನಿಕರುಗಳ ಪಾತ್ರ ಹಿರಿದಾಗಿತ್ತು. ಇದೇ ರೀತಿ ಜೋಧ್‌ಪುರದ ಲ್ಯಾನ್ಸರ್‌ಗಳ ಹೋರಾಟವು ಅಪ್ರತಿಮದಾಗಿತ್ತೆಂದು ಟರ್ಕಿ ಜನರನ್ನು ಭಲ್ಲೆಯಿಂದ ಕೊಂದರೆಂದು ತಿಳಿದುಬರುತ್ತದೆ.

ಮೈಸೂರಿನ ಲ್ಯಾನ್ಸರ್‌ಗಳಲ್ಲಿ ಮುಖ್ಯರಾದವರು ಕಮಾಂಡೆಂಟ್ ಎ.ಟಿ. ತ್ಯಾಗರಾಜ್, ರಿಸಾಲ್ದಾರ್‌ಗಳಾದ ಎ. ಲಿಂಗರಾಜ ಅರಸ್, ಸುಬ್ಬರಾಜ ಅರಸ್, ಬಿ.ಪಿ. ಕೃಷ್ಣೇ ಅರಸ್, ವಿರ್ ತುರಾಕ್ ಆಲಿ, ಸರ್ದಾರ್ ಬಹಾದೂರ್, ಬಿ. ಚಾಮರಾಜ ಅರಸ್, ರೆಜಿಮೆಂಟ್‌ದಾರ್ ಬಿ. ಚಾಮರಾಜ ಅರಸ್ ಹಾಗೂ ಕರ್ನಲ್ ಜೆ. ದೇಸಿರಾಜ ಅರಸ್.

ಇದಲ್ಲದೆ ಜೋಧ್‌ಪುರ ಹಾಗೂ ಹೈದರಾಬಾದ್ ಲ್ಯಾನ್ಸರ್ಸ್ ಕೂಡ ಈ ಯುದ್ಧದಲ್ಲಿ ಭಾಗಿಯಾಗಿದ್ದರು. ಇವರುಗಳ ಹೆಸರಿನಲ್ಲಿ ಬ್ರಿಟಿಷರು ದೆಹಲಿಯಲ್ಲಿ ಪ್ರಸಿದ್ಧ ತೀನ್ ಮೂರ್ತಿ ಭವನವನ್ನು ನಿರ್ಮಿಸಿದರು (ಅಂದರೆ ಮೂರು ಶಿಲ್ಪಗಳು – ಮೈಸೂರು, ಜೋಧ್‌ಪುರ ಮತ್ತು ಹೈದರಾಬಾದಿನ ಸೈನಿಕರುಗಳು ಎಂದರ್ಥ). ಅದು ಈಗಿನ ತೀನ್ ಮೂರ್ತಿ ಮಾರ್ಗದಲ್ಲಿದೆ. [ಇಸ್ರೇಲ್ ಜೊತೆಗಿನ ಸ್ನೇಹಸೌಹಾರ್ದದ ಕುರುಹಾಗಿ ಭಾರತವು ಇದನ್ನು ಅಲ್ಲಿನ ಪ್ರಧಾನಮಂತ್ರಿ ಬೆಂಜಮಿನ್ ನೇತನ್ಯಾಹೂ ಜನವರಿ 14, 2018 ರಲ್ಲಿ ಭೇಟಿ ನೀಡಿದಾಗ ತೀನ್ ಮೂರ್ತಿ ಚೌಕ ಯುದ್ಧದ ನೆನಪಿಗಾಗಿ ತೀನ್ ಮೂರ್ತಿ ಹೈಫಾ ಚೌಕ ಎಂದು, ಆ ರಸ್ತೆಗೆ ತೀನ್ ಮೂರ್ತಿ ಹೈಫಾ ಮಾರ್ಗ ಎಂದು ಮರುನಾಮಕರಣ ಮಾಡಿತು].

ಇಷ್ಟೆಲ್ಲಾ ಸಹಾಯ ಪಡೆದ ಇಂಗ್ಲೆಂಡ್ ತಾನು ನೀಡಿದ ಸ್ವಾತಂತ್ರ್ಯ ನೀಡುವ ವಾಗ್ದಾನ ಉಳಿಸಿಕೊಳ್ಳದೆ 1919ರಲ್ಲಿ ರೌಲತ್ ಕಾಯಿದೆಯನ್ನು ಪ್ರಯೋಗಿಸಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ ನಾಂದಿಹಾಡಿತು.

**ಭಾರತ ಮತ್ತು ಎರಡನೇ ವಿಶ್ವ ಸಮರ :**

ಆಧುನಿಕ ಜಗತ್ತಿನ ಇತಿಹಾಸದಲ್ಲಿ ಎರಡನೇ ವಿಶ್ವಸಮರವು ಸಾಮಾಜಿಕ ಮತ್ತು ರಾಜಕೀಯ ನಕ್ಷೆಯನ್ನು ವ್ಯಾಪಕವಾಗಿ ಬದಲಾಯಿಸಿತು. ಅದರಲ್ಲೂ ವಸಾಹತು ವಶದಲ್ಲಿದ್ದ ಭಾರತದಲ್ಲಿ ಮಹತ್ತರ ಬದಲಾವಣೆಯಾಯಿತು. ಈ ಯುದ್ಧವು ಯುರೋಪ್ ಕೇಂದ್ರಿತವಾಗಿದ್ದು ಸರ್ವವಿಧಿತ, 1939–45 ರ ಅವಧಿಯಲ್ಲಿ ಭಾರತವು ಈ ಯುದ್ಧದಲ್ಲಿ ತನ್ನದೇ ರೀತಿಯಲ್ಲಿ ಭಾಗವಹಿಸಿತು. ಮಿಲಿಟರಿ ಸಮವಸ್ತ್ರವನ್ನು ಧರಿಸಿದ ಭಾರತವು ಅನೇಕ ರೀತಿಯ ಬದಲಾವಣೆಯನ್ನು ನೋಡಿತು ಹಾಗೂ ಪಶ್ಚಿಮ ಏಷಿಯಾ, ಮಲಯ, ಬರ್ಮ, ಇರಾಕ್, ಇರಾನ್, ಸಿರಿಯ, ಉತ್ತರ ಮತ್ತು ಪೂರ್ವ ಆಫ್ರಿಕ, ಸಿಸಿಲಿ, ಇಟಲಿಯ ಪ್ರಮುಖ ಸ್ಥಾನಗಳು, ಗ್ರೀಸ್, ಕ್ರೀಟ್, ಸೈಪ್ರಸ್, ಇಥಿಯೋಪಿಯ ಹಾಗೂ ಸೋಮಾಲಿಲ್ಯಾಂಡ್ ಮುಂತಾದ ದೇಶಗಳಲ್ಲಿ ಹೋರಾಡಿತು. ಭಾರತವು ಪಶ್ಚಿಮದಲ್ಲಿ ಜರ್ಮನಿ ಹಾಗೂ ಪೂರ್ವದಲ್ಲಿ ಜಪಾನ್‌ಗೆ ಯುದ್ಧ ವಿಭಜನಾ ರೇಖೆಯಾಗಿ ಪರಿಣಮಿಸಿತ್ತು. ವಸಾಹತು ಭಾರತವು ಒಂದು ಕಡೆ ಸ್ವಾತಂತ್ರ್ಯ ಹೋರಾಟ,

©KTBS NOT TO BE REPUBLISHED

ಮತ್ತೊಂದೆಡೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಮುಸ್ಲಿಂಲೀಗ್ ಮತ್ತು ಸುಭಾಷ್ ಚಂದ್ರಬೋಸರ ಆಜಾದ್ ಹಿಂದ್ ಫೌಜ್‌ನ ಹಿನ್ನಲೆಯಲ್ಲಿ ಭಾಗವಹಿಸುತ್ತಾ ಹೋರಾಟ ನಡೆಸುತ್ತಿತ್ತು. ಭಾರತೀಯ ಸಂಪನ್ಮೂಲಗಳು ಮತ್ತು ಸಿಪಾಯಿಗಳು, ಮಿತ್ರರಾಷ್ಟ್ರಗಳು ಯುದ್ಧದಲ್ಲಿ ಜಯಗಳಿಸಲು ಸಹಾಯವಾದವು. ರಾಷ್ಟ್ರೀಯ ಚಳವಳಿಗೆ ಈ ಯುದ್ಧದಲ್ಲಿ ಭಾಗಿಯಾಗುವುದರೊಂದಿಗೆ ಪಡೆದ ಅನುಭವವು ಭಾರತಕ್ಕೆ ಒಂದು ರೀತಿ ಪ್ರೋತ್ಸಾಹಕರವಾಗಿತ್ತು. ಈ ಯುದ್ಧಕ್ಕಾಗಿ ಬ್ರಿಟನ್ ಭಾರತೀಯ ಕೃಷಿ ವಸ್ತುಗಳನ್ನು, ಕೈಗಾರಿಕಾ ಪದಾರ್ಥಗಳನ್ನು ಉಪಯೋಗಿಸಿಕೊಂಡಿತು. ಹಾಗೂ ಯುದ್ಧಕ್ಕೆ ಬೇಕಾದ ಸಾಮಗ್ರಿಗಳನ್ನು ಉತ್ಪಾದಿಸಲು ಅರ್ಡಿನೆನ್ಸ್ ಕಾರ್ಖಾನೆಗಳನ್ನು ಮೇಲ್ದರ್ಜೆಗೇರಿಸಿ, ಹೊಸ ತಂತ್ರಗಾರಿಕೆಯನ್ನು ಅಳವಡಿಸಿಕೊಂಡಿತು. ಇದರಿಂದಾಗಿ ಭಾರತೀಯ ಸೇನೆಯು ಯುದ್ಧದ ಉತ್ತರ ಭಾಗದಲ್ಲಿ ಗುಣಾತ್ಮಕ ಹಾಗೂ ದೊಡ್ಡಗಾತ್ರದ ಉತ್ತಮ ಯುದ್ಧ ಸಾಮಗ್ರಿಗಳ ಉಪಯೋಗ ಪಡೆದುಕೊಂಡಿತು.

ಭಾರತೀಯ ಸೇನೆಯು ಕಲಿತ ಸಣ್ಣಪುಟ್ಟ ಯುದ್ಧ ತಾಂತ್ರಿಕತೆಯು, ಪೂರ್ವ ಆಫ್ರಿಕದ ಇಟಲಿಯನ್ನರ ಜೊತೆ ಸೆಣಸಲು ಸಹಾಯವಾಯಿತು. ಅಲ್ಲದೆ ಎರ್ವಿನ್ ರೋವಲ್ ಆಫ್ರಿಕ ಕಾರ್ಪ್ಸ್‌ನ್ನು ಹಿಮ್ಮೆಟ್ಟಿಸಲು ತರಬೇತಿ ಪಡೆದ ಭಾರತೀಯ ಸೈನ್ಯಕ್ಕೆ ಸಾಧ್ಯವಾಯಿತು. ಭಾರತೀಯ ಸೇನೆಯ ಎರಡನೇ ಮಹಾಯುದ್ಧದಲ್ಲಿನ ಭಾಗವಹಿಸುವಿಕೆಯು ಜರ್ಮನಿಯ ಸೈನ್ಯವನ್ನು ಸೋಲಿಸುವುದರಲ್ಲಿ ಮುಖ್ಯ ಕಾರಣವಾಗಿ, ಭಾರತೀಯ ಮಿಲಿಟರಿ ಇತಿಹಾಸದಲ್ಲಿ ಒಂದು ಪ್ರಮುಖ ಘಟ್ಟವಾಯಿತು.

1942ರಲ್ಲಿ ಭಾರತೀಯ ಸೈನ್ಯವು ಜಪಾನ್‌ನಿಂದ ಸೋತಿತು. 1942–45ರ ಬರ್ಮಾದಲ್ಲಿನ ಯುದ್ಧವು, ಭಾರತೀಯ ಸೇನೆಗೆ ಬಹಳ ಪ್ರಮುಖವಾದುದಾಗಿ ಪರಿಣಮಿಸಿತು. ಏಕೆಂದರೆ ಪ್ರಮುಖ ದಂಡನಾಯಕ ಹಾಗೂ ಆಗ್ನೇಯ ಏಷಿಯಾ ದಂಡನಾಯಕರಿಂದ ಭಾರತೀಯ ಸೇನೆಗೆ ತೀವ್ರತರವಾದ ಮಿಲಿಟರಿ ತರಬೇತು ದೊರೆತಿತ್ತು. ಇದರಿಂದಾಗಿ ಭಾರತೀಯ ಸೈನಿಕರಿಗೆ ಬರ್ಮಾದಲ್ಲಿ 1944–45ರಲ್ಲಿ ವಿಜಯ ಪಡೆಯಲು ಅನುಕೂಲವಾಯಿತು.

1945ರಲ್ಲಿ ಎರಡನೇ ಮಹಾಯುದ್ಧವು ಕೊನೆಗೊಂಡಿತು. ಇದರಿಂದಾಗಿ ಪ್ರಪಂಚದ ಅನೇಕ ಕಡೆಗಳಲ್ಲಿ ರಾಜಕೀಯ ಬದಲಾವಣೆಗಳಾದವು. ಬ್ರಿಟನ್ ಹಿಡಿತದಲ್ಲಿದ್ದ ಅನೇಕ ರಾಷ್ಟ್ರಗಳು ಸ್ವತಂತ್ರವಾದವು.

| ದೇಶಗಳು | ಸ್ವತಂತ್ರವಾದ ವರ್ಷ |
|---|---|
| ಲಿಬಿಯಾ | 1951 |
| ಸುಡಾನ್ | 1956 |
| ಘಾನಾ | 1957 |
| ನೈಜೀರಿಯಾ | 1960 |
| ಅಲ್ಜೀರಿಯಾ | 1962 |
| ಕೀನ್ಯಾ | 1963 |
| ಝಾಂಬಿಯಾ | 1964 |

NOT TO BE REPUBLISHED ©KTBS

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ಭರ್ತಿ ಮಾಡಿರಿ.**

1. ಮೊದಲನೇ ಮಹಾಯುದ್ಧವು __________ ರಲ್ಲಿ ಅಂತ್ಯಗೊಂಡಿತು.
2. ವರ್ಸೇಲ್ಸ್ ಒಪ್ಪಂದವು __________ ರಲ್ಲಿ ಏರ್ಪಟ್ಟಿತು.
3. ಫ್ಯಾಸಿಸ್ಟ್ ಸರ್ವಾಧಿಕಾರಿಯಾಗಿದ್ದವನು __________ .
4. ಜರ್ಮನಿಯಲ್ಲಿ ನಾಜಿ ಪಕ್ಷದ ನಾಯಕನಾಗಿದ್ದವನು __________ .
5. ಎರಡನೆಯ ಮಹಾಯುದ್ಧವು __________ ರಲ್ಲಿ ಆರಂಭವಾಯಿತು.
6. ಅಮೆರಿಕಾದ ನೌಕಾ ಕೇಂದ್ರವಾಗಿದ್ದ __________ ಮೇಲೆ ಜಪಾನ್ ದಾಳಿ ಮಾಡಿತು.
7. ಮೈಸೂರು ಲ್ಯಾನ್ಸರ್ಸ್‌ಗಳ ಮುಖ್ಯಸ್ಥರಾಗಿ __________ ರನ್ನು ಯುದ್ಧಭೂಮಿಗೆ ಕಳುಹಿಸಲಾಯಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ :**

1. ಪ್ರಥಮ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವನ್ನು ವಿವರಿಸಿ.
2. 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು' ಹೇಗೆ ? ವಿವರಿಸಿ.
3. ಎರಡನೆಯ ಮಹಾಯುದ್ಧಕ್ಕೆ ಕಾರಣಗಳಾವುವು ?
4. ಮೈಸೂರಿನ ಮುಖ್ಯ ಕಮಾಂಡೆಂಟ್‌ಗಳನ್ನು ಹೆಸರಿಸಿ.
5. ತೀನ್ ಮೂರ್ತಿ ಚೌಕ ಎಲ್ಲಿದೆ ?
6. ಭಾರತದ ಸಂಪನ್ಮೂಲಗಳನ್ನು ಬ್ರಿಟನ್ ಹೇಗೆ ಎರಡನೇ ಮಹಾಯುದ್ಧದಲ್ಲಿ ಉಪಯೋಗಿಸಿಕೊಂಡಿತು?

**III. ಚಟುವಟಿಕೆಗಳು :**

1. ವೃತ್ತ ಪತ್ರಿಕೆ ಮತ್ತು ಅಂತರಜಾಲದ ನೆರವಿನಿಂದ ಪ್ರಪಂಚದ ದೇಶಗಳಲ್ಲಿ ಇತ್ತೀಚೆಗೆ ನಡೆದ ಸ್ವಾತಂತ್ರ್ಯ ಹೋರಾಟಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.
2. ಅಂತರ್ಜಾಲ ಮತ್ತು ವೃತ್ತಪತ್ರಿಕೆಗಳ ನೆರವಿನಿಂದ ಜಾಗತಿಕ ಮಟ್ಟದಲ್ಲಿ ಶಾಂತಿ ಸ್ಥಾಪನೆಗಾಗಿ ಭಾರತವು ಅನ್ಯರಾಷ್ಟ್ರಗಳೊಂದಿಗೆ ನಡೆಸುತ್ತಿರುವ ಪ್ರಯತ್ನಗಳ ಬಗ್ಗೆ ಪ್ರಬಂಧ ಬರೆಯಿರಿ.

**IV. ಯೋಜನೆಗಳು :**

1. ಪ್ರಪಂಚದ ಭೂಪಟ ಬರೆದು ಮಿತ್ರಬಣ ಮತ್ತು ಶತ್ರುಬಣದ ದೇಶಗಳನ್ನು ಗುರುತಿಸಿ ಬಣ್ಣ ಹಚ್ಚಿರಿ.
2. ವಿಶ್ವದ ವಿವಿಧ ರಾಷ್ಟ್ರಗಳ ರಾಷ್ಟ್ರ ಧ್ವಜಗಳ ಚಿತ್ರವನ್ನು ಸಂಗ್ರಹಿಸಿರಿ.

©KTBS NOT TO BE REPUBLISHED

## ರಾಜ್ಯಶಾಸ್ತ್ರ

## ಅಧ್ಯಾಯ-21

# ಜಾಗತಿಕ ಸವಾಲುಗಳು ಹಾಗೂ ಭಾರತದ ಪಾತ್ರ

T1N5S8

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಮಾನವ ಹಕ್ಕುಗಳ ನಿರಾಕರಣೆ
- ಶಸ್ತ್ರಾಸ್ತ್ರಗಳ ಪೈಪೋಟಿ
- ಆರ್ಥಿಕ ಅಸಮಾನತೆ
- ಭಯೋತ್ಪಾದಕತೆ

ದ್ವಿತೀಯ ಜಾಗತಿಕ ಯುದ್ಧದ ಬಳಿಕ ವಸಾಹತುಶಾಹಿತ್ವ ಹಾಗೂ ಸಾಮ್ರಾಜ್ಯಶಾಹಿತ್ವ ಪತನಗೊಂಡವು. ಹಳೆಯ ಜಗತ್ತಿನ ಬದಲಾವಣೆಯೊಂದಿಗೆ ನೂತನ ಜಗತ್ತು ಹುಟ್ಟಿಕೊಳ್ಳಲಾರಂಭಿಸಿತು. 1945ರಲ್ಲಿ ವಿಶ್ವಸಂಸ್ಥೆ ಅಥವಾ ಸಂಯುಕ್ತ ರಾಷ್ಟ್ರ ಸಂಘದ ಆರಂಭದೊಂದಿಗೆ ಹೊಸ ಶಕೆ ಆರಂಭಗೊಂಡಿತು. ಆದರೂ ಜಾಗತಿಕವಾಗಿ ಮಾನವ ಹಕ್ಕುಗಳು, ಶಸ್ತ್ರಾಸ್ತ್ರಗಳ ಪೈಪೋಟಿ, ಆರ್ಥಿಕ ಅಸಮಾನತೆ, ವರ್ಣಭೇದ ನೀತಿ ಹಾಗೂ ಭಯೋತ್ಪಾದಕತೆಯಂತಹ ಹಲವಾರು ಸಮಸ್ಯೆಗಳು ಇನ್ನೂ ಹಾಗೆಯೇ ಉಳಿದುಕೊಂಡಿವೆ. ವಿಶ್ವಕುಟುಂಬದ ಓರ್ವ ಮುಂಚೂಣಿಯ ಸದಸ್ಯರಾಷ್ಟ್ರವಾಗಿ ಭಾರತ ಈ ಎಲ್ಲಾ ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪೂರಕ ಪ್ರಯತ್ನ ನಡೆಸುತ್ತಿದೆ.

**1. ಮಾನವ ಹಕ್ಕುಗಳ ನಿರಾಕರಣೆ :** ಮಾನವತಾವಾದಿಗಳು ಪ್ರತಿಯೊಬ್ಬನ ಜನ್ಮತಃ ಅಥವಾ ಹುಟ್ಟಿನಿಂದಲೇ ಬರತಕ್ಕಂತಹ ಹಕ್ಕುಗಳ ಬಗೆಗೆ ಪ್ರತಿಪಾದಿಸಿದ್ದಾರೆ. ಆದರೆ ದುರದೃಷ್ಟವಶಾತ್ ಪ್ರಪಂಚದ ಬಹುತೇಕ ಮಂದಿ ಸುದೀರ್ಘ ಕಾಲಾವಧಿಯಲ್ಲಿ ಈ ಮಾನವ ಹಕ್ಕುಗಳನ್ನು ಅನುಭವಿಸಿಲ್ಲ. ಧರ್ಮ, ಜನಾಂಗ, ಲಿಂಗ, ಜಾತಿ, ವರ್ಣ ಹಾಗೂ ರಾಷ್ಟ್ರೀಯತೆ ಈ ಎಲ್ಲವುಗಳನ್ನು ಕಾರಣವಾಗಿರಿಸಿ, ಮಾನವ ಹಕ್ಕುಗಳ ನಿರಾಕರಣೆ ಹಾಗೂ ಶೋಷಣೆಯನ್ನು ನಾವು ಕಾಣಬಹುದಾಗಿದೆ.

**ನಿಮಗಿದು ತಿಳಿದಿರಲಿ :**

ಭಾರತ ಸಂವಿಧಾನದಿಂದ ಖಾತರಿಪಡಿಸಲಾಗಿರುವ ಅಥವಾ ಅಂತಾರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಸೇರಿಸಲಾಗಿರುವ ಮತ್ತು ಬದುಕುವ, ಸ್ವಾತಂತ್ರ್ಯದ, ಸಮಾನತೆ ಮತ್ತು ವ್ಯಕ್ತಿಯ ಘನತೆಯ ಹಕ್ಕುಗಳು ಮಾನವ ಹಕ್ಕುಗಳು".

1776ರ ಅಮೆರಿಕಾದ ಸ್ವಾತಂತ್ರ್ಯ ಯುದ್ಧ, 1789ರ ಫ್ರಾನ್ಸಿನ ಮಹಾಕ್ರಾಂತಿ, 1917ರ ರಷ್ಯಾಕ್ರಾಂತಿ, 20ನೆಯ ಶತಮಾನದ ಪ್ರಥಮಾರ್ಧದ ಭಾರತ ಹಾಗೂ ಇನ್ನಿತರ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟ, ಇವೆಲ್ಲಾ ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ತಂದುಕೊಟ್ಟವು. ಮಾನವ ಹಕ್ಕುಗಳ ನಿರಾಕರಣೆಯ ವಿರುದ್ಧ, 1948ರ ಡಿಸೆಂಬರ್ 10ರ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಉದ್ಘೋಷಣೆ ಒಂದು ಪ್ರಮುಖ ಮೈಲುಗಲ್ಲು ಎಂಬುದಾಗಿ ಭಾವಿಸಬಹುದಾಗಿದೆ. ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರ ಪ್ರತಿಪಾದಿಸುತ್ತಾ ಬಂದಿದೆ. ಭಾರತ ತನ್ನ ಸಂವಿಧಾನದಲ್ಲಿಯೂ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ ಹಾಗೂ ಈ ವಿಚಾರದ ಬಗೆಗೆ ಬೆಳಕು ಚೆಲ್ಲಿದೆ. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿಯೂ ವಿಶ್ವದಾದ್ಯಂತ ಮಾನವ ಹಕ್ಕುಗಳು ಸುರಕ್ಷಿತವಾಗಿರಬೇಕೆಂಬುದನ್ನು ಭಾರತ ಸಮರ್ಥಿಸುತ್ತಾ ಬಂದಿದೆ. ಗುಲಾಮಗಿರಿ ಪದ್ಧತಿ, ಮಾನವರ ಮಾರಾಟ, ಮಕ್ಕಳ ದುಡಿಮೆ, ಮಹಿಳಾ ಶೋಷಣೆ ಇತ್ಯಾದಿಗಳನ್ನು ಸಾರ್ವತ್ರಿಕ ಮಾನವ

©KTBS NOT TO BE REPUBLISHED

ಹಕ್ಕುಗಳ ಉದ್ಘೋಷಣೆ ನಿಷೇಧಿಸಿದೆ. ಬದುಕುವ ಹಾಗೂ ಸ್ವಾತಂತ್ರ್ಯದ ಹಕ್ಕು, ಸ್ವರಕ್ಷಣೆಯ ಹಕ್ಕು, ಧಾರ್ಮಿಕ ಸ್ವಾತಂತ್ರ್ಯ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕು ಇವೆಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೆಲ್ಲಾ ಸಾಂವಿಧಾನಿಕವಾಗಿ ಮಾನ್ಯತೆಗೊಂಡ ಹಕ್ಕುಗಳು ಎನಿಸಿವೆ. ಆದರೆ ನಿರಂಕುಶ ಪ್ರಭುತ್ವಗಳಲ್ಲಿ ಹಾಗೂ ಏಕ ಸಿದ್ಧಾಂತ ಶಾಹಿತ್ವಗಳಲ್ಲಿ ಮೂಲಭೂತ ಹಕ್ಕುಗಳ ನಿರಾಕರಣೆಯನ್ನು ನಾವೂ ಈಗಲೂ ಗಮನಿಸಬಹುದು. ಜನಾಂಗ ಹತ್ಯೆ, ಎಲ್ಲಾ ವಿಧದ ಶೋಷಣೆ ಹಾಗೂ ದಬ್ಬಾಳಿಕೆಗೆ ಭಾರತ ವಿರೋಧ ವ್ಯಕ್ತಪಡಿಸುತ್ತದೆ. ವಿಶ್ವ ಸಂಸ್ಥೆ ಹಾಗೂ ಇನ್ನಿತರ ಜಾಗತಿಕ ವೇದಿಕೆಗಳ ಮೂಲಕ ಭಾರತ ಮಾನವ ಹಕ್ಕುಗಳ ಸಂರಕ್ಷಣೆಗೆ ಯತ್ನಿಸುತ್ತಿದೆ.

2. **ಶಸ್ತ್ರಾಸ್ತ್ರಗಳ ಪೈಪೋಟಿ :** ಒಂದು ಪ್ರಸಿದ್ಧ ಮಾತಿದೆ – 'ಅಣ್ವಸ್ತ್ರಯುಗದಲ್ಲಿ ನಾವು ಯುದ್ಧವನ್ನು ಕೊನೆಗಾಣಿಸಬೇಕು; ಇಲ್ಲವಾದರೆ ಯುದ್ಧ ನಮ್ಮನ್ನು ಕೊನೆಗಾಣಿಸುತ್ತದೆ'. ಪ್ರಚಲಿತ ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿ ಒಂದು ಭಯಾನಕ ವಿದ್ಯಮಾನ ಎಂಬುದಾಗಿ ಕಾಣಿಸುತ್ತದೆ. ನಿಶ್ಶಸ್ತ್ರೀಕರಣ ವಿಶ್ವದ ಇಂದಿನ ಹಾಗೂ ಮುಂದಿನ ಉಳಿವಿಗೆ ಅತ್ಯಗತ್ಯ ಎನಿಸುತ್ತದೆ. ಶಸ್ತ್ರಾಸ್ತ್ರಗಳ ತೀವ್ರ ಪೈಪೋಟಿಯನ್ನು ನಿಲ್ಲಿಸಲು ನಿಶ್ಶಸ್ತ್ರೀಕರಣವೊಂದೇ ಪ್ರಮುಖ ಉಪಾಯ ಎಂದು ಭಾಸವಾಗುತ್ತಿದೆ.

ನಿಶ್ಶಸ್ತ್ರೀಕರಣ ಎಂದರೆ ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣ ಇಲ್ಲವಾಗಿಸುವ ನೇರ ಪ್ರಕ್ರಿಯೆ. ಶಸ್ತ್ರಾಸ್ತ್ರಗಳ ಸ್ಪರ್ಧೆಯಿಂದ ವಿಶ್ವದಾದ್ಯಂತ ಭಯ, ಅಸ್ಥಿರತೆ, ಚಡಪಡಿಕೆ ಹಾಗೂ ಯುದ್ಧದ ಸಂಭವ ತಲೆದೋರುತ್ತದೆ. ಈ ಎಲ್ಲಾ ಅನಿಷ್ಟಗಳನ್ನು ದೂರವಿರಿಸುವ ದೃಷ್ಟಿಯಿಂದ ನಿಶ್ಶಸ್ತ್ರೀಕರಣ ಪ್ರಚಲಿತ ಜಗತ್ತಿನ ಅವಶ್ಯಕತೆ ಎಂಬುದಾಗಿ ಭಾವಿಸಲ್ಪಡುತ್ತದೆ. ಅದೇ ರೀತಿ ಶಸ್ತ್ರಾಸ್ತ್ರಗಳು ಹಾಗೂ ಮದ್ದುಗುಂಡುಗಳು ಆರ್ಥಿಕವಾಗಿಯೂ ಒಂದು ಅನಗತ್ಯ ನಷ್ಟದಾಯಕ ಎಂದೂ ಭಾವಿಸಲಾಗುತ್ತದೆ. ಅಮೆರಿಕಾದ ಅಧ್ಯಕ್ಷ ಐಸನ್ ಹೋವರ್ ಒಮ್ಮೆ ಹೀಗೆ ಉದ್ಗರಿಸಿದ್ದರು. 'ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಲ್ಲ; ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ'.

ಅಣ್ವಸ್ತ್ರ ಅಥವಾ ನ್ಯೂಕ್ಲಿಯರ್ ಬಾಂಬುಗಳ ತಯಾರಿಯೊಂದಿಗೆ ನಿಶ್ಶಸ್ತ್ರೀಕರಣ ಅಥವಾ ಶಸ್ತ್ರ ನಿಯಂತ್ರಣದ ಪ್ರಶ್ನೆ ತೀರಾ ಗಂಭೀರ ಎಂದು ಪರಿಗಣಿಸಲಾಗಿದೆ. ಭಾರತ ಒಂದು ಶಾಂತಿಪ್ರಿಯ ರಾಷ್ಟ್ರವಾದುದರಿಂದ ಶಸ್ತ್ರಾಸ್ತ್ರಗಳ ನಿಯಂತ್ರಣವನ್ನು ಪ್ರತಿಪಾದಿಸುತ್ತದೆ. ಮುಂದಿನ ಜಾಗತಿಕ ಸುರಕ್ಷೆಯ ದೃಷ್ಟಿಯಿಂದ ಯುದ್ಧಗಳ ನಿವಾರಣೆ ತುಂಬಾ ಅವಶ್ಯಕವಾಗಿದೆ. 1963ರ ಬಳಿಕ ಅಮೆರಿಕಾ ಸಂಯುಕ್ತ ಸಂಸ್ಥಾನ ಹಾಗೂ ಸೋವಿಯತ್ ರಷ್ಯಾ ಹಲವಾರು ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಂಡವು. ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ (ಸಾಲ್ಟ್), ಪಾಕ್ಷಿಕ ಪ್ರಯೋಗ ನಿಷೇಧ ಒಪ್ಪಂದ, ಸಮಗ್ರ ಪರೀಕ್ಷಣಾ ನಿಷೇದ ಒಪ್ಪಂದ (ಸಿಟಿಬಿಟಿ), ಫಲಿಕೆ ನಿಷೇಧ ಒಪ್ಪಂದ ಇವುಗಳು ಅಣುಶಸ್ತ್ರಗಳ ತಡೆಗಟ್ಟುವಲ್ಲಿ ಕೆಲವೊಂದು ಮಹತ್ವದ ವಿಶ್ವ ಮಟ್ಟದ ಸಂಧಿಗಳು ಎಂದು ಪರಿಗಣಿಸಬಹುದು. ಹೀಗೆ "ಪರಸ್ಪರ ನಿಶ್ಚಿತ ನಾಶ"ದ ವಿರುದ್ಧ ಭಾರತವು ಸೇರಿ ಎಲ್ಲಾ ರಾಷ್ಟ್ರಗಳೂ ಪ್ರಯತ್ನಿಸುವ ಅವಶ್ಯಕತೆಯಿದೆ.

3. **ಆರ್ಥಿಕ ಅಸಮಾನತೆ :** ವಿಶ್ವ ಕುಟುಂಬದ ಸದಸ್ಯರಲ್ಲಿ ಪರಸ್ಪರ ಆರ್ಥಿಕ ಅಸಮಾನತೆ ಒಂದು ಪ್ರಮುಖ ಸಮಸ್ಯೆಯಾಗಿದೆ. ಇದು ವಸಾಹತುಶಾಹಿತ್ವ ಹಾಗೂ ಸಾಮ್ರಾಜ್ಯಶಾಹಿತ್ವದ ಒಂದು ಐತಿಹಾಸಿಕ ಬಳುವಳಿ ಎಂದೂ ಭಾವಿಸಬಹುದಾಗಿದೆ. ಐರೋಪ್ಯ ರಾಷ್ಟ್ರಗಳು ಆಫ್ರಿಕಾ, ಏಷ್ಯಾ ಹಾಗೂ ಲ್ಯಾಟಿನ್ ಅಮೆರಿಕನ್ ರಾಷ್ಟ್ರಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದವು. ಈ ಸಾಮ್ರಾಜ್ಯ ಶಾಹಿತ್ವದ ಕೈಕೆಳಗೆ ಇದ್ದಂತಹ ರಾಷ್ಟ್ರಗಳು ಆರ್ಥಿಕವಾಗಿ ತೀರಾ ಹಿಂದುಳಿದವು. 20ನೇ ಶತಮಾನದ ಪೂರ್ವ ಭಾಗದವರೆಗೆ

NOT TO BE REPUBLISHED ©KTBS

ಅವರ ಪ್ರಗತಿ ತೀರಾ ಕುಂಠಿತವಾಗಿತ್ತು. ಸ್ವಾತಂತ್ರ್ಯಾನಂತರ ಏಷ್ಯಾ ಹಾಗೂ ಆಫ್ರಿಕಾದ ರಾಷ್ಟ್ರಗಳು ಅಭಿವೃದ್ಧಿ ಸಾಧಿಸಲು ಪ್ರಯತ್ನಿಸಿದವು. ಆದರೆ ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಆರ್ಥಿಕ ಅಡಚಣೆ ತಲೆದೋರಿತ್ತು. ಹಾಗಾಗಿ ವಿದೇಶೀ ಆರ್ಥಿಕ ಸಹಕಾರ ಇವುಗಳಿಗೆ ತೀರಾ ಅವಶ್ಯಕ ಎಂದು ಕಂಡು ಬಂತು.

ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಿಗೆ 1945ರ ಬಳಿಕದ ರಾಜಕೀಯ ಧ್ರುವೀಕರಣ ಆಧರಿಸಿ ಅಮೆರಿಕಾ ಹಾಗೂ ಸೋವಿಯತ್ ರಷ್ಯಾದ ಗುಂಪುಗಳು ಸಹಾಯ ನೀಡಲು ಆರಂಭಿಸಿದವು. ಆದರೆ ಈ ರಾಷ್ಟ್ರಗಳ ಬಡತನ, ಮುಂದುವರಿದ ದೇಶಗಳ ರಾಜಕೀಯ ಸ್ವಾರ್ಥದ ಸಾಧನೆಗೆ ಪೂರಕವಾಗಿ ಪರಿಣಮಿಸಿತು.

ಮುಂದಿನ ಕಾಲಘಟ್ಟದಲ್ಲಿ ಭಾರತ ಅಲಿಪ್ತ ನೀತಿಯನ್ನು ಜಗತ್ತಿನಲ್ಲಿ ಮುಂದುವರಿಸಿತು. ಯಾವುದೇ ಷರತ್ತುಗಳಿಲ್ಲದೆ ಮುಂದುವರಿದ ದೇಶಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿಯನ್ನು ಭಾರತ ಪ್ರತಿಪಾದಿಸಿತು. ತನ್ಮೂಲಕ ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿ ಹಿಡಿಯಲು ಸಹಕರಿಸಿತು. ಅದರೊಂದಿಗೇ ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಕೂಡ ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು. 'ತೃತೀಯ ಜಗತ್ತು' ಎಂಬ ವಿಚಾರವೇ 'ಬಡ ರಾಷ್ಟ್ರಗಳು' ಎಂಬ ಅಂಶವನ್ನು ಎತ್ತಿ ತೋರುತ್ತಿದೆ. ಈ ದೇಶಗಳು ಆಹಾರ, ಬಂಡವಾಳ, ತಾಂತ್ರಿಕತೆ, ಆರೋಗ್ಯ ಸಲಕರಣೆ, ಉನ್ನತ ವ್ಯಾಸಂಗದ ಅವಕಾಶಗಳು ಮುಂತಾದ ಕೊರತೆಗಳಿಂದ ಹೊರಬರಲು ಪ್ರಯತ್ನಿಸುತ್ತಿವೆ. ಅದೇ ರೀತಿ ಅನ್ಯರಾಷ್ಟ್ರಗಳಲ್ಲಿನ ಅನಗತ್ಯ ವೆಚ್ಚ, ಮುಕ್ತ ವ್ಯಾಪಾರ, ಅಸಮರ್ಪಕ ಪೈಪೋಟಿ, ಜಾಗತೀಕರಣ ಮುಂತಾದ ವಿದ್ಯಮಾನಗಳು ಬಡರಾಷ್ಟ್ರಗಳ ಮೇಲೆ ಹಲವಾರು ಬಾರಿ ದುಷ್ಪರಿಣಾಮ ಬೀರುತ್ತದೆ. ಇವೆಲ್ಲವನ್ನೂ ನೀಗಿಸುವಲ್ಲಿ ವಿಶ್ವಸಂಸ್ಥೆ ಹಾಗೂ ಮುಂದುವರಿದ ರಾಷ್ಟ್ರಗಳು ಪೂರಕವಾಗಿ ಯತ್ನಿಸಬೇಕಾಗಿದೆ. ಭಾರತ ಒಂದು ಪ್ರಗತಿಪರ ರಾಷ್ಟ್ರವಾಗಿ ವಿಶ್ವ ಕುಟುಂಬದ ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯ ಹಾಗೂ ಸಮಾನತೆಯನ್ನು ಪ್ರತಿಪಾದಿಸುತ್ತಿದೆ.

**4. ಭಯೋತ್ಪಾದಕತೆ :** ಭಯೋತ್ಪಾದಕತೆಯನ್ನು ಭೀತಿವಾದ ಅಥವಾ ಉಗ್ರಗಾಮಿತ್ವ ಎಂದೂ ಕರೆಯಬಹುದು. ಇದು ಒಂದು ಬಲಪ್ರಯೋಗದ ಒತ್ತಡ ತಂತ್ರಗಾರಿಕೆ. ರಾಜಕೀಯ, ಧಾರ್ಮಿಕ, ಅಥವಾ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಗುರಿಹೊಂದಿದ ಭಯೋತ್ಪಾದಕತೆಯು ವ್ಯಕ್ತಿಗಳಿಗೆ ಮತ್ತು ಸೊತ್ತುಗಳಿಗೆ ಅಪಾರ ಹಾನಿ ಉಂಟುಮಾಡುತ್ತದೆ. ಅದರಿಂದಲೂ ಹೆಚ್ಚಾಗಿ ಉಗ್ರಗಾಮಿತ್ವ ಮಾನಸಿಕ ವೇದನೆಯನ್ನು ನೀಡುತ್ತದೆ. ಸಾಮಾಜಿಕ ಸಂಸ್ಕೃತಿಗೆ, ಅದೇ ರೀತಿ ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ. ಉಗ್ರಗಾಮಿ ಸಂಘಟನೆಗಳ ಉದ್ದೇಶ ಪೂರೈಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆ ಈ ಭಯೋತ್ಪಾದಕತೆ ಎನ್ನಬಹುದು. ಇಂತಹ ಸಂಘಟಿತ ಹಿಂಸೆಯ ಕೃತ್ಯಗಳು ಕಾನೂನು ಬಾಹಿರ ಹಾಗೂ ಸಮಾಜದ್ರೋಹಿ ಎನಿಸುವಂತಹವು. 2001ರಲ್ಲಿ ಅಮೆರಿಕಾದ ವಿಶ್ವ ವ್ಯಾಪಾರ ಕೇಂದ್ರದ ಧ್ವಂಸ, ಅಂತೆಯೇ ಬ್ರಿಟನ್, ಇರಾನ್, ಭಾರತ ಅಫಘಾನಿಸ್ತಾನ, ಪಾಕಿಸ್ತಾನ, ಇಂಡೋನೇಷಿಯಾ ಮುಂತಾದ ಹಲವಾರು ದೇಶಗಳಲ್ಲಿ ಸರಣಿ ಬಾಂಬು ಸ್ಫೋಟಗಳು ಜಾಗತಿಕ ಮಟ್ಟದಲ್ಲಿಯೂ ಅತ್ಯಂತ ಕಳವಳಕಾರಿ ಸಂಗತಿಗಳಾಗಿವೆ. ಈ ಉಗ್ರಗಾಮಿತ್ವವು ಧಾರ್ಮಿಕ ಮೂಲಭೂತ ಚಿಂತನೆಯಿಂದ, ಪ್ರತ್ಯೇಕವಾದದಿಂದ, ತೀವ್ರ ಎಡಪಂಥೀಯ ವಿಚಾರದಿಂದ, ನಾಡ ಬಿಡುಗಡೆಯ ಛಲದಿಂದ, ವರ್ಣದ್ವೇಷ ನೀತಿ ಮುಂತಾದ ವಿಚಾರಧಾರೆಗಳಿಂದ ಪ್ರೇರಿತವಾಗಿರುತ್ತದೆ.

NOT TO BE REPUBLISHED

ಒಂದು ರಾಷ್ಟ್ರವೇ ಇನ್ನೊಂದು ದೇಶದೊಳಗಿನ ಭಯೋತ್ಪಾದಕತೆಗೆ ಆರ್ಥಿಕ ಹಾಗೂ ಇನ್ನಿತರ ಸಹಕಾರ ನೀಡುವುದೂ ಇದೆ. ಈ ಉಗ್ರಗಾಮಿತ್ವವು ಒಂದು ರಾಷ್ಟ್ರದ ನಾಗರಿಕರ ಮೇಲೆ, ಮಿಲಿಟರಿ ಪಡೆಗಳ ಮೇಲೆ, ಅಂತೆಯೇ ನಿರ್ದಿಷ್ಟ ಭಾಷಾವಾರು, ಧಾರ್ಮಿಕ, ಜನಾಂಗೀಯ, ಅಥವಾ ವರ್ಣದವರ ಮೇಲೆ ಎರಗಿ ಸಾವು ನೋವು ಉಂಟು ಮಾಡುವುದಾಗಿದೆ. ಉಗ್ರಗಾಮಿತ್ವವು ಭಯವನ್ನು ಹೆಚ್ಚಿಸುವ ಹಾಗೂ ಪ್ರಚಾರವನ್ನು ಪಡೆಯುವ ಉದ್ದೇಶದಿಂದ ನಡೆಯುತ್ತದೆ, ಮಾತ್ರವಲ್ಲ ಅತ್ಯಧಿಕ ಸಾವುನೋವು ಉಂಟು ಮಾಡಲು ಸ್ಫೋಟಕ ವಸ್ತುಗಳನ್ನು, ವಿಷಾನಿಲವನ್ನು ಬಳಸಲು ದಾರಿ ಮಾಡಿಕೊಡುತ್ತದೆ. ಇಂತಹ ವಿನಾಶಕಾರೀ ಕೃತ್ಯಗಳು ಸಾಕಷ್ಟು ಪೂರ್ವಯೋಜಿತವಾಗಿಯೇ ರೂಪುಗೊಳ್ಳುತ್ತವೆ. ಉಗ್ರಗಾಮಿಗಳು ತಮ್ಮದೇ ಆದ ಗುಪ್ತಚರರನ್ನು ಹಾಗೂ ತರಬೇತು ಹೊಂದಿದವರ ಜಾಲವನ್ನು ಹೊಂದಿರುತ್ತಾರೆ ಹಾಗೂ ಅವರ ಸಹಾಯದಿಂದ ಹಣವನ್ನೂ ಸಂಗ್ರಹಿಸುತ್ತಾರೆ. ಅತ್ಯಾಧುನಿಕ ಸಾರಿಗೆ, ಸಂಪರ್ಕ ಸಾಧನಗಳನ್ನೂ ಇವರು ಬಳಸುತ್ತಾರೆ. ತಮ್ಮ ನಿರ್ದಿಷ್ಟ ಗುರಿ ಹಾಗೂ ಸಂಘಟನೆಗೆ ಸಾಕಷ್ಟು ಪ್ರಚಾರವನ್ನೂ ಇವರು ಪಡೆದುಕೊಳ್ಳುತ್ತಾರೆ. ರಸ್ತೆ ಸಾರಿಗೆ, ರೈಲ್ವೇ, ವಿಮಾನ, ಪ್ರಮುಖ ಸರ್ಕಾರಿ ಕಚೇರಿಗಳು, ಕಿಕ್ಕಿರಿದ ಜನ ಜಂಗುಳಿ, ಮಾರುಕಟ್ಟೆ ಪ್ರದೇಶ ಮುಂತಾದವುಗಳು ಈ ಭಯೋತ್ಪಾದಕರ ಹೊಡೆತಕ್ಕೆ ಸಿಗುವ ಸಾಮಾನ್ಯ ತಾಣಗಳಾಗಿವೆ. ಪ್ರಚಾರ ಈ ಭಯೋತ್ಪಾದಕತೆಯ ಜತೆ ಜತೆಗೇ ಮುಂದುವರಿಯುತ್ತದೆ. ಇದೊಂದು ಅಸಾಂಪ್ರದಾಯಿಕ ಯುದ್ಧ ಎಂದೇ ಹೇಳಬಹುದು. ಆತ್ಮಾಹುತಿ ದಾಳಿ, ವಿಮಾನಕಳ್ಳತನ, ಗುಂಡಿನಕಾಳಗ, ಬಾಂಬುದಾಳಿ, ನಿರ್ದಿಷ್ಟ ಅಥವಾ ಮುಗ್ಧ ಜನರನ್ನು ಒತ್ತೆ ಇರಿಸುವಿಕೆ ಇವೆಲ್ಲಾ ಉಗ್ರಗಾಮಿಗಳು ಮಾಡುವ ಹೀನ ಕೃತ್ಯಗಳಾಗಿವೆ.

ಭಾರತ ಇಂತಹ ಉಗ್ರಗಾಮಿತ್ವಕ್ಕೆ ಸಾಕಷ್ಟು ತುತ್ತಾದ ರಾಷ್ಟ್ರವಾಗಿದೆ. ಕಾಶ್ಮೀರ, ನಾಗಾಲ್ಯಾಂಡ್, ಮಿಜೋರಾಂ, ಅಸ್ಸಾಂ ಇಂತಹ ಹಲವಾರು ರಾಜ್ಯಗಳಲ್ಲಿ ಭಯೋತ್ಪಾದಕತೆ ತಲೆ ಎತ್ತುತ್ತಲೇ ಇದೆ. 2007 ನವಂಬರ್ 26 ಮುಂಬೈಯ ತಾಜಮಹಲ್ ಹೋಟೆಲ್ ಮತ್ತು ರೈಲು ನಿಲ್ದಾಣಗಳ ದಾಳಿ, ನವದೆಹಲಿಯ ಸಂಸತ್ತಿನ ಮೇಲೆ ಅಂತೆಯೇ ಹೈದರಾಬಾದ್, ಚೆನ್ನೈ, ಬೆಂಗಳೂರು, ಬುದ್ಧಗಯಾ ಮುಂತಾದ ಕಡೆಗಳಲ್ಲಿ ಇಂತಹ ವಿಧ್ವಂಸಕ ಕೃತ್ಯಗಳು ನಡೆದಿವೆ. ನಕ್ಸಲ್ವಾದಿಗಳು ಭೀಕರವಾದ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ನಮ್ಮ ನೆರೆರಾಷ್ಟ್ರಗಳಾದ ಪಾಕಿಸ್ತಾನ ಹಾಗೂ ಚೈನಾ ನಮ್ಮಲ್ಲಿನ ಇಂತಹ ಭಯೋತ್ಪಾದಕತೆಗೆ ಕುಮ್ಮಕ್ಕು ನೀಡುವ ಬಗ್ಗೆ ಟೀಕಿಸಲ್ಪಡುತ್ತವೆ.

ಭಾರತ ತನ್ನಲ್ಲಿ, ಅದೇ ರೀತಿ ಅನ್ಯರ ನೆಲದಲ್ಲಿ ಭಯೋತ್ಪಾದಕತೆಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತದೆ. ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಭಯೋತ್ಪಾದಕತೆಯ ನಿಗ್ರಹಕ್ಕೆ ತೀವ್ರ ಪ್ರಯತ್ನ ನಡೆಸುತ್ತಿವೆ, ತನ್ಮೂಲಕ ಜನತೆಯ ಪ್ರಾಣ ಹಾಗೂ ಆಸ್ತಿಪಾಸ್ತಿಯನ್ನು ಉಳಿಸಲು ಯತ್ನಿಸುತ್ತಿವೆ. ಭೀತಿವಾದಿಗಳನ್ನು ನಿಗ್ರಹಿಸಲು ವಿಶೇಷ ಪರಿಣತಿ ಪಡೆದ ಪಡೆಗಳನ್ನು ರಚಿಸಲಾಗುತ್ತಿದೆ. ಕೆಲವೊಮ್ಮೆ ರಕ್ಷಣಾ ಪಡೆಗಳನ್ನು ಈ ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆಗೆ ಬಳಸಲಾಗುತ್ತದೆ. ಶಾಂತಿ ಪ್ರಿಯ ರಾಷ್ಟ್ರವೆನಿಸಿದ ನಾವು ಭಯೋತ್ಪಾದಕತೆಯನ್ನು ವಿರೋಧಿಸುತ್ತೇವೆ.

ಮನುಕುಲದ ಇತಿಹಾಸವನ್ನು ಪರಿಶೀಲಿಸಿದಾಗ ಒಂದು ಸತ್ಯ ಗೋಚರಿಸುತ್ತದೆ. ಹಿಂಸೆ, ಭಯೋತ್ಪಾದನೆಗಳಿಂದ ಸಾಧನೆ ಮಾಡಿದ್ದು ಕ್ಷುಲ್ಲಕ ಹಾಗೂ ಸತ್ಯ, ಅಹಿಂಸೆ ಪ್ರೇಮ ತ್ಯಾಗಗಳಿಂದ ಸಾಧಿಸಿದ್ದು ಅಪಾರ. ನಮಗೆ ತೀರ ಹತ್ತಿರವಾಗಿ ತಿಳಿಯುವುದೇನೆಂದರೆ ಮಹಾತ್ಮ ಗಾಂಧೀಜಿ,

@KTBS NOT TO BE REPUBLISHED

ಶ್ಯಾಮಪ್ರಸಾದ ಮುಖರ್ಜಿ, ಇಂದಿರಾಗಾಂಧಿಯವರನ್ನು ಕೊಂದರೂ ಹೊಸ ಇತಿಹಾಸವೇನೂ ನಿರ್ಮಾಣವಾಗಲಿಲ್ಲ. ಆದರೆ ಬುದ್ಧ, ಮಹಾವೀರ, ಬಸವಣ್ಣ, ಗಾಂಧಿ, ಅಂಬೇಡ್ಕರ್ ಇಂತಹವರಿಂದ ಮನುಕುಲಕ್ಕೆ ಚೈತನ್ಯ, ಹೊಸ ಬೆಳಕು, ನೆಮ್ಮದಿ ಪ್ರಾಪ್ತವಾಗಿದೆ. ಹಿಂಸೆ–ದ್ವೇಷಗಳಿಗಿಂತ ಶಾಂತಿ–ಪ್ರೇಮಗಳೇ ಮಿಗಿಲಾದವು.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಮಾನವ ಹಕ್ಕುಗಳ ದಿನವನ್ನು __________ ರಂದು ಆಚರಿಸುತ್ತೇವೆ.
2. ಭಾರತವು ನಿರಂತರವಾಗಿ __________ ಮಾನವ ಹಕ್ಕುಗಳನ್ನು ಪ್ರತಿ ಪಾದಿಸುತ್ತಾ ಬಂದಿದೆ.
3. ಮಾನವ ಹಕ್ಕು ಎಂಬುದು __________ ಸಮಾನತೆಯನ್ನು ಒಳಗೊಂಡಿದೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :**

1. ದ್ವಿತೀಯ ಮಹಾಯುದ್ಧ ಬಳಿಕ ಎದುರಾದ ಮುಖ್ಯ ಸಮಸ್ಯೆಗಳು ಯಾವುವು?
2. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ
3. ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವುವು?
4. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವುವು?
   ಈ ರೀತಿ ಹಿಂದುಳಿಯುವಿಕೆಯ ಕಾರಣಗಳಾವುವು?
5. ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳಾವುವು?
6. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳಾವುವು?
7. ಭಯೋತ್ಪಾದಕತೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವುವು?

@KTBS NOT TO BE REPUBLISHED

**III. ಚಟುವಟಿಕೆಗಳು**

1. ಮಾನವ ಹಕ್ಕುಗಳನ್ನು ರಕ್ಷಿಸಲು ರಚಿಸಲಾಗಿರುವ ಆಯೋಗದ ಬಗ್ಗೆ ಮಾಹಿತಿ ಸಂಗ್ರಹಿಸಿ.
2. ಕರ್ನಾಟಕ ಸರ್ಕಾರವು ರಾಜ್ಯದ ಬಡ ಜನರಿಗಾಗಿ ಕೈಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳ ಪಟ್ಟಿ ಮಾಡಿರಿ.

**IV. ಯೋಜನೆ**

1. ಮಾನವ ಹಕ್ಕುಗಳ ನಿರಾಕರಣೆಯ ವಿರುದ್ಧ ಹೋರಾಡಿದ ಮಹನೀಯರುಗಳ ಜೀವನ ಚರಿತ್ರೆ ಓದಿರಿ.

@KTBS
NOT TO BE REPUBLISHED

## ಅಧ್ಯಾಯ–22

# ಜಾಗತಿಕ ಸಂಸ್ಥೆಗಳು

E9Q7Y4

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ವಿಶ್ವ ಸಂಸ್ಥೆಯ ಸ್ಥಾಪನೆ
- ವಿಶ್ವ ಸಂಸ್ಥೆಯ ಉದ್ದೇಶಗಳು
- ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು
- ವಿಶ್ವಸಂಸ್ಥೆಯ ಸಾಧನೆಗಳು
- ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘ ಸಂಸ್ಥೆಗಳು.
- ಪ್ರಾದೇಶಿಕ ಸಹಕಾರ

## ವಿಶ್ವಸಂಸ್ಥೆ (ಯು.ಎನ್.ಓ)



20ನೇ ಶತಮಾನವು ಎರಡು ಮಹಾನ್ ಯುದ್ಧಗಳನ್ನು ಕಂಡಿತು. ಮೊದಲನೆಯ ವಿಶ್ವ ಸಮರದ ಬಳಿಕ ಜಾಗತಿಕ ಶಾಂತಿಗಾಗಿ 'ಲೀಗ್ ಆಫ್ ನೇಶನ್ಸ್' ಎಂಬ ಸಂಸ್ಥೆ ಪ್ರಾರಂಭವಾಯಿತು. ಆದರೆ 1939ರಲ್ಲಿ ದ್ವಿತೀಯ ಮಹಾಯುದ್ಧ ಪ್ರಾರಂಭಗೊಳ್ಳುತ್ತಿರುವಂತೆಯೇ ಈ ಸಂಸ್ಥೆ ಪತನಗೊಂಡಿತು. ಎರಡನೇ ಮಹಾಯುದ್ಧವು ಭೀಕರವಾಗಿ ನಡೆಯುತ್ತಿದ್ದಂತೆಯೇ, ಜಾಗತಿಕವಾಗಿ ಶಾಶ್ವತ ಶಾಂತಿ ಸ್ಥಾಪನೆಯ ಯತ್ನವೂ ನಡೆಯಲಾರಂಭಿಸಿತು. ವಿಶ್ವ ಮಟ್ಟದಲ್ಲಿ ಇಂಗ್ಲೆಂಡಿನ ವಿನ್‌ಸ್ಟನ್ ಚರ್ಚಿಲ್, ರಷ್ಯಾದ ಜೋಸೆಫ್ ಸ್ಟಾಲಿನ್ ಹಾಗೂ ಅಮೆರಿಕಾದ ಫ್ರಾಂಕ್ಲಿನ್ ಡಿ'ರೂಸ್‌ವೆಲ್ಟ್ ವಿಶ್ವಮಟ್ಟದ ಸಂಸ್ಥೆಯ ಸ್ಥಾಪನೆಗೆ ಮುಂದಾದರು. 'ವಿಶ್ವಸಂಸ್ಥೆ' (ಯುನೈಟೆಡ್ ನೇಶನ್ಸ್') ಎಂಬ ಶಬ್ದವನ್ನು ಅಮೆರಿಕಾದ ಅಧ್ಯಕ್ಷ ಫ್ರಾಂಕ್ಲಿನ್ ಡಿ'ರೂಸ್‌ವೆಲ್ಟ್ ಚಾಲ್ತಿಗೆ ತಂದರು ಹಾಗೂ 1942 ಜನವರಿ 1 ರಂದು 26 ರಾಷ್ಟ್ರಗಳು ಒಪ್ಪಂದವೊಂದಕ್ಕೆ ಸಹಿ ಹಾಕುತ್ತಿದ್ದಂತೆಯೇ ಪ್ರಥಮ ಬಾರಿಗೆ ಈ ಶಬ್ದವನ್ನು ಉಪಯೋಗಿಸಲಾಯಿತು. ಇದನ್ನು ಈಗ 'ವಿಶ್ವ ರಾಷ್ಟ್ರಗಳು' ಎಂದು ಕರೆಯಲಾಗುತ್ತಿದೆ. 1945 ಜೂನ್ 26 ರಂದು ಸ್ಯಾನ್ ಫ್ರಾನ್ಸಿಸ್ಕೋ ವಿಶ್ವಸಂಸ್ಥೆಯ ಕಚೇರಿ ಸಮ್ಮೇಳನದ ಶಾಂತಿ ಸನ್ನದಿಗೆ 51 ರಾಷ್ಟ್ರಗಳ ಪ್ರತಿನಿಧಿಗಳು ಹಸ್ತಾಕ್ಷರ ನೀಡಿದರು. ಹೀಗೆ ಮುಂದಕ್ಕೆ 1945 ಅಕ್ಟೋಬರ್ 24 ರಂದು ವಿಶ್ವಸಂಸ್ಥೆ ಉದಯವಾಯಿತು. ಇದೀಗ ಸುಮಾರು 193 ರಾಷ್ಟ್ರಗಳು ಈ ವಿಶ್ವಸಂಸ್ಥೆಯ ಸದಸ್ಯತ್ವ ಹೊಂದಿವೆ. ಇದರ ಮುಖ್ಯ ಕಛೇರಿ ಅಮೆರಿಕಾದ ನ್ಯೂಯಾರ್ಕ್ ನಗರದಲ್ಲಿದೆ. ಎಲ್ಲಾ ಶಾಂತಿಪ್ರಿಯ ರಾಷ್ಟ್ರಗಳಿಗೆ ಇದರ ಸದಸ್ಯತ್ವ ಹೊಂದಲು ಮುಕ್ತ ಅವಕಾಶವಿದೆ.

## ವಿಶ್ವಸಂಸ್ಥೆಯ ಉದ್ದೇಶಗಳು

ವಿಶ್ವಸಂಸ್ಥೆಯ ಸನ್ನದು ಈ ಜಾಗತಿಕ ಸಂಸ್ಥೆಯ ಪ್ರಧಾನ ದಾಖಲೆ ಎನಿಸಿದ್ದು ಇದರಲ್ಲಿ 19 ಅಧ್ಯಾಯಗಳಿದ್ದು, 111 ವಿಧಿಗಳನ್ನು ಹೊಂದಿದೆ. "ವಿಶ್ವದ ಜನಸಮುದಾಯವೆನಿಸಿದ ನಾವು ....." ಎಂಬ ವಾಕ್ಯದೊಂದಿಗೆ ವಿಶ್ವಸಂಸ್ಥೆಯ ಪ್ರಸ್ತಾವನೆಯು ಪ್ರಾರಂಭಗೊಳ್ಳುತ್ತದೆ.

NOT TO BE REPUBLISHED ©KTBS

ವಿಶ್ವ ಸಂಸ್ಥೆಯ ಧ್ಯೇಯೋದ್ದೇಶಗಳು ಈ ಕೆಳಗಿನಂತಿವೆ. :

(1) ಅಂತಾರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು

(2) ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು

(3) ಮಾನವನ ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು

(4) ಅಂತಾರಾಷ್ಟ್ರೀಯ ಮಟ್ಟದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಮಾನವೀಯ ನೆಲೆಯ ಸಮಸ್ಯೆಗಳಿಗೆ ಅಂತಾರಾಷ್ಟ್ರೀಯ ಸಹಕಾರದೊಂದಿಗೆ ಪರಿಹಾರ ಕಂಡು ಕೊಳ್ಳುವುದು


(5) ಅಂತಾರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವುದು ಹಾಗೂ

(6) ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.

**ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು**

ವಿಶ್ವಸಂಸ್ಥೆಯ ಸನ್ನದು ಪ್ರಕಾರ ಒಟ್ಟು ಆರು ಪ್ರಧಾನ ಅಂಗ ಸಂಸ್ಥೆಗಳಿಗೆ ವ್ಯವಸ್ಥೆ ಮಾಡಲಾಗಿದೆ. ಅವುಗಳೆಂದರೆ

**1) ಸಾಮಾನ್ಯ ಸಭೆ :** ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ಅಂಗ ಸಂಸ್ಥೆ ಇದಾಗಿದೆ. ಪ್ರತಿಯೊಂದು ಸದಸ್ಯ ರಾಷ್ಟ್ರವು 5 ಸದಸ್ಯರನ್ನು ಇದಕ್ಕೆ ಕಳುಹಿಸಿಕೊಡುತ್ತದೆ. ಆದರೆ ಪ್ರತಿ ಸದಸ್ಯ ರಾಷ್ಟ್ರಕ್ಕೆ ಒಂದು ಮತದ ಹಕ್ಕು ಮಾತ್ರ ಇರುತ್ತದೆ. ಈ ಸಾಮಾನ್ಯ ಸಭೆ ತನ್ನ ಪ್ರಥಮ ಅಧಿವೇಶನದಲ್ಲಿಯೇ ಒಂದು ವರ್ಷದ ಅವಧಿಗೆ ಓರ್ವ ಅಧ್ಯಕ್ಷನನ್ನು ಆರಿಸುತ್ತದೆ. ಅದೇ ರೀತಿ 17 ಉಪಾಧ್ಯಕ್ಷರನ್ನು ಹಾಗೂ 7 ಸ್ಥಾಯಿ ಸಮಿತಿಗಳಿಗೆ ಏಳು ಮಂದಿ ಅಧ್ಯಕ್ಷರನ್ನೂ ಇಲ್ಲಿ ಆರಿಸಲಾಗುತ್ತದೆ. ಈ ಸಾಮಾನ್ಯ ಸಭೆಯ ಅಧಿವೇಶನ ಸಾಮಾನ್ಯವಾಗಿ ಸೆಪ್ಟಂಬರ್ ತಿಂಗಳಲ್ಲಿ ಆರಂಭಗೊಂಡು ಡಿಸೆಂಬರ್ ಮಧ್ಯ ಭಾಗದವರೆಗೆ ಜರಗುತ್ತದೆ. ಎಲ್ಲಾ ಹೆಚ್ಚಿನ ಪ್ರಮುಖ ನಿರ್ಧಾರಗಳಿಗೆ ಮೂರನೇ ಎರಡಂಶದಷ್ಟು ಹಾಜರಾದ ಸದಸ್ಯರ ಅನುಮೋದನೆ ಅವಶ್ಯಕ ಆಗಿರುತ್ತದೆ. ವಾರ್ಷಿಕ ಆಯವ್ಯಯ ಪಟ್ಟಿಗೆ ಈ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯಬೇಕಾಗುತ್ತದೆ. ಯಾವುದಾದರೂ ತುರ್ತು ವಿಷಯಗಳು ಚರ್ಚೆ ನಡೆಯಬೇಕಿದ್ದರೆ ವಿಶೇಷ ಅಧಿವೇಶನ



ವಿಶ್ವಸಂಸ್ಥೆಯ ಅಂಗಗಳು

**ನಿಮಗಿದು ತಿಳಿದಿರಲಿ :**

ವಿಶ್ವಸಂಸ್ಥೆಯಲ್ಲಿ ಚೈನೀಸ್, ಇಂಗ್ಲೀಷ್, ಫ್ರೆಂಚ್, ರಷ್ಯನ್, ಸ್ಪಾನಿಶ್ ಹಾಗೂ ಅರೇಬಿಕ್ ಭಾಷೆಗಳು ಆಡಳಿತ ಭಾಷೆಯಾಗಿ ಮಾನ್ಯತೆ ಪಡೆದಿವೆ.

@KTBS
NOT TO BE REPUBLISHED

ಕರೆಯಬಹುದಾಗಿದೆ. ಜಾಗತಿಕ ಸಂಸತ್ತಿನ ರೀತಿಯಲ್ಲಿ ವಿಶ್ವದ ಎಲ್ಲಾ ಪ್ರಮುಖ ವಿದ್ಯಮಾನಗಳ ಚರ್ಚೆಯಲ್ಲಿ ಇದು ಪ್ರಧಾನ ಪಾತ್ರ ವಹಿಸುತ್ತದೆ.

2) **ಭದ್ರತಾ ಸಮಿತಿ :** ಇದು ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿದ್ದು ಅತ್ಯಂತ ಪ್ರಭಾವಿ ಅಂಗವೆನಿಸಿದೆ. ಇದರಲ್ಲಿ 15 ಮಂದಿ ಸದಸ್ಯರಿದ್ದು, ಅವರ ಪೈಕಿ ಅಮೆರಿಕಾ ಸಂಯುಕ್ತ ಸಂಸ್ಥಾನ, ರಷ್ಯಾ, ಬ್ರಿಟನ್, ಫ್ರಾನ್ಸ್ ಹಾಗೂ ಚೈನಾ ಖಾಯಂ ಸದಸ್ಯತ್ವ ಹೊಂದಿದ ರಾಷ್ಟ್ರಗಳೆನಿಸಿವೆ. ಉಳಿದ 10 ಮಂದಿ ಹಂಗಾಮಿ ಸದಸ್ಯರನ್ನು 2 ವರ್ಷಗಳ ಅವಧಿಗೆ ಸಾಮಾನ್ಯ ಸಭೆ ಆರಿಸುತ್ತದೆ. ಇವರು ಪ್ರಪಂಚದ ವಿವಿಧ ಭೌಗೋಳಿಕ ಪ್ರದೇಶಗಳನ್ನು ಪ್ರತಿನಿಧಿಸುತ್ತಾರೆ. ಪ್ರತಿಯೊಂದು ಸದಸ್ಯರಿಗೂ ಒಂದು ಮತ ಚಲಾಯಿಸುವ ಹಕ್ಕು ಇದೆ. ಆದರೆ ಎಲ್ಲಾ ಖಾಯಂ ಸದಸ್ಯರ ಸಮ್ಮತಿ ಪ್ರತಿಯೊಂದು ಪ್ರಮುಖ ನಿರ್ಧಾರಕ್ಕೂ ಅವಶ್ಯಕವಾಗಿದೆ. ಭಾರತ ಕೂಡಾ ಇದರ ಖಾಯಂ ಪ್ರಾತಿನಿಧಿತ್ವಕ್ಕೆ ಯತ್ನಿಸುತ್ತಿದೆ.

ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕಾಗಿ ಭದ್ರತಾ ಸಮಿತಿ ಯತ್ನಿಸುತ್ತದೆ. ಅವಶ್ಯಕವಿದ್ದರೆ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯನ್ನು ಅಂತಾರಾಷ್ಟ್ರೀಯ ಶಾಂತಿ ಹಾಗೂ ಸುವ್ಯವಸ್ಥೆಗೆ ನಿಯೋಜಿಸುತ್ತದೆ. ಅಂತಾರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ಇದು ನೇಮಕ ಮಾಡುತ್ತದೆ ಹಾಗೂ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹೆಸರು ಸೂಚಿಸುತ್ತದೆ.

3) **ಆರ್ಥಿಕ ಹಾಗೂ ಸಾಮಾಜಿಕ ಸಮಿತಿ :** ಈ ಸಮಿತಿಯಲ್ಲಿ 54 ಮಂದಿ ಸದಸ್ಯರಿದ್ದಾರೆ. ಇವರ ಪೈಕಿ 18 ಮಂದಿ ಸದಸ್ಯರು ಪ್ರತಿ 3 ವರ್ಷಕ್ಕೊಮ್ಮೆ ಆರಿಸಲ್ಪಡುತ್ತಾರೆ. ತಮ್ಮ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸುತ್ತಾರೆ.

ಸಮಿತಿಯ ಮುಖ್ಯ ಕಾರ್ಯಗಳು :

i) ಅಂತಾರಾಷ್ಟ್ರೀಯ ವಲಯದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಹಾಗೂ ಇನ್ನಿತರ ಸಂಬಂಧಿತ ವಿಷಯಗಳ ಅಧ್ಯಯನ ಹಾಗೂ ವರದಿ ಮಾಡುವಿಕೆ.

ii) ನಿರಾಶ್ರಿತರ ಬಗ್ಗೆ, ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆ ಮುಂತಾದ ಹಲವಾರು ವಿಚಾರಗಳು ಈ ಸಮಿತಿಯ ಕಾರ್ಯವ್ಯಾಪ್ತಿಯೊಳಗೆ ಬರುತ್ತದೆ.

iii) ಮಾನವ ಹಕ್ಕುಗಳ ಬಗ್ಗೆ ಹಾಗೂ ಮೂಲಭೂತ ಸ್ವಾತಂತ್ರ್ಯಗಳ ಬಗೆಗೂ ಈ ಸಮಿತಿಯು ಶಿಫಾರಸ್ಸು ಮಾಡುತ್ತದೆ.

iv) ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು ಸಂಘಟಿಸುವುದು.

v) ವಿಶೇಷ ಪ್ರಾವೀಣ್ಯತೆಯ ಅಂಗ ಸಂಸ್ಥೆಗಳಾದ ಅಂತಾರಾಷ್ಟ್ರೀಯ ಕಾರ್ಮಿಕ ಸಂಘ (ಐ.ಎಲ್.ಒ), ಆಹಾರ ಮತ್ತು ಕೃಷಿ ಸಂಸ್ಥೆ (ಎಫ್.ಎ.ಒ), ಜಾಗತಿಕ ಆರೋಗ್ಯ ಸಂಸ್ಥೆ (ಡಬ್ಲ್ಯೂ ಹೆಚ್.ಒ) ಮುಂತಾದವುಗಳ ಕಾರ್ಯಗಳನ್ನು ಸಮನ್ವಯ ಮಾಡುವುದು. ಇವೆಲ್ಲಾ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಪ್ರಮುಖ ಸಂಸ್ಥೆಗಳು.

4) **ದತ್ತಿ ಸಮಿತಿ (ಟ್ರಸ್ಟಿಶಿಪ್ ಕೌನ್ಸಿಲ್) :** ಈ ಸಂಸ್ಥೆ ವಾಸ್ತವಿಕವಾಗಿ ಸಾಮಾನ್ಯ ಸಭೆಯ ಉಪ ಸಂಸ್ಥೆ ಅಥವಾ ಸಹಾಯಕ ಸಂಸ್ಥೆ ಎನಿಸಿ ಕಾರ್ಯವೆಸಗುತ್ತದೆ. ಟ್ರಸ್ಟ್ ಆಶ್ರಯಿತ ಪ್ರದೇಶಗಳ ಸಂಖ್ಯೆ ಕಡಿಮೆಯಾದುದರಿಂದ ಈ ಸಮಿತಿಯ ಕಾರ್ಯಕ್ಷೇತ್ರವೂ ಕಡಿಮೆಯಾಗುತ್ತಾ ಸಾಗಿದೆ. ಸ್ವತಂತ್ರ ರಾಜ್ಯದ ಮಟ್ಟಕ್ಕೆ ಏರದ ಪ್ರದೇಶಗಳ ಉಸ್ತುವಾರಿಯನ್ನು ಈ ಸಮಿತಿ ಹೊಂದಿದೆ. ಈಗ ಇದು ಅಸ್ತಿತ್ವದಲ್ಲಿ ಇಲ್ಲ, ಏಕೆಂದರೆ ಯಾವುದೇ ದತ್ತಿ ಉಳಿದಿಲ್ಲ.

NOT TO BE REPUBLISHED @KTBS

5) **ಅಂತಾರಾಷ್ಟ್ರೀಯ ನ್ಯಾಯಾಲಯ :** ಇದು ವಿಶ್ವಸಂಸ್ಥೆಯ ಒಂದು ಪ್ರಧಾನ ಅಂಗ ಸಂಸ್ಥೆ ಹಾಗೂ ಎಲ್ಲಾ ಸದಸ್ಯರಾಷ್ಟ್ರಗಳು ಈ ನ್ಯಾಯಾಲಯದ ಸನ್ನದಿಗೆ ತಮ್ಮ ಸಹಮತವನ್ನು ನೀಡಲು ಬದ್ಧರಾಗಿದ್ದಾರೆ. ಈ ನ್ಯಾಯಾಲಯದಲ್ಲಿ 15 ಮಂದಿ ನ್ಯಾಯಾಧೀಶರಿದ್ದು, ಇವರ ಅಧಿಕಾರದ ಅವಧಿ ಒಂಬತ್ತು ವರ್ಷಗಳು ಆಗಿದ್ದು ಇವರು ಮರು ಆಯ್ಕೆಗೆ ಅರ್ಹರಾಗಿರುತ್ತಾರೆ. ನೆದರ್‌ಲ್ಯಾಂಡಿನ ಹೇಗ್ ಎಂಬಲ್ಲಿ ಈ ನ್ಯಾಯಾಲಯ ಸ್ಥಾಪಿತಗೊಂಡಿದೆ. ಮೂರು ವರ್ಷಗಳ ಅವಧಿಗೆ ಓರ್ವ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಈ ನ್ಯಾಯಾಲಯದ ನ್ಯಾಯಾಧೀಶರೇ ಆರಿಸುತ್ತಾರೆ. ಬಹುಮತದ ಆಧಾರದಲ್ಲಿ ಇದರ ನಿರ್ಣಯಗಳು ಕೈಗೊಳ್ಳಲ್ಪಡುತ್ತವೆ. ನ್ಯಾಯ ತೀರ್ಪುಗಳ ಜತೆಗೇ ಕಾನೂನು ವಿಚಾರದಲ್ಲಿ ಇದು ಯೋಗ್ಯ ಸಲಹೆಗಳನ್ನು ನೀಡುತ್ತದೆ.

ನೈತಿಕ ಹಾಗೂ ವೈಚಾರಿಕ ನೆಲೆಗಟ್ಟಿನ ಮೇಲೆ ಈ ನ್ಯಾಯಾಲಯದ ನಿರ್ಣಯಗಳು ಮಹತ್ವ ಹೊಂದಿವೆ. ಆದರೆ ಈ ನ್ಯಾಯಾಲಯದ ತೀರ್ಪು ಕಡ್ಡಾಯವಾಗಿ ಯಾವ ದೇಶಕ್ಕೂ ಅನ್ವಯಿಸುವಂತಿಲ್ಲ. ಈ ಎಲ್ಲಾ ಇತಿಮಿತಿಗಳ ಮಧ್ಯೆಯೂ ಅಂತಾರಾಷ್ಟ್ರೀಯ ಶಾಂತಿ ಹಾಗೂ ಸುಭದ್ರತೆಗೆ ಅಂತಾರಾಷ್ಟ್ರೀಯ ನ್ಯಾಯಾಲಯ ತನ್ನದೇ ಆದ ಕೊಡುಗೆಯನ್ನು ನೀಡಿದೆ.

**ನಿಮಗಿದು ತಿಳಿದಿರಲಿ:**

ಬೆನಗಲ್ ನರಸಿಂಗ ರಾವ್ ಈ ಅಂತಾರಾಷ್ಟ್ರೀಯ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಮೊದಲ ಭಾರತೀಯ. ಇವರು ಕರ್ನಾಟಕದ ಮಂಗಳೂರಿನವರು.

© KTBS NOT TO BE REPUBLISHED

6) **ಸಚಿವಾಲಯ** : ಮಹಾಕಾರ್ಯದರ್ಶಿ ಹಾಗೂ ವಿಶ್ವಸಂಸ್ಥೆಯ ಸಿಬ್ಬಂದಿ ವರ್ಗ ಈ ಅಂಗ ಸಂಸ್ಥೆಗೆ ಸೇರಿದವರಾಗಿದ್ದಾರೆ. ಮಹಾಕಾರ್ಯದರ್ಶಿಯವರು ಈ ಕಾರ್ಯಾಂಗದ ಮುಖ್ಯಸ್ಥರು ಎನಿಸಿದ್ದಾರೆ. ಇವರನ್ನು ಭದ್ರತಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಸಾಮಾನ್ಯ ಸಭೆಯು 5 ವರ್ಷಗಳ ಅವಧಿಗೆ ಆರಿಸುತ್ತದೆ. ಇದರ ಪ್ರಧಾನ ಕಾರ್ಯಾಲಯವು ನ್ಯೂಯಾರ್ಕ್‌ನಲ್ಲಿದ್ದು, ಜಿನೇವಾ, ವಿಯೆನ್ನಾ ಹಾಗೂ ನೈರೋಬಿಗಳಲ್ಲಿ ಇದರ ಶಾಖೆಗಳಿವೆ. ದಿನನಿತ್ಯದ ಆಡಳಿತಾತ್ಮಕ ಕಾರ್ಯ ಯೋಜನೆ ಹಾಗೂ ಸಾಂಸ್ಥಿಕ ಕಾರ್ಯಗಳು ಈ ಸಚಿವಾಲಯದ ವ್ಯಾಪ್ತಿಯಲ್ಲಿ ಸೇರಿದೆ.

**ನಿಮಗಿದು ತಿಳಿದಿರಲಿ :**

**ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿಗಳು :**

| | | |
|---|---|---|
| 1. ಟ್ರಿಗ್ವೆ ಲೀ | (1946–1952) | ನಾರ್ವೆ |
| 2. ಢಾಗ್ ಹ್ಯಾಮರ್ ಶೀಲ್ಡ್ | (1953–1961 ) | ಸ್ವೀಡನ್. |
| 3. ಯು.ಥಾಂಟ್ | (1961–1971) | ಬರ್ಮಾ |
| 4. ಕರ್ಟ್ ವಾಲ್ಡ್ ಹೇಮ್ | (1972–1981) | ಆಸ್ಟ್ರಿಯಾ |
| 5. ಜೇವಿಯರ್ ಪೇರುಜ್ ಡೇ ಕುಯೆಲ್ಲಾರ್ | (1982–1991) | ಪೆರು |
| 6. ಭೌತ್ರೋಸ್ ಘಾಲಿ | (1992–1996) | ಈಜಿಪ್ಟ್ |
| 7. ಕೋಫೀ ಎ.ಅನ್ನಾನ್ | (1997–2006) | ಘಾನಾ |
| 8. ಬಾನ್–ಕಿ–ಮೂನ್ | (2007–2016) | ಕೊರಿಯಾ. |
| 9. ಆಂಟೋನಿಯೋ ಗುಟೆರಸ್ | (2016–ರಿಂದ) | ಪೋರ್ಚುಗಲ್. |

1. **ಶಾಂತಿಸ್ಥಾಪನೆಯ ಕಾರ್ಯಗಳು :** ವಿಶ್ವಸಂಸ್ಥೆ ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ. ಆದರೆ ಭದ್ರತಾ ಸಮಿತಿಯ ಖಾಯಂ ಸದಸ್ಯರ ಒಮ್ಮತದ ಕೊರತೆ ಹಾಗೂ ಜಾಗತಿಕ ವಿದ್ಯಮಾನಗಳ ಸಂಕೀರ್ಣತೆಯಿಂದಾಗಿ, ವಿಶ್ವಸಂಸ್ಥೆಯ ಸಾಧನೆಯು ಮಿಶ್ರ ರೂಪದಿಂದ ಕೂಡಿದೆ ಎನ್ನಬಹುದು. ಇದರ ಕಾರ್ಯಾಚರಣೆ ಬಹುತೇಕ ಯುದ್ಧ ಸ್ತಂಭನರೇಖೆಯ ವೀಕ್ಷಕರ ಅಥವಾ ಶಾಂತಿ ಪಡೆಗಳ ಮೂಲಕ ನಡೆಯುವಂತಹುದು. ಭಾರತ ವಿಶ್ವಶಾಂತಿಯ ಹಾಗೂ ಮಾನವ ಹಕ್ಕುಗಳ ರಕ್ಷಣೆಯ ಬಗೆಗಿನ ವಿಶ್ವಸಂಸ್ಥೆಯ ಕಾರ್ಯಚಟುವಟಿಕೆಗಳಲ್ಲಿ ಪೂರ್ತಿ ಸಹಕರಿಸುತ್ತದೆ.

ಸುಯೆಜ್‌ಕಾಲುವೆ ಬಿಕ್ಕಟ್ಟು, ಇರಾನ್ ಸಂಘರ್ಷ, ಇಂಡೋನೇಷ್ಯಾ, ಕಾಶ್ಮೀರ, ಪ್ಯಾಲೆಸ್ಟೈನ್, ಕೊರಿಯಾ, ಹಂಗೇರಿ, ಕಾಂಗೋ, ಸೈಪ್ರೆಸ್, ಅರಬ್–ಇಸ್ರೇಲ್, ನಮೀಬಿಯಾ, ಅಫಘಾನಿಸ್ತಾನ ಇತ್ಯಾದಿ ವಿವಾದಗಳ ಪರಿಹಾರಕ್ಕಾಗಿ ವಿಶ್ವಸಂಸ್ಥೆ ಶ್ರಮಿಸಿದೆ. ಅಣ್ವಸ್ತ್ರ ಹಾಗೂ ಸಾಂಪ್ರದಾಯಿಕ ನಿಶ್ಶಸ್ತ್ರೀಕರಣದ ನಿಟ್ಟಿನಲ್ಲಿಯೂ ವಿಶ್ವಸಂಸ್ಥೆ ನಿರಂತರ ಪ್ರಯತ್ನ ಮಾಡುತ್ತಿದೆ. ಇದೀಗ ಶೀತಲ ಸಮರದ ಕಾಲಘಟ್ಟ ಮುಗಿದಿದ್ದು, ವಿಶ್ವ ಶಾಂತಿಯ ನೆಲೆಯಲ್ಲಿ ವಿಶ್ವ ಸಂಸ್ಥೆಯ ಪ್ರಭಾವೀ ಕಾರ್ಯಕ್ಕೆ ಉತ್ತಮ ವಲಯ ನಿರ್ಮಾಣಗೊಂಡಿದೆ.

2. **ಆರ್ಥಿಕ ಹಾಗೂ ಹಣಕಾಸಿನ ಸಾಧನೆ :** ವಿಶ್ವಸಂಸ್ಥೆಯ ಸನ್ನದಿನ ಪ್ರಸ್ತಾವನೆಯಲ್ಲಿ ಈ ಸಂಸ್ಥೆ 'ಸಾಮಾಜಿಕ ಪ್ರಗತಿ ಹಾಗೂ ಉತ್ತಮ ಜೀವನ ಮಟ್ಟಕ್ಕೆ ಯತ್ನಿಸಬೇಕು' ಎಂದು ಘೋಷಿಸಲಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಮೇಲ್ವಿಚಾರಣೆಯಲ್ಲಿ ಈ ಕಾರ್ಯ ಸಾಧಿಸಬೇಕಾಗಿದೆ. ಆರ್ಥಿಕ ಮತ್ತು ಹಣಕಾಸಿನ ಕ್ಷೇತ್ರದಲ್ಲಿ ('General Agreement on Tariff and Trade') ಸುಂಕ ಮತ್ತು ವ್ಯಾಪಾರದ ಸಾಮಾನ್ಯ ಒಪ್ಪಂದ ಆಗಿರುತ್ತದೆ. ಉದಾಹರಣೆ : ವಿಶ್ವಸಂಸ್ಥೆಯ ಪ್ರಗತಿ ಯೋಜನೆ (ದಿ ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್) ಕೂಡಾ ಈ ಕ್ಷೇತ್ರದ ಒಂದು ಉಲ್ಲೇಖನಾರ್ಹ ಸಾಧನೆ. ವಿಶ್ವಬ್ಯಾಂಕ್, ಐ.ಎಮ್.ಎಫ್ ನಂತಹ ವಿತ್ತೀಯ ಸಂಸ್ಥೆಗಳು ವಿಶ್ವಸಂಸ್ಥೆಯ ಸಹಯೋಗದೊಂದಿಗೆ ಉತ್ತಮ ಸಾಧನೆ ಮಾಡುತ್ತಿವೆ.

3. **ಸಾಮಾಜಿಕ ಸಾಧನೆಗಳು :** ವಿಶ್ವ ಆರೋಗ್ಯ ಸಂಸ್ಥೆ, ಯುನೆಸ್ಕೋ, ಯುನಿಸೆಫ್, ವಿಶ್ವ ನಿರಾಶ್ರಿತರ ಆಯೋಗ, ಮುಂತಾದುವುಗಳು ವಿಶ್ವಸಂಸ್ಥೆಯ ಸಾಮಾಜಿಕ ಕಳಕಳಿಯ ಸೇವಾ ಸಂಸ್ಥೆಗಳು. 1948ರ ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ ಕೂಡಾ ಒಂದು ಉತ್ತಮ ಸಾಧನೆ ಎನಿಸಿದೆ. ವರ್ಣಭೇದ ನೀತಿಯನ್ನು ಅಳಿಸಿ ಹಾಕುವಲ್ಲಿ ಸಾಮ್ರಾಜ್ಯಶಾಹಿತ್ವ, ವಸಾಹತುಶಾಹಿತ್ವ ಇತ್ಯಾದಿಗಳನ್ನು ಇಲ್ಲವಾಗಿಸುವಲ್ಲಿಯೂ ವಿಶ್ವಸಂಸ್ಥೆಯ ಪಾತ್ರ ಗಮನಾರ್ಹ.

4. **ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘ ಸಂಸ್ಥೆಗಳು**

ಎ) **ಆಹಾರ ಮತ್ತು ಕೃಷಿ ಸಂಸ್ಥೆ - FAO - (Food and Agricultural Organisation):** ಜಗತ್ತಿನಾದ್ಯಂತ ಬಡತನ, ಹಸಿವು ಹಾಗೂ ಅಪೌಷ್ಟಿಕತೆಯ ವಿರುದ್ಧ ಹೋರಾಡಲು ಆಹಾರ ಮತ್ತು ಕೃಷಿ ಸಂಸ್ಥೆಯೊಂದು 1945ರಲ್ಲಿ ಉದಯವಾಯಿತು. ಇದರ ಪ್ರಧಾನ 3 ಒಳ

NOT TO BE REPUBLISHED @KTBS

ವಿಭಾಗಗಳೆಂದರೆ: i) ಸಮ್ಮೇಳನ, ii) ಸಮಿತಿ ಹಾಗೂ iii) ಮಹಾನಿರ್ದೇಶಕರು ಈ ಸಂಸ್ಥೆಯ ಪ್ರಮುಖ ಉದ್ದೇಶಗಳೆಂದರೆ : ಎ) ಕೃಷಿ ಕ್ಷೇತ್ರದ ಅಭಿವೃದ್ಧಿ (ಬಿ) ಪೌಷ್ಟಿಕ ಆಹಾರ ಒದಗಿಸುವಿಕೆ (ಸಿ) ಹಸಿವೆಯಿಂದ ಜಾಗತಿಕ ಜನಸಮುದಾಯದ ವಿಮುಕ್ತಿ ಹಾಗೂ (ಡಿ) ಗ್ರಾಮಾಂತರ ಪ್ರದೇಶಗಳ ಜನರ ಜೀವನ ಮಟ್ಟದ ಸುಧಾರಣೆ. ಈ ಸಂಸ್ಥೆಯ ಪ್ರಧಾನ ಕಛೇರಿ ರೋಮ್‌ನಲ್ಲಿದೆ.

ಬಿ) **ವಿಶ್ವ ಆರೋಗ್ಯ ಸಂಸ್ಥೆ - WHO - (World Health Organisation)** : ಪ್ರಪಂಚದ ಮಾನವರ ಆರೋಗ್ಯ ಸುಧಾರಿಸಲು 1948ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಗೊಂಡಿತು. ಈ ವಿಶ್ವ ಆರೋಗ್ಯ ಸಂಸ್ಥೆಯು ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ಮುಂತಾದ ರೋಗಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲು ಯತ್ನಿಸುತ್ತಿದೆ. ಅದೇ ರೀತಿ ಏಡ್ಸ್, ಕ್ಯಾನ್ಸರ್‌ನಂತಹ ಭೀಕರ ರೋಗಗಳಿಂದ ಪ್ರಪಂಚವನ್ನು ಮುಕ್ತಿಗೊಳಿಸಲು ಪ್ರಯತ್ನಿಸುತ್ತದೆ. ಸಿಡುಬು ರೋಗವನ್ನು ಸಮಗ್ರವಾಗಿ ನಿವಾರಿಸುವಲ್ಲಿ ಈ ಸಂಸ್ಥೆ ಯಶಸ್ಸು ಕಂಡಿದೆ. ಜನಸಂಖ್ಯಾ ಸ್ಫೋಟ, ಪರಿಸರ ಸಂರಕ್ಷಣೆ, ಹಸಿವು, ಪೌಷ್ಟಿಕತೆಯ ಕೊರತೆ ಮುಂತಾದ ವಿಷಯಗಳು ಈ ಸಂಸ್ಥೆಯ ಕಾರ್ಯ ಸೂಚಿಯಲ್ಲಿವೆ. ಈ ಎಲ್ಲಾ ಕ್ಷೇತ್ರದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಸೇವೆ ಉಲ್ಲೇಖನಾರ್ಹ ಎನಿಸಿದೆ. ಇದರ ಮುಖ್ಯ ಕಚೇರಿ ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿದೆ.

ಸಿ) **ಯುನೆಸ್ಕೋ (United Nations Educational, Scientific and Cultural Organisation)** : ಇದು 1946ರಲ್ಲಿ ಸ್ಥಾಪಿತಗೊಂಡಿದ್ದು, ಇದರ ಮುಖ್ಯ ಕೇಂದ್ರ ಪ್ಯಾರಿಸ್‌ನಲ್ಲಿದೆ. ಇದು ವಿಶ್ವದಾದ್ಯಂತ ವಿಜ್ಞಾನ, ಶಿಕ್ಷಣ, ಸಂಸ್ಕೃತಿ ಮುಂತಾದುವುಗಳನ್ನು ಪ್ರೋತ್ಸಾಹಿಸಲು ಉದ್ದೇಶಿಸಿರುವ ಪ್ರಾವೀಣ್ಯತೆಯ ಸಂಸ್ಥೆ, ತಾಂತ್ರಿಕ ಶಿಕ್ಷಣ, ಮಾಧ್ಯಮ ತಂತ್ರಗಾರಿಕೆ, ರಚನಾತ್ಮಕ ಚಿಂತನೆ, ಸಾಂಸ್ಕೃತಿಕ ವಿಚಾರಗಳು ಹಾಗೂ ಪರಿಸರ ವಿಜ್ಞಾನದ ಬಗೆಗೆ ಇದು ಕಾರ್ಯೋನ್ಮುಖವಾಗುತ್ತದೆ. ಪ್ರಪಂಚದಾದ್ಯಂತ ಶಿಕ್ಷಣ ಹಾಗೂ ಜ್ಞಾನ ಪ್ರಸಾರದ ನಿಟ್ಟಿನಲ್ಲಿ ಇದು ಸರ್ಕಾರಗಳಿಗೆ ಹಾಗೂ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯ ನೀಡುತ್ತದೆ.

**ನೀವೇ ಮಾಡಿ :**

ಕರ್ನಾಟಕದಲ್ಲಿ ಯುನೆಸ್ಕೋದವರು ಗುರುತಿಸಿರುವ ಐತಿಹಾಸಿಕ ಸ್ಮಾರಕಗಳನ್ನು ಪಟ್ಟಿ ಮಾಡಿ.

ಡಿ) **ಯುನಿಸೆಫ್ (United Nations Children's Fund)** : ಈ ಸಂಸ್ಥೆ ದ್ವಿತೀಯ ಮಹಾಯುದ್ಧದ ಬಳಿಕ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ 1946ರಲ್ಲಿ ಸ್ಥಾಪನೆಗೊಂಡಿತು. ಮುಂದೆ 1957 ರಲ್ಲಿ ಇದೊಂದು ಶಾಶ್ವತ ಸಂಸ್ಥೆ ಎನಿಸಿತು. ಈ ಸಂಸ್ಥೆಯಲ್ಲಿ 30 ಮಂದಿ ಸದಸ್ಯರಿದ್ದಾರೆ. ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿಗೆ ಪೂರಕವಾದ ಪರಿಸರವನ್ನು ಒದಗಿಸುವುದೇ ಈ ಸಂಸ್ಥೆಯ ಮೂಲ ಉದ್ದೇಶವಾಗಿದೆ. ಈ ಉದ್ದೇಶ ಪೂರೈಕೆಗಾಗಿ ಅವಶ್ಯಕತೆಯಿರುವ ಎಲ್ಲಾ ರಾಷ್ಟ್ರಗಳಿಗೆ ಇದು ಸಹಾಯ ನೀಡುತ್ತದೆ. 1965 ರಲ್ಲಿ ಯುನಿಸೆಫ್ ನೊಬೆಲ್ ಬಹುಮಾನಗಳಿಸಿದೆ ಶುಭಾಶಯ ಪತ್ರಗಳ ಮಾರಾಟದ ಮೂಲಕ ಈ ಸಂಸ್ಥೆ ಗಳಿಸುವ ಹಣವನ್ನು ಮಕ್ಕಳ ಯೋಗಕ್ಷೇಮಕ್ಕಾಗಿ ವಿನಿಯೋಗಿಸುತ್ತಿದೆ. ಹೀಗೆ ಈ ಸಂಸ್ಥೆ ಮಾನವೀಯ ದೃಷ್ಟಿಕೋನ ಹೊಂದಿದ ಸಂಸ್ಥೆ ಎನಿಸಿದೆ.

© KTBS NOT TO BE REPUBLISHED

ಇ) **ಐ.ಎಮ್.ಎಫ್ (International Monetary Fund) :** 1945ರಲ್ಲಿ ಆರಂಭಗೊಂಡ ಈ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ 1947ರ ಬಳಿಕ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಿಸಿತು. ಇದರ ಮುಖ್ಯ ಕಛೇರಿ ಅಮೆರಿಕಾದ ವಾಷಿಂಗ್‌ಟನ್‌ನಲ್ಲಿದೆ. ಇದು ಅಂತಾರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುತ್ತದೆ. ವಿಶ್ವ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ, ಆರ್ಥಿಕ ಸ್ಥಿರತೆ ಹಾಗೂ ಉತ್ತಮ ವಿದೇಶೀ ಪಾವತಿ ಸಮತೋಲನವನ್ನು ಕಾಯ್ದುಕೊಳ್ಳಲು ಇದು ಸಹಕರಿಸುತ್ತದೆ. ಇದರಲ್ಲಿ ಆಡಳಿತ ಮಂಡಳಿ, ಕಾರ್ಯನಿರ್ವಹಣಾ ನಿರ್ದೇಶಕ ಮಂಡಳಿ ಹಾಗೂ ಆಡಳಿತ ನಿರ್ದೇಶಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇದರ ಕಾರ್ಯ ನಿರ್ವಹಣೆಯ ಗುಣಮಟ್ಟ ಹಾಗೂ ಪಾರದರ್ಶಕತೆ ಸಾಕಷ್ಟು ಮನ್ನಣೆಯನ್ನು ಪಡೆದಿದೆ. ವಿವಿಧ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಕೇಂದ್ರ ಬ್ಯಾಂಕು ಎಂಬುದಾಗಿ ಇದನ್ನು ಕರೆಯಬಹುದಾಗಿದೆ. ಆರ್ಥಿಕವಾಗಿ ಮುಂದುವರಿದ ಹಾಗೂ ಹಿಂದುಳಿದ ರಾಷ್ಟ್ರಗಳ ಪರಸ್ಪರ ಸಂಬಂಧವನ್ನು ಬೆಸೆಯುವಲ್ಲಿ ಇದು ಪೂರಕ ಪಾತ್ರ ವಹಿಸುತ್ತದೆ.

ಎಫ್) **ಐ.ಬಿ.ಆರ್.ಡಿ (International Bank for Reconstruction and Development) :** ವಿಶ್ವ ಬ್ಯಾಂಕ್ ಎಂದೂ ಕರೆಯಲ್ಪಡುತ್ತಿರುವ ಈ ಸಂಸ್ಥೆ 1947ರಲ್ಲಿ ಪ್ರಾರಂಭವಾಯಿತು. ಇದರ ಮುಖ್ಯ ಕಚೇರಿ ವಾಷಿಂಗ್‌ಟನ್‌ನಲ್ಲಿದೆ. ದ್ವಿತೀಯ ಮಹಾಯುದ್ಧದ ಬಳಿಕ ಆರ್ಥಿಕ ಪುನಶ್ಚೇತನಕ್ಕಾಗಿ ಈ ಬ್ಯಾಂಕ್ ಸ್ಥಾಪನೆಗೊಂಡಿತು. ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ ಅಭಿವೃದ್ಧಿಗಾಗಿ ಅವಶ್ಯಕವಿರುವ ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ಈ ಬ್ಯಾಂಕ್ ಅಗಾಧ ಮೊತ್ತದ ಸಾಲ ನೀಡುತ್ತದೆ. ಇದು ವಿಶ್ವ ವ್ಯಾಪಾರ ಹಾಗೂ ವಿದೇಶೀ ವಿನಿಮಯ ಪಾವತಿ ಸಮತೋಲನಕ್ಕೆ ಸಹಾಯ ಮಾಡುತ್ತದೆ. ಎಲ್ಲಾ ಪ್ರಗತಿಪರ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಹೆಚ್ಚಿನ ಸಹಾಯ ಈ ಬ್ಯಾಂಕ್ ನೀಡುತ್ತದೆ. ಇದರಲ್ಲಿ ಆಡಳಿತ ಮಂಡಳಿ, ಕಾರ್ಯಕಾರಿ ಮಂಡಳಿ ಹಾಗೂ ಅಧ್ಯಕ್ಷರು ಕಾರ್ಯನಿರ್ವಹಿಸುತ್ತಾರೆ. ಇದರ ಕೈಕೆಳಗೆ ಎರಡು ಸಹಕಾರೀ ಅಂಗಗಳಿವೆ. ಅವುಗಳೆಂದರೆ (ಎ) ಅಂತಾರಾಷ್ಟ್ರೀಯ ಪ್ರಗತಿ ಕೂಟ ಮತ್ತು (ಬಿ) ಅಂತಾರಾಷ್ಟ್ರೀಯ ಹಣಕಾಸು ನಿಗಮ.

ಜಿ) **ಅಂತರರಾಷ್ಟ್ರಿಯ ಕಾರ್ಮಿಕ ಸಂಘ (International Labour Organisation) :** ಈ ಸಂಸ್ಥೆಯ ಹೆಸರೇ ಸೂಚಿಸುವಂತೆ ಇದು ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಆರಂಭಗೊಂಡ ಸಂಸ್ಥೆಯಾಗಿದೆ. ಇದರ ಮುಖ್ಯ ಕಾರ್ಯಾಲಯ ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿದೆ. ಪ್ರತಿಯೊಂದು ಸದಸ್ಯ ರಾಷ್ಟ್ರವು ಇಬ್ಬರು ಪ್ರತಿನಿಧಿಗಳನ್ನು ಈ ಸಂಸ್ಥೆಗೆ ಕಳುಹಿಸುತ್ತಿದ್ದು, ಅದರಲ್ಲಿ ಒಬ್ಬರು ಕಾರ್ಮಿಕ ಪ್ರತಿನಿಧಿ ಹಾಗೂ ಇನ್ನೊಬ್ಬರು ಆಡಳಿತ ನಡೆಸುವವರ ಪ್ರತಿನಿಧಿ ಆಗಿರುತ್ತಾರೆ. ಕಾರ್ಮಿಕ ವರ್ಗದ ಸಾಮಾಜಿಕ ಭದ್ರತೆ, ಆರೋಗ್ಯ ಸಂರಕ್ಷಣೆ, ಉತ್ತಮ ಜೀವನ ಮಟ್ಟ ಇತ್ಯಾದಿ ವಿಚಾರಗಳು ಈ ಸಂಸ್ಥೆಯ ಕಾರ್ಯ ವ್ಯಾಪ್ತಿಗೆ ಸೇರುತ್ತದೆ. ಮಹಿಳಾ ಕಾರ್ಮಿಕರ ಹೆರಿಗೆ ಸೌಲಭ್ಯ, ಕನಿಷ್ಠ ವೇತನ ಜಾರಿ, ವಸತಿ ನಿರ್ಮಾಣ, ಇತ್ಯಾದಿ ವಿಚಾರಗಳು ಈ ಸಂಸ್ಥೆಯ ಕಾರ್ಯ ಪರಿಧಿಯೊಳಗೆ ಸೇರಿವೆ. ಈ ಸಂಸ್ಥೆಯ ನಿರ್ಣಯಗಳು ಕೇವಲ ಸಲಹೆಗಳ ರೂಪದಲ್ಲಿದ್ದರೂ, ಸದಸ್ಯ ರಾಷ್ಟ್ರಗಳು ಅವುಗಳಿಗೆ ಮನ್ನಣೆ ನೀಡುತ್ತವೆ. ಇದರ ಸಾಮಾನ್ಯ ಸಮ್ಮೇಳನ ಕಾರ್ಮಿಕ ವರ್ಗದ ಜಾಗತಿಕ ಸಂಸತ್ತಿನಂತೆಯೇ ಇದ್ದು ಅವರ ಹಿತಾಸಕ್ತಿಗಳನ್ನು ರಕ್ಷಿಸಲು ಯತ್ನಿಸುತ್ತದೆ.

© KTBS NOT TO BE REPUBLISHED

ಎಚ್) **ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ :** ಈ ಸಂಸ್ಥೆ ಪ್ರಧಾನವಾಗಿ ಜಾಗತಿಕ ಮಟ್ಟದ ವ್ಯಾಪಾರ ಮತ್ತು ವಾಣಿಜ್ಯ ಸಂಗತಿಗಳ ಪ್ರಗತಿಗೆ ಯತ್ನಿಸುತ್ತದೆ. ಅಂತಾರಾಷ್ಟ್ರೀಯ ವ್ಯಾಪಾರದ ಬೆಳವಣಿಗೆಗೆ ಬೇಕಾದ ತಾಂತ್ರಿಕ ಸಹಕಾರ ಈ ಸಂಸ್ಥೆ ನೀಡುತ್ತದೆ. ಜಾಗತಿಕ ಮಟ್ಟದಲ್ಲಿ ಯಾವುದೇ ತೆರನಾದ ಧೋರಣಾತ್ಮಕ ತೊಂದರೆಗಳನ್ನು ಇದು ನಿವಾರಿಸಿ, ತನ್ಮೂಲಕ ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ವಾಣಿಜ್ಯದ ಬೆಳವಣಿಗೆಗೆ ಇದು ಸಹಕರಿಸುತ್ತದೆ. ಹೀಗೆ ವಿಶ್ವ ಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಇದು ಕಾರ್ಯ ನಡೆಸುತ್ತದೆ.

ಐ) **ವಿಶ್ವ ವ್ಯಾಪಾರ ಸಂಘ (World Trade Organisation)** : ಈ ಸಂಸ್ಥೆ 1995 ಜನವರಿ 1 ರಂದು ಹುಟ್ಟಿಕೊಂಡಿತು. ಇದರ ಎಲ್ಲಾ ಸದಸ್ಯ ರಾಷ್ಟ್ರಗಳು 'ಸಾಮಾನ್ಯ ವ್ಯಾಪಾರ ಹಾಗೂ ಸುಂಕ ಒಪ್ಪಂದ' (ಗ್ಯಾಟ್)ಕ್ಕೆ ಒಪ್ಪಿಗೆ ಸೂಚಿಸಿದವು. ಅಂತಾರಾಷ್ಟ್ರೀಯ ಮಟ್ಟದ ವಾಣಿಜ್ಯ ಹಾಗೂ ವ್ಯಾಪಾರದ ತೊಡಕುಗಳ ನಿವಾರಣೆಗೆ ಇದು ಯತ್ನಿಸುತ್ತದೆ. ವಿಶ್ವ ಬ್ಯಾಂಕಿನೊಂದಿಗೆ ಇದು ಅಂತಾರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳ ಧೋರಣೆಗಳನ್ನು ರೂಪಿಸುವಲ್ಲಿ ಸಹಕರಿಸುತ್ತದೆ. ಮುಕ್ತ ವಾಣಿಜ್ಯ ಧೋರಣೆಯಿಂದ ಪ್ರವರ್ಧಮಾನದೆಡೆಗೆ ಸಾಗುವ ರಾಷ್ಟ್ರಗಳು ಕೆಲವೊಂದು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಐ.ಎಮ್.ಎಫ್ ಹಾಗೂ ಐ.ಬಿ.ಆರ್.ಡಿ. ಸಂಸ್ಥೆಗಳೊಂದಿಗೆ ಇದು ತೃತೀಯ ಆರ್ಥಿಕ ಆಧಾರ ಸ್ತಂಭ ಎಂದು ಕರೆಯಲ್ಪಡುತ್ತದೆ.

**ಪ್ರಾದೇಶಿಕ ಸಹಕಾರ** : ಪ್ರಚಲಿತ ಜಗತ್ತಿನಲ್ಲಿ ಹಲವಾರು ಪ್ರಾದೇಶಿಕ ಸಂಸ್ಥೆಗಳ ಇರುವಿಕೆಯನ್ನು ನಾವು ಗಮನಿಸಬಹುದಾಗಿದೆ. ಇವುಗಳು ಸದಸ್ಯ ರಾಷ್ಟ್ರಗಳ ಪರಸ್ಪರ ಸಹಕಾರ ಹಾಗೂ ತಿಳುವಳಿಕೆಯನ್ನು ಬಲಪಡಿಸುತ್ತವೆ. ಇಂತಹ ಪ್ರಾದೇಶಿಕ ಸಂಸ್ಥೆಗಳಲ್ಲಿ ಈ ಕೆಳಗಿನವುಗಳು ಪ್ರಾಮುಖ್ಯವಾಗಿದೆ.

©KTBS NOT TO BE REPUBLISHED

1) **ಕಾಮನ್‌ವೆಲ್ತ್ ರಾಷ್ಟ್ರ ಸಂಘ (Commonwealth of Nations)** :– ಇದನ್ನು ಹಿಂದೆ "ಬ್ರಿಟಿಷ್ ಕಾಮನ್‌ವೆಲ್ತ್ ಆಫ್ ನೇಷನ್ಸ್" ಎಂದು ಕರೆಯುತ್ತಿದ್ದು, ಆ ಬಳಿಕ 'ಬ್ರಿಟಿಷ್' ಎಂಬ ಶಬ್ದವನ್ನು ತೆಗೆಯಲಾಯಿತು. ಈ ಸಂಸ್ಥೆ 1926ರಲ್ಲಿ ಸ್ಥಾಪನೆಗೊಂಡಿದ್ದು, ಮುಂದೆ ಭಾರತವೂ ಸೇರಿ ಸ್ವಾತಂತ್ರ್ಯಗಳಿಸಿದ ಹಲವಾರು ರಾಷ್ಟ್ರಗಳು ಇದರ ಸದಸ್ಯತ್ವವನ್ನು ಸ್ವಇಚ್ಛೆಯಿಂದ ಪಡೆದುಕೊಂಡವು. ಇದಕ್ಕೆ ಸಾಂಕೇತಿಕವಾಗಿ ಬ್ರಿಟನ್ನಿನ ದೊರೆಯ ಹಿರಿತನವಿದೆ. ಪ್ರಸಕ್ತ ಈ ಕಾಮನ್‌ವೆಲ್ತ್ ಸಂಸ್ಥೆಯಲ್ಲಿ 54 ಸದಸ್ಯ ರಾಷ್ಟ್ರಗಳಿವೆ. ಬ್ರಿಟನ್ನಿನ ಲಂಡನ್‌ನಲ್ಲಿ ಇದರ ಕೇಂದ್ರ ಕಚೇರಿಯಿದೆ. ಇದರ ಕಾರ್ಯಕಲಾಪಗಳಲ್ಲಿ ಸದಸ್ಯ ರಾಷ್ಟ್ರಗಳ ಪ್ರಧಾನ ಮಂತ್ರಿಗಳು, ಅರ್ಥ ಸಚಿವರು, ಹಾಗೂ ವಿದೇಶಾಂಗ ಮಂತ್ರಿಗಳು ಭಾಗವಹಿಸುತ್ತಾರೆ. ಪ್ರಜಾತಂತ್ರವನ್ನು ಎತ್ತಿ ಹಿಡಿಯುವುದು, ಸ್ವಾತಂತ್ರ್ಯದ ಸಂರಕ್ಷಣೆ, ಬಡತನ ನಿರ್ಮೂಲನೆ, ವಿಶ್ವಶಾಂತಿ ನೆಲೆಗೊಳಿಸುವಿಕೆ, ಕ್ರೀಡೆ, ವಿಜ್ಞಾನ, ಹಾಗೂ ಕಲೆಯ ಬೆಳವಣಿಗೆಗೆ ಹಾಗೂ ಆ ಬಗೆಗೆ ಸಂಬಂಧಗಳ ವೃದ್ಧಿ– ಇವು ಈ ಸಂಸ್ಥೆಯ ಪ್ರಮುಖ ಉದ್ದೇಶಗಳಾಗಿವೆ. ಪರಸ್ಪರ ಸದಸ್ಯರಾಷ್ಟ್ರಗಳ ಮೈತ್ರಿಯನ್ನು ಈ ಸಂಸ್ಥೆ ಬಲಪಡಿಸುತ್ತದೆ.

2) **'ಸಾರ್ಕ್' (South Asian Association for Regional co-operation)** : ಈ ಸಂಸ್ಥೆ 1985ರಲ್ಲಿ ಸ್ಥಾಪನೆಗೊಂಡಿದ್ದು, ಇದೀಗ ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ,

ಪಾಕಿಸ್ತಾನ, ಮಾಲ್‌ಡೀವ್ಸ್, ಭೂತಾನ್ ಹಾಗೂ ಅಫಘಾನಿಸ್ತಾನ – ಈ 8 ರಾಷ್ಟ್ರಗಳು ಇದರ ಸದಸ್ಯತ್ವ ಹೊಂದಿವೆ. ಆರ್ಥಿಕ ಸಂಬಂಧಗಳ ವೃದ್ಧಿ, ಸಾಮಾಜಿಕ ಪ್ರಗತಿ ಹಾಗೂ ಸಾಂಸ್ಕೃತಿಕ ಬೆಳವಣಿಗೆಯನ್ನು ಪರಸ್ಪರ ಸಹಕಾರದೊಂದಿಗೆ ಸಾಧಿಸುವಿಕೆ ಈ ಸಂಸ್ಥೆಯ ಮೂಲ ಉದ್ದೇಶ. ಈ ಗುರಿ ಸಾಧನೆಗಾಗಿ ಹಲವಾರು ತಾಂತ್ರಿಕ ಸಮಿತಿಗಳು, ಕಾರ್ಯಾಚರಣೆ ಪಡೆಗಳು ಹಾಗೂ ಸ್ಥಾಯಿ ಸಮಿತಿಗಳು ರಚನೆಗೊಂಡಿವೆ. ಆದರೆ ಸದಸ್ಯ ರಾಷ್ಟ್ರಗಳ ಪರಸ್ಪರ ಅಪನಂಬಿಕೆ, ವಿವಾದಗಳು ಈ ಸಂಸ್ಥೆಯ ಪ್ರಗತಿಗೆ ತೊಡಕಾಗಿವೆ. 'ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲೇ ಇರಬೇಕು' ಎಂಬ ಸೂತ್ರವೂ ಈ ಸಂಸ್ಥೆಯ ಪ್ರಗತಿಗೆ ಒಂದು ತೊಡಕಾಗಿ ಪರಿಣಮಿಸಿದೆ. ತಮ್ಮ ತಮ್ಮೊಳಗಿನ ವಿವಾದಗಳೇ ಈ ಸದಸ್ಯರಾಷ್ಟ್ರಗಳ ಮಧ್ಯೆ ಸಾಕಷ್ಟು ಇವೆ. ಆದರೂ ನಿಯತಕಾಲಿಕ ಸಮಾವೇಶಗಳು ಪರಸ್ಪರ ಶಾಂತಿಯುತ ಪರಿಹಾರಕ್ಕೆ ಅನುವು ಮಾಡಿಕೊಡುತ್ತದೆ. ವಿಜ್ಞಾನ, ತಾಂತ್ರಿಕತೆ, ಕೃಷಿ ಮುಂತಾದ ವಿಷಯಗಳ ಬಗ್ಗೆ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳ ಕಮ್ಮಟಗಳು, ತರಬೇತಿ ಕಾರ್ಯಾಗಾರಗಳು ಜಂಟಿಯಾಗಿ ನಡೆಯುತ್ತವೆ. 'ಸಾರ್ಕ್'ನ ಚಟುವಟಿಕೆಗಳಲ್ಲಿ ಭಾರತವು ಸಕ್ರಿಯ ಪಾತ್ರ ವಹಿಸುತ್ತಿದೆ. ಇದರ ಮುಖ್ಯ ಕಛೇರಿ ನೇಪಾಳದ ಕಠ್ಮಂಡುವಿನಲ್ಲಿದೆ.

3) **ಯುರೋಪಿಯನ್ ಯೂನಿಯನ್ (EU) :** ಈ ಸಂಸ್ಥೆ 27 ಯುರೋಪಿನ ಸದಸ್ಯ ರಾಷ್ಟ್ರಗಳನ್ನು ಒಳಗೊಂಡ ಸಂಸ್ಥೆಯಾಗಿದೆ. ಮ್ಯಾಸ್ಟ್ರಿಚ್ ಎಂಬಲ್ಲಿ ಯುರೋಪಿಯನ್ ಯೂನಿಯನ್ ಒಪ್ಪಂದಕ್ಕೆ ಅನುಗುಣವಾಗಿ 1992ರಲ್ಲಿ ಇದು ಉದಯವಾಯಿತು. ಇದು ಸದಸ್ಯ ರಾಷ್ಟ್ರಗಳ ಮಧ್ಯೆ ಸಮಾನ ಏಕ ಮಾರುಕಟ್ಟೆ, ಒಂದೇ ಚಲಾವಣೆಯ ಕರೆನ್ಸಿ, ಸಮಾನ ಕೃಷಿ ಹಾಗೂ ವ್ಯಾಪಾರ ಧೋರಣೆ ಇತ್ಯಾದಿಗಳಿಗೆ ಅವಕಾಶ ಮಾಡಿಕೊಡುತ್ತದೆ. ಇದರಲ್ಲಿನ ಮುಖ್ಯ ಅಂಗ ಸಂಸ್ಥೆಗಳೆಂದರೆ (1) ಸಮಿತಿ, (2) ಆಯೋಗ, (3) ಯುರೋಪಿನ ಸಂಸತ್ತು, ಹಾಗೂ (4) ಯುರೋಪಿನ ನ್ಯಾಯಾಲಯ. ಈ ಯುರೋಪಿಯನ್ ಯೂನಿಯನ್ ಒಂದು ಸಂಯುಕ್ತ ರಾಜ್ಯವನ್ನು ಹೋಲುವಂತಿದೆ. ಇದರ ಪ್ರತಿಪಾದಕರು ಹೇಳುವಂತೆ ಈ ಸಂಸ್ಥೆ ಶಾಂತಿ ಮತ್ತು ಪ್ರಜಾತಂತ್ರಕ್ಕಾಗಿ ಕಾರ್ಯ ನಿರ್ವಹಿಸುತ್ತದೆ. ಈ ಯುರೋಪಿಯನ್ ಯೂನಿಯನ್ ಈ ಹಿಂದಿನ ಯುರೋಪಿಯನ್ ಇಕಾನಾಮಿಕ್ ಕಮ್ಯುನಿಟಿ (ಇ.ಇ.ಸಿ)ಯ ವಾರಸುದಾರ ಸಂಸ್ಥೆಯಂತಿದೆ. ಇದರ ಸದಸ್ಯ ರಾಷ್ಟ್ರಗಳು ಸ್ವಯಂ ಇಚ್ಛೆಯಿಂದ ತಮ್ಮ ಸಾರ್ವಭೌಮ ಅಧಿಕಾರದ ಗಮನಾರ್ಹ ಅಂಶವನ್ನು ಈ ಸಂಸ್ಥೆಗೆ ನೀಡಿದ್ದಾರೆ.

4) **ಆಸಿಯಾನ್ (Association of South East Asian Nations) :** ಈ ಸಂಸ್ಥೆ 1967ರಲ್ಲಿ ಉದಯವಾಯಿತು. ಇದರ ಸ್ಥಾಪಕ ಸದಸ್ಯರಾಷ್ಟ್ರಗಳೆಂದರೆ, ಸಿಂಗಾಪುರ, ಮಲೇಷ್ಯಾ, ಇಂಡೋನೇಷ್ಯಾ, ಫಿಲಿಪ್ಪೈನ್ಸ್ ಹಾಗೂ ಥೈಲ್ಯಾಂಡ್. ಇದೀಗ ಇದರಲ್ಲಿ 10 ರಾಷ್ಟ್ರಗಳು ಸದಸ್ಯತ್ವ ಹೊಂದಿದೆ. ಇದರ ಮುಖ್ಯ ಉದ್ದೇಶಗಳೆಂದರೆ ಈ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ, ಸಾಮಾಜಿಕ ಬೆಳವಣಿಗೆಗೆ ಯತ್ನ ಹಾಗೂ ಸಾಂಸ್ಕೃತಿಕ ಪ್ರಗತಿ ಸಾಧಿಸುವಿಕೆ ಮತ್ತು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ತಾಂತ್ರಿಕ, ವೈಜ್ಞಾನಿಕ, ಆಡಳಿತಾತ್ಮಕ ಇತ್ಯಾದಿ ಕ್ಷೇತ್ರಗಳಲ್ಲಿ ಪರಸ್ಪರ ನೆರವು ಹಾಗೂ ಸಹಭಾಗಿತ್ವ ಹೊಂದುವಿಕೆ.

©KTBS NOT TO BE REPUBLISHED

ಇದು ಒಂದು ಮಿಲಿಟರಿ ಒಕ್ಕೂಟವಲ್ಲ. ಭಾರತ ಈ ಸಂಸ್ಥೆಯ ಬಗ್ಗೆ ಉದಾರ ನೀತಿ ಹೊಂದಿದ್ದರೂ, ಅದರ ಸದಸ್ಯತ್ವ ಹೊಂದಿಲ್ಲ. ವೀಕ್ಷಕರ ಸ್ಥಾನ ಹೊಂದಿದೆ. ಇದರಲ್ಲಿ ವಿಶ್ವದ ಒಟ್ಟು ಜನಸಂಖ್ಯೆಯ 9 ಪ್ರತಿಶತ ಜನರಿದ್ದಾರೆ.

5) **ದಿ ಆರ್ಗನೈಸೇಶನ್ ಆಫ್ ಆಫ್ರಿಕನ್ ಯುನಿಟಿ (OAU) :** ಈ ಆಫ್ರಿಕನ್ ಒಕ್ಕೂಟ ಸಂಸ್ಥೆ 1963ರಲ್ಲಿ ಸ್ಥಾಪನೆಗೊಂಡಿತು. ಸ್ವಾತಂತ್ರ್ಯಗಳಿಸಿದ ಆಫ್ರಿಕನ್ ರಾಷ್ಟ್ರಗಳು ತಮ್ಮ ತಮ್ಮೊಳಗೆ ಹಲವಾರು ಪ್ರಾದೇಶಿಕ ಸಂಸ್ಥೆಗಳನ್ನು ರಚಿಸಿಕೊಂಡವು. ಮುಂದೆ ಅವೆಲ್ಲಾ ಒಟ್ಟಾಗಿ ಆರ್ಗನೈಸೇಶನ್ ಆಫ್ ಆಫ್ರಿಕನ್ ಯುನಿಟಿ ಎಂಬ ಹೊಸ ಸಂಸ್ಥೆಯನ್ನು ಸ್ಥಾಪಿಸಿದವು. ಎಲ್ಲಾ ಸ್ವತಂತ್ರ ಆಫ್ರಿಕನ್ ರಾಷ್ಟ್ರಗಳ ಸ್ವಯಂ ನಿರ್ಧಾರದ ಹಕ್ಕನ್ನು ಈ ಸಂಸ್ಥೆ ಪ್ರತಿಪಾದಿಸುತ್ತದೆ. ಇದು ಸ್ವಾತಂತ್ರ್ಯ, ಸಮಾನತೆ, ನ್ಯಾಯ ಹಾಗೂ ಒಗ್ಗಟ್ಟನ್ನು ಆಫ್ರಿಕನ್ ರಾಷ್ಟ್ರಗಳಲ್ಲಿ ನೆಲೆಯಾಗಿಸಲು ಶ್ರಮಿಸುತ್ತದೆ. 'ನೂತನ ವಸಾಹತುಶಾಹಿತ್ವ'ದ ವಿರುದ್ಧ ಧ್ವನಿ ಎತ್ತಲು ಸಂಸ್ಥೆಯ ಸದಸ್ಯರು ಬದ್ಧರಾಗಿದ್ದಾರೆ, ಇದರ ಸನ್ನದಿಗೆ ಒಪ್ಪಿಗೆಯಿರುವ ಎಲ್ಲಾ ಆಫ್ರಿಕನ್ ರಾಷ್ಟ್ರಗಳು ಈ ಸಂಸ್ಥೆಯ ಸದಸ್ಯರಾಗಲು ಅರ್ಹರಾಗಿದ್ದಾರೆ.

ಈ ಸಂಸ್ಥೆಯಲ್ಲಿ (1) ಸದಸ್ಯರಾಷ್ಟ್ರಗಳ ಮುಖ್ಯಸ್ಥರ ಹಾಗೂ ಅಲ್ಲಿನ ಸರಕಾರದ ಮುಖ್ಯಸ್ಥರ ಸಭೆ, (2) ಸಚಿವ ಸಂಪುಟ ಹಾಗೂ (3) ಮಧ್ಯಸ್ಥಿಕೆ ಒಪ್ಪಂದ ಹಾಗು ರಾಜಿಪಂಚಾಯಿತಿ ಸಮಿತಿಯಿದೆ. ವಸಾಹತುಶಾಹಿತ್ವ, ವರ್ಣಭೇದ ನೀತಿ, ಸಾಮ್ರಾಜ್ಯಶಾಹಿತ್ವ ಮುಂತಾದವುಗಳ ವಿರುದ್ಧ ಈ ಸಂಸ್ಥೆ ಉತ್ತಮ ಪಾತ್ರ ವಹಿಸಿದೆ.

@KTBS NOT TO BE REPUBLISHED

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ವಿಶ್ವಸಂಸ್ಥೆಯು ಪ್ರಾರಂಭವಾದ ವರ್ಷ __________
2. ವಿಶ್ವಸಂಸ್ಥೆಯ ಮುಖ್ಯ ಕಚೇರಿ __________ ನಗರದಲ್ಲಿದೆ.
3. ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ __________
4. ಅಂತಾರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಅವಧಿ __________ ವರ್ಷಗಳು
5. ಅಂತಾರಾಷ್ಟ್ರೀಯ ನ್ಯಾಯಾಲಯವು __________ ಎಂಬಲ್ಲಿ ಇದೆ.
6. ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿಯ ಹೆಸರು __________ .
7. ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಯಾದ ವರ್ಷ __________.
8. ಸಾರ್ಕ್ ಸ್ಥಾಪನೆಯಾದ ವರ್ಷ __________

**II. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಗುಂಪುಗಳಲ್ಲಿ ಚರ್ಚಿಸಿ ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರ ಹೆಸರುಗಳನ್ನು ತಿಳಿಸಿ
2. ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳಾವುವು?
3. ಭದ್ರತಾ ಸಮಿತಿಯಲ್ಲಿನ ಖಾಯಂ ಸದಸ್ಯ ರಾಷ್ಟ್ರಗಳು ಯಾವುವು?
4. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯ ಸೂಚಿಯಲ್ಲಿರುವ ವಿಷಯಗಳಾವುವು?
5. ಅಂತಾರಾಷ್ಟ್ರೀಯ ಕಾರ್ಮಿಕ ಸಂಘದ ಕಾರ್ಯಗಳನ್ನು ಪಟ್ಟಿ ಮಾಡಿ
6. SAARC ನ್ನು ವಿಸ್ತರಿಸಿ.

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ, ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

1. ವಿಶ್ವಸಂಸ್ಥೆಯ ಉದ್ದೇಶಗಳನ್ನು ಪಟ್ಟಿಮಾಡಿರಿ.
2. ಸಾಮಾನ್ಯ ಸಭೆಯ ರಚನೆಯನ್ನು ವಿವರಿಸಿ.
3. ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಕಾರ್ಯಗಳಾವುವು?
4. 'ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ' ಈ ಹೇಳಿಕೆಯನ್ನು ಸಮರ್ಥಿಸಿ.
5. ಯುನೆಸ್ಕೋದ ಕಾರ್ಯಗಳಾವುವು?
6. ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳ ಪರಿಹಾರದಲ್ಲಿ ಐ. ಎಮ್. ಎಫ್‌ನ ಪಾತ್ರವನ್ನು ವಿಶ್ಲೇಷಿಸಿ.
7. ಕಾಮನ್‌ವೆಲ್ತ್ ರಾಷ್ಟ್ರಸಂಘದ ಉದ್ದೇಶಗಳನ್ನು ಪಟ್ಟಿಮಾಡಿರಿ.
8. ಯುರೋಪಿಯನ್ ಯೂನಿಯನ್ ಸಂಸ್ಥೆಯನ್ನು ವಿವರಿಸಿ.

**IV. ಚಟುವಟಿಕೆ :**

1. ಕರ್ನಾಟಕದಲ್ಲಿ ಯುನೆಸ್ಕೊದವರು ಗುರುತಿಸಿರುವ ಐತಿಹಾಸಿಕ ಸ್ಮಾರಕಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

**V. ಯೋಜಿತ ಕಾರ್ಯ :**

1. ಜಾಗತಿಕ ಮಟ್ಟದಲ್ಲಿ ವಿಶ್ವಸಂಸ್ಥೆಯು ನಿರ್ವಹಿಸಿರುವ ಶಾಂತಿ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ವೃತ್ತ ಪತ್ರಿಕೆಗಳಲ್ಲಿ ಬಂದಿರುವ ಮಾಹಿತಿಗಳನ್ನು ಸಂಗ್ರಹಿಸಿ.

© KTBS NOT TO BE REPUBLISHED

## ಅಧ್ಯಾಯ – 23

# ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

N6E7C3

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಜನಮಂದೆ – ಅರ್ಥ, ಸ್ವರೂಪ, ಪ್ರಭಾವ.
- ದೊಂಬಿ – ಅರ್ಥ, ಸ್ವರೂಪ, ಪ್ರಭಾವ.
- ಸಮೂಹ ವರ್ತನೆಯ ವಿವಿಧ ರೂಪಗಳು.
- ಮಹಿಳೆಯರ ಸ್ವ–ಸಹಾಯ ಸಮೂಹಗಳು.

ಸಂಘಜೀವಿಯಾದ ಮಾನವನು ಯಾವಾಗಲೂ ಸಮೂಹಗಳಲ್ಲಿ, ಸಮುದಾಯಗಳಲ್ಲಿ, ಸಮಾಜಗಳಲ್ಲಿ ವಾಸಿಸುತ್ತಾನೆ. ಆತ ಜನ ಸಮೂಹದ ಮಧ್ಯದಲ್ಲಿರುವಾಗ ತಾನು ಒಬ್ಬಂಟಿಗನಾಗಿದ್ದಾಗ ವರ್ತಿಸುವ ರೀತಿಗಿಂತಲೂ ಭಿನ್ನ ರೀತಿಯಲ್ಲಿ ವರ್ತಿಸುತ್ತಾನೆ. ಸಮೂಹದಲ್ಲಿ ಇರುವಾಗ ಮಾಡುವ ಆತನ ವರ್ತನೆಯನ್ನು 'ಸಾಮೂಹಿಕ ವರ್ತನೆ' ಎನ್ನಲಾಗುವುದು. ಸಾಮೂಹಿಕ ವರ್ತನೆ ನಮ್ಮ ಸಾಂಘಿಕ ಜೀವನದ ಅವಿಭಾಜ್ಯ ಅಂಗವಾಗಿದೆ.

ಸಾಕಷ್ಟು ದೊಡ್ಡ ಸಂಖ್ಯೆಯ ಜನರ ಆಕಸ್ಮಿಕವಾದ ಹಾಗೂ ಯೋಜನಾಬದ್ಧವಲ್ಲದ ರೀತಿಯ ಆಲೋಚನೆ, ಭಾವನೆ ಹಾಗೂ ವರ್ತನೆಗೆ ಸಮೂಹ ವರ್ತನೆ ಎನ್ನಬಹುದು. ಉದಾಹರಣೆಗೆ ಜನಮಂದೆ, ದೊಂಬಿ ಪೊಳ್ಳುಸುದ್ದಿಗಳ ಪ್ರಚಾರ, ಸಾರ್ವಜನಿಕ ಅಭಿಪ್ರಾಯ, ಕ್ರಾಂತಿ ಹಾಗೂ ಸಾಮಾಜಿಕ ಆಂದೋಲನ.

**ಜನಮಂದೆ :** ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ. ಜನಮಂದೆಯು ಒಂದು ಆಸಕ್ತಿಯ ಪ್ರಚೋದನೆಗೆ ಒಟ್ಟಾಗಿ ಪ್ರತಿಕ್ರಿಯಿಸುತ್ತಿರುವ ಜನರ ತಾತ್ಕಾಲಿಕ ಜನಸಂದಣಿ. ಉದಾಹರಣೆಗೆ : ಚಲನ ಚಿತ್ರ ಮಂದಿರದ ಹತ್ತಿರ ಟಿಕೆಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ, ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನ ಸಮೂಹ, ಇತ್ಯಾದಿ.

ಜನಮಂದೆಯು ತಾತ್ಕಾಲಿಕ ಸ್ವರೂಪದ ಸಮೂಹವಾಗಿರುತ್ತದೆ. ಇದರಲ್ಲಿ ಜನರು ಯಾವುದೋ ಒಂದು ನಿರ್ದಿಷ್ಟ ಸ್ಥಳದಲ್ಲಿ ಭೌತಿಕವಾಗಿ ಒಟ್ಟಾಗಿ ಸೇರಿರುತ್ತಾರೆ. ಜನಮಂದೆಯ ಸದಸ್ಯರು ಪರಸ್ಪರ ಅಭಿಪ್ರಾಯ, ಭಾವನೆಗಳು ಮತ್ತು ಕ್ರಿಯೆಗಳ ಪ್ರಭಾವಕ್ಕೆ ಬಹುಬೇಗ ಒಳಗಾಗುತ್ತಾರೆ. ಕೆಲವೊಮ್ಮೆ ಇದರ ಮೂಲಕ ವ್ಯಕ್ತಿಯ ಅಂತರಾಳದಲ್ಲಿ ಹುದುಗಿರುವ ಭಾವನೆಗಳು ಪ್ರಕಟವಾಗುವುದುಂಟು; ಒಮ್ಮೊಮ್ಮೆ ಸ್ಫೋಟಗೊಳ್ಳುವುದೂ ಉಂಟು.

**ಜನಮಂದೆಯ ಪ್ರಭಾವ :**

ಜನಮಂದೆಯಲ್ಲಿರುವ ಜನರ ಅನಿಯಂತ್ರಿತ ನಡವಳಿಕೆಯು ಎಷ್ಟೋ ಬಾರಿ ಸಮಾಜದ ಲೋಪದೋಷಗಳನ್ನು ಸೂಚಿಸುವುದುಂಟು. ಇದು ಕೆಲವೊಮ್ಮೆ ಸಾಮಾಜಿಕ ಸಂಸ್ಥೆಗಳ ಕಾರ್ಯವಿಧಾನದ ಬಗೆಗಿರುವ ಜನರ ಅಸಂತೃಪ್ತಿಯನ್ನು ಪ್ರಕಟಿಸುವುದು. ಅಲ್ಲದೆ, ಇದು ಕೆಲವೊಮ್ಮೆ ಸರ್ಕಾರದ ಯೋಜನೆಗಳು, ಧೋರಣೆಗಳು ಮತ್ತು ನಿರ್ದಿಷ್ಟ ಕಾರ್ಯಕ್ರಮಗಳ ಬಗೆಗಿನ ಜನರ ಅಸಮಾಧಾನವನ್ನು ಪ್ರತಿನಿಧಿಸುವುದುಂಟು.

© KTBS NOT TO BE REPUBLISHED

ಜನಮಂದೆಯ ವರ್ತನೆ ಅತಿರೇಕಕ್ಕೆ ಹೋದಾಗ ಅದನ್ನು ನಿಯಂತ್ರಿಸಲು ಕಾಯ್ದೆ-ಕಾನೂನು ಪೋಲೀಸ್ ಪಡೆ, ರಕ್ಷಣಾ ಪಡೆಯಂತಹ ಕ್ರಮಗಳನ್ನು ಬಳಸಬೇಕಾಗುವುದು.

**ದೊಂಬಿ :** ದೊಂಬಿ ಎಂಬುದು ಜನಮಂದೆ ವರ್ತನೆಯ ಮತ್ತೊಂದು ಮಾದರಿ. ತೀರಾ ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯನ್ನು ದೊಂಬಿ ಎನ್ನುತ್ತಾರೆ. ಅನಿಯಂತ್ರಿತ ದೊಂಬಿಗಳು ಉಗ್ರ ಸ್ವರೂಪದವುಗಳಾಗಿದ್ದಲ್ಲಿ ಅವು ವಿನಾಶಕ್ಕೆ ಕಾರಣವಾಗಲೂಬಹುದು.

**ದೊಂಬಿಯ ಸ್ವರೂಪ :** ಜನಮಂದೆಯಲ್ಲಿ ಕಾಣುವಷ್ಟು ಕನಿಷ್ಠ ಮಟ್ಟದ ಉದ್ದೇಶ, ಏಕತೆ ಕೂಡ ದೊಂಬಿಯಲ್ಲಿರುವುದಿಲ್ಲ. ದೊಂಬಿಯಲ್ಲಿ ಭಾಗವಹಿಸುವವರು ಎದುರಿಗೆ ಸಿಕ್ಕಿದ್ದೆಲ್ಲವನ್ನು ಹಾಳುಮಾಡುತ್ತಾ ಸಾಗುವರು. ಗೊಂದಲವನ್ನು ಸೃಷ್ಟಿ ಮಾಡುವುದೇ ದೊಂಬಿಯ ಉದ್ದೇಶವಾಗಿರುತ್ತದೆ. ಕೆಲಮೊಮ್ಮೆ ಈ ದೊಂಬಿಗಳು ಅಪಾರವಾದ ಹಾನಿಯನ್ನುಂಟು ಮಾಡುತ್ತವೆ. ದೊಂಬಿಗಳಲ್ಲಿ ಮಾಡಬಹುದಾದ ಆಕ್ರಮಣಕ್ಕೆ ನಿಶ್ಚಿತವಾದ ಗುರಿ ಇರುವುದಿಲ್ಲ. ದೊಂಬಿಗಳು ಕಾನೂನು ಮತ್ತು ಸುವ್ಯವಸ್ಥೆಗೆ ಗಂಭೀರ ಸವಾಲುಗಳಾಗಿವೆ.

ಕೋಮುಗಲಭೆ, ಜನಾಂಗೀಯ ಕಲಹ, ಗುಂಪು ಘರ್ಷಣೆ ಇತ್ಯಾದಿಗಳು, ದೊಂಬಿಗೆ ಉದಾಹರಣೆಗಳಾಗಿವೆ. ದೊಂಬಿಗಳು ಸಾಮಾನ್ಯವಾಗಿ ನಗರ, ಪಟ್ಟಣಗಳಲ್ಲಿ ಹೆಚ್ಚು ನಡೆಯುತ್ತವೆ. ಪ್ರಚೋದಕ ಸನ್ನಿವೇಶ, ವ್ಯಕ್ತಿಗಳ ಅನಿಯಂತ್ರಿತ ವರ್ತನೆ, ಅನಾಗರಿಕ ನಡವಳಿಕೆ, ಕಲಹ ನಡೆಸುವವರಲ್ಲಿರಬಹುದಾದ ಅಪರಾಧಿ ಗುಣ, ದೊಂಬಿಪರ ಮನೋಭಾವ ಮುಂತಾದವುಗಳೇ ದೊಂಬಿಗೆ ಕಾರಣಗಳಾಗಿವೆ.

ದೊಂಬಿಗಳು ದೀರ್ಘಕಾಲ ನಡೆಯಲಾರವು. ಒಂದು ಹಂತಕ್ಕೆ ಅವು ಕೊನೆಗೊಳ್ಳಲೇಬೇಕು. ಅಧಿಕಾರಿಗಳ ಸಮಯಪ್ರಜ್ಞೆ, ಪೊಲೀಸ್, ರಕ್ಷಣಾ ಪಡೆ ಮತ್ತು ಕಾನೂನು ಮುಂತಾದ ಸಾಧನಗಳ ಮೂಲಕ ದೊಂಬಿಗಳನ್ನು ನಿಯಂತ್ರಿಸಬಹುದು.

NOT TO BE REPUBLISHED ©KTBS

### ಸಮೂಹ ವರ್ತನೆ ಮತ್ತು ಚಳವಳಿಗಳು :

ಸಮೂಹ ವರ್ತನೆಯು ಯೋಜನಾಬದ್ಧವಾಗಿ ಒಂದು ನಿರ್ದಿಷ್ಟ ಗುರಿಯನ್ನು ಹೊಂದಿದ್ದು ಸಾಮಾಜಿಕ ಬದಲಾವಣೆಗೆ ಪ್ರಯತ್ನಿಸಿದರೆ ಅದನ್ನು ಚಳವಳಿ ಎನ್ನಬಹುದು. ಇಂತಹ ಅನೇಕ ಚಳವಳಿಗಳು ಭಾರತದಲ್ಲಿ ನಡೆದಿವೆ. ಅದಕ್ಕೆ ಉದಾಹರಣೆಯಾಗಿ ಪರಿಸರ ಚಳವಳಿಗಳನ್ನು ಗಮನಿಸಬಹುದು.

### ಪರಿಸರ ಚಳವಳಿಗಳು :

ಭೂಮಿ, ಗಾಳಿ, ನೀರು ಮತ್ತು ಜೀವಮಂಡಲವನ್ನೊಳಗೊಂಡ ನಮ್ಮ ಸುತ್ತ ಮುತ್ತಲಿನ ಪರಿಸರವು ವಿಷಕಾರಕ ಹಾಗೂ ರಾಸಾಯನಿಕ ಅಂಶಗಳಿಂದ ಕಲುಷಿತವಾಗುವುದನ್ನು 'ಪರಿಸರ ಮಾಲಿನ್ಯ' ಎನ್ನಬಹುದು.

ಇಂದು ಜನಸಂಖ್ಯೆ ಹೆಚ್ಚಿದ ಪರಿಣಾಮವಾಗಿ ಅವರ ಬದುಕಿನ ಅಗತ್ಯತೆಗಳು ಅತಿರೇಕಕ್ಕೆ ಹೋಗಿವೆ. ಇದರ ಪರಿಣಾಮವಾಗಿ ಮಾನವ ವಾಸಿಸುವ ಪರಿಸರದ ಮೇಲೆ ಒತ್ತಡ ಹಾಗೂ ಆಕ್ರಮಣ ಹೆಚ್ಚುತ್ತಲಿದೆ. ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಪಥದಲ್ಲಿರುವ ದೇಶಗಳಲ್ಲಿ ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚು ಬಳಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ತಮ್ಮ ಸುಖಭೋಗದ

ಜೀವನಕ್ಕಾಗಿ ಪರಿಸರವನ್ನು ದುರ್ಬಳಕೆ ಮಾಡುತ್ತಿದ್ದಾರೆ. ಜಗತ್ತಿನ ಹಲವಾರು ದೇಶಗಳು ಹೆಚ್ಚುತ್ತಿರುವ ಜನಸಂಖ್ಯೆಯಿಂದುಂಟಾಗಿರುವ ಸಮಸ್ಯೆಗಳನ್ನು ಎದುರಿಸಲು ಪರಿಸರದ ಮೇಲೆ ಒತ್ತಡ ತರುತ್ತಿವೆ. ಅಲ್ಲದೆ ಅನಿಯಂತ್ರಿತವಾಗಿ ಸಾಗುತ್ತಿರುವ ನಗರಗಳ ಬೆಳವಣಿಗೆ, ಕೈಗಾರಿಕಾ ಅಭಿವೃದ್ಧಿ, ತಾಂತ್ರಿಕ ಪ್ರಗತಿ, ಸಾರಿಗೆ ವ್ಯವಸ್ಥೆಯ ಬೆಳವಣಿಗೆ ಮುಂತಾದವುಗಳಿಂದ ಅರಣ್ಯಗಳ ನಾಶ ಮತ್ತು ಪರಿಸರ ಮಾಲಿನ್ಯವುಂಟಾಗುತ್ತಿದೆ. ಹೀಗಾಗಿ ಇದೊಂದು ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ.

ಪರಿಸರ ಸಮಸ್ಯೆಯ ನಿವಾರಣೆಯ ಬಗ್ಗೆ ಬುದ್ಧಿಜೀವಿಗಳು, ಪರಿಸರ ತಜ್ಞರು ಮುಂತಾದವರು ವಿಶೇಷವಾಗಿ ಆತಂಕಗೊಂಡಿದ್ದಾರೆ. ಅಲ್ಲದೆ, ಎಚ್ಚೆತ್ತ ಜನರೂ ಕೂಡ ಪರಿಸರ ಸಂರಕ್ಷಣೆಗಾಗಿ ಸಾಮೂಹಿಕ ಪ್ರತಿಭಟನೆಗಳನ್ನು ನಡೆಸತೊಡಗಿದ್ದಾರೆ. ಅಂತಹ ಕೆಲವು ಪ್ರಮುಖ ಪ್ರತಿಭಟನೆಗಳ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಳ್ಳೋಣ.

**1. ಚಿಪ್ಕೋ ಚಳವಳಿ :**

ಉತ್ತರ ಪ್ರದೇಶದ ತೆಹ್ರಿ–ಘರ್ವಾಲ್ ಜಿಲ್ಲೆಯಲ್ಲಿ ಸರ್ಕಾರವು ಮರಗಳನ್ನು ಕಡಿಯಲು ಅನುಮತಿ ನೀಡಿತ್ತು. ಇದರಿಂದ ಅರಣ್ಯನಾಶವಾಗುತ್ತದೆ ಮತ್ತು ಪರಿಸರ ಹಾಳಾಗುತ್ತದೆ ಎಂದು ತಿಳಿದು ಜನರು ಮರಗಳನ್ನು ಅಪ್ಪಿ ಹಿಡಿದು ಕಡಿಯದಂತೆ ತಡೆದರು. ಈ ಚಳವಳಿಯು 1973 ರಲ್ಲಿ ಸುಂದರ್ ಲಾಲ್ ಬಹುಗುಣ ಹಾಗೂ ಚಂಡಿ ಪ್ರಸಾದ್ ಭಟ್ಟರವರ ನೇತೃತ್ವದಲ್ಲಿ ನಡೆಯಿತು. ಪರಿಣಾಮವಾಗಿ ಮರಗಳನ್ನು ಕಡಿಯಲು ಸರ್ಕಾರ ನೀಡಿದ ಅನುಮತಿ ರದ್ದಾಯಿತು.



**2. ಅಪ್ಪಿಕೋ ಚಳವಳಿ :**

ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದ ರೈತರು 1983ರಲ್ಲಿ ಅಪ್ಪಿಕೋ ಚಳವಳಿಯನ್ನು ನಡೆಸಿದರು. ಅಲ್ಲಿನ ಕಲಸೆ ಅರಣ್ಯದಲ್ಲಿ ಗುತ್ತಿಗೆದಾರರು ಮರ ಕಡಿಯಲು ಬಂದಾಗ ಅದನ್ನು ತಡೆಯಲು ರೈತರು ಮರಗಳನ್ನು ಅಪ್ಪಿಕೊಳ್ಳುವುದರ ಮೂಲಕ ಪ್ರತಿಭಟಿಸಿದರು. ಮರಗಳ ಕಳ್ಳ ಸಾಗಾಣಿಕೆ ತಪ್ಪಿಸುವುದು, ಗಿಡಮರಗಳನ್ನು ಬೆಳೆಸುವುದು ಹಾಗೂ ಪರಿಸರ ಮಹತ್ವದ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು ರೈತರ ಉದ್ದೇಶವಾಗಿತ್ತು.

**3. ನರ್ಮದಾ ಆಂದೋಲನ :**

ಗುಜರಾತ್ ರಾಜ್ಯದ ಸರ್ದಾರ್ ಸರೋವರ ಯೋಜನೆಯಡಿಯಲ್ಲಿ ನರ್ಮದಾ ನದಿಗೆ ಕಟ್ಟಲಾದ ಅಣೆಕಟ್ಟು ನಿರ್ಮಾಣದಿಂದ ಅರಣ್ಯ ನಾಶ, ಪರಿಸರ ನಾಶ, ಜೀವ ಸಂಕುಲಗಳಿಗೆ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಪರಿಸರ ಪ್ರೇಮಿ ಮೇಧಾ ಪಾಟ್ಕರ್ ಮತ್ತು ಬಾಬಾ ಆಮ್ಟೆರವರ ನೇತೃತ್ವದಲ್ಲಿ ಅಣೆಕಟ್ಟು ನಿರ್ಮಾಣದ ವಿರುದ್ಧ ಚಳವಳಿ ನಡೆಸಲಾಯಿತು. ಇದೇ 'ನರ್ಮದಾ ಬಚಾವೋ ಆಂದೋಲನ'.

© KTBS NOT TO BE REPUBLISHED

## 4. ಮೌನ ಕಣಿವೆ ಆಂದೋಲನ

ಕೇರಳದ ಪಾಲ್‌ಘಾಟ್ ತಾಲೂಕಿನ ಮೌನ ಕಣಿವೆಯಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಅಣೆಕಟ್ಟಿನ ನಿರ್ಮಾಣದಿಂದ ಪರಿಸರ ನಾಶದ ಜೊತೆಗೆ ಅನೇಕ ಜೀವ ಪ್ರಭೇದಗಳು ಜೀವಿಸಲು ತೊಂದರೆಯಾಗುತ್ತದೆ. ಆದ್ದರಿಂದ ಕೇರಳ ಸಾಹಿತ್ಯ ಪರಿಷತ್ತು ಮತ್ತು ವನ್ಯ ಮೃಗ ಆಸಕ್ತರು ಅಣೆಕಟ್ಟಿನ ನಿರ್ಮಾಣದ ವಿರುದ್ಧ ಚಳವಳಿಯನ್ನು ನಡೆಸಿದರು. ಈ ಚಳವಳಿ ಅನೇಕ ಜೀವ ಸಂಕುಲಗಳನ್ನು ಸಂರಕ್ಷಿಸುವಲ್ಲಿ ಯಶಸ್ವಿಯಾಯಿತು.

## 5. ಕರ್ನಾಟಕ ಕರಾವಳಿ ತೀರದ ವಿವಿಧ ಸ್ಥಾವರಗಳ ವಿರೋಧಿ ಚಳವಳಿ

ಕರ್ನಾಟಕದ ಕರಾವಳಿಯ ಮಂಗಳೂರಿನಲ್ಲಿ ಸ್ಥಾಪಿಸಲಾಗುತ್ತಿದ್ದ ತೈಲ ಕಾರ್ಯಾಗಾರದಿಂದ ಹೊರಬರುವ ರಾಸಾಯನಿಕ ಅಂಶಗಳಿಂದ ಪರಿಸರ ನಾಶವಾಗುತ್ತದೆ ಎಂದು ತಿಳಿದ ಪರಿಸರವಾದಿಗಳು "ಮಂಗಳೂರು ರಿಫೈನ್‌ರೀಸ್ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್" (MRPL) ವಿರುದ್ಧ ಚಳವಳಿಯನ್ನು ನಡೆಸಿದರು.

## 6. ಕೈಗಾ ವಿರೋಧಿ ಚಳವಳಿ

ಕರ್ನಾಟಕದ ಕಾರವಾರ ಜಿಲ್ಲೆಯ ಕೈಗಾದಲ್ಲಿ ಅಣು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವ ವಿರುದ್ಧ ಚಳವಳಿಯನ್ನು ಡಾ.ಶಿವರಾಮ ಕಾರಂತರು ಮತ್ತು ಇತರ ಬುದ್ಧಿಜೀವಿಗಳು ನಡೆಸಿದರು. ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ ಮುಂತಾದ ದುಷ್ಪರಿಣಾಮಗಳಿಂದ ಜೀವ ಪ್ರಭೇದಗಳ ಮೇಲೆ ಹಾನಿಕಾರಕ ಪರಿಣಾಮಗಳುಂಟಾಗುತ್ತವೆ ಎಂಬ ಉದ್ದೇಶಗಳಿಂದ ಕೈಗಾ ವಿರೋಧಿ ಚಳವಳಿಯನ್ನು ನಡೆಸಲಾಯಿತು.

ಪರಿಸರ ಮಾಲಿನ್ಯದಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕ ಜಾಗೃತಿ ಅನಿವಾರ್ಯ. ನಾವು ಬದುಕುತ್ತಿರುವ ಪರಿಸರವನ್ನು ಸಂರಕ್ಷಿಸುವುದು, ಪೋಷಣೆ ಮಾಡುವುದು ನಮ್ಮ ಆದ್ಯ ಕರ್ತವ್ಯ ಎಂಬ ಅರಿವು ಅನಿವಾರ್ಯ. ಆಗ ಪ್ರತಿಯೊಬ್ಬ ನಾಗರಿಕನು ನಿಸ್ವಾರ್ಥದಿಂದ ಕ್ರಿಯಾತ್ಮಕವಾಗಿ ಪರಿಸರ ಸಂರಕ್ಷಣೆಗೆ ತನ್ನನ್ನು ತಾನು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಪರಿಸರ ಸಂರಕ್ಷಣೆಗಾಗಿ ಪರಿಣಾಮಕಾರಿ ಯೋಜನೆಗಳು, ಕಾರ್ಯಕ್ರಮಗಳನ್ನು ಜಾರಿಗೆ ತರುವುದರ ಮೂಲಕ ಜನರಲ್ಲಿ ಅರಿವು ಮೂಡಿಸುವ ಅಗತ್ಯವಿದೆ.


© KTBS NOT TO BE REPUBLISHED

## ಮಹಿಳೆಯರ ಸ್ವ-ಸಹಾಯ ಸಮೂಹಗಳು

ಕೇವಲ ಚಳವಳಿಗಳಲ್ಲದೆ ನಂಬಿಕೆ, ಸಹಕಾರ ಆಧಾರಿತ ಸ್ವಸಹಾಯ ಸಮೂಹಗಳನ್ನು ನೋಡಬಹುದು. ಇವು ಸಾಮೂಹಿಕ ವರ್ತನೆಯ ವಿಶಿಷ್ಟ ರೂಪಗಳಾಗಿವೆ.

ಮಹಿಳೆಯರ ಸ್ವ-ಸಹಾಯ ಸಮೂಹ ಎಂಬುದು ಸ್ವಪ್ರಜ್ಞೆ, ಸ್ವಪ್ರೇರಣೆ ಹಾಗೂ ಪರಸ್ಪರ ನಂಬಿಕೆಯೊಂದಿಗೆ, ತಮ್ಮ ಆರ್ಥಿಕ, ಸಾಮಾಜಿಕ ಅಗತ್ಯಗಳನ್ನು ತಾವೇ ತಮ್ಮ ಸ್ವಂತ ಪ್ರಯತ್ನ ಮತ್ತು ಸಹಕಾರದಿಂದ ಪೂರೈಸಿಕೊಳ್ಳುವ ಉದ್ದೇಶದಿಂದ ರೂಪಿತವಾದ 10 ರಿಂದ 20 ಮಂದಿ ಸ್ತ್ರೀಯರನ್ನೊಳಗೊಂಡ ಒಂದು ಸ್ಥಳೀಯ ಸಮೂಹವಾಗಿರುತ್ತದೆ. ಈ ಸ್ತ್ರೀಯರು ತಮ್ಮ ದುಡಿಮೆಯ ಸ್ವಲ್ಪ ಹಣವನ್ನು ಉಳಿಸುತ್ತಾರೆ. ಸರ್ಕಾರವು ಅದಕ್ಕೆ ತನ್ನ ಹಣವನ್ನು ಸೇರಿಸುತ್ತದೆ. ಇದರಿಂದ ಹಣ ಸಂಗ್ರಹವಾಗಿ ಮಹಿಳೆಯರ ಕೌಟುಂಬಿಕ ಜೀವನಕ್ಕೆ ನೆರವಾಗುತ್ತದೆ. ಇದನ್ನು ಪುರುಷರಿಗೆ ಸಮಾನವಾದ ನೆಲೆಯಲ್ಲಿ ಪಾತ್ರವಹಿಸಲು ಸಹಾಯಕವಾಗುವಂತೆ ಸ್ತ್ರೀಯರನ್ನು ಸಜ್ಜುಗೊಳಿಸಲು ಅವರಿಗೆ ಸಮಾನ ಹಕ್ಕು, ಅವಕಾಶ, ಹೊಣೆಗಾರಿಕೆ ಹಾಗೂ ಅಧಿಕಾರ ನೀಡುವಂತಹ ಒಂದು ಪ್ರಯತ್ನ ಎನ್ನಬಹುದು.

ಸ್ತ್ರೀಯರ ಸಾಮಾಜಿಕ ಶಕ್ತಿಯನ್ನು ಬಲಪಡಿಸುವಲ್ಲಿ ಸ್ವಸಹಾಯ ಸಮೂಹಗಳು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಇವು ಸ್ತ್ರೀಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರನ್ನಾಗಿಸುತ್ತವೆ. ಭಾರತ ಸರ್ಕಾರ ಕೂಡ ಸ್ತ್ರೀಯರು ಸ್ವಸಹಾಯ ಸಮೂಹಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೋತ್ಸಾಹ ಮಾಡುತ್ತಿದೆ. ಸ್ವ-ಸಹಾಯ ಸಮೂಹಗಳು ಭಾರತದ ಹಣಕಾಸು ಉದ್ಯಮದ ನವೀನ ರೂಪವೇ ಆಗಿವೆ. ಸ್ತ್ರೀಯರು ಸ್ವ-ಸಹಾಯ ಸಮೂಹಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸುವುದರಿಂದ ಚಿಕ್ಕ ಮಟ್ಟದ ಆರ್ಥಿಕ ಮೂಲಗಳನ್ನು ದೊಡ್ಡ ಮಟ್ಟದಲ್ಲಿ ಒದಗಿಸುವುದು ಹಾಗೂ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ಅವಕಾಶ ಮಾಡಿಕೊಡುವುದು ಸಾಧ್ಯವಾಗುವುದು.



ಮಹಿಳಾ ಸ್ವಸಹಾಯ ಸಮೂಹ

ಸ್ವ-ಸಹಾಯ ಸಮೂಹಗಳು ಸ್ತ್ರೀಯರಲ್ಲಿ ಶಿಕ್ಷಣ ಜಾಗೃತಿಯೊಂದಿಗೆ ಸ್ವಾವಲಂಬಿ ಜೀವನ ನಡೆಸಲು ಸಹಕಾರಿಯಾಗಿವೆ. ಸ್ತ್ರೀಯರು ತಮ್ಮ ಮೇಲೆ ನಡೆಯುವ ದೌರ್ಜನ್ಯಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಇವು ಸಹಾಯಕ. ಸ್ತ್ರೀಯರು ತಮ್ಮ ಪಾಲಿನ ಮಾನವ ಹಕ್ಕುಗಳನ್ನು ಸ್ವತಂತ್ರವಾಗಿ ಪಡೆಯಲು ಕೂಡ ಇವು ನೆರವಾಗುವುವು.

ಈ ಸಮೂಹಗಳು ಸ್ತ್ರೀಯರ ಪ್ರಜಾಸತ್ತಾತ್ಮಕ ಹಕ್ಕು, ಅಧಿಕಾರ ಹಾಗೂ ಗೌರವಗಳನ್ನು ಗಮನದಲ್ಲಿರಿಸಿಕೊಂಡು ವ್ಯವಹರಿಸುವವು. ಇವು ಸಾಮಾಜಿಕ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಸ್ತ್ರೀಯರಿಗೆ ಸೂಕ್ತ ಅವಕಾಶ ಒದಗಿಸುವಂತೆ ಮಾಡುವವು. ಅಲ್ಲದೆ ಅಭಿವೃದ್ಧಿ ಯೋಜನೆಗಳಲ್ಲಿ ಸ್ತ್ರೀಯರಿಗೂ ಸೂಕ್ತ ಪ್ರಾತಿನಿಧ್ಯ ಲಭಿಸುವಂತೆ ಮಾಡುವವು. ಸ್ವ-ಸಹಾಯ ಸಮೂಹಗಳು ಸಾಮೂಹಿಕ ಹೊಣೆಗಾರಿಕೆಯ ಮೂಲಕ ಸಂಘರ್ಷಗಳನ್ನು ನಿವಾರಣೆ ಮಾಡಿಕೊಳ್ಳುವ ಸಾಮರ್ಥ್ಯ ಬೆಳೆಸುವವು. ಇವುಗಳ ಮೂಲಕ ಸರ್ಕಾರದ ಹಲವಾರು ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಲು ಸಾಧ್ಯವಾಗುವುದು.

**ನಿಮಗಿದು ತಿಳಿದಿರಲಿ :**

ಸ್ವ ಸಹಾಯ ಸಮೂಹಗಳ ಮೂಲಕ ಸಾಧಿಸಬಹುದಾದ ಮಹಿಳಾ ಸ್ವಾವಲಂಬಿ ಬದುಕಿಗೆ ಸ್ತ್ರೀ ಶಕ್ತಿ ಯೋಜನೆ ಒಂದು ಉತ್ತಮ ನಿದರ್ಶನವಾಗಿದೆ. 'ಸ್ತ್ರೀಶಕ್ತಿ ಯೋಜನೆ'ಯ ಹೆಸರಿನಲ್ಲಿ ಕರ್ನಾಟಕದ ಮಹಿಳಾ ಸ್ವ-ಸಹಾಯ ಸಮೂಹಗಳು ಇತ್ತೀಚೆಗೆ ರಾಜ್ಯಾದ್ಯಂತ ಬಹಳ ಜನಪ್ರಿಯವಾಗುತ್ತಿವೆ. ಈ ಕುರಿತಾದ ಒಂದು ಉದಾಹರಣೆ ಇಲ್ಲಿ ಉಲ್ಲೇಖನೀಯ.

ಉದಾ : ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಸೇರಿದ 'ಸಿರಿ' ಎಂಬ ಗ್ರಾಮೋದ್ಯೋಗ ಸಂಸ್ಥೆ ಗ್ರಾಮೀಣ ಮಹಿಳೆಯರಿಗೆ ಮೌಲ್ಯಯುತ ಆರ್ಥಿಕ ವಸ್ತುಗಳನ್ನು ಉತ್ಪಾದಿಸಲು ಅವಕಾಶ ಕಲ್ಪಿಸಿದೆ. ಅಲ್ಲದೇ ಅದು ಉತ್ಪಾದಿಸಿದ ವಸ್ತುಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವಲ್ಲಿ ಮತ್ತು ಮಹಿಳೆಯರಲ್ಲಿ ಹೊಸ ಆರ್ಥಿಕ ಭರವಸೆಗಳನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ.



@KTBS NOT TO BE REPUBLISHED

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಚಿಪ್ಕೋ ಚಳವಳಿ ನಡೆದ ರಾಜ್ಯ ____________
2. 'ನರ್ಮದಾ ಆಂದೋಲನ' ದ ನೇತೃತ್ವ ವಹಿಸಿದ್ದವರು ____________
3. ಡಾ.ಶಿವರಾಮ ಕಾರಂತರು ____________ ದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪಿಸುವುದನ್ನು ವಿರೋಧಿಸಿದರು.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಸಮೂಹ ವರ್ತನೆ ಎಂದರೇನು ?
2. ಚಿಪ್ಕೋ ಚಳವಳಿಯ ನೇತಾರ ಯಾರು ?
3. ಸ್ವ – ಸಹಾಯ ಸಮೂಹ ಎಂದರೇನು?

**III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ :**

1. ಸಮೂಹ ವರ್ತನೆಯು ಏನನ್ನು ಒಳಗೊಂಡಿದೆ ?
2. ಜನಮಂದೆ ಎಂದರೇನು? ಉದಾಹರಣೆ ಕೊಡಿ.
3. ಜನಮಂದೆಯ ಸ್ವರೂಪವನ್ನು ತಿಳಿಸಿ.
4. ಪರಿಸರ ಮಾಲಿನ್ಯದ ಅರ್ಥ ಮತ್ತು ಸ್ವರೂಪವನ್ನು ತಿಳಿಸಿ.
5. ಮಹಿಳಾ ಸ್ವ–ಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿ.

**IV. ಚಟುವಟಿಕೆ :**

1. ನಿಮ್ಮ ಊರಿನಲ್ಲಿರುವ ಸ್ತ್ರೀ ಸಂಘ ಹಾಗೂ ಸ್ವ–ಸಹಾಯ ಸಮೂಹಗಳಿಗೆ ಭೇಟಿ ನೀಡಿ. ಇಂತಹ ಸಂಘಟನೆಗಳ ಮುಖ್ಯ ಉದ್ದೇಶಗಳೊಂದಿಗೆ ರೂಪಿಸಿ ಕೊಂಡಿರುವ ಕಾರ್ಯಕ್ರಮಗಳನ್ನು ಸಂಗ್ರಹಿಸಿರಿ.
2. ಸ್ತ್ರೀಶಕ್ತಿ ಸಂಘ ಮತ್ತು ಸ್ವ–ಸಹಾಯ ಸಂಘಗಳು ಮಹಿಳೆಯರಲ್ಲಿ ಆರ್ಥಿಕಾಭಿವೃದ್ಧಿಯ ಮನೋಭಾವವನ್ನು ಹೇಗೆ ವೃದ್ಧಿಸಿವೆ ಎಂಬ ಬಗ್ಗೆ ಆ ಸಂಘಗಳ ಸದಸ್ಯರುಗಳಿಂದ ಮಾಹಿತಿ ಪಡೆಯಿರಿ.

**V. ಯೋಜನೆ :**

1. ಕರ್ನಾಟಕದಲ್ಲಿ ಪರಿಸರ ಮತ್ತು ಅರಣ್ಯ ಸಂರಕ್ಷಣೆಗಾಗಿ ನಡೆಯುತ್ತಿರುವ ಚಳವಳಿ ಹೋರಾಟಗಳ ಬಗ್ಗೆ ವೃತ್ತ ಪತ್ರಿಕೆಗಳಲ್ಲಿ ಬರುತ್ತಿರುವ ಮಾಹಿತಿಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

© KTBS NOT TO BE REPUBLISHED

## ಅಧ್ಯಾಯ – 24

# ಸಾಮಾಜಿಕ ಸವಾಲುಗಳು

F4I1Z4

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಬಾಲ ಕಾರ್ಮಿಕ ಸಮಸ್ಯೆ – ಅರ್ಥ, ಪರಿಣಾಮ, ಸಮಸ್ಯೆಗಳ ನಿರ್ಮೂಲನೆಗಾಗಿ ಸಾಂವಿಧಾನಿಕ ಕ್ರಮಗಳು.
- ಸ್ತ್ರೀಯರ ಮೇಲಿನ ಹಿಂಸಾಚಾರ – ಬಾಲ್ಯವಿವಾಹ.
- ವರದಕ್ಷಿಣೆ – ಸ್ವರೂಪ, ಪರಿಣಾಮಗಳು, ಪರಿಹಾರ ಕ್ರಮಗಳು.
- ಹೆಣ್ಣು ಭ್ರೂಣಹತ್ಯೆ

ಸಮಾಜವು ಸಂಕೀರ್ಣವಾದಂತೆಲ್ಲಾ, ಮುಗಿಲು ಮುಟ್ಟುವ ಕಾರ್ಯನಿರ್ವಹಣೆಯ ಬಿಕ್ಕಟ್ಟುಗಳು ಕೆಲವೊಮ್ಮೆ ವ್ಯಕ್ತಿ ಮತ್ತು ಸಂಸ್ಥೆಗಳನ್ನು ಕುಬ್ಜವಾಗಿಸಿ ಶೋಷಣೆಗೆ ದೂಡುವುದುಂಟು. ಅವು ಆಯಾ ಕಾಲದ ಸಾಮಾಜಿಕ ಶೋಷಣೆಗಳಾಗಿ, ಸಮಸ್ಯೆಗಳಾಗಿ ವ್ಯಕ್ತವಾಗುತ್ತವೆ.

ಭಾರತದಂತಹ ಅಭಿವೃದ್ಧಿ ಪಥದಲ್ಲಿರುವ ಸಮಾಜಗಳಲ್ಲಿ ಹಲವಾರು ಬಗೆಯ ಸಾಮಾಜಿಕ ಸವಾಲುಗಳು ತಾಂಡವವಾಡುತ್ತಿವೆ. ಉದಾಹರಣೆಗೆ : ಮಿತಿಮೀರಿದ ಜನಸಂಖ್ಯೆ, ಬಡತನ, ನಿರುದ್ಯೋಗ, ಭಿಕ್ಷಾಟನೆ, ಬಾಲಾಪರಾಧ, ಬಾಲಕಾರ್ಮಿಕರ ಸಮಸ್ಯೆ, ಭ್ರಷ್ಟಾಚಾರ, ಮಹಿಳೆಯರ ಶೋಷಣೆ, ವರದಕ್ಷಿಣೆ ಕಿರುಕುಳ, ಯುವಜನರ ಅಶಾಂತಿ, ಇತ್ಯಾದಿ. ಇವನ್ನು ಸಮಸ್ಯೆ ಎಂಬ ನಕಾರಾತ್ಮಕ ದೃಷ್ಟಿಯಿಂದ ನೋಡುವ ಬದಲು ಸವಾಲುಗಳು ಎಂಬ ಧನಾತ್ಮಕ ದೃಷ್ಟಿಯಿಂದ ನೋಡುವುದು ಅಗತ್ಯ.

ಇಂತಹ ಹಲವಾರು ಸಾಮಾಜಿಕ ಸವಾಲುಗಳಲ್ಲಿ ಕೆಲವು ಪ್ರಮುಖ ಸವಾಲುಗಳ ಬಗ್ಗೆ ಕಿರುಪರಿಚಯ ಮಾಡಿಕೊಳ್ಳೋಣ.

### ಬಾಲಕಾರ್ಮಿಕತೆ

ಸಾಮಾನ್ಯವಾಗಿ, ಅಪ್ರಾಪ್ತ ವಯಸ್ಸಿನ ಮಕ್ಕಳ ದುಡಿಮೆಯನ್ನು ಬಾಲಕಾರ್ಮಿಕತನ ಎಂದು ಕರೆಯಲಾಗುತ್ತಿದೆ. ಭಾರತದ ಸಂವಿಧಾನದ ಪ್ರಕಾರ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಯ ಉದ್ದೇಶದಿಂದ ದುಡಿಮೆ ಮಾಡುತ್ತಿದ್ದರೆ ಅಂತಹವರನ್ನು ಬಾಲ ಕಾರ್ಮಿಕರು ಎಂದು ಕರೆಯಲಾಗಿದೆ.

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ಹಲವಾರು ದೇಶಗಳಲ್ಲಿ ಮಕ್ಕಳ ದುರ್ಬಳಕೆ ಹಾಗೂ ದುಡಿತ ಒಂದು ಸಾಮಾಜಿಕ ದುರಂತವೆಂಬಂತಿದೆ. ಇದು ವರ್ಷದಿಂದ ವರ್ಷಕ್ಕೆ ಮತ್ತಷ್ಟು ಗಂಭೀರ ಸ್ವರೂಪ ತಳೆಯುತ್ತಿದೆ. ಹದಿನಾಲ್ಕು ವರ್ಷ ವಯಸ್ಸನ್ನು ಮೀರದ ಅದೆಷ್ಟೋ ಮಕ್ಕಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಹೆಚ್ಚಿನ ಸಂಖ್ಯೆಯ ಬಾಲಕಾರ್ಮಿಕರು ಹೊಲ, ಗದ್ದೆ, ತೋಟಗಳು ಮುಂತಾದ ಗ್ರಾಮೀಣ ಪರಿಸರದಲ್ಲಿ ದುಡಿಯುತ್ತಿದ್ದರೆ, ಮಿಕ್ಕುಳಿದವರು ನಗರ ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿ ದುಡಿಯುತ್ತಿದ್ದಾರೆ.

@KTBS NOT TO BE REPUBLISHED



ಕಡುಬಡತನ, ಕೌಟುಂಬಿಕ ಕಲಹ, ವಿಚ್ಛೇದನ, ಕೌಟುಂಬಿಕ ಹಿಂಸೆ, ಪೋಷಕರ ಅತಿಯಾದ ನಿಯಂತ್ರಣ, ಉದ್ಯಮಿಗಳ ಲಾಭಕೋರತನ, ಅನಕ್ಷರತೆ, ಮಕ್ಕಳ ಅಪಹರಣ ಹಾಗೂ ಜೀತ ಮುಂತಾದ ಕಾರಣಗಳಿಂದ ಬಾಲಕಾರ್ಮಿಕರ ಸಮಸ್ಯೆ ಹೆಚ್ಚುತ್ತಲೇ ಇದೆ.

ಮಕ್ಕಳ ದುಡಿತವೆಂಬುದು ಸಾಮಾಜಿಕ ವ್ಯವಸ್ಥೆಯ ಒಂದು ಗಂಭೀರ ಪಿಡುಗಾಗಿದೆ. ಮಕ್ಕಳನ್ನು ದಿನವಿಡೀ ದುಡಿಸಿಕೊಳ್ಳುವುದೇ ಅಲ್ಲದೆ ಅವರ ಮಾನಸಿಕ, ಭಾವನಾತ್ಮಕ, ಶೈಕ್ಷಣಿಕ, ವೈದ್ಯಕೀಯ ಮತ್ತಿತರ ಅಗತ್ಯತೆಗಳ ಬಗ್ಗೆ ಇವರಿಗೆ ಯಾವುದೇ ಕಾಳಜಿ ಇರುವುದಿಲ್ಲ. ಅದರ ಬದಲು ಅವರನ್ನು ದೈಹಿಕವಾಗಿ, ಮಾನಸಿಕವಾಗಿ ಹಿಂಸಿಸುವುದು ಕಂಡುಬಂದಿದೆ.

ಅನಾರೋಗ್ಯ, ಪೌಷ್ಠಿಕ ಆಹಾರದ ಕೊರತೆ, ವೈದ್ಯಕೀಯ ಸೌಲಭ್ಯಗಳ ಕೊರತೆ, ಒತ್ತಾಯದ ದುಡಿತ, ಆರ್ಥಿಕ ಮತ್ತು ಸಾಮಾಜಿಕ ಶೋಷಣೆ ಇವೇ ಮುಂತಾದ ಕಾರಣಗಳಿಂದ ಲಕ್ಷಾಂತರ ಮಂದಿ ಬಾಲಕಾರ್ಮಿಕರು ಇಂದಿಗೂ ಬವಣೆ ಪಡುತ್ತಿದ್ದಾರೆ. ಆಟವಾಡುವ, ಕನಸು ಕಾಣುವ ಮತ್ತು ಓದುವ ವಯಸ್ಸಿನಲ್ಲಿ ಅವರನ್ನು ದುಡಿಮೆಗೆ ದೂಡಿ ಅವರ ಬಾಲ್ಯವನ್ನು ಕಸಿದುಕೊಳ್ಳಲಾಗಿದೆ.

ಬಾಲಕಾರ್ಮಿಕರನ್ನು ದುಡಿಯುವ ಕ್ಷೇತ್ರದಿಂದ ಹೊರ ತಂದು ಶೋಷಣೆಯಿಂದ ಮುಕ್ತಗೊಳಿಸಿದ ಮೇಲೆ ಅವರನ್ನು ಸುಧಾರಿಸಲು ಸರ್ಕಾರವು ಕಾರ್ಯ ಯೋಜನೆಗಳನ್ನು ಕಾಲದಿಂದ ಕಾಲಕ್ಕೆ ಸಿದ್ಧಪಡಿಸಿದೆ. ಭಾರತ ಸರ್ಕಾರವು 'ಬಾಲಕಾರ್ಮಿಕರ ಪುನರ್ವಸತಿ ಕಲ್ಯಾಣ ನಿಧಿ' ಸ್ಥಾಪನೆಯ ಮೂಲಕ ಬಾಲಕಾರ್ಮಿಕರ ಶೈಕ್ಷಣಿಕ, ವೈದ್ಯಕೀಯ, ಮೂಲಭೂತ ಅಗತ್ಯತೆಗಳನ್ನು ಪೂರೈಸುವ ಹಾಗೂ ಅವರ ಶೋಷಣೆಯನ್ನು ತಡೆಯುವ ಕಾರ್ಯ ಯೋಜನೆಯನ್ನು ಹಮ್ಮಿಕೊಂಡಿದೆ.

ಬಾಲಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕೆಂದು 'ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯನ್ನು' (1986) ಜಾರಿಗೊಳಿಸಲಾಗಿದೆ. ಈ ಕಾಯ್ದೆ ಅಥವಾ ಶಾಸನವನ್ನು ಉಲ್ಲಂಘಿಸಿದ ಉದ್ಯೋಗಪತಿಗಳು ಪ್ರತಿಯೊಬ್ಬ ಬಾಲ ಕಾರ್ಮಿಕನ ಪರವಾಗಿ 20,000/– ರೂ ಗಳ ದಂಡವನ್ನು ಕಲ್ಯಾಣ ನಿಧಿಗೆ ಕಡ್ಡಾಯವಾಗಿ ಭರಿಸಬೇಕಾಗುತ್ತದೆ.

©KTBS NOT TO BE REPUBLISHED

**ಸಾಂವಿಧಾನಿಕ ಪರಿಹಾರ ಕ್ರಮಗಳು :**

ನಮ್ಮ ಸಂವಿಧಾನದ 24ನೇ ವಿಧಿಯು 14 ವರ್ಷಕ್ಕೂ ಕಿರಿಯ ವಯಸ್ಸಿನ ಮಕ್ಕಳನ್ನು ದುಡಿಮೆಗೆ ನೇಮಿಸುವುದು ಶಿಕ್ಷಾರ್ಹ ಅಪರಾಧ' ಎಂದು ಘೋಷಿಸಿದೆ. ಅಪಾಯಕಾರಿಯಾದ ಯಾವುದೇ ಕೈಗಾರಿಕಾ ಘಟಕದಲ್ಲಿ ಮಕ್ಕಳನ್ನು ಉದ್ಯೋಗಿಗಳಾಗಿ ನೇಮಕ ಮಾಡಬಾರದು ಎಂದು ಎಚ್ಚರಿಸಿದೆ. ಸಂವಿಧಾನದ ರಾಜ್ಯ ನಿರ್ದೇಶಕ ಸೂತ್ರಗಳ ಪ್ರಕಾರ ಮಕ್ಕಳ ಹಿತ ಸಂರಕ್ಷಣೆಯನ್ನು ಸಾಧಿಸುವ ಹೊಣೆಗಾರಿಕೆ ಸರ್ಕಾರಕ್ಕಿದೆ ಎಂದು ತಿಳಿಸಿದೆ.

**ಗಮನಿಸಿ :** 2011 ರ ಜನಗಣತಿಯಂತೆ ಭಾರತದಲ್ಲಿ ಇಂದಿಗೂ 1.26 ಕೋಟಿ ಮಕ್ಕಳು ಮನೆಗಳಲ್ಲಿ, ಬೀದಿ ಬದಿಯಲ್ಲಿ, ಕಾರ್ಖಾನೆ ಹಾಗೂ ಕೃಷಿಕ್ಷೇತ್ರಗಳಲ್ಲಿ ಬಾಲಕಾರ್ಮಿಕರಾಗಿ ಬಲವಂತದ ದುಡಿಮೆಗೆ ಗುರಿಯಾಗಿದ್ದಾರೆ. ಇದೇ ರೀತಿ ಇಡೀ ಪ್ರಪಂಚದಲ್ಲಿ 21.5 ಕೋಟಿ ಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ದುಡಿತಕ್ಕೆ ಒಳಗಾಗಿದ್ದಾರೆ.

ಬಾಲಕಾರ್ಮಿಕತನವನ್ನು ನಿರ್ಮೂಲನ ಮಾಡಲು ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ. 1988 ರಲ್ಲಿ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯನ್ನು (NCLP- National Child Labour Project) ಜಾರಿಗೆ ತಂದಿದೆ. ಈ ಯೋಜನೆಯು ರಾಜ್ಯಗಳ ಹಂತದಲ್ಲಿಯೂ ಇದೆ. ರಾಜ್ಯದಲ್ಲಿ ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು ಸೇರಿ ಕಾರ್ಖಾನೆಗಳಿಗೆ ಭೇಟಿ ಮಾಡಿ ಬಾಲಕಾರ್ಮಿಕರನ್ನು ಪತ್ತೆ ಹಚ್ಚುತ್ತಾರೆ. ಬಾಲಕಾರ್ಮಿಕರಾಗಿ ಸಿಕ್ಕಿದಂತಹ ಮಕ್ಕಳನ್ನು ಕರೆತಂದು ಎಲ್ಲಾ ರೀತಿಯ ಉಚಿತ ಸೌಲಭ್ಯಗಳೊಂದಿಗೆ ಶಿಕ್ಷಣವನ್ನು ನೀಡಲಾಗುತ್ತದೆ. ಇಂತಹ ಮಕ್ಕಳ ಶಿಕ್ಷಣಕ್ಕಾಗಿ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಬಾಲಮಂದಿರಗಳನ್ನು ತೆರೆದಿದ್ದು, ಈ ಮಕ್ಕಳಿಗೆ ಉಚಿತವಾಗಿ ವಸತಿ, ಊಟ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಸರ್ವಶಿಕ್ಷಣ ಅಭಿಯಾನದಲ್ಲಿ ಕರ್ನಾಟಕ ರಾಜ್ಯದಲ್ಲಿ 'ಕೂಲಿಯಿಂದ ಶಾಲೆಗೆ' ಎಂಬ ಕಾರ್ಯಕ್ರಮದ ಮೂಲಕ ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆದು ಶಾಲೆಯಲ್ಲಿ ದಾಖಲಿಸಿಕೊಂಡು ಉಚಿತ ಶಿಕ್ಷಣ ನೀಡಲಾಗುತ್ತದೆ. "ಶಿಕ್ಷಣಹಕ್ಕು ಕಾಯ್ದೆ 2009" ರಲ್ಲಿ 6 ರಿಂದ 14 ವರ್ಷ ಮಕ್ಕಳಿಗೆ ಕಡ್ಡಾಯವಾಗಿ ಉಚಿತ ಶಿಕ್ಷಣದ ಹಕ್ಕನ್ನು ಕಲ್ಪಿಸಿದೆ. ಈ ಕಾಯ್ದೆಯ ಪ್ರಕಾರ ಖಾಸಗಿ ಶಾಲೆಗಳಲ್ಲಿ ಶೇ 25ರಷ್ಟು ಸೀಟುಗಳನ್ನು ಬಾಲಕಾರ್ಮಿಕ ಮಕ್ಕಳು, ಹಿಂದುಳಿದ ವರ್ಗದ ಮಕ್ಕಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳು ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಮೀಸಲಿಡಬೇಕಾಗಿದೆ.

ಸರ್ವೋಚ್ಚ ನ್ಯಾಯಾಲಯವು ಬಾಲಶ್ರಮಿಕರ ಶೋಷಣೆ ತಪ್ಪಿಸಿ ಅವರ ಆರ್ಥಿಕ ಆಸಕ್ತಿ ಹಾಗೂ ಮಾನವೀಯ ಹಕ್ಕುಗಳನ್ನು ಸಂರಕ್ಷಿಸಲು ಬಾಲಕಾರ್ಮಿಕ ಪುನರ್ವಸತೀಕರಣ ಕಲ್ಯಾಣ ನಿಧಿಯನ್ನು ಸ್ಥಾಪಿಸಬೇಕೆಂದು ಆದೇಶಿಸಿದೆ. ಭಾರತ ಸರ್ಕಾರವು 1987 ರಲ್ಲಿ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ 'ರಾಷ್ಟ್ರೀಯ ನೀತಿ'ಯನ್ನು ಜಾರಿಗೊಳಿಸಿತು. 1988 ರಲ್ಲಿ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಯಯೋಜನೆ (ಪ್ರಕಲ್ಪಿತ ಯೋಜನೆ)ಯನ್ನು ರೂಪಿಸಿತು. 2006 ರಲ್ಲಿ ಸರ್ಕಾರ "ಬಾಲಶ್ರಮ ನಿರ್ಮೂಲನ ಮತ್ತು ಪುನರ್ವಸತೀಕರಣ ಕಾಯ್ದೆ"ಯನ್ನು ಜಾರಿಗೊಳಿಸಿತು.

**ಚಟುವಟಿಕೆ :**

ನಿಮ್ಮ ಸ್ನೇಹಿತರು ಯಾರಾದರೂ ಬಾಲಕಾರ್ಮಿಕತನಕ್ಕೆ ಒಳಗಾಗಿದ್ದರೆ, ಶಾಲೆಯಿಂದ ಹೊರಗುಳಿದಿದ್ದರೆ ಕೂಡಲೇ ಶಿಕ್ಷಕರ ಗಮನಕ್ಕೆ ತನ್ನಿ.

© KTBS NOT TO BE REPUBLISHED

## ಬಾಲ್ಯವಿವಾಹ



ಬಾಲ್ಯವಿವಾಹ ನಮ್ಮ ಸಮಾಜವನ್ನು ಪರಂಪರಾಗತವಾಗಿ ಕಾಡಿದ ಒಂದು ಸಾಮಾಜಿಕ ಸಮಸ್ಯೆ. ಹಾಗಾದರೆ ಬಾಲ್ಯವಿವಾಹ ಎಂದರೇನು ಎನ್ನುವುದನ್ನು ತಿಳಿಯೋಣ.

ಕಾನೂನಿನ ಪ್ರಕಾರ ಬಾಲ್ಯವಿವಾಹ ಎಂದರೆ 18 ವರ್ಷದೊಳಗಿನ ಹುಡುಗಿಗೆ (ಬಾಲಕಿಗೆ) ಅಥವಾ 21 ವರ್ಷದೊಳಗಿನ ಹುಡುಗನಿಗೆ ಮದುವೆ ಮಾಡಿದರೆ ಅದನ್ನು ಬಾಲ್ಯವಿವಾಹ ಎಂದು ಕರೆಯಲಾಗುತ್ತದೆ. ಇಬ್ಬರಲ್ಲಿ ಯಾರಾದರೂ ಒಬ್ಬರು ಕಾನೂನು ಹೇಳುವುದಕ್ಕಿಂತ ಚಿಕ್ಕವರಿದ್ದರೆ ಅದು ಬಾಲ್ಯವಿವಾಹ. ಹುಡುಗನಿಗೆ 21 ವರ್ಷ ಆಗಿರಬೇಕು ಹಾಗೂ ಹುಡುಗಿಗೆ 18 ವರ್ಷ ಆಗಿರಬೇಕು. ಇಲ್ಲದಿದ್ದಲ್ಲಿ ಅಂತಹ ಮದುವೆ ಬಾಲ್ಯವಿವಾಹವಾಗುತ್ತದೆ. ಜೊತೆಗೆ 18 ವರ್ಷದೊಳಗಿನ ಬಾಲಕಿಯನ್ನು ಯಾರೇ ದೊಡ್ಡವರು ಮದುವೆಯಾದಲ್ಲಿ ಅದು ಬಾಲ್ಯವಿವಾಹವಾಗುತ್ತದೆ. ಆ ವಯಸ್ಸಿನ ಒಳಗೆ ಯಾರದ್ದೇ ಮದುವೆ ಆದಲ್ಲಿ ಕಾನೂನುಬಾಹಿರ ಮತ್ತು ಅದು ಅಪರಾಧ.

**ನಿಮಗಿದು ತಿಳಿದಿರಲಿ :**

ಬಾಲ್ಯವಿವಾಹ ಯಾಕೆ ಮಾಡಬಾರದು ಎಂದರೆ 18 ವರ್ಷದೊಳಗಿನ ಮಕ್ಕಳಿಗೆ ಮದುವೆ ಮಾಡಿದರೆ ಅದು ಕಾನೂನು ಪ್ರಕಾರ ಅಪರಾಧ. ಯಾವುದೇ ಹೆಣ್ಣಿಗೆ 'ಮದುವೆ' ಎಂಬ ಪದ್ಧತಿಗೆ ಒಳಗಾಗಬೇಕಾದರೆ ಅವಳ ದೇಹ, ಮನಸ್ಸು, ಗರ್ಭಕೋಶ, ಮಾನಸಿಕ, ಬೌದ್ಧಿಕ, ಒಟ್ಟಾರೆ ಶಾರೀರಿಕ ಸಾಮರ್ಥ್ಯ ಬೆಳೆಯಲು 18 ವರ್ಷ ಬೇಕು. ಮಾನವ ಸಮಾಜದಲ್ಲಿ ವಿವಾಹವು ಸಂತಾನೋತ್ಪತ್ತಿ ಪ್ರಕ್ರಿಯೆಯ ಪ್ರಮುಖ ಭಾಗ. ಹೀಗಾಗಿ ಹೆಣ್ಣು ಮದುವೆ ನಂತರ 'ಗರ್ಭ' ಧರಿಸುವುದು 'ಮಗು'ವನ್ನು ಪಡೆಯುವುದು ಸಹಜ. ಹೆಣ್ಣು ಮಕ್ಕಳು 'ಗರ್ಭ' ಧರಿಸಲು ಅವರ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಅತ್ಯಂತ ಪ್ರಮುಖ. ವೈದ್ಯಕೀಯ ಸಂಶೋಧನೆಗಳ ಪ್ರಕಾರವೇ ಹೆಣ್ಣು ಮಕ್ಕಳಿಗೆ 'ಗರ್ಭ' ಧರಿಸಲು, ಅಂದರೆ ಗರ್ಭಕೋಶ ಸಮರ್ಥವಾಗಿ ಬೆಳೆಯಲು 18 ವರ್ಷ ಬೇಕು. ಆಗ ಮಾತ್ರ ಅದು ಭ್ರೂಣವನ್ನು 9 ತಿಂಗಳು ಸಮರ್ಥವಾಗಿ ಬೆಳೆಸಲು ಸಾಧ್ಯ. ಇಲ್ಲದಿದ್ದರೆ 'ಭ್ರೂಣ'(ಮಗು)ಕ್ಕೆ ತೊಂದರೆಯಾಗಿ ರಕ್ತಸ್ರಾವವಾಗಿ, ಭ್ರೂಣ ಸಾಯುವ ಸಾಧ್ಯತೆಗಳೇ ಹೆಚ್ಚು. ಚಿಕ್ಕ ವಯಸ್ಸಿನಲ್ಲಿ 'ಗರ್ಭ' ಧರಿಸುವುದರಿಂದ ಹೆರಿಗೆಯ ಸಮಯದಲ್ಲಿ ತಾಯಿ ಸಾವಿಗೆ ಒಳಗಾಗುವ ಸಾಧ್ಯತೆ ಹೆಚ್ಚು. ಈ ಕಾರಣಕ್ಕೆ ಕಡ್ಡಾಯವಾಗಿ ಹೆಣ್ಣಿಗೆ 18 ವರ್ಷ ಆದ ಮೇಲೆಯೇ ಮದುವೆ ಮಾಡಬೇಕು ಎಂದು ಕಾನೂನು ರೂಪಿಸಲಾಗಿದೆ. ಅದಕ್ಕಾಗಿ ಹೆಣ್ಣು ಮಕ್ಕಳಿಗೆ 18 ವರ್ಷ ಪೂರ್ಣಗೊಂಡ ಮೇಲೆಯೇ ಮದುವೆ ಮಾಡಬೇಕು.

ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೊದಲು ಮಾಡುವ ವಿವಾಹವನ್ನು, ಬಾಲ್ಯವಿವಾಹ ಎಂದು ಕಾನೂನಲ್ಲಿ ಪರಿಗಣಿಸಿ, ಶಿಕ್ಷಾರ್ಹ ಅಪರಾಧ ಎಂದು ಹೇಳಲಾಗಿದೆ. ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಇಲ್ಲದೆ, ಅವರಿಗೆ ಹುಟ್ಟುವ ಮಕ್ಕಳ ದೈಹಿಕ ಬೆಳವಣಿಗೆ ಸೇರಿದಂತೆ ಎಲ್ಲವೂ ಕುಂಠಿತವಾಗುತ್ತದೆ. ಅದಕ್ಕಾಗಿ ಕಾನೂನಿನಲ್ಲಿ ಬಾಲ್ಯವಿವಾಹವನ್ನು ನಿಷೇಧಿಸಲಾಗಿದೆ.

©KTBS NOT TO BE REPUBLISHED

## ಬಾಲ್ಯವಿವಾಹಕ್ಕೆ ಕಾರಣಗಳು :

1. ಬಾಲ್ಯವಿವಾಹಕ್ಕೆ ಪ್ರಮುಖ ಕಾರಣ 'ಲಿಂಗ ತಾರತಮ್ಯ'. ಹೆಣ್ಣು ಬೇರೆಯವರ ಮನೆಗೆ ಹೋಗುವವಳು ಅವಳನ್ನು ಬೇಗ ಮದುವೆ ಮಾಡಿ ಕಳುಹಿಸಬೇಕು ಎಂಬ ನಂಬಿಕೆ. 'ಹೆಣ್ಣು' ಮತ್ತು 'ಗಂಡು' ಮಕ್ಕಳ ನಡುವಿನ ಭೇದಭಾವ ಇಂದು ಹೆಚ್ಚು ಬಾಲ್ಯವಿವಾಹಕ್ಕೆ ಕಾರಣವಾಗಿದೆ. ಅಪ್ರಾಪ್ತರನ್ನು ಮದುವೆ ಮಾಡುವ ಒಂದು ಸಂಪ್ರದಾಯದ ಕಾರಣವಾಗಿಯೂ ಬಾಲ್ಯವಿವಾಹ ನಡೆಯುತ್ತದೆ. ಹಿಂದೆ ಬಾಲ್ಯವಿವಾಹಕ್ಕೆ ಒಳಗಾದವರೆಲ್ಲರೂ ಕುಟುಂಬದಲ್ಲಿ ತಲೆಮಾರುಗಳಿಂದ ನಡೆದುಬಂದ ಕ್ರಮದಂತೆ ಅದನ್ನೇ ಮುಂದುವರಿಸುತ್ತಾರೆ.

2. 'ಬಾಲ್ಯವಿವಾಹ'ಕ್ಕೆ ಪ್ರಮುಖ ಕಾರಣ ಶಿಕ್ಷಣ ಇಲ್ಲದಿರುವಿಕೆ, ಬಾಲಕಾರ್ಮಿಕತೆ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ. ಚಿಕ್ಕ ವಯಸ್ಸಿನಲ್ಲಿ ಶಾಲೆಗೆ ಹೋಗದೇ ಬಾಲಕಾರ್ಮಿಕರಾಗಿದ್ದಲ್ಲಿ ಮುಂದೆ ಅನಕ್ಷರಸ್ಥರಾಗಿ ಬಾಲ್ಯವಿವಾಹದಂತಹ ಸಮಸ್ಯೆಗೆ ಒಳಗಾಗುತ್ತಾರೆ. ಉದಾಹರಣೆಗೆ, 8ನೇ ತರಗತಿ ಅಥವಾ 10ನೇ ತರಗತಿಯ ವರೆಗೆ ಓದಿದ ಅಥವಾ ಶಿಕ್ಷಣ ಪಡೆದಂತಹ ಬಡ ಕುಟುಂಬಗಳು, ತಮ್ಮ ಮಕ್ಕಳನ್ನು 18–21 ವರ್ಷದೊಳಗೆ ಮದುವೆ ಮಾಡುವುದಿಲ್ಲ. ಆದ್ದರಿಂದ 18 ವರ್ಷದ ತನಕ 'ಶಿಕ್ಷಣ' ಎಷ್ಟು ಪ್ರಮುಖ ಎಂಬುದನ್ನು ತಿಳಿಯಬೇಕು.

3. ಕಾನೂನಿನ ಕನಿಷ್ಠ ಮಟ್ಟದ ಅನುಷ್ಠಾನ ಮತ್ತು ಬಳಕೆಯ ಕೊರತೆ. ಶಿಕ್ಷಣ ವ್ಯವಸ್ಥೆಯಲ್ಲಿ ಕಾನೂನುಗಳ ಅನುಷ್ಠಾನದ ಕೊರತೆ. ಶಿಕ್ಷಣಕ್ಕೆ, ಸಮಾಜದ / ಸಮುದಾಯಗಳ / ಸಾರ್ವಜನಿಕ ಅಸಹಕಾರ. ಮಕ್ಕಳ ಹಕ್ಕುಗಳ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳ ದೋಷಪೂರಿತವಾದ ಅನುಷ್ಠಾನ.

©KTBS NOT TO BE REPUBLISHED

## ಬಾಲ್ಯವಿವಾಹದ ದುಷ್ಪರಿಣಾಮಗಳು

ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತವಾಗಿ, ಅವರು ಪ್ರಶ್ನಿಸುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ. ಇದರ ಪರಿಣಾಮವಾಗಿ ಮಕ್ಕಳ ಮೇಲೆ ಅತಿಯಾದ ದೌರ್ಜನ್ಯ, ನಿರ್ಲಕ್ಷ್ಯ, ಹಿಂಸೆ, ಶೋಷಣೆ ಮತ್ತು ಲೈಂಗಿಕ ದೌರ್ಜನ್ಯ ಹೆಚ್ಚುತ್ತವೆ. ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆ – ಬಾಲ್ಯತನ, ಶಿಕ್ಷಣ, ಮನೋರಂಜನೆ, ಗೆಳೆಯರ ಒಡನಾಟಕ್ಕೆ ಧಕ್ಕೆ, ಅಪೌಷ್ಟಿಕತೆ, ರಕ್ತಹೀನತೆ, ಅನಾರೋಗ್ಯ, ಗರ್ಭಪಾತ, ಶಿಶುಮರಣ, ತಾಯಿಮರಣಕ್ಕೆ ಕಾರಣವಾಗುತ್ತದೆ. ವಿಶೇಷವಾಗಿ ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲಿ ವಿಧವೆಯಾಗುವ ಸಂಭವ ಹೆಚ್ಚು. ಹೆಣ್ಣು ಮಕ್ಕಳು ಯಾವುದೇ ಸಾಮಾಜಿಕ ಭದ್ರತೆಗಳಿಲ್ಲದೆ ಆಗಾಗ ದೌರ್ಜನ್ಯಕ್ಕೆ ಒಳಗಾಗುವ ಸಂದರ್ಭಗಳು ಹೆಚ್ಚು.

## ಬಾಲ್ಯವಿವಾಹ ತಡೆ ಹೇಗೆ

ಕರ್ನಾಟಕ ರಾಜ್ಯ ಸರ್ಕಾರ ಸುಮಾರು 47 ವಿವಿಧ ಹಂತದ ಅಧಿಕಾರಿಗಳನ್ನು 'ಬಾಲ್ಯವಿವಾಹ ನಿಷೇಧಾಧಿಕಾರಿಗಳು' ಎಂದು ನಿಗದಿಪಡಿಸಿದೆ. ಆದ್ದರಿಂದ ಎಲ್ಲೇ ಬಾಲ್ಯವಿವಾಹ ನಡೆದಾಗ ನಾವು

ದೂರು ನೀಡಬಹುದು. ಪ್ರಪ್ರಥಮವಾಗಿ ಮಕ್ಕಳ ಸಹಾಯವಾಣಿ 1098ಗೆ ದೂರು ನೀಡಬಹುದು. ದೂರು ನೀಡಿದವರು ಹೆಸರು ಹೇಳದೆಯೂ ಇರಬಹುದು. ಸ್ಥಳೀಯವಾಗಿ ನಿಮ್ಮ ಮನೆ ಪಕ್ಕದ ಯಾವುದೇ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕರಿಗೆ, ಗ್ರಾಮ ಲೆಕ್ಕಿಗರಿಗೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ, ನಗರದಲ್ಲಿ ಆರೋಗ್ಯ ನಿರೀಕ್ಷಕರುಗಳಿಗೆ ಅಥವಾ ಆ ವ್ಯಾಪ್ತಿಯ ಪೊಲೀಸ್ ಠಾಣೆಗೆ ದೂರು ನೀಡಬಹುದು. ಇವರೆಲ್ಲರೂ ಬಾಲ್ಯವಿವಾಹ ನಿಷೇಧಾಧಿಕಾರಿಗಳು. ಅಂದರೆ 'ಬಾಲ್ಯವಿವಾಹ' ಆಗದಂತೆ ನೋಡಿಕೊಳ್ಳಬೇಕಾದವರು. ಒಂದು ವೇಳೆ ಬಾಲ್ಯ ವಿವಾಹ ನಡೆದಿದ್ದರೆ ಅದರ ವಿರುದ್ಧ ಕ್ರಮಕೈಗೊಳ್ಳಲು ಪೊಲೀಸ್ ಠಾಣೆಗೆ ಕಾನೂನು ರೀತ್ಯಾ ದೂರು ಅಥವಾ ಪ್ರಕರಣ ದಾಖಲಿಸುವವರು ಆಗಿದ್ದಾರೆ. ಜೊತೆಗೆ ತಾಲ್ಲೂಕು/ಜಿಲ್ಲಾಮಟ್ಟದ ಎಲ್ಲಾ ಅಧಿಕಾರಿಗಳು ಬಾಲ್ಯವಿವಾಹ ನಿಷೇಧಾಧಿಕಾರಿಯಾಗಿರುತ್ತಾರೆ. ಇವರಿಗೆ ಯಾವುದೇ ಸಮಯದಲ್ಲಿಯಾದರೂ ಬಾಲ್ಯವಿವಾಹ ಕುರಿತು ದೂರು ನೀಡಬಹುದು.

## ಬಾಲ್ಯವಿವಾಹಕ್ಕೆ ಪರಿಹಾರಗಳು

1. 18 ವರ್ಷದ ತನಕ ಯಾವ ಮಕ್ಕಳು ಶಾಲೆ / ಕಾಲೇಜು ಬಿಡದಿರುವಂತೆ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ. ಅಂದರೆ 100% ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಬೇಕು. ಹಾಜರಾತಿಯ ಜೊತೆಗೆ 100% ಜನನ ನೋಂದಣಿ ಮತ್ತು ಜನನ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯ ಮಾಡುವುದು.
2. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು, ಬಾಲಕಿಯರ ಬಲವರ್ಧನೆ ಮತ್ತು ಸಬಲೀಕರಣ ಆದ್ಯತೆ. ಎಲ್ಲೇ ಬಾಲ್ಯವಿವಾಹ ನಡೆದರೂ ತಪ್ಪದೇ ದೂರು ನೀಡುವುದು, ಖಂಡಿಸುವುದು, ಪ್ರಶ್ನಿಸುವುದು.

## ಬಾಲ್ಯವಿವಾಹ ನಿಷೇಧ ಕಾಯಿದೆ – 2006

ಭಾರತದ ಎಲ್ಲಾ ರಾಜ್ಯಗಳಿಗೆ ಈ ಕಾಯಿದೆ ಅನ್ವಯಿಸುತ್ತದೆ. ಕೆಲವು ತಿದ್ದುಪಡಿಯ ಮೂಲಕ 2006ರಲ್ಲಿ ಬಾಲ್ಯ ವಿವಾಹ ನಿಷೇಧ ಕಾಯಿದೆ ಜಾರಿಗೆ ಬಂದಿದೆ. ಹಿಂದೆ 1929 ಮತ್ತು 1986ರಲ್ಲಿ ಇತ್ತು. ಆದರೆ ಭಾರತ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ 1992 ಡಿಸೆಂಬರ್ 11 ರಂದು ಸಹಿ ಮಾಡಿದ ಮೇಲೆ, ಕೆಲವು ಮಕ್ಕಳ ಸ್ನೇಹಿ ಬದಲಾವಣೆಗಳೊಂದಿಗೆ ಹೊಸ ಕಾನೂನನ್ನು ಜಾರಿಗೆ ತರಲಾಯಿತು.

> ***ಚಟುವಟಿಕೆ :*** *ನಿಮ್ಮ ಸ್ನೇಹಿತರು ಯಾರಾದರೂ ಬಾಲ್ಯವಿವಾಹವಾಗುವ ಪರಿಸ್ಥಿತಿ ಕಂಡುಬಂದರೆ ತಕ್ಷಣ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಗೆ ಮತ್ತು ಅದರ ಸದಸ್ಯರ ಗಮನಕ್ಕೆ ತನ್ನಿ ಅಥವಾ 1098ಕ್ಕೆ ಕರೆ ಮಾಡಿ.*

ಹೆಣ್ಣು ಅಥವಾ ಗಂಡಿನಲ್ಲಿ ಯಾರಾದರೂ ಒಬ್ಬರು ಅಥವಾ ಇಬ್ಬರೂ ಚಿಕ್ಕವರಾದರೂ ಅದು ಅಪರಾಧ. ಯಾವುದೇ ಚಿಕ್ಕ ಹುಡುಗಿಯನ್ನು ಯಾರೇ ದೊಡ್ಡವರು ಮದುವೆಯಾದಲ್ಲಿ ಅವರು ಶಿಕ್ಷೆಗೆ ಅರ್ಹರು. ಇಂತಹ ಬಾಲ್ಯವಿವಾಹ ನಡೆದಲ್ಲಿ (ಮಕ್ಕಳನ್ನು ಬಿಟ್ಟು) ಮದುವೆ ಮಾಡಿದ, ಮಾಡಿಸಿದ, ಕುಮ್ಮಕ್ಕು ನೀಡಿದ, ಸಹಾಯ ಮಾಡಿದ, ಭಾಗವಹಿಸಿದವರೆಲ್ಲರೂ 2 ವರ್ಷ ಜೈಲು, 1 ಲಕ್ಷ ದಂಡ ಶಿಕ್ಷೆ ಅನುಭವಿಸಬೇಕಾಗುತ್ತದೆ. ಈ ಕಾಯಿದೆಯಲ್ಲಿ ಇರುವ ಕಾಲಂ–9, 10, 11, ರ ಪ್ರಕಾರ ಬಾಲ್ಯವಿವಾಹ ಮಾಡಿಸಿದ ಪುರೋಹಿತ, ಅಡುಗೆಯವರು, ಶಾಮಿಯಾನದವರು, ಫೋಟೋಗ್ರಾಫರ್, ವೀಡಿಯೋಗ್ರಾಫರ್, ವಾಲಗದವರು, ವಾಹನ ಚಾಲಕರು ಹಾಗೂ ಮದುವೆಯಲ್ಲಿ ಭಾಗವಹಿಸಿದ ಎಲ್ಲರೂ ಅಪರಾಧಿಗಳಾಗುತ್ತಾರೆ.

@KTBS NOT TO BE REPUBLISHED

ಪ್ರಮುಖವಾಗಿ ಮದುವೆ ಮಾಡಿದ ಹುಡುಗ / ಹುಡುಗಿಯ ತಂದೆ ತಾಯಿಗಳು ಕುಟುಂಬಸ್ಥರು ಹಾಗೂ ಮದುವೆ ಛತ್ರದ ಮುಖ್ಯಸ್ಥರು ಕೂಡ ಅಪರಾಧಿಗಳು. ಈ ಕಾನೂನಿನಲ್ಲಿ ಮದುವೆ ಪತ್ರಿಕೆ ಟೈಪ್ ಮಾಡಿದ, ಮುದ್ರಿಸಿದ, ಮುದ್ರಣಕಾರರು ಕೂಡ ಅಪರಾಧಿಗಳು ಎಂದು ಹೇಳುತ್ತದೆ. ಯಾಕೆಂದರೆ 'ಬಾಲ್ಯವಿವಾಹ' ಮಕ್ಕಳ ಹಕ್ಕುಗಳ ಉಲ್ಲಂಘನೆ. ಅದಕ್ಕೆ ಯಾರೇ ಸಹಕರಿಸಿದರು ಅಥವಾ ಅದನ್ನು ಪ್ರಶ್ನಿಸದೇ ಭಾಗವಹಿಸಿದರೆ ಅಥವಾ ನಮ್ಮ ಸಾಮಾಜಿಕ ಜವಾಬ್ದಾರಿಯನ್ನು ಮರೆತರೆ ಅದು ಮಕ್ಕಳ ಹಕ್ಕುಗಳ ಮತ್ತು ಮಾನವ ಹಕ್ಕಿನ ಉಲ್ಲಂಘನೆ. ಹಾಗಾಗಿ ಅವರೆಲ್ಲರೂ ಅಪರಾಧಿಗಳು. ಈ ದೇಶದ ಪ್ರಜೆಗಳು ತಮ್ಮ ಸಾಮಾಜಿಕ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಯಾರೂ ಮರೆಯುವಂತಿಲ್ಲ ಎಂದು ಈ ಕಾನೂನು ಸ್ಪಷ್ಟಪಡಿಸುತ್ತದೆ.

**ಸ್ತ್ರೀಯರ ಮೇಲಿನ ಹಿಂಸಾಚಾರ**

ಭಾರತೀಯ ಸ್ತ್ರೀಯರು ಎದುರಿಸುತ್ತಿರುವ ಹಲವಾರು ತೊಂದರೆಗಳಲ್ಲಿ ಹಿಂಸಾಚಾರವೂ ಒಂದು. ಇತ್ತೀಚಿನ ಶೈಕ್ಷಣಿಕ, ಆರ್ಥಿಕ, ರಾಜಕೀಯ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿ ಸ್ತ್ರೀಯರ ಮೇಲೆ ಹಿಂಸಾಚಾರಗಳು ನಡೆಯುತ್ತಲೇ ಇವೆ. ಅತ್ಯಾಚಾರ, ದೌರ್ಜನ್ಯ, ವರದಕ್ಷಿಣೆ ಕಿರುಕುಳ, ದೈಹಿಕ ಮತ್ತು ಮಾನಸಿಕ ಕಿರುಕುಳ, ಗರ್ಭಪಾತಕ್ಕೆ ಪ್ರೇರೇಪಿಸುವುದು, ಅವಾಚ್ಯ ಪದಗಳ ಬಳಕೆ ಮುಂತಾದ ರೂಪದಲ್ಲಿ ಹಿಂಸಾಚಾರಗಳು ಕುಟುಂಬದ ಒಳಗೂ ಮತ್ತು ಹೊರಗೂ ಸ್ತ್ರೀಯರ ಮೇಲೆ ನಡೆಯುತ್ತಲೇ ಇವೆ. ಅವುಗಳಲ್ಲಿ ಕೆಲವು ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚಿಸೋಣ.

**ವರದಕ್ಷಿಣೆ :**

ಭಾರತೀಯ ವಿವಾಹ ಪದ್ಧತಿಯಲ್ಲಿ ಕಂಡು ಬಂದಿರುವ ವರದಕ್ಷಿಣೆಯಲ್ಲಿ 'ವರ' ಎಂದರೆ ವಿವಾಹವಾಗುವ ಪ್ರಾಪ್ತ ವಯಸ್ಸಿನ ಗಂಡು, ದಕ್ಷಿಣೆ ಎಂದರೆ 'ಬಳುವಳಿ ನೀಡುವಿಕೆ' ಎಂದರ್ಥ.

ವಿವಾಹದ ಉಡುಗೊರೆಯಾಗಿ ವಧುವಿನ ಕುಟುಂಬದವರಿಂದ ನಾನಾರೂಪದಲ್ಲಿ ಅಪೇಕ್ಷಿಸಲಾಗುವ ಸ್ವತ್ತು, ಚಿನ್ನಾಭರಣ, ನಗದು ಅಥವಾ ವಾಹನ ಇತ್ಯಾದಿಗಳು ವರದಕ್ಷಿಣೆಯ ರೂಪಗಳಾಗಿರುತ್ತವೆ. ವರದಕ್ಷಿಣೆಯನ್ನು ಕೊಡುವುದು ಹಾಗೂ ಪಡೆಯುವುದು ಶಿಕ್ಷಾರ್ಹ ಅಪರಾಧ.

ವರನ ಕಡೆಯವರ ಬೇಡಿಕೆ ಮೇರೆಗೆ ಕೇಳಿದಷ್ಟು ಹಣ, ಚಿನ್ನಾಭರಣ ಇತ್ಯಾದಿಗಳನ್ನು ನೀಡಬೇಕಾದ ಅನಿವಾರ್ಯತೆ ವಧುವಿನ ಕಡೆಯವರಿಗೆ ಉಂಟಾದರೆ ಅದು ಒಂದು ಬಗೆಯ ಶೋಷಣೆಯಾಗುತ್ತದೆ. ಈ ಶೋಷಣೆಯಿಂದ ವಧುವಿನ ಕಡೆಯವರು ತೀವ್ರ ಆರ್ಥಿಕ ಮತ್ತು ಮಾನಸಿಕ ಸಂಕಷ್ಟಗಳಿಗೆ ಒಳಗಾಗುತ್ತಾರೆ.

ಹೀಗೆ ವರದಕ್ಷಿಣೆ ಎಂಬುದು ಸ್ತ್ರೀಯರನ್ನು ಕಾಡುತ್ತಿರುವ ಒಂದು ಸಾಮಾಜಿಕ ಪಿಡುಗಾಗಿದೆ. ವರದಕ್ಷಿಣೆಯಿಂದ ಸ್ತ್ರೀಯರ ಮೇಲೆ ದೌರ್ಜನ್ಯವೆಸಗಲಾಗುತ್ತಿದೆಯಲ್ಲದೆ ಅವರನ್ನು ಶೋಷಣೆ, ಕೊಲೆ ಮತ್ತು ಹಿಂಸೆಗಳಿಗೆ ಒಳಪಡಿಸಲಾಗುತ್ತಿದೆ.

NOT TO BE REPUBLISHED
@KTBS

## ವರದಕ್ಷಿಣೆಯ ದುಷ್ಪರಿಣಾಮಗಳು

ವರದಕ್ಷಿಣೆ ಸ್ತ್ರೀಯರ ಸ್ವಾಭಿಮಾನ, ಗೌರವ, ಸ್ಥಾನಮಾನವನ್ನು ಕುಗ್ಗಿಸುತ್ತದೆ ಮತ್ತು ಕೌಟುಂಬಿಕ ಕಲಹಗಳನ್ನುಂಟು ಮಾಡುತ್ತದೆ. ಅದು ಸ್ತ್ರೀ ಪುರುಷರ ನಡುವೆ ಒಡಕು ಉಂಟಾಗಲು ಕಾರಣವಾಗಿದೆ. ವರದಕ್ಷಿಣೆ ಪಿಡುಗಿನಿಂದಾಗಿ ಅನೈತಿಕತೆ ಮತ್ತು ಕ್ರೌರ್ಯ ಹೆಚ್ಚುವುದು, ಕೌಟುಂಬಿಕ ಸಂಬಂಧಗಳು ಹಾಳಾಗುವುವು. ವರದಕ್ಷಿಣೆ ಹಣದ ದಾಹದಿಂದಾಗಿ ಮೋಸದ ವಿವಾಹಗಳು ಕೂಡಾ ನಡೆಯುತ್ತಿವೆ. ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ವಿವಾಹ ವಿಚ್ಛೇದನ ಪ್ರಕರಣಗಳ ಸಂಖ್ಯೆಗಳು ಹೆಚ್ಚುತ್ತಿವೆ.

## ವರದಕ್ಷಿಣೆ ಸಮಸ್ಯೆಯ ಪರಿಹಾರ ಕ್ರಮಗಳು :

### 1961 ರ ವರದಕ್ಷಿಣೆ ನಿಷೇಧ ಕಾಯ್ದೆ :

ವರದಕ್ಷಿಣೆ ಪಿಡುಗನ್ನು ಶಾಸನಾತ್ಮಕವಾಗಿ ನಿವಾರಣೆ ಮಾಡಲು ಭಾರತ ಸರ್ಕಾರ 1961 ರಲ್ಲಿ 'ವರದಕ್ಷಿಣೆ ನಿಷೇಧ' ಕಾಯ್ದೆಯನ್ನು ಜಾರಿಗೊಳಿಸಿತು. ವರದಕ್ಷಿಣೆ ಷರತ್ತಿನ ಮೇರೆಗೆ ವಿವಾಹವಾಗುವುದನ್ನು ಈ ಕಾನೂನು ನಿಷೇಧಿಸಿದೆ. ಈ ಕಾಯ್ದೆ ಉಲ್ಲಂಘಿಸಿದವರಿಗೆ 5000 ರೂ.ಗಳ ದಂಡ, ಇಲ್ಲವೇ 6 ತಿಂಗಳ ಕಾರಾಗೃಹವಾಸ, ಇಲ್ಲವೇ ಎರಡನ್ನೂ ಒಟ್ಟಿಗೆ ವಿಧಿಸಬಹುದಾಗಿದೆ.

ಈ ಕಾಯ್ದೆಯನ್ನು 1986ರಲ್ಲಿ ತಿದ್ದುಪಡಿಮಾಡಿ ಅದನ್ನು ಮತ್ತಷ್ಟು ಕಠಿಣಗೊಳಿಸಲಾಯಿತು. ತಿದ್ದುಪಡಿಗೊಂಡಿರುವ ಈ ಕಾಯ್ದೆ ಪ್ರಕಾರ ವರದಕ್ಷಿಣೆ ಕೊಡುವ ಮತ್ತು ತೆಗೆದುಕೊಳ್ಳುವ ಹಾಗೂ ಕೊಡುವಂತೆ ಒತ್ತಾಯಿಸುವ ವ್ಯಕ್ತಿಗಳಿಗೆ 5 ವರ್ಷಗಳಿಗೂ ಕಡಿಮೆಯಿರದ ಕಾರಾಗೃಹ ಶಿಕ್ಷೆ ಮತ್ತು 15,000 ರೂಗಳಿಗೆ ಕಡಿಮೆಯಿರದ ಹಣವನ್ನು ದಂಡವಾಗಿ ವಿಧಿಸಬಹುದು.

ವರದಕ್ಷಿಣೆ ಸಾವು ಪ್ರಕರಣವನ್ನು 'ಭಾರತ ದಂಡ ಸಂಹಿತೆ' (Indian Penal Code) ಹಾಗೂ 'ಭಾರತ ಅಪರಾಧ ವಿಚಾರಣಾ ಸಂಹಿತೆ'ಗೆ (Criminal Procedure Code) ಸೇರ್ಪಡೆಗೊಳಿಸಲಾಗಿದೆ. ಈ ವಿಚಾರಣೆಯನ್ನು ಜಾಮೀನು ರಹಿತ ಮತ್ತು ರಾಜಿರಹಿತ ನೆಲೆಯಲ್ಲಿ ನಡೆಸಬಹುದಾಗಿದೆ.

ಕಾನೂನಿನ ಮೂಲಕವಲ್ಲದೆ ಜನಜಾಗೃತಿ, ಅಂತರಜಾತಿ ವಿವಾಹ, ಆಧುನಿಕ ಪ್ರಚಾರ ಮಾಧ್ಯಮಗಳು, ಸ್ವಯಂ ಸೇವಾ ಸಂಘಟನೆಗಳು ಮತ್ತು ಮಹಿಳಾ ಸಂಘಟನೆಗಳನ್ನು ಪ್ರೋತ್ಸಾಹಿಸುವುದರ ಮೂಲಕ ವರದಕ್ಷಿಣೆ ಪಿಡುಗನ್ನು ತೊಲಗಿಸಬಹುದು.

© KTBS NOT TO BE REPUBLISHED

## ಹೆಣ್ಣು ಭ್ರೂಣಹತ್ಯೆ ಮತ್ತು ಹೆಣ್ಣು ಶಿಶುಹತ್ಯೆ

ಆಧುನಿಕ ಸ್ವತಂತ್ರ ಭಾರತದ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆಗಳೆರಡೂ ಕೂಡ ಅಮಾನವೀಯ ಪದ್ಧತಿಗಳಾಗಿವೆ.

### ಹೆಣ್ಣು ಭ್ರೂಣ ಹತ್ಯೆ

ಗರ್ಭದಲ್ಲಿರುವ ಭ್ರೂಣವು ಹೆಣ್ಣು ಭ್ರೂಣವಾಗಿದ್ದು, ಅದು ತಂದೆ–ತಾಯಿಯರಿಗೆ ಬೇಡವಾದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದೇ 'ಹೆಣ್ಣು ಭ್ರೂಣಹತ್ಯೆ'.

ಆಧುನಿಕ ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚು ಪ್ರಗತಿಯಾಗಿರುವ ಹಿನ್ನೆಲೆಯಲ್ಲಿ ತಾಯಿಯ ಗರ್ಭದಲ್ಲಿರುವ ಭ್ರೂಣವು ಹೆಣ್ಣೇ ಅಥವಾ ಗಂಡೇ ಎಂಬುದನ್ನು ಲಿಂಗ ಪರೀಕ್ಷಾ ವಿಧಾನಗಳಿಂದ ತಿಳಿಯಲು ಸಾಧ್ಯವಾಗಿದೆ. ಗಂಡು ಮಕ್ಕಳ ಬಯಕೆಯ ವ್ಯಾಮೋಹದಿಂದಾಗಿ ಆಧುನಿಕ ತಂತ್ರಜ್ಞಾನದ ದುರ್ಬಳಕೆ ನಡೆಯುತ್ತಿದೆ. ಸ್ಕ್ಯಾನಿಂಗ್ ಎಂಬ ಆಧುನಿಕ ತಂತ್ರಜ್ಞಾನದ ಬಳಕೆಯಿಂದ ತಾಯಿಯ ಗರ್ಭದಲ್ಲಿರುವ ಮಗುವಿನ ಲಿಂಗವನ್ನು ಪತ್ತೆ ಹಚ್ಚಿ ಅದು ಹೆಣ್ಣು ಶಿಶುವಾಗಿದ್ದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದರ ಮೂಲಕ ಗರ್ಭಪಾತದ ಪ್ರಕರಣಗಳು ಹೆಚ್ಚುತ್ತಿವೆ.

ಬಡತನ, ವರದಕ್ಷಿಣೆಯ ಭೀತಿ, ಅನಕ್ಷರತೆ, ಅಜ್ಞಾನ, ಸ್ತ್ರೀ ವಿರೋಧಿ ನಿಲುವುಗಳು, ಗಂಡುಮಗುವಿನ ಬಯಕೆ ಮುಂತಾದ ಕಾರಣಗಳಿಂದಾಗಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ನಡೆಯುತ್ತಿವೆ.

ಹೆಣ್ಣು ಭ್ರೂಣ ಹತ್ಯೆಯಂತಹ ಪ್ರಕರಣಗಳಿಂದ ಸ್ತ್ರೀ ಪುರುಷರ ಲಿಂಗಾನುಪಾತದಲ್ಲಿ ಏರುಪೇರು, ಲಿಂಗ ತಾರತಮ್ಯತೆ, ಹೆಣ್ಣಿನ ಅಪಮೌಲ್ಯೀಕರಣ ಮುಂತಾದ ದುಷ್ಪರಿಣಾಗಳುಂಟಾಗುತ್ತಿವೆ.

ಆಧುನಿಕ ತಂತ್ರಜ್ಞಾನದ ಮೂಲಕ ಗರ್ಭದಲ್ಲಿರುವ ಲಿಂಗ ಪತ್ತೆ ಹಚ್ಚುವುದನ್ನು ನಿಯಂತ್ರಿಸಲು 1994 ರಲ್ಲಿ 'ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ'ಯನ್ನು ಜಾರಿಗೆ ತರಲಾಯಿತು. ಆದರೂ ರಹಸ್ಯವಾಗಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಇಂದಿಗೂ ನಡೆಯುತ್ತಲೇ ಇವೆ.

**ಗಮನಿಸಿ :** ಭಾರತದ 2011ರ ಜನಗಣತಿಯಂತೆ ಕೇರಳ ಮತ್ತು ಪಾಂಡಿಚೇರಿ ರಾಜ್ಯಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ರಾಜ್ಯಗಳಲ್ಲಿ ಲಿಂಗಾನುಪಾತದಲ್ಲಿ ಪುರುಷರ ಸಂಖ್ಯೆಗಿಂತ ಸ್ತ್ರೀಯರ ಸಂಖ್ಯೆ ಕಡಿಮೆ ಇದೆ.

@KTBS NOT TO BE REPUBLISHED

| 2001ರ ಜನಗಣತಿಯಂತೆ ಲಿಂಗಾನುಪಾತ | | 2011ರ ಜನಗಣತಿಯಂತೆ ಲಿಂಗಾನುಪಾತ | | |
|---|---|---|---|---|
| ಸ್ತ್ರೀಯರು | ಪುರುಷರು | | ಸ್ತ್ರೀಯರು | ಪುರುಷರು |
| 933 | 1000 | | 940 | 1000 |
| | | ಗ್ರಾಮೀಣ | 947 | 1000 |
| | | ನಗರ | 926 | 1000 |

**ಹೆಣ್ಣು ಶಿಶು ಹತ್ಯೆ**

'ಜನನದ ನಂತರದಲ್ಲಿ ಹೆಣ್ಣು ಮಗುವನ್ನು ಹತ್ಯೆ ಮಾಡುವ ಕ್ರೂರ ಪದ್ಧತಿಯೇ ಹೆಣ್ಣು ಶಿಶು ಹತ್ಯೆ'. ಇತ್ತೀಚಿನ ದಿನಗಳಲ್ಲಿಯೂ ಹೆಣ್ಣು ಶಿಶು ಹತ್ಯೆಯ ಪ್ರಕರಣಗಳು ಅಲ್ಲಲ್ಲಿ ಬೆಳಕಿಗೆ ಬಂದಿವೆ.

ಹೆಣ್ಣು ಶಿಶು ಹತ್ಯೆಯಂತಹ ಹೇಯ ಕೃತ್ಯಗಳನ್ನು ತಡೆಗಟ್ಟಲು ಸರ್ಕಾರ ಪ್ರತಿಬಂಧಕ ಕಾಯ್ದೆಗಳನ್ನು ಜಾರಿಗೊಳಿಸಿದೆ. ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆಗಳೆರಡೂ ಶಿಕ್ಷಾರ್ಹ ಅಪರಾಧವಾಗಿವೆ.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಸಂವಿಧಾನದ ____________ ವಿಧಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸಿದೆ.
2. 'ಬಾಲ ಕಾರ್ಮಿಕ ನಿಷೇಧ ಕಾಯ್ದೆ' ಜಾರಿಗೆ ಬಂದ ವರ್ಷ ____________
3. ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ____________ ರಲ್ಲಿ 'ರಾಷ್ಟ್ರೀಯ ನೀತಿ' ಜಾರಿಗೊಳಿಸಿತು.
4. ವರದಕ್ಷಿಣೆ ನಿಷೇಧ ಕಾಯ್ದೆ ಮೊದಲು ____________ ರಲ್ಲಿ ಜಾರಿಗೆ ಬಂದಿತು.
5. ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾರಿಗೆ ಬಂದ ವರ್ಷ ____________ .

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಭಾರತದ ಯಾವುದಾದರೂ ಎರಡು ಸಾಮಾಜಿಕ ಸವಾಲುಗಳನ್ನು ಹೆಸರಿಸಿ.
2. ಬಾಲ ಕಾರ್ಮಿಕರು ಎಂದರೆ ಯಾರು ?
3. ಹೆಣ್ಣು ಭ್ರೂಣ ಹತ್ಯೆ ಎಂದರೇನು ?
4. ಹೆಣ್ಣು ಶಿಶುಹತ್ಯೆ ಎಂದರೇನು ?
5. ಬಾಲ್ಯ ವಿವಾಹ ಎಂದರೇನು ?

**III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :**

1. ಬಾಲ ಕಾರ್ಮಿಕ ಸಮಸ್ಯೆಗೆ ಕಾರಣಗಳಾವವು ? ತಿಳಿಸಿ.
2. ಬಾಲ ಕಾರ್ಮಿಕ ಸಮಸ್ಯೆಯಿಂದಾಗುವ ಪರಿಣಾಮಗಳೇನು ?
3. ಬಾಲ ಕಾರ್ಮಿಕತೆಯ ನಿರ್ಮೂಲನಾ ಕ್ರಮಗಳಾವವು ? ವಿವರಿಸಿ.
4. ವರದಕ್ಷಿಣೆ ಪಿಡುಗಿನಿಂದಾಗುವ ದುಷ್ಪರಿಣಾಮಗಳಾವವು ?
5. ವರದಕ್ಷಿಣೆ ಸಮಸ್ಯೆಗೆ ಪರಿಹಾರ ಕ್ರಮಗಳಾವವು ?
6. ಬಾಲ್ಯ ವಿವಾಹದ ಪರಿಣಾಮಗಳಾವವು ?

**IV. ಚಟುವಟಿಕೆ :**

1. ನಿಮ್ಮ ಊರಿನ ಸಾಮಾಜಿಕ ಸವಾಲುಗಳನ್ನು ಪಟ್ಟಿ ಮಾಡಿ ಅವುಗಳಿಗೆ ಪರಿಹಾರಗಳನ್ನು ಬರೆಯಿರಿ.

**V. ಯೋಜನೆ :**

1. ನಿಮ್ಮ ಶಾಲೆಗೆ ಕಾನೂನು ತಜ್ಞರನ್ನು ಕರೆದು, ಬಾಲ್ಯ ವಿವಾಹ, ಬಾಲಕಾರ್ಮಿಕತನ ಮತ್ತು ಶಿಶು ಹತ್ಯೆಗೆ ಸಂಬಂಧಿಸಿದಂತೆ ಇರುವ ಕಾನೂನಿನ ಬಗ್ಗೆ ಉಪನ್ಯಾಸ ಏರ್ಪಡಿಸಿ.

© KTBS NOT TO BE REPUBLISHED

ಭೂಗೋಳಶಾಸ್ತ್ರ

ಅಧ್ಯಾಯ–25

# ಭಾರತದ ಭೂ ಬಳಕೆ ಹಾಗೂ ಕೃಷಿ

X9L9X8

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು.
- ಭೂ ಬಳಕೆಯ ಪ್ರಕಾರಗಳು.
- ವ್ಯವಸಾಯದ ಅರ್ಥ ಮತ್ತು ಪ್ರಾಮುಖ್ಯತೆ.
- ವ್ಯವಸಾಯದ ಪ್ರಾಮುಖ್ಯತೆ.
- ವ್ಯವಸಾಯದ ವಿಧಗಳು.
- ಬೆಳೆಗಳ ಹಂಚಿಕೆ, ಬೆಳೆಯ ಮಾದರಿಯನ್ನು ನಿರ್ಧರಿಸುವ ಅಂಶಗಳು
- ಆಹಾರದ ಬೆಳೆಗಳು, ವಾಣಿಜ್ಯ ಬೆಳೆಗಳು, ನಾರಿನ ಬೆಳೆಗಳು, ಪಾನೀಯ ಬೆಳೆಗಳು, ತೋಟಗಾರಿಕೆ, ಪುಷ್ಪ ಬೇಸಾಯ.

**ಭೂ ಬಳಕೆ**

ಭೂಮಿ ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಅತಿ ಮುಖ್ಯವಾದುದು. ಇದನ್ನು ಸಾಗುವಳಿ, ಅರಣ್ಯ, ಹುಲ್ಲುಗಾವಲು, ಬೀಳುಭೂಮಿ, ವ್ಯವಸಾಯೇತರ ಬಳಕೆ, ಹೀಗೆ ವಿವಿಧ ಉದ್ದೇಶಗಳಿಗೆ ಬಳಸುವುದನ್ನೇ 'ಭೂ ಬಳಕೆ' ಎನ್ನುವರು.

**ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು :**

ಭೂಮಿಯನ್ನು ಅವುಗಳ ಗುಣಲಕ್ಷಣ ಹಾಗೂ ಅಗತ್ಯತೆಗೆ ಅನುಗುಣವಾಗಿ ವಿವಿಧ ಉದ್ದೇಶಗಳಿಗೆ ಬಳಸಲಾಗುವುದು. ಭೂ ಬಳಕೆಯ ಮೇಲೆ ಹಲವಾರು ಪ್ರಾಕೃತಿಕ, ಆರ್ಥಿಕ ಹಾಗೂ ಸಾಮಾಜಿಕ ಅಂಶಗಳು ಪ್ರಭಾವ ಬೀರುತ್ತವೆ. ಅವುಗಳಲ್ಲಿ ಭೂ ಸ್ವರೂಪಗಳು, ವಾಯುಗುಣ, ಮಣ್ಣಿನ ಲಕ್ಷಣಗಳು ಪ್ರಾಕೃತಿಕವಾಗಿ ಪ್ರಭಾವ ಬೀರುತ್ತವೆ. ಭೂ ಹಿಡುವಳಿ, ಜನಸಂಖ್ಯೆ, ವ್ಯವಸಾಯೋತ್ಪನ್ನಗಳ ಬೇಡಿಕೆ, ಉದ್ಯೋಗ, ಜನರ ಮನೋಭಾವ, ಸಾಮಾಜಿಕ ಪರಿಸ್ಥಿತಿ, ಮಾರುಕಟ್ಟೆ ಮೊದಲಾದ ಅಂಶಗಳು ಪ್ರಭಾವ ಬೀರುತ್ತವೆ. ತಾಂತ್ರಿಕತೆ, ನೀರಾವರಿ ಸೌಲಭ್ಯ, ಮಾನವನ ಸಾಮರ್ಥ್ಯ, ಭೂ ಒಡೆತನ ಮೊದಲಾದವು ಭೂ ಬಳಕೆಯ ಮೇಲೆ ಪ್ರಭಾವವನ್ನು ಬೀರುತ್ತವೆ.

**ಭೂ ಬಳಕೆಯ ಪ್ರಕಾರಗಳು (Types of land use) :**

ಭಾರತದಲ್ಲಿ ಲಭ್ಯವಿರುವ ಭೂಮಿಯ ಬಳಕೆಯನ್ನು ವಿವಿಧ ಪ್ರಕಾರಗಳನ್ನಾಗಿ ವಿಂಗಡಿಸಲಾಗಿದೆ. 1) ನಿವ್ವಳ ಸಾಗುವಳಿ ಕ್ಷೇತ್ರ, 2) ಅರಣ್ಯ ಭೂಮಿ, 3) ವ್ಯವಸಾಯೇತರ ಭೂ ಬಳಕೆ, 4) ಬೀಳು ಭೂಮಿ, 5) ಹುಲ್ಲುಗಾವಲು, 6) ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ ಇತ್ಯಾದಿ.

1) **ನಿವ್ವಳ ಸಾಗುವಳಿ ಕ್ಷೇತ್ರ :** ಇದು ಭಾರತದ ಭೂ ಬಳಕೆಯ ವಿಧಗಳಲ್ಲಿ ಅತ್ಯಂತ ಪ್ರಮುಖವಾಗಿದೆ. ಭಾರತದ ವ್ಯವಸಾಯ ಪ್ರಧಾನ ಆರ್ಥಿಕತೆಗೆ ಅನುಗುಣವಾಗಿ ಅತಿಹೆಚ್ಚು ಭೂಮಿಯನ್ನು ಸಾಗುವಳಿಗೆ ಬಳಸಲಾಗುತ್ತಿದೆ. ಭಾರತವು ಪ್ರಪಂಚದಲ್ಲಿ ಸಾಗುವಳಿ ಕ್ಷೇತ್ರದ ವಿಸ್ತೀರ್ಣದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ನಂತರ ಎರಡನೇ ಸ್ಥಾನದಲ್ಲಿದೆ. ಹರಿಯಾಣ, ಪಂಜಾಬ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಬಿಹಾರಗಳಲ್ಲಿ ನಿವ್ವಳ ಸಾಗುವಳಿ ಕ್ಷೇತ್ರವು ಪ್ರತಿಶತ 60ಕ್ಕಿಂತ ಹೆಚ್ಚಾಗಿದೆ.

2) **ಅರಣ್ಯ ಭೂಮಿ :** ಭಾರತದಲ್ಲಿ ಸಮೀಕ್ಷೆಗೊಳಪಟ್ಟ ಒಟ್ಟು ಭೂ ಪ್ರದೇಶ ಪ್ರತಿಶತ 21.3 ರಷ್ಟು ಮಾತ್ರ ಅರಣ್ಯಗಳಿಂದ ಕೂಡಿದೆ. ಅದು 1950–51 ರಲ್ಲಿ ಪ್ರತಿಶತ 16.2 ರಷ್ಟಿತ್ತು. ರಾಷ್ಟ್ರೀಯ ಅರಣ್ಯ

NOT TO BE REPUBLISHED ©KTBS

ಯೋಜನೆ ಪ್ರಕಾರ ಪ್ರತಿಶತ 33 ರಷ್ಟು ಅರಣ್ಯವಿರಬೇಕು. ಆದ್ದರಿಂದ ಅರಣ್ಯ ಭೂಮಿಯನ್ನು ಹೆಚ್ಚಿಸಲು ಸಾಕಷ್ಟು ಪ್ರಯತ್ನಿಸಲಾಗುತ್ತಿದೆ.

3) **ವ್ಯವಸಾಯೇತರ ಭೂ ಬಳಕೆ :** ಸಾಗುವಳಿ ಹಾಗೂ ಅರಣ್ಯ ಕ್ಷೇತ್ರದ ವಿಸ್ತಾರವನ್ನು ಹೊರತುಪಡಿಸಿ ವ್ಯವಸಾಯೇತರ ಬಳಕೆಗಾಗಿ ಹೆಚ್ಚು ಭೂಮಿಯನ್ನು ಬಳಸಲಾಗಿದೆ. ಕಟ್ಟಡ ನಿರ್ಮಾಣ, ಜಲಾಶಯ, ಕೈಗಾರಿಕೆ, ರಸ್ತೆ ಮೊದಲಾದವುಗಳ ನಿರ್ಮಾಣಕ್ಕಾಗಿ ಹೆಚ್ಚು ಭೂಮಿಯನ್ನು ಬಳಸಲಾಗುತ್ತಿದೆ.

4) **ಬೀಳು ಭೂಮಿ :** ಜನಸಂಖ್ಯೆ ಅಧಿಕಗೊಂಡಂತೆ ವ್ಯವಸಾಯೋತ್ಪನ್ನಗಳ ಮೇಲೆ ಹೆಚ್ಚು ಒತ್ತಡವಾಗಿದ್ದು, ಅದಕ್ಕೆ ಅನುಗುಣವಾಗಿ ಹೆಚ್ಚು ಕ್ಷೇತ್ರವನ್ನು ಸಾಗುವಳಿಗೆ ಬಳಸಲಾಗಿದೆ. ಅಲ್ಲದೆ ಬೀಳು ಬಿದ್ದಿದ್ದ ಹಾಗೂ ವ್ಯವಸಾಯ ಯೋಗ್ಯವಲ್ಲದ ಭೂ ಪ್ರದೇಶಗಳನ್ನು ಸಹ ತಾಂತ್ರಿಕತೆಯ ಅಳವಡಿಕೆಯೊಂದಿಗೆ ಇಂದು ವ್ಯವಸಾಯಕ್ಕೆ ಬಳಸಲಾಗಿದೆ.

5) **ಹುಲ್ಲುಗಾವಲು :** ವ್ಯವಸಾಯ ಪ್ರದೇಶದ ವಿಸ್ತರಣೆಯೊಂದಿಗೆ ಹುಲ್ಲುಗಾವಲುಗಳ ಕ್ಷೇತ್ರ ನಿರಂತರವಾಗಿ ಕಡಿಮೆಯಾಗಿದೆ. ಹಿಮಾಚಲ ಪ್ರದೇಶ ರಾಜ್ಯವು ಹೆಚ್ಚು ಹುಲ್ಲುಗಾವಲು ಪ್ರದೇಶವನ್ನು ಹೊಂದಿದ್ದು, ಪಂಜಾಬ, ಹರಿಯಾಣ ರಾಜ್ಯಗಳು ಅತ್ಯಂತ ಕಡಿಮೆ ಹುಲ್ಲುಗಾವಲುಗಳನ್ನು ಹೊಂದಿವೆ.

6) **ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ :** ಭಾರತದ ವಿವಿಧ ಭಾಗಗಳಲ್ಲಿ ಹಿಂದೆ ಬೇಸಾಯಕ್ಕೆ ಬಳಸಲಾಗುತ್ತಿದ್ದ ಕೆಲವು ಭಾಗಗಳು ಇಂದು ಮಣ್ಣಿನ ರಾಸಾಯನಿಕ ಸಂಯೋಜನೆಯ ಬದಲಾವಣೆಗಳಿಂದಾಗಿ ಅನುಪಯುಕ್ತವಾಗಿ ಪರಿಣಮಿಸಿವೆ.

## ವ್ಯವಸಾಯ

ವ್ಯವಸಾಯವು ಮಾನವನ ಪುರಾತನ ವೃತ್ತಿಗಳಲ್ಲಿ ಒಂದಾಗಿದ್ದು, ನಾಗರಿಕತೆಯ ಆರಂಭದಿಂದಲೂ ಮಾನವನು ಈ ವೃತ್ತಿಯಲ್ಲಿ ತೊಡಗಿರುವನು. ವ್ಯವಸಾಯ 'ಭೂಮಿಯನ್ನು ಉಳುಮೆ ಮಾಡುವ ಕಲೆ' ಎಂದು ವ್ಯಾಖ್ಯಾನಿಸಲಾಗಿದೆ. ಭೂಮಿಯನ್ನು ಉಳುಮೆ ಮಾಡಿ ಸಸ್ಯಗಳನ್ನು ಪೋಷಿಸಿ ಅದರಿಂದ ಮಾನವ ಮತ್ತು ಪ್ರಾಣಿಗಳಿಗೆ ಉಪಯೋಗವನ್ನು ಪಡೆಯುವುದನ್ನೇ ವ್ಯವಸಾಯ ಅಥವಾ ಕೃಷಿ ಎಂದು ಕರೆಯುವರು. ವ್ಯಾಪಕ ಅರ್ಥದಲ್ಲಿ ಇದು ಮೀನುಗಾರಿಕೆ, ಪಶುಪಾಲನೆ ಮತ್ತು ಅರಣ್ಯಗಾರಿಕೆಯನ್ನೂ ಸಹ ಒಳಗೊಂಡಿದೆ.

**ವ್ಯವಸಾಯದ ಪ್ರಾಮುಖ್ಯತೆ :** ವ್ಯವಸಾಯವು ಭಾರತೀಯರ ಮುಖ್ಯ ಉದ್ಯೋಗವಾಗಿದೆ. ಇದು ದೇಶದ ಎಲ್ಲ ಭಾಗಗಳಲ್ಲಿಯೂ ವಿವಿಧ ರೂಪ ಹಾಗೂ ವಿವಿಧ ಉತ್ಪಾದನೆಗಳಲ್ಲಿ ತೊಡಗಿರುವುದನ್ನು ಕಾಣಬಹುದು. ದೇಶದ ಅಗಾಧ ಜನಸಂಖ್ಯೆಗೆ ವ್ಯವಸಾಯವು ಆಹಾರ ಧಾನ್ಯಗಳನ್ನು ಪೂರೈಸುತ್ತದೆ. ವ್ಯವಸಾಯವು ಜೀವನಾಧಾರ ಉದ್ಯೋಗವಾಗಿದ್ದು, ಉಳಿದ ಎಲ್ಲ ಕ್ಷೇತ್ರಗಳಿಗಿಂತಲೂ ಹೆಚ್ಚು ಜನರಿಗೆ ಉದ್ಯೋಗಾವಕಾಶಗಳನ್ನು ನೀಡಿದೆ. ಭಾರತವು ಉತ್ಪಾದಿಸುವ ಹಲವಾರು ಬಗೆಯ ವ್ಯವಸಾಯೋತ್ಪನ್ನಗಳನ್ನು, ಕಚ್ಚಾ ವಸ್ತುವನ್ನಾಗಿ ಆಧರಿಸಿದ ಅಸಂಖ್ಯಾತ ಕೈಗಾರಿಕೆಗಳನ್ನು ಹೊಂದಿದೆ. ವ್ಯವಸಾಯವು ಪರೋಕ್ಷವಾಗಿಯೂ ಹಲವಾರು ಕೈಗಾರಿಕೆಗಳನ್ನು ಪೋಷಿಸುತ್ತದೆ. ಉದಾ: ರಾಸಾಯನಿಕ ಗೊಬ್ಬರ, ಕ್ರಿಮಿ-ಕೀಟನಾಶಕಗಳು, ಯಂತ್ರೋಪಕರಣ ಕೈಗಾರಿಕೆಗಳು ಇತ್ಯಾದಿ. ವ್ಯವಸಾಯವು ಸಂಚಾರ ಸಾರಿಗೆ ವ್ಯಾಪಾರ ಮೊದಲಾದ ಹಲವಾರು ತೃತೀಯ ಆರ್ಥಿಕ ಉದ್ಯೋಗಗಳನ್ನು ಪೋಷಿಸಿದೆ.

**ವ್ಯವಸಾಯದ ವಿಧಗಳು :**

1) **ಸಾಂದ್ರ ಬೇಸಾಯ (Intensive Farming) :** ಒಂದು ವರ್ಷದಲ್ಲಿ ಒಂದೇ ವ್ಯವಸಾಯ ಕ್ಷೇತ್ರದಿಂದ 2-3 ಬೆಳೆಗಳನ್ನು ಬೆಳೆಯುವುದಕ್ಕೆ ಸಾಂದ್ರ ಬೇಸಾಯ ಎಂದು ಕರೆಯುವರು. ಅಧಿಕ ಜನಸಂಖ್ಯೆ ಇರುವ ಫಲವತ್ತಾದ ಪ್ರದೇಶಗಳಲ್ಲಿ ಇಂತಹ ಬೇಸಾಯವು ರೂಢಿಯಲ್ಲಿದೆ.

© KTBS NOT TO BE REPUBLISHED

2) **ಜೀವನಾಧಾರದ ಬೇಸಾಯ (Subsistance farming)** : ರೈತರು ತಮ್ಮ ಜೀವನಕ್ಕೆ ಅವಶ್ಯಕವಿರುವ ಹುಟ್ಟುವಳಿಗಳನ್ನು ಬೆಳೆಯುವುದಕ್ಕೆ ಜೀವನಾಧಾರ ಬೇಸಾಯ ಎಂದು ಕರೆಯುವರು. ಈ ಬೇಸಾಯ ಪದ್ಧತಿಯಲ್ಲಿ ರೈತರು ಆಹಾರ ಧಾನ್ಯ, ಎಣ್ಣೆಕಾಳು, ತರಕಾರಿ ಮುಂತಾದವುಗಳನ್ನು ಬೆಳೆಯುವರು. ಈ ಬೇಸಾಯದಲ್ಲಿ ಎರಡು ಪ್ರಕಾರಗಳಿವೆ ಎ) ಸ್ಥಿರ ಬೇಸಾಯ, ಬಿ) ಸ್ಥಳಾಂತರ ಬೇಸಾಯ.

ಎ) **ಸ್ಥಿರ ಬೇಸಾಯ :** ಯಾವುದೇ ಒಂದು ಪ್ರದೇಶದಲ್ಲಿ ಜನರು ಶಾಶ್ವತವಾಗಿ ನೆಲೆಸಿ ಬೇಸಾಯ ವನ್ನು ಮಾಡುವುದಕ್ಕೆ ಸ್ಥಿರ ಬೇಸಾಯ ಎಂದು ಕರೆಯುವರು. ಈ ಬೇಸಾಯವು ಸಾಂಪ್ರದಾಯಿಕವಾಗಿದ್ದು, ಚಿಕ್ಕ ಹಿಡುವಳಿಯನ್ನು ಹೊಂದಿರುತ್ತದೆ.

ಬಿ) **ಸ್ಥಳಾಂತರ ಬೇಸಾಯ** : ಯಾವುದೇ ಒಂದು ಪ್ರದೇಶದಲ್ಲಿ ಜನರು ಸ್ಥಿರವಾಗಿ ನೆಲೆಸದೆ ಅಲ್ಲಿರುವ ಅರಣ್ಯಗಳನ್ನು ಕಡಿದು ಬೇಸಾಯ ಮಾಡುವರು. ಒಂದೆರಡು ವರ್ಷ ಬೇಸಾಯ ಮಾಡಿ ಅಲ್ಲಿನ ಮಣ್ಣಿನ ಫಲವತ್ತತೆ ಕಡಿಮೆಯಾದ ನಂತರ ಬೇರೆ ಪ್ರದೇಶಗಳಿಗೆ ಹೋಗಿ ಬೇಸಾಯ ಮಾಡುವರು. ಇಂತಹ ಬೇಸಾಯವನ್ನು ಸ್ಥಳಾಂತರ ಬೇಸಾಯ ಎಂದು ಕರೆಯುವರು. ಇಂದು ಇದನ್ನು ನಿಷೇಧಿಸಲಾಗಿದೆ.

3) **ವಾಣಿಜ್ಯ ಬೇಸಾಯ :** ವ್ಯಾಪಾರದ ಉದ್ದೇಶದ ಸಲುವಾಗಿ ಕೈಗೊಳ್ಳುವ ಬೇಸಾಯವನ್ನು ವಾಣಿಜ್ಯ ಬೇಸಾಯ ಎಂದು ಕರೆಯುವರು. ಹೊಗೆಸೊಪ್ಪು, ಅಡಿಕೆ, ತೆಂಗು, ಕಬ್ಬು, ಹತ್ತಿ, ಚಹ, ಕಾಫಿ, ರಬ್ಬರ್ ಇತ್ಯಾದಿ ವಾಣಿಜ್ಯ ಬೇಸಾಯದ ಬೆಳೆಗಳಾಗಿವೆ.

4) **ಮಿಶ್ರ ಬೇಸಾಯ** : ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವುದಕ್ಕಷ್ಟೇ ಅಲ್ಲದೆ ದನಕರು ಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಕೃಷಿ ಮುಂತಾದ ಉದ್ದೇಶಗಳಿಗಾಗಿಯೂ ಬಳಸಲಾಗುವುದು. ಇದಕ್ಕೆ **'ಮಿಶ್ರಬೇಸಾಯ'** ಎಂದು ಕರೆಯುವರು.

5) **ತೋಟಗಾರಿಕಾ ಬೇಸಾಯ** : ಭಾರತದ ಮುಖ್ಯ ಬೇಸಾಯ ಪದ್ಧತಿಗಳಲ್ಲಿ ತೋಟಗಾರಿಕೆ ಬೇಸಾಯವು ಸಹ ಒಂದು. ಕಾಫಿ, ಚಹ ಮತ್ತು ರಬ್ಬರ್ ತೋಟಗಾರಿಕೆ ಬೆಳೆಗಳಲ್ಲಿ ಮುಖ್ಯವಾದವು. ಒಂದೇ ಬೆಳೆಯನ್ನು ವಿಸ್ತಾರವಾದ ತೋಟಗಳಲ್ಲಿ ಬೆಳೆಯಲಾಗುವುದು.

**ಬೆಳೆಗಳ ಮಾದರಿ (Cropping pattern)** : ಯಾವುದೇ ಒಂದು ಪ್ರದೇಶವು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಹಲವಾರು ಬೆಳೆಗಳಿಂದ ಆವರಿಸಿದ್ದು, ಇವುಗಳ ಅನುಪಾತವನ್ನು ಬೆಳೆ ಮಾದರಿ ಎಂದು ಕರೆಯುವರು. ಬೆಳೆ ಮಾದರಿಯಲ್ಲಿ ಮುಖ್ಯವಾಗಿ ಆಹಾರ ಧಾನ್ಯಗಳು ಮತ್ತು ಆಹಾರೇತರ ಅಥವಾ ವಾಣಿಜ್ಯ ಬೆಳೆಗಳೆಂದು ಎರಡು ಬೆಳೆಗಳ ಅನುಪಾತವನ್ನು ಕಾಣಬಹುದು. ಭಾರತದ ಯಾವುದೇ ಒಂದು ಪ್ರದೇಶದ ಬೆಳೆ ಮಾದರಿಯು ಮುಖ್ಯವಾಗಿ ಭೂಸ್ವರೂಪ, ವಾಯುಗುಣ, ಮಣ್ಣು, ನೀರಿನ ಪೂರೈಕೆ, ಆರ್ಥಿಕ ಅಂಶಗಳು, ಸಾಮಾಜಿಕ ಅಂಶಗಳು ಮತ್ತು ತಂತ್ರಜ್ಞಾನವನ್ನು ಅವಲಂಬಿಸಿದೆ.

**ಬೆಳೆಯ ಮಾದರಿಯನ್ನು ನಿರ್ಧರಿಸುವ ಅಂಶಗಳು** : ಯಾವುದೇ ಒಂದು ಪ್ರದೇಶದ ಬೆಳೆಯು ಅಲ್ಲಿರುವ ನೈಸರ್ಗಿಕ, ಆರ್ಥಿಕ, ಸಾಮಾಜಿಕ ಮತ್ತು ರೈತರ ಮನೋಭಾವ ಮುಂತಾದ ಅಂಶಗಳಿಂದ ನಿರ್ಧರಿಸಲ್ಪಡುತ್ತದೆ.

1) **ನೈಸರ್ಗಿಕ ಅಂಶಗಳು** : ನೈಸರ್ಗಿಕ ಅಂಶಗಳಲ್ಲಿ ಭೂಸ್ವರೂಪ, ವಾಯುಗುಣ ಮತ್ತು ಮಳೆ ಪ್ರಮುಖವಾಗಿದ್ದು, ಬೆಳೆಯ ಮಾದರಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

2) **ಆರ್ಥಿಕ ಅಂಶಗಳು** : ಭಾರತದ ಕೆಲವು ವಿಶಾಲ ಹಿಡುವಳಿ ಹೊಂದಿರುವ ಪ್ರದೇಶಗಳಲ್ಲಿ ಮುಖ್ಯವಾಗಿ ಹೆಚ್ಚು ಬೆಲೆಕೊಡುವ ವಾಣಿಜ್ಯ ಉತ್ಪನ್ನಗಳನ್ನು ಬೆಳೆಯಲಾಗುತ್ತದೆ. ಇದರ ಮುಖ್ಯ ಉದ್ದೇಶ ಹೆಚ್ಚು ಆರ್ಥಿಕ ಲಾಭ ಪಡೆಯುವುದಾಗಿದೆ.

NOT TO BE REPUBLISHED © KTBS

3) **ಸಾಮಾಜಿಕ ಅಂಶಗಳು :** ಪ್ರಮುಖವಾಗಿ ಸಾಮಾಜಿಕ ಅಂಶಗಳಾದ ಸಂಪ್ರದಾಯ, ಮೂಢನಂಬಿಕೆ, ಅನಕ್ಷರತೆ, ಮುಂತಾದ ಅಂಶಗಳು ಸಹ ಬೆಳೆಯ ಮಾದರಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

4) **ರೈತರ ಮನೋಭಾವ :** ಯಾವುದೇ ಒಂದು ಪ್ರದೇಶದ ಬೆಳೆ ಮಾದರಿಯಲ್ಲಿ ರೈತರ ಧೋರಣೆಯು ಪ್ರಮುಖ ಪ್ರಭಾವ ಬೀರುತ್ತದೆ. ಉದಾ : ಉತ್ತರ ಕರ್ನಾಟಕದಲ್ಲಿ ರೈತರು ಮೊದಲು ಜೋಳ, ಗೋಧಿಯನ್ನು ಹೆಚ್ಚಾಗಿ ಬೆಳೆಯುತ್ತಲಿದ್ದರು. ಆದರೆ ಇತ್ತೀಚಿಗೆ ಆರ್ಥಿಕ ಲಾಭ ಕೊಡುವ ಸೂರ್ಯಕಾಂತಿ ಮತ್ತು ಶೇಂಗಾ, ತೊಗರಿ, ಈರುಳ್ಳಿ ಬೆಳೆಯನ್ನು ಬೆಳೆಯುತ್ತಿದ್ದಾರೆ.

ಮೇಲಿನ ಅಂಶಗಳಲ್ಲದೆ ನೀರಿನ ಪೂರೈಕೆ, ಸಾರಿಗೆ ಸಂಪರ್ಕ, ಮಾರುಕಟ್ಟೆ, ಸುಧಾರಿತ ತಳಿಗಳು, ರಾಸಾಯನಿಕ ಗೊಬ್ಬರ, ಭೂಸುಧಾರಣೆ ಮುಂತಾದವುಗಳು ಸಹ ಬೆಳೆ ಮಾದರಿಯ ಮೇಲೆ ಪ್ರಭಾವ ಬೀರುತ್ತವೆ.

**ಬೆಳೆ ಋತುಗಳು ಅಥವಾ ವ್ಯವಸಾಯದ ಅವಧಿಗಳು (Crop seasons) :** ಭಾರತದಲ್ಲಿ ವರ್ಷದ ಎಲ್ಲ ಅವಧಿಯಲ್ಲೂ ವಿವಿಧ ಪ್ರದೇಶಗಳಲ್ಲಿ ಬೆಳೆಗಳನ್ನು ಬೆಳೆಯಲಾಗುವುದು. ಹೀಗೆ ದೇಶದಾದ್ಯಂತ ವರ್ಷದಲ್ಲಿ ಒಂದಲ್ಲ ಒಂದು ಭಾಗದಲ್ಲಿ ಬೆಳೆಗಳನ್ನು ಬೆಳೆಯುವುದನ್ನು ಕಾಣಬಹುದು. ದೇಶದಲ್ಲಿ ಮೂರು ವ್ಯವಸಾಯದ ಅವಧಿಗಳು ಕಂಡುಬರುತ್ತವೆ. 1) ಮುಂಗಾರು ಅಥವಾ ಖಾರೀಫ್ ಬೇಸಾಯ 2) ಹಿಂಗಾರು ಅಥವಾ ರಬಿ ಬೇಸಾಯ 3) ಬೇಸಿಗೆ ಅಥವಾ ಜೇಡ್ ಬೇಸಾಯ.

1) **ಮುಂಗಾರು ಅಥವಾ ಖಾರೀಫ್ ಬೇಸಾಯ :** ನೈರುತ್ಯ ಮಾನ್ಸೂನ್ ಮಾರುತಗಳ ಅವಧಿಯ ಬೇಸಾಯವನ್ನೇ 'ಮುಂಗಾರು ಬೇಸಾಯ' ಅಥವಾ 'ಖಾರೀಫ್ ಬೇಸಾಯ' ವೆಂದು ಕರೆಯುವರು. ಜೂನ್ ಅಥವಾ ಜುಲೈ ತಿಂಗಳಿನಲ್ಲಿ ಬಿತ್ತನೆ ಮಾಡಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಕಟಾವು ಮಾಡುವರು. ದೇಶದ ಹೆಚ್ಚು ಭಾಗವು ಈ ಅವಧಿಯಲ್ಲಿ ಸಾಗುವಳಿಗೆ ಒಳಪಟ್ಟಿರುವುದು. ಭತ್ತ, ರಾಗಿ, ಹತ್ತಿ, ಜೋಳ, ಮೆಕ್ಕೆಜೋಳ,ಎಣ್ಣೆಕಾಳುಗಳು ಈ ಅವಧಿಯ ಮುಖ್ಯ ಬೆಳೆಗಳಾಗಿವೆ.


2) **ಹಿಂಗಾರು ಅಥವಾ ಚಳಿಗಾಲದ ಅಥವಾ ರಬಿ ಬೇಸಾಯ :** ಇದು ಚಳಿಗಾಲದಲ್ಲಿ ಮಳೆ ಪಡೆಯುವ ಪ್ರದೇಶಗಳ ಮುಖ್ಯ ಸಾಗುವಳಿಯ ಅವಧಿಯಾಗಿದೆ. ವಾಯುವ್ಯ ಭಾರತದ ಪಂಜಾಬ್, ಹರಿಯಾಣ, ಜಮ್ಮು ಮತ್ತು ಕಾಶ್ಮೀರ, ಉತ್ತರ ಪ್ರದೇಶ ಹಾಗೂ ದಕ್ಷಿಣದಲ್ಲಿ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳು ಈ ಅವಧಿಯ ಬೇಸಾಯಕ್ಕೆ ಒಳಪಟ್ಟಿವೆ. ವಾಯುವ್ಯ ಭಾರತದಲ್ಲಿ ಗೋಧಿ ಅತಿ ಮುಖ್ಯ ರಬಿ ಬೆಳೆಯಾಗಿದೆ. ಚಳಿಗಾಲದಲ್ಲಿ ತಂಪಾದ ಸಮಶೀತೋಷ್ಣವಾದ ತುಂತುರು ಮಳೆಯಿಂದ ಕೂಡಿರುವ ವಾಯುಗುಣವಿರುವುದು. ಇದು ಗೋಧಿ ಬೇಸಾಯಕ್ಕೆ ಅತ್ಯಂತ ಸೂಕ್ತವಾಗಿದೆ. ಅಕ್ಟೋಬರ್–ನವಂಬರ್‌ನಲ್ಲಿ ಬಿತ್ತನೆ ಮಾಡಿ ಫೆಬ್ರುವರಿ–ಮಾರ್ಚ ಅವಧಿಯಲ್ಲಿ ಕಟಾವು ಮಾಡುವರು.

3) **ಬೇಸಿಗೆಯ ಅಥವಾ ಜೇಡ್ ಬೇಸಾಯ :** ರಬಿ ಹಾಗೂ ಖಾರೀಪ್ ಬೇಸಾಯದ ನಡುವಿನ ಅವಧಿಯಲ್ಲಿಯೂ ಭಾರತದ ಹಲವು ಕಡೆಗಳಲ್ಲಿ ಬೇಸಾಯ ಕಂಡು ಬರುವುದು. ಬೇಸಿಗೆಯ ಈ ಬೇಸಾಯವನ್ನೇ 'ಜೇಡ್ ಬೇಸಾಯ' ವೆಂದು ಕರೆಯುವರು. ದ್ವಿದಳ ಧಾನ್ಯಗಳಾದ ಉದ್ದು, ಹೆಸರು, ಎಣ್ಣೆಕಾಳುಗಳು ಮತ್ತು ತರಕಾರಿಗಳನ್ನು ಈ ಅವಧಿಯಲ್ಲಿ ಬೆಳೆಯುವರು.

© KTBS NOT TO BE REPUBLISHED

**ಪ್ರಮುಖ ಬೆಳೆಗಳು :** ಭಾರತವು ಪ್ರಪಂಚದ ಪ್ರಮುಖ ವ್ಯವಸಾಯದ ರಾಷ್ಟ್ರಗಳಲ್ಲಿ ಒಂದಾಗಿದೆ. ಹಸಿರುಕ್ರಾಂತಿಯ ಪರಿಣಾಮವಾಗಿ ಭಾರತದ ವ್ಯವಸಾಯ ಕ್ಷೇತ್ರವು ನೀರಾವರಿ, ಆಧುನಿಕ ಯಂತ್ರೋಪಕರಣ, ರಾಸಾಯನಿಕ ಗೊಬ್ಬರ, ಅಧಿಕ ಇಳುವರಿ ಕೊಡುವ ತಳಿಗಳು, ಕ್ರಿಮಿನಾಶಕ ಮತ್ತು ರೋಗನಾಶಕ ಮುಂತಾದವುಗಳನ್ನು ಬಳಸಿಕೊಂಡು ಸಾಕಷ್ಟು ಅಭಿವೃದ್ಧಿಯನ್ನು ಕಂಡಿದೆ. ಜೊತೆಗೆ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿದೆ. ಭಾರತವು ಉತ್ಪಾದಿಸುತ್ತಿರುವ ಬೆಳೆಗಳಲ್ಲಿ ಆಹಾರ ಧಾನ್ಯಗಳು, ವಾಣಿಜ್ಯ ಬೆಳೆಗಳು, ನಾರಿನ ಬೆಳೆಗಳು ಮತ್ತು ಪಾನೀಯ ಬೆಳೆಗಳು ಪ್ರಮುಖವಾಗಿವೆ.

### 1) ಆಹಾರದ ಬೆಳೆಗಳು ( Food crops) :





@KTBS NOT TO BE REPUBLISHED

**ಭತ್ತ :** ಭಾರತವು ಉತ್ಪಾದಿಸುತ್ತಿರುವ ಆಹಾರ ಧಾನ್ಯಗಳಲ್ಲಿ ಭತ್ತವು ಅತಿ ಮುಖ್ಯವಾಗಿದೆ. ಭಾರತವು ಪ್ರಪಂಚದಲ್ಲಿ ಅತಿ ಹೆಚ್ಚು ಭತ್ತದ ಕ್ಷೇತ್ರವನ್ನು ಹೊಂದಿದ್ದು ಉತ್ಪಾದನೆಯಲ್ಲಿ ಎರಡನೆ ಸ್ಥಾನದಲ್ಲಿದೆ. ದೇಶದ ಬಹುಪಾಲು ಜನರು ಭತ್ತವನ್ನೆ ಪ್ರಮುಖ ಆಹಾರ ಧಾನ್ಯವಾಗಿ ಬಳಸುವರು. ಭತ್ತವು ಪ್ರಮುಖವಾಗಿ 'ಖಾರಿಫ್' ಬೆಳೆಯಾಗಿದೆ. ಭತ್ತದ ಬೇಸಾಯಕ್ಕೆ $25^0$ ಸೆಲ್ಸಿಯಸ್ ಉಷ್ಣಾಂಶ ಮತ್ತು 100 ರಿಂದ 200 ಸೆಂ.ಮೀ ವಾರ್ಷಿಕ ಮಳೆ ಅವಶ್ಯಕ. ಫಲವತ್ತಾದ ಮೆಕ್ಕಲು ಮಣ್ಣು, ಜೇಡಿ ಮಣ್ಣು, ಭತ್ತದ ಬೆಳೆಗೆ ಸೂಕ್ತವಾಗಿರುತ್ತವೆ. ಬೆಳೆಯು ಕೊಯ್ಲಿಗೆ ಬರುವವರೆಗೂ ಪೈರಿನ ತಳದಲ್ಲಿ ನೀರು ನಿಂತಿರ ಬೇಕಾದುದರಿಂದ ಸಮತಟ್ಟಾದ ಭೂಮಿ ಬೇಕಾಗುತ್ತದೆ. ಕಡಿಮೆ ಮಳೆ ಬೀಳುವ ಕಡೆಗಳಲ್ಲಿ ನೀರಾವರಿ ಅವಶ್ಯಕ.

ಪಶ್ಚಿಮ ಬಂಗಾಳ ರಾಜ್ಯವು ಅತಿ ಹೆಚ್ಚು ಭತ್ತವನ್ನು ಬೆಳೆಯುವ ರಾಜ್ಯವಾಗಿದೆ. ಆಂಧ್ರಪ್ರದೇಶ, ತಮಿಳುನಾಡು, ಒರಿಸ್ಸಾ, ಕರ್ನಾಟಕ, ಉತ್ತರಪ್ರದೇಶ, ಭತ್ತ ಬೆಳೆಯುವ ಇತರ ರಾಜ್ಯಗಳಾಗಿವೆ.

**ಗೋಧಿ :**

ಇದು ಭಾರತದ ಚಳಿಗಾಲದ (ರಬಿ) ಮುಖ್ಯ ಬೆಳೆಯಾಗಿದೆ. ನಮ್ಮ ದೇಶ ಗೋಧಿಯ ಉತ್ಪಾದನೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದೆ. ಹಾಗೂ ಗೋಧಿಯನ್ನು ರಫ್ತು ಮಾಡುವ ಪ್ರಪಂಚದ ಪ್ರಮುಖ ರಾಷ್ಟ್ರಗಳಲ್ಲಿ ಒಂದಾಗಿದೆ. ಗೋಧಿ ಬೆಳೆಗೆ $10^0$ಯಿಂದ $15^0$ ಸೆಲ್ಸಿಯಸ್ ಉಷ್ಣಾಂಶ 50 ರಿಂದ 70 ಸೆಂ ಮೀ ವಾರ್ಷಿಕ ಮಳೆ ಅವಶ್ಯಕ. ಮರಳು ಮಿಶ್ರಿತ ಜೇಡಿಮಣ್ಣು ಮತ್ತು ಕಪ್ಪುಮಣ್ಣಿನಲ್ಲಿ ಚೆನ್ನಾಗಿ ಗೋಧಿಯು ಬೆಳೆಯುತ್ತದೆ.




ಉತ್ತರದ ಮೈದಾನಗಳಾದ ಪಂಜಾಬ್, ಹರಿಯಾಣ ಮತ್ತು ಉತ್ತರಪ್ರದೇಶಗಳಲ್ಲಿ ಗೋಧಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. "ಪಂಜಾಬ್ ಗೋಧಿಯ ಕಣಜ"ವೆನಿಸಿದೆ. ಮಧ್ಯಪ್ರದೇಶ, ಬಿಹಾರ, ರಾಜಸ್ತಾನ, ಗುಜರಾತ್, ಕರ್ನಾಟಕದ ಉತ್ತರ ಭಾಗ ಮತ್ತು ಮಹಾರಾಷ್ಟ್ರಗಳು ಗೋಧಿಯನ್ನು ಬೆಳೆಯುವ ಇತರ ರಾಜ್ಯಗಳಾಗಿವೆ. ಉತ್ತರಪ್ರದೇಶವು ಗೋಧಿ ಉತ್ಪಾದನೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ.

@KTBS
NOT TO BE REPUBLISHED

**ವಾಣಿಜ್ಯ ಬೆಳೆಗಳು (Commercial crops) :**

**1) ಕಬ್ಬು :** (Sugarcane) ಇದು ಭಾರತದ ಅತಿಮುಖ್ಯ ವಾಣಿಜ್ಯ ಬೆಳೆಯಾಗಿದೆ. ಭಾರತದಲ್ಲಿ ಕಬ್ಬಿನ ಬೇಸಾಯವು ಅತೀ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಭಾರತವು ಇದರ ಮೂಲವಾಗಿದ್ದು, ಪ್ರಪಂಚದಲ್ಲಿ ಎರಡನೆಯ ಸ್ಥಾನವನ್ನು ಹೊಂದಿರುವುದು. ಇದು ವಾರ್ಷಿಕ ಬೆಳೆಯಾಗಿದ್ದು ನೀರಾವರಿ ಪ್ರದೇಶದಲ್ಲಿ ಬೆಳೆಯುವ ಬೆಳೆಯಾಗಿದೆ. ಈ ಬೆಳೆಗೆ ಹೆಚ್ಚು ಉಷ್ಣಾಂಶ ಮತ್ತು

**ನಿಮಗೆ ತಿಳಿದಿರಲಿ :**

* ಕಬ್ಬು ಅಫಿಸಿನೇರಮ್ ಗುಂಪಿಗೆ ಸೇರಿದ ಬಹು ವಾರ್ಷಿಕ ಸಸ್ಯ. ದೇಶದ ಸಕ್ಕರೆ ಕೈಗಾರಿಕೆ, ಖಂಡಸಾರಿ ಕೈಗಾರಿಕೆ, ಬೆಲ್ಲ ತಯಾರಿಕೆ ಮತ್ತು ಅಲ್ಕೋಹಾಲ್ ಉದ್ಯಮಗಳು ಕಬ್ಬಿನ ಉತ್ಪಾದನೆಯನ್ನು ಅವಲಂಬಿಸಿವೆ. ಇದಲ್ಲದೆ ಕಬ್ಬಿನ ಸಿಪ್ಪೆಯು ಕಾಗದದ ಕೈಗಾರಿಕೆಯ ಮುಖ್ಯ ಕಚ್ಚಾ ವಸ್ತುವಾಗಿದೆ.
* ಭಾರತದಲ್ಲಿ ಕಬ್ಬಿನ ಉತ್ಪಾದನೆಗೆ ಬಳಸುತ್ತಿರುವ ಪದ್ಧತಿಗಳಲ್ಲಿ 'ಕೂಳೆ ಪದ್ಧತಿ' *(Ratoon system)* ಅತಿ ಮುಖ್ಯವಾದದ್ದು. ಮೊದಲು ಕಬ್ಬಿನ ತುಂಡುಗಳನ್ನು ನೆಟ್ಟು ಫಸಲನ್ನು ಪಡೆದ ನಂತರ ಅದರ ಕೂಳೆಯನ್ನು ಬಿಟ್ಟು ಉಳುಮೆ ಮಾಡಿ ಕೂಳೆ ಚಿಗುರಿ ಅದರಿಂದ ಮತ್ತೊಂದು ಫಸಲನ್ನು ಪಡೆಯುವರು. ಇದನ್ನೇ 'ಕೂಳೆ ಪದ್ಧತಿ' ಎಂದು ಕರೆಯುವರು.

ತೇವಾಂಶ ಹೊಂದಿರುವ ವಾಯುಗುಣ ಅವಶ್ಯಕ. ಇದಕ್ಕೆ $21^0$ ರಿಂದ $26^0$ ಸೆಲ್ಸಿಯಸ್ ಉಷ್ಣಾಂಶ, 100 ರಿಂದ 150 ಸೆಂ.ಮೀ. ವಾರ್ಷಿಕ ಮಳೆ ಬೇಕಾಗುವುದು. ಮೆಕ್ಕಲು ಮತ್ತು ಕಪ್ಪು ಮಣ್ಣಿನಲ್ಲಿ ಕಬ್ಬು ಚೆನ್ನಾಗಿ ಬೆಳೆಯುತ್ತದೆ. ಉತ್ತರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಗುಜರಾತ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಕಬ್ಬು ಮುಖ್ಯ ವಾಣಿಜ್ಯ ಬೆಳೆ. ಭಾರತದ ಬಹುತೇಕ ರಾಜ್ಯಗಳಲ್ಲಿ ಇದನ್ನು ಬೆಳೆಯುತ್ತಾರೆ.

**2) ಹೊಗೆಸೊಪ್ಪು (Tobacco) :** ಭಾರತವು ಇದರ ಉತ್ಪಾದನೆಯಲ್ಲಿ ಜಗತ್ತಿನಲ್ಲಿಯೇ ಮೂರನೆಯ ಸ್ಥಾನವನ್ನು ಪಡೆದಿದೆ. ಹೊಗೆಸೊಪ್ಪನ್ನು ಬೀಡಿ, ಸಿಗರೇಟು, ಹುಕ್ಕಾ, ನಸ್ಯಗಳ ತಯಾರಿಕೆ ಹಾಗೂ ತಿನ್ನಲು ಬಳಸುತ್ತಾರೆ. ಹೊಗೆಸೊಪ್ಪು ಸೇವನೆ ಆರೋಗ್ಯಕ್ಕೆ ಹಾನಿಕಾರಕ ಎಂಬುದು ಗೊತ್ತಿದ್ದರೂ ಇಂದು ಪ್ರಪಂಚದ ಮಾರುಕಟ್ಟೆಯಲ್ಲಿ ಹೊಗೆಸೊಪ್ಪಿಗೆ ಮತ್ತು ಅದರಿಂದ ತಯಾರಿಸಿದ ವಸ್ತುಗಳಿಗೆ ಬೇಡಿಕೆಯು ದಿನೇ ದಿನೇ ಹೆಚ್ಚಾಗುತ್ತಿದೆ. ಇದು ಉಷ್ಣವಲಯದ ಬೆಳೆಯಾಗಿದ್ದು, $21^0$ ರಿಂದ $27^0$ ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ. ಸಾಧಾರಣ ಮಳೆ ಬೀಳುವ ಪ್ರದೇಶ ಅವಶ್ಯವಿದ್ದು, ಸರಾಸರಿ 50 ಸೆಂ.ಮೀ. ಮಳೆ ಬೇಕು. ಮರಳು ಮಿಶ್ರಿತ ಮಣ್ಣು, ರಾಸಾಯನಿಕ ಗೊಬ್ಬರ ಅವಶ್ಯಕ. ಆಂಧ್ರಪ್ರದೇಶ, ಗುಜರಾತ, ಉತ್ತರಪ್ರದೇಶ, ಕರ್ನಾಟಕ, ಬಿಹಾರ, ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ಹೊಗೆ ಸೊಪ್ಪನ್ನು ಉತ್ಪಾದಿಸುವರು. ಕರ್ನಾಟಕದ ನಿಪ್ಪಾಣಿ ಬೆಳಗಾವಿ ಜಿಲ್ಲೆ ನಗರವು ಹೊಗೆಸೊಪ್ಪು ಮಾರುಕಟ್ಟೆ ಕೇಂದ್ರವಾಗಿದೆ.

> **ಇದು ನಿಮಗೆ ತಿಳಿದಿರಲಿ :**
>
> ಹೊಗೆಸೊಪ್ಪು 'ನಿಕೋಷಿಯಾನ' ವರ್ಗಕ್ಕೆ ಸೇರಿದ ಸಸ್ಯ. ಇದರ ಮೂಲ ದಕ್ಷಿಣ ಅಮೇರಿಕಾದ ಆ್ಯಂಡಿಸ್ ಪರ್ವತ ಪ್ರದೇಶ. ಜೀನ್ ನಿಕೋಟ್ ಎಂಬುವನು ಇದನ್ನು ಫ್ರಾನ್ಸಿಗೆ ಪರಿಚಯಿಸಿದನು. ಅಲ್ಲಿಂದ ಭಾರತಕ್ಕೆ ಪೋರ್ಚುಗೀಸರು 17ನೇ ಶತಮಾನದಲ್ಲಿ ಪರಿಚಯಿಸಿದ್ದಾರೆ.

©KTBS NOT TO BE REPUBLISHED

**ನಾರಿನ ಬೆಳೆ (Fibre crops) :**

ಹತ್ತಿ ಮತ್ತು ಸೆಣಬು ಭಾರತವು ಉತ್ಪಾದಿಸುತ್ತಿರುವ ಅತಿ ಮುಖ್ಯ ನಾರಿನ ಬೆಳೆಗಳಾಗಿದ್ದು ಇವು ಹತ್ತಿ ಬಟ್ಟೆ ಕೈಗಾರಿಕೆ ಹಾಗೂ ಸೆಣಬಿನ ಕೈಗಾರಿಕೆಗಳನ್ನು ಪೋಷಿಸಿವೆ.

**1) ಹತ್ತಿ (Cotton) :** ಭಾರತವು ಉತ್ಪಾದಿಸುವ ನಾರಿನ ಬೆಳೆಗಳಲ್ಲಿ ಹತ್ತಿ ಪ್ರಮುಖವಾದುದು. ಕಚ್ಚಾ ಹತ್ತಿಯನ್ನು ಹತ್ತಿ ಗಿರಣಿಗಳಲ್ಲಿ ಕಚ್ಚಾ ವಸ್ತುವಾಗಿ ಬಳಸುವುದಲ್ಲದೆ, ಅಧಿಕ ಪ್ರಮಾಣದ ಹತ್ತಿಯನ್ನು ರಫ್ತುಮಾಡಿ ವಿದೇಶಿ ವಿನಿಮಯವನ್ನು ಗಳಿಸುತ್ತದೆ. ಭಾರತವು ಹತ್ತಿ ಬೆಳೆಯುವ ಪ್ರದೇಶದಲ್ಲಿ ಪ್ರಪಂಚದಲ್ಲಿ ಮೊದಲ ಹಾಗೂ ಉತ್ಪಾದನೆಯಲ್ಲಿ ಎರಡನೆ ಸ್ಥಾನದಲ್ಲಿದೆ. ಹತ್ತಿಯು ಉಷ್ಣ ವಲಯ ಮತ್ತು ಉಪ ಉಷ್ಣವಲಯದ ಬೆಳೆ. ಇದರ ಉತ್ಪಾದನೆ $20^0$ ರಿಂದ $25^0$ ಸೆಲ್ಸಿಯಸ್. ಉಷ್ಣಾಂಶ ಅವಶ್ಯಕ. ಸುಮಾರು 75 ರಿಂದ 150 ಸೆಂ.ಮೀ ಗಿಂತ ಹೆಚ್ಚು ಮಳೆ ಪಡೆಯುವ ಪ್ರದೇಶಗಳಲ್ಲಿ ಬೆಳೆಯಬಲ್ಲದು. ಕಪ್ಪು ಮಣ್ಣು, ಮೆಕ್ಕಲು ಮಣ್ಣುಗಳಲ್ಲಿ ಬೆಳೆಯಬಲ್ಲವು. ಆದರೆ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಮಣ್ಣು ಇದಕ್ಕೆ ಹೆಚ್ಚು ಸೂಕ್ತ. ಇದನ್ನು ಮುಂಗಾರು (ಖಾರೀಫ್) ಬೆಳೆಯಾಗಿ ಬೆಳೆಯುತ್ತಾರೆ. ಗುಜರಾತ್, ಮಹಾರಾಷ್ಟ್ರ, ಆಂಧ್ರಪ್ರದೇಶ, ಹರಿಯಾಣ, ಕರ್ನಾಟಕ ಮತ್ತು ಮಧ್ಯಪ್ರದೇಶಗಳಲ್ಲಿ ಹತ್ತಿಯನ್ನು ಬೆಳೆಯುತ್ತಾರೆ.

**ಪಾನೀಯ ಬೆಳೆ (Beverage crops)**

> **ಇದು ನಿಮಗೆ ತಿಳಿದಿರಲಿ :**
>
> ಚಹವು 'ಥೀಯನ್' ಎಂಬ ಉತ್ತೇಜಕಾರಕವನ್ನು ಒಳಗೊಂಡಿದೆ.
>
> ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ತ್ರಿಪುರಾ, ಹಿಮಾಚಲ ಪ್ರದೇಶ, ಕರ್ನಾಟಕ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪೂರಗಳಲ್ಲಿ ಚಹಾ ತೋಟಗಳನ್ನು ಕಾಣಬಹುದು.

ಭಾರತವು ಉತ್ಪಾದಿಸುವ ಮುಖ್ಯ ತೋಟಗಾರಿಕಾ ಬೆಳೆಗಳಾದ ಚಹಾ ಮತ್ತು ಕಾಫಿ ಮುಖ್ಯ ಪಾನೀಯ ಬೆಳೆಗಳಾಗಿವೆ. ಭಾರತವು ಪ್ರಪಂಚದಲ್ಲಿ ಈ ಬೆಳೆಗಳನ್ನು ಉತ್ಪಾದಿಸುವ ಮತ್ತು ರಫ್ತು ಮಾಡುವ ಪ್ರಮುಖ ರಾಷ್ಟ್ರವಾಗಿದೆ.

**1) ಚಹ (Tea) :** ಚಹ ಭಾರತದಲ್ಲಿ ಮಾತ್ರವಲ್ಲದೇ ಪ್ರಪಂಚದಲ್ಲಿಯೇ ಅತಿ ಮುಖ್ಯವಾದ ಪಾನೀಯವಾಗಿದೆ. ಭಾರತವು ಚಹದ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಮೊದಲ ಸ್ಥಾನವನ್ನು ಪಡೆದಿದೆ. ಬಹುಕಾಲದವರೆಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತವು ರಫ್ತಿನ ಏಕಸ್ವಾಮ್ಯತೆಯನ್ನು ಹೊಂದಿತ್ತು. ಚಹವು ಅಪಾರ ಉದ್ಯೋಗ ಅವಕಾಶಗಳನ್ನು ಒದಗಿಸುವುದರಿಂದ ಪ್ರಾಮುಖ್ಯತೆಯನ್ನು ಗಳಿಸಿದೆ. ಚಹವು ಉಷ್ಣವಲಯ ಮತ್ತು ಉಪ ಉಷ್ಣವಲಯಗಳಲ್ಲಿ ಬೆಳೆಯುವ ನಿತ್ಯ ಹರಿದ್ವರ್ಣದ ಬಹುವಾರ್ಷಿಕ ಬೆಳೆಯಾಗಿದ್ದು, ಸರಾಸರಿ ಉಷ್ಣಾಂಶ $21^0$ ಸೆಲ್ಸಿಯಸ್ ಉಪಯುಕ್ತ. 150–200 ಸೆಂ.ಮೀ. ಮಳೆ ಅವಶ್ಯಕ. ಕೊಳೆತ ಜೈವಿಕಾಂಶವುಳ್ಳ ಹಾಗೂ ನೀರು ಸುಲಭವಾಗಿ ಬಸಿದು ಹೋಗುವಂತಹ ಮರಳು ಮಿಶ್ರಿತ ಜೇಡಿ ಮಣ್ಣು ಚಹದ ಬೇಸಾಯಕ್ಕೆ ಉತ್ಕೃಷ್ಟವಾದದ್ದರಿಂದ ಸುಮಾರು 1200 ರಿಂದ 2400 ಮೀ. ಎತ್ತರವುಳ್ಳ ಪರ್ವತಗಳ ಇಳಿಜಾರುಗಳಲ್ಲಿ ಬೆಳೆಯಲಾಗುವುದು. ಅಸ್ಸಾಂ, ಪಶ್ಚಿಮ ಬಂಗಾಳ ತಮಿಳುನಾಡು ಹಾಗೂ ಕೇರಳಗಳಲ್ಲಿ ಚಹದ ಬೇಸಾಯವನ್ನು ಕಾಣುತ್ತೇವೆ ಭಾರತವು ಚಹದ ರಫ್ತಿಗೆ ಹೆಸರಾಗಿದೆ.

© KTBS NOT TO BE REPUBLISHED

**ವ್ಯವಸಾಯದ ಅಭಿವೃದ್ಧಿಯಲ್ಲಿ ತೋಟಗಾರಿಕೆ ಹಾಗೂ ಪುಷ್ಪ ಬೇಸಾಯದ ಪಾತ್ರ :**

> **ನಿಮಗೆ ತಿಳಿದಿರಲಿ :**
>
> ಭಾರತದಲ್ಲಿ ವ್ಯವಸಾಯ ಕ್ಷೇತ್ರದ ಸಂಶೋಧನೆಯಲ್ಲಿ
> - ***I C A R*** (ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್)
> - ***N I H R*** (ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಹಾರ್ಟಿಕಲ್ಚರಲ್ ರಿಸರ್ಚ ಆಫ್ ಇಂಡಿಯಾ) ಮೊದಲಾದ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತವೆ.

ಭಾರತವು ಆಹಾರ ಬೆಳೆಗಳು, ವಾಣಿಜ್ಯ ಬೆಳೆಗಳು, ನಾರಿನ ಬೆಳೆಗಳಲ್ಲದೆ, ತೋಟಗಾರಿಕಾ ಬೆಳೆಗಳು ಹಾಗೂ ಪುಷ್ಪ ಬೇಸಾಯದಲ್ಲಿ ಇತ್ತೀಚೆಗೆ ಹೆಚ್ಚು ಅಭಿವೃದ್ಧಿ ಹೊಂದಿದ್ದು, ಸಂಶೋಧನಾ ಸಂಸ್ಥೆಗಳ ಪಾತ್ರ ಅತ್ಯಂತ ಮಹತ್ತರವಾದುದು.

**ತೋಟಗಾರಿಕಾ ಅಥವಾ ಕೈತೋಟಗಾರಿಕೆ ಬೆಳೆಗಳು (Horticultural crops) :** ತೋಟಗಾರಿಕೆಯು ಹಣ್ಣು, ತರಕಾರಿ ಹಾಗೂ ಹೂಗಳ ಉತ್ಪಾದನೆಗಳನ್ನು ಒಳಗೊಂಡಿದೆ. ಇದು ಬಹುತೇಕ ಅಲ್ಪಾವಧಿಯ ಅಥವಾ ನಿಯತಕಾಲಿಕವಾದ ಅಂದರೆ ನಿರ್ದಿಷ್ಟ ಅವಧಿಯಲ್ಲಿ ಫಸಲು ನೀಡುವ ಬೆಳೆಗಳನ್ನು ಒಳಗೊಂಡಿದೆ. ತೋಟಗಾರಿಕೆ ಬೇಸಾಯವು ಇತರೆ ಬೇಸಾಯ ಪದ್ಧತಿಗಳಿಗಿಂತ ಹೆಚ್ಚು ಸಾಂದ್ರಯುತ ಹಾಗೂ ವಾಣಿಜ್ಯ ಮಾದರಿಯದಾಗಿದೆ.

> **ನಿಮಗೆ ತಿಳಿದಿರಲಿ :**
>
> ತೋಟಗಾರಿಕಾ ಬೆಳೆಗಳ ಉತ್ಪಾದನೆಯ ಪ್ರದೇಶಗಳನ್ನು ಮಾರುಕಟ್ಟೆಗಳೊಡನೆ ಸಂಪರ್ಕಿಸುವ ಮಹತ್ತರ ಯೋಜನೆಯನ್ನು ಕೈಗೊಳ್ಳಲಾಗಿದೆ. ಈ ಮಾರುಕಟ್ಟೆಗಳು ಸುತ್ತಲಿನಉತ್ಪಾದನಾ ಪ್ರದೇಶಗಳೊಡನೆ ನೇರ ಸಂಪರ್ಕವನ್ನು ಹೊಂದಿರುತ್ತವೆ. ಇದನ್ನು **'ಟರ್ಮಿನಲ್ ಮಾರ್ಕೆಟ್'** *(Terminal Market)* ಎಂದು ಕರೆಯುವರು.

ಭಾರತದಲ್ಲಿ ಮಾವು, ಬಾಳೆ, ಸಪೋಟ ಹಾಗೂ ನಿಂಬೆ ಜಾತಿಯ ಹಣ್ಣುಗಳ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಮೊಲನೆಯ ಸ್ಥಾನದಲ್ಲಿದೆ. ಇದರಿಂದ ಸರಕಾರವು ತೋಟಗಾರಿಕೆ ಬೇಸಾಯಕ್ಕೆ ಹೆಚ್ಚು ಪ್ರಾಮುಖ್ಯ ನೀಡಿದ್ದು, ಈ ಕ್ಷೇತ್ರವು ಅಪಾರ ಪ್ರಗತಿಯನ್ನು ಸಾಧಿಸಿದೆ. ತೋಟಗಾರಿಕೆ ಬೇಸಾಯದ ಈ ಪ್ರಗತಿಯನ್ನು **'ಸುವರ್ಣ ಕ್ರಾಂತಿ'** (Golden Revolution) ಎಂದು ಕರೆಯುವರು. ತೋಟಗಾರಿಕೆಗೆ ಅವಶ್ಯಕವಾದ ಎಲ್ಲ ಭೌಗೋಳಿಕ ವೈವಿಧ್ಯಮಯ ಭೂಸ್ವರೂಪ, ವಾಯುಗುಣ, ಮಣ್ಣು, ನೀರಾವರಿ ಸೌಲಭ್ಯ, ಕಾರ್ಮಿಕರು, ಮಾರುಕಟ್ಟೆ, ಸರಕಾರದ ಉತ್ತೇಜನ ಮುಂತಾದವುಗಳು ದೇಶದಲ್ಲಿ ಹೆಚ್ಚು ಪೂರಕವಾಗಿವೆ.

**ಪುಷ್ಪ ಬೇಸಾಯ (Floriculture) :**

ಭಾರತದ ವ್ಯವಸಾಯ ಪದ್ಧತಿಗಳಲ್ಲಿ ಪುಷ್ಪ ಕೃಷಿಯೂ ಸಹ ಒಂದು. ಹೂವು ಬೆಳೆಯುವ ಕಲೆಯು ಭಾರತೀಯರಿಗೆ ಅತಿ ಪುರಾತನ ಕಾಲದಿಂದಲೂ ತಿಳಿದಿತ್ತು. ವಾಣಿಜ್ಯ ಮಾದರಿಯ ಪುಷ್ಪ (ಹೂವು) ಕೃಷಿ ಅಥವಾ ಬೇಸಾಯವನ್ನು 'ಫ್ಲೋರಿಕಲ್ಚರ್' ಎಂದು ಕರೆಯುವರು. ಭಾರತವು ಬೆಳೆಯುವ ಹೂವುಗಳಲ್ಲಿ ಮಲ್ಲಿಗೆ, ದುಂಡುಮಲ್ಲಿಗೆ, ಸಂಪಿಗೆ, ಚೆಂಡು ಹೂವು, ಸೇವಂತಿಗೆ, ಕನಕಾಂಬರ, ಗುಲಾಬಿ, ಲಿಲ್ಲಿ ಮುಂತಾದವುಗಳು ಪ್ರಮುಖವಾಗಿವೆ. ಸಾಂಪ್ರದಾಯಿಕ ರೀತಿಯ ಹೂಗಳಿಗಿಂತ ಉದ್ದವಾಗಿ ಕತ್ತರಿಸಿದ (Cut flowers) ಗುಲಾಬಿ, ಆರ್ಕಿಡ್, ಲಿಲ್ಲಿ, ಗ್ಲಾಡಿಯೋಲಸ್, ಕಾರನೇಷನ್, ಆಂಥೋರಿಯಂ, ಮೊದಲಾದ ಹೂವುಗಳಿಗೆ ಅಪಾರ ಬೇಡಿಕೆಯಿದ್ದು, ಇವುಗಳ ಉತ್ಪಾದನೆ ಹೆಚ್ಚು ಪ್ರಾಮುಖ್ಯತೆ ಗಳಿಸಿದೆ.

ಪುಷ್ಪ ಬೇಸಾಯವು ಕೆಲವೇ ರಾಜ್ಯಗಳಿಗೆ ಸೀಮಿತವಾಗಿದೆ. ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ಹಿಮಾಚಲ ಪ್ರದೇಶ, ಹರಿಯಾಣ, ರಾಜಸ್ಥಾನ ಮುಂತಾದ ರಾಜ್ಯಗಳು ಪುಷ್ಪ ಬೇಸಾಯವನ್ನು ಒಳಗೊಂಡಿವೆ. ಭಾರತದ ಬೇಸಾಯವು ಪ್ರಸ್ತುತ ವೈವಿಧ್ಯತೆಯನ್ನು ಮೈಗೂಡಿಸಿಕೊಳ್ಳುತ್ತಿದೆ. ಇದರಿಂದಾಗಿ ಪುಷ್ಪ ಬೇಸಾಯವು ಉದ್ಯಮದ ಮಾದರಿಯಲ್ಲಿ ಅಭಿವೃದ್ಧಿ ಹೊಂದಲು ಉತ್ತಮ ಅವಕಾಶಗಳಿವೆ. ತೋಟಗಾರಿಕಾ ಬೆಳೆಗಳು ಮತ್ತು ಪುಷ್ಪ ಬೇಸಾಯವು ಇತ್ತೀಚಿನ ದಿನಗಳಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಪ್ರಮುಖವಾದ ಆರ್ಥಿಕತೆಯನ್ನು ಹೊಂದಿವೆ. ಇವುಗಳು ರೈತರಿಗೆ ಇತರೆ ವ್ಯವಸಾಯಗಳ ಬೆಳವಣಿಗೆಗೆ ಪೂರಕವಾಗಿವೆ.

## ಅಭ್ಯಾಸಗಳು

**I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.**

1) ಭೂಮಿಯನ್ನು ವಿವಿಧ ಉದ್ದೇಶಗಳಿಗೆ ಬಳಸುವುದನ್ನು ____________ ಎನ್ನುವರು.

© KTBS NOT TO BE REPUBLISHED

2) ಒಂದೇ ವ್ಯವಸಾಯದ ಭೂಮಿಯಲ್ಲಿ ಏಕಕಾಲದಲ್ಲಿ ಎರಡು–ಮೂರು ಬೆಳೆಗಳನ್ನು ಬೆಳೆಯುವುದಕ್ಕೆ __________ ಎಂದು ಕರೆಯುವರು.

3) ರೈತರು ತಮ್ಮ ಜೀವನಕ್ಕೆ ಅವಶ್ಯಕವಿರುವ ಹುಟ್ಟುವಳಿಗಳನ್ನು ಮಾತ್ರ ಬೆಳೆಯುವುದಕ್ಕೆ __________ ಬೇಸಾಯ ಎಂದು ಕರೆಯುವರು.

4) ವಾಣಿಜ್ಯ ಬೇಸಾಯದ ಬೆಳೆ __________ .

5) ಭಾರತದಲ್ಲಿ ಅತಿ ಹೆಚ್ಚು ಭತ್ತ ಬೆಳೆಯುವ ರಾಜ್ಯ __________ .

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

1) ಭೂ ಬಳಕೆ ಎಂದರೇನು ?

2) ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು ?

3) ವ್ಯವಸಾಯ ಎಂದರೇನು ?

4) ವ್ಯವಸಾಯದ ವಿಧಗಳು ಯಾವುವು ?

5) ಖಾರೀಫ್ ಬೇಸಾಯ ಎಂದರೇನು ?

6) ರಬಿ ಬೇಸಾಯ ಎಂದರೇನು ?

7) ಹತ್ತಿ ಬೆಳೆ ಬೆಳೆಯಲು ಅವಶ್ಯಕವಿರುವ ಪೂರಕಾಂಶಗಳಾವುವು ?

8) ಪುಷ್ಪ ಬೇಸಾಯದಲ್ಲಿ ನಿಮ್ಮ ಸುತ್ತ–ಮುತ್ತ ಬೆಳೆಯುತ್ತಿರುವ ಪುಷ್ಪಗಳ ಪಟ್ಟಿ ತಯಾರಿಸಿ.

**III. ಚಟುವಟಿಕೆಗಳು :**

1) ಭಾರತದಲ್ಲಿ ಬೆಳೆಯುವ ವಿವಿಧ ಆಹಾರ ಮತ್ತು ದ್ವಿದಳ ಧಾನ್ಯಗಳನ್ನು ಸಂಗ್ರಹಿಸಿರಿ.

2) ಭಾರತದಲ್ಲಿ ಗೋಧಿ ಮತ್ತು ಭತ್ತ ಬೆಳೆಯುವ ಪ್ರದೇಶಗಳನ್ನು ಭಾರತದ ನಕ್ಷೆಯಲ್ಲಿ ಗುರುತಿಸಿ.

3) ತಂಬಾಕು ಸೇವನೆಯು ಆರೋಗ್ಯಕ್ಕೆ ಹಾನಿಕಾರಕ ಹೇಗೆ ಎಂಬ ಬಗ್ಗೆ ಹತ್ತಿರದ ವೈದ್ಯರಿಂದ ಮಾಹಿತಿ ತಿಳಿಯಿರಿ.

**IV. ಯೋಜಿತ ಕಾರ್ಯ :**

1) ನಿಮ್ಮ ಸುತ್ತಲಿನ ಪ್ರದೇಶದ ಸಾಗುವಳಿ ಮಾಡುವ ವಿವಿಧ ಬೆಳೆಗಳನ್ನು ಕುರಿತು ಟಿಪ್ಪಣಿ ಮಾಡಿ, ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ.

2) ಹೆಣ್ಣು ಮಕ್ಕಳನ್ನು ಸ್ವಾವಲಂಬಿಗಳಾಗಿ ಮಾಡಲು ಪುಷ್ಪ ಬೇಸಾಯ ಹೇಗೆ ಪೂರಕವಾಗಿದೆ ಎಂಬುದನ್ನು ಚರ್ಚಿಸಿ.

@KTBS NOT TO BE REPUBLISHED

## ಅಧ್ಯಾಯ – 26

# ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

C4K6N7

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಭಾರತದಲ್ಲಿ ದೊರೆಯುವ ಖನಿಜಗಳ ಪರಿಚಯ ಮತ್ತು ಅವುಗಳ ಪ್ರಾಮುಖ್ಯತೆ.
- ಭಾರತದ ಪ್ರಮುಖ ಖನಿಜಗಳ ಹಂಚಿಕೆ ಹಾಗೂ ಉತ್ಪಾದನೆ.
- ಅಸಾಂಪ್ರದಾಯಿಕ ಶಕ್ತಿ ಮೂಲಗಳು, ಸೌರಶಕ್ತಿ, ಪವನಶಕ್ತಿ ಅವಶ್ಯಕತೆ.
- ಶಕ್ತಿ ಸಂಪನ್ಮೂಲಗಳ ಕೊರತೆ ಮತ್ತು ಸಂರಕ್ಷಣೆ ಹಾಗೂ ಪರಿಹಾರಗಳು.
- ಶಕ್ತಿ ಸಂಪನ್ಮೂಲಗಳ ಕೊರತೆಗೆ ಕಾರಣಗಳು.

NOT TO BE REPUBLISHED ©KTBS


ಖನಿಜಗಳು ನೈಸರ್ಗಿಕ ಸಂಪನ್ಮೂಲಗಳಲ್ಲಿ ಅತಿ ಮುಖ್ಯವಾದವು. "ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ದೊರೆಯುವ ನಿರ್ದಿಷ್ಟ ರಾಸಾಯನಿಕ ಸಂಯೋಜನೆಯನ್ನು ಒಳಗೊಂಡಿರುವ ಮಿಶ್ರಣವನ್ನೇ ಖನಿಜ"ಗಳೆಂದು ಕರೆಯುವರು. ಇವು ಶಿಲೆ ಹಾಗೂ ಇನ್ನಿತರ ಭೂ ಮೇಲ್ಮೈ ವಲಯದ ಮಿಶ್ರಣಗಳೊಡನೆ ದೊರೆಯುತ್ತವೆ. ಅವುಗಳಲ್ಲಿ ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ಬಾಕ್ಸೈಟ್ ಅದಿರು, ಅಭ್ರಕ, ಚಿನ್ನದ ಅದಿರು ಮುಖ್ಯವಾದವು. ಇವುಗಳಲ್ಲದೆ ಶಕ್ತಿ ಸಂಪನ್ಮೂಲಗಳಾದ ಕಲ್ಲಿದ್ದಲು, ಪೆಟ್ರೋಲಿಯಂ ಅಣು ಖನಿಜಗಳನ್ನು ದೇಶದಲ್ಲಿ ಉತ್ಪಾದಿಸಲಾಗುವುದು. ಜೊತೆಗೆ ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳಾದ ಸೌರಶಕ್ತಿ, ಗಾಳಿಶಕ್ತಿ ಮೊದಲಾದವು ವಿದ್ಯುತ್ತಿನ ಅಪಾರ ಕೊರತೆಯಿರುವ ನಮ್ಮ ದೇಶದಲ್ಲಿ ಅತಿ ಮುಖ್ಯವಾಗಿವೆ.

1) **ಕಬ್ಬಿಣ ಅದಿರು (Iron ore) :** ಭಾರತವು ಉತ್ಪಾದಿಸುವ ಕಬ್ಬಿಣ ಸಂಬಂಧಿ ಅದಿರುಗಳಲ್ಲಿ ಹಾಗೂ ಲೋಹ ಖನಿಜಗಳಲ್ಲಿ ಕಬ್ಬಿಣದ ಅದಿರು ಅತಿ ಮುಖ್ಯವಾದುದು. ದೇಶವು ಉತ್ಪಾದಿಸುವ ಒಟ್ಟು ಖನಿಜಗಳ ಮೌಲ್ಯದ ಶೇ 20 ರಷ್ಟನ್ನು ಕಬ್ಬಿಣ ಅದಿರು ಒಳಗೊಂಡಿದೆ. ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿರುವ ರಾಷ್ಟ್ರಗಳಲ್ಲಿ ಭಾರತವು ಪ್ರಪಂಚದಲ್ಲಿ ಆರನೆಯ ಸ್ಥಾನವನ್ನು ಪಡೆದಿದೆ.

> **ನಿಮಗೆ ತಿಳಿದಿರಲಿ :**
>
> ಕಬ್ಬಿಣದ ಅದಿರಿನ ವಿಧಗಳು : ಕಬ್ಬಿಣದ ಅದಿರನ್ನು ಒಳಗೊಂಡಿರುವ ಖನಿಜಾಂಶದ ಪ್ರಮಾಣ ಮತ್ತು ಕಶ್ಮಲಗಳ ಪ್ರಮಾಣವನ್ನು ಆಧರಿಸಿ ನಾಲ್ಕು ಮುಖ್ಯ ವಿಧಗಳಾಗಿ ವಿಂಗಡಿಸಲಾಗಿದೆ. ಇವುಗಳೆಂದರೆ,
>
> 1) ಮ್ಯಾಗ್ನಟೈಟ್, 2) ಹೆಮಟೈಟ್, 3) ಲಿಮೊನೈಟ್, 4) ಸಿಡರೈಟ್

ಭಾರತದಲ್ಲಿ ಜಾರ್ಖಂಡ, ಒಡಿಶಾ ಮತ್ತು ಕರ್ನಾಟಕ ರಾಜ್ಯಗಳು ಅತಿ ಹೆಚ್ಚು ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿರುವ ರಾಜ್ಯಗಳಾಗಿವೆ. ಜಾರ್ಖಂಡನ ಸಿಂಗಭೂಮ್, ಒರಿಸ್ಸಾದ ಕೆಯೊಂಜ್ಹಾರ್, ಮಯೂರ್ ಭಂಜ್ ಮತ್ತು ಸುಂದರ ಘರ್ ಜಿಲ್ಲೆಗಳಲ್ಲಿ ಅಪಾರ ಪ್ರಮಾಣದ ಕಬ್ಬಿಣ ಅದಿರಿನ ನಿಕ್ಷೇಪವಿದೆ. ಇದಲ್ಲದೆ ಛತ್ತೀಸಘಡದ ಬಸ್ತಾರ್, ದುರ್ಗ ಮತ್ತು ರಾಯಪುರಗಳು ಹೆಸರಾಗಿವೆ. ಗೋವಾ, ಆಂಧ್ರ ಪ್ರದೇಶ ಮತ್ತು ತಮಿಳುನಾಡು ಕಬ್ಬಿಣದ ನಿಕ್ಷೇಪವನ್ನು ಒಳಗೊಂಡಿವೆ. ಕರ್ನಾಟಕದ ಕೆಮ್ಮಣ್ಣುಗುಂಡಿ, ಹೊಸಪೇಟೆ, ಸೊಂಡೂರು, ಕುದುರೆಮುಖಗಳಲ್ಲಿ ಕಬ್ಬಿಣ ಅದಿರಿನ ನಿಕ್ಷೇಪಗಳಿವೆ.

ಕಬ್ಬಿಣ ಅದಿರನ್ನು ಕರ್ನಾಟಕ, ಛತ್ತೀಸಘಡ, ಜಾರ್ಖಂಡ್, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಒಡಿಶಾ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಲ್ಲಿ ಬಳಸಲಾಗುತ್ತಿದೆ. ಜೊತೆಗೆ ಜಪಾನ್, ಚೈನಾ, ಇಟಲಿ, ಇರಾನ್ ಮೊದಲಾದ ದೇಶಗಳಿಗೆ ರಫ್ತು ಮಾಡಿ ವಿದೇಶಿ ವಿನಿಮಯವನ್ನು ಗಳಿಸಲಾಗುತ್ತಿದೆ.




©KTBS NOT TO BE REPUBLISHED

**ಮ್ಯಾಂಗನೀಸ್ ಅದಿರು :** ಭಾರತವು ಉತ್ಪಾದಿಸುತ್ತಿರುವ ಕಬ್ಬಿಣ ಮಿಶ್ರ ಲೋಹಗಳಲ್ಲಿ ಮ್ಯಾಂಗನೀಸ್ ಅತಿ ಮುಖ್ಯವಾದುದು. ಇದರ ಮುಖ್ಯ ಉಪಯೋಗಗಳೆಂದರೆ ಮ್ಯಾಂಗನೀಸ್‌ನ್ನು ಉಕ್ಕಿನ ಉತ್ಪಾದನೆಯಲ್ಲಿ ಬಳಸುವರು. ರಾಸಾಯನಿಕ ಮತ್ತು ವಿದ್ಯುತ್ ಉಪಕರಣಗಳ ತಯಾರಿಕೆ ಹಾಗೂ ಬಣ್ಣದ ಗಾಜುಗಳ ತಯಾರಿಕೆಯಲ್ಲಿ ಬಳಸಲಾಗುವುದು.


**ಮ್ಯಾಂಗನೀಸ್ ಅದಿರಿನ ವಿಧಗಳು :** ಮ್ಯಾಂಗನೀಸ್‌ನ ಮುಖ್ಯ ಅದಿರುಗಳೆಂದರೆ ಪೈರೋಲೋಸೈಟ್, ಸೈಲೊಮೆಲೆನ್, ಮ್ಯಾಗ್ನೆಟೈಟ್, ಬ್ರಾನೈಟ್ ಮತ್ತು ಹೋಲ್ಯಾಂಡೈಟ್.

ಭಾರತದಲ್ಲಿ ದೊರಕುವ ಮ್ಯಾಂಗನೀಸ್ ಅದಿರು ಅತ್ಯುತ್ತಮವಾಗಿದೆ. ಪೈರೋಲೋಸೈಟ್ ಮತ್ತು ಸೈಲೋಮೆಲೇನ ಮ್ಯಾಂಗನೀಸ್‌ನ ಮುಖ್ಯ ಅದಿರುಗಳಾಗಿವೆ. ಒಡಿಶಾ, ಕರ್ನಾಟಕ, ಮಧ್ಯಪ್ರದೇಶ ಮತ್ತು

ಮಹಾರಾಷ್ಟ್ರಗಳು ಮ್ಯಾಂಗನೀಸ್ ಅದಿರನ್ನು ಉತ್ಪಾದಿಸುವ ಪ್ರಮುಖ ರಾಜ್ಯಗಳಾಗಿವೆ. ಇವುಗಳಲ್ಲದೆ ಬಿಹಾರ, ಛತ್ತೀಸಘಡ್, ರಾಜಸ್ತಾನ, ಪಂಜಾಬ ಮತ್ತು ಗೋವಾಗಳಲ್ಲೂ ಮ್ಯಾಂಗನೀಸ್ ಅದಿರು ದೊರೆಯುತ್ತದೆ.

**ಬಾಕ್ಸೈಟ್ ಅದಿರು :** ಬಾಕ್ಸೈಟ್ ಅಲ್ಯೂಮಿನಿಯಂ ಲೋಹದ ಮುಖ್ಯ ಅದಿರಾಗಿದೆ. ಕಬ್ಬಿಣದ ಆಕ್ಸೈಡ್ ಮತ್ತು ಮರಳಿನೊಂದಿಗೆ ಮಿಶ್ರಿತವಾಗಿರುತ್ತದೆ. ಕಂದು ಹಳದಿ ಮತ್ತು ಬೂದು ಬಣ್ಣಗಳಿಂದ ಮಿಶ್ರಿತವಾಗಿರುವ ಬಾಕ್ಸೈಟ್ ಜೇಡಿಮಣ್ಣಿನಂತೆ ಜಿಗುಟು ಗುಣವನ್ನು ಹೊಂದಿರುತ್ತದೆ. ಬಾಕ್ಸೈಟ್ ಅದಿರು ಪ್ರತಿಶತ 60 ರಿಂದ 70 ರಷ್ಟು ಅಲ್ಯೂಮಿನಿಯಂ ಆಕ್ಸೈಡ್ ಹೊಂದಿದ್ದು, ಅದನ್ನು ಸಂಸ್ಕರಿಸಿ ಅಲ್ಯೂಮಿನಿಯಂನ್ನು ಪಡೆಯಲಾಗುತ್ತದೆ. ಬಾಕ್ಸೈಟ್ ವೈವಿಧ್ಯಮಯ ಉಪಯೋಗಗಳಿಗಾಗಿ ಬಳಸಲ್ಪಡುವುದರಿಂದ 20ನೇ ಶತಮಾನದ 'ಅದ್ಭುತ ಲೋಹ'ವೆಂದು ಕರೆಯಲಾಗುತ್ತದೆ.

ಬಾಕ್ಸೈಟ್ ಅದಿರು ಮುಖ್ಯವಾಗಿ ಅಲ್ಯುಮಿನಿಯಂ ತಯಾರಿಕೆಯಲ್ಲಿ ಉಪಯೋಗವಾಗುತ್ತದೆ. ಭಾರತವು ಹೇರಳವಾದ ಬಾಕ್ಸೈಟ್‌ನ ನಿಕ್ಷೇಪವನ್ನು ಹೊಂದಿದ್ದು, ಅಲ್ಯುಮಿನಿಯಂ ಉತ್ಪಾದನೆಯಲ್ಲಿ ಸ್ವಾವಲಂಬನೆಯಾಗಿದೆ. ನಿಕ್ಷೇಪದಲ್ಲಿ ದೇಶವು ಪ್ರಪಂಚದಲ್ಲಿ 5ನೇ ಸ್ಥಾನದಲ್ಲಿದೆ. ಭಾರತದಲ್ಲಿ ಮುಖ್ಯವಾಗಿ **ಒಡಿಶಾದ** ಕೋರಾಪಟ್, ಕಾಳಹಂದಿ, ಬೋಲಾಂಗೀರ್, ಸುಂದರಘರ್; **ಗುಜರಾತ್‌ನ** ಜಾಮನಗರ, ಭಾವನಗರ, ಜುನಾಗಡ, ಬರೂಚ್, ಸೂರತ ಜಿಲ್ಲೆಗಳಲ್ಲಿ; **ಜಾರ್ಖಂಡನ** ರಾಂಚಿ,




NOT TO BE REPUBLISHED ©KTBS

ಪಲಮಾವು, ಶಹಬಾದ್, ಲೋಹರದಗ ಜಿಲ್ಲೆಗಳಲ್ಲಿ; **ಮಹಾರಾಷ್ಟ್ರದ** ರತ್ನಾಗಿರಿ, ಕೊಲ್ಲಾಪೂರ, ಅಂಬೋಲಿಘಾಟ, ಉದಯಗಿರಿ, ರಾಧಾನಗರಿ, ದಂಗರ್ವಾಡಿ ಮತ್ತು ದರ್ಭಾಂಗ, ಛತ್ತೀಸಗಡದ ಬಸ್ತಾರ, ಬಿಲಾಸ್ಪುರ, ರಾಯಗಡ್ ಮತ್ತು ಸುರಗುಜಾಗಳಲ್ಲಿ ಹಂಚಿಕೆಯಾಗಿದೆ. ಇದಲ್ಲದೆ ಮಧ್ಯಪ್ರದೇಶ, ಕರ್ನಾಟಕದ ಬೆಳಗಾವಿ, ತಮಿಳುನಾಡಿನ ಸೇಲಂ, ಮಧುರೈ, ಆಂಧ್ರ ಪ್ರದೇಶದ ವಿಶಾಖಪಟ್ಟಣ ಮೊದಲಾದ ಸ್ಥಳಗಳಲ್ಲಿ ಬಾಕ್ಸೈಟ್ ಅದಿರು ದೊರೆಯುತ್ತದೆ. ಭಾರತವು ಸೌದಿ ಅರೇಬಿಯಾ, ಯು.ಎ.ಇ., ಬ್ರಿಟನ್, ಜರ್ಮನಿ, ಜಪಾನ. ಯು.ಎಸ್.ಎ. ರಾಷ್ಟ್ರಗಳಿಗೆ ಬಾಕ್ಸೈಟ್ ಅದಿರನ್ನು ರಫ್ತು ಮಾಡುತ್ತಿವೆ.

**4) ಅಭ್ರಕ (Mica) :** ಕಬ್ಬಿಣೇತರ ವರ್ಗದ ಖನಿಜಗಳಲ್ಲಿ ಅಭ್ರಕವು ಅತಿ ಮುಖ್ಯವಾದ ಅದಿರಾಗಿದೆ. ಭಾರತವು ಅಭ್ರಕದ ನಿಕ್ಷೇಪ ಮತ್ತು ಫಲಕಅಭ್ರಕದ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಅಗ್ರಸ್ಥಾನದಲ್ಲಿದೆ. ಅಭ್ರಕವು ಒಳ್ಳೆಯ ಪಾರದರ್ಶಕತೆ, ಸ್ಥಿತಿ ಸ್ಥಾಪಕತ್ವ, ಶಾಖ ನಿರೋಧಕ ಹಾಗೂ ಹೊಳಪುಳ್ಳ ಸಿಲಿಕೇಟ ಖನಿಜವಾಗಿದೆ. ಇದು ಶಾಖ ಮತ್ತು ವಿದ್ಯುತ್ತಿನ ಮಂದವಾಹಕವಾಗಿರುವುದರಿಂದ ಇದನ್ನು ಶಾಖ ನಿರೋಧಕ ಹಾಗೂ ವಿದ್ಯುತ್ ನಿರೋಧಕ ವಸ್ತುವಾಗಿ ಟೆಲಿಫೋನ್, ಟೆಲಿಗ್ರಾಫ್, ನಿಸ್ತಂತು ಸೇವೆ, ಗಾಜು ತಯಾರಿಕೆ, ಬಣ್ಣ ವಾರ್ನಿಷ್, ಕೃತಕ ರಬ್ಬರ್, ಡೈನೊಮೋಗಳು, ರಾಸಾಯನಿಕ ಕೈಗಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಅಭ್ರಕವು **'ಕಾಗೆ ಬಂಗಾರ'** ಎಂದು ಪ್ರಸಿದ್ಧಿಪಡೆದಿದೆ.

**ಅಭ್ರಕದ ವಿಧಗಳು** : ಅಭ್ರಕದಲ್ಲಿ ಕಂಡು ಬರುವ ರಾಸಾಯನಿಕ ಅಂಶ ಹಾಗೂ ಬಣ್ಣಗಳಿಗನುಗುಣವಾಗಿ ಅದನ್ನು ಅನೇಕ ವಿಧಗಳನ್ನಾಗಿ ವಿಂಗಡಿಸಲಾಗಿದೆ. ಇವುಗಳೆಂದರೆ ಮಸ್ಕೋವೈಟ್ (ಶ್ವೇತ ಅಭ್ರಕ) ಬಯೋಟೈಟ್ (ಕಪ್ಪು ಅಭ್ರಕ), ಫ್ಲೂಗೋವೈಟ್ (ಕಂದು ಅಭ್ರಕ) ಮೊದಲಾದವು. ಭಾರತದಲ್ಲಿ ಅತ್ಯುತ್ತಮ ದರ್ಜೆಯ ಶ್ವೇತ ಅಭ್ರಕವು ವ್ಯಾಪಕವಾಗಿ ಹರಡಿದೆ.

ಭಾರತದಲ್ಲಿ ಅಭ್ರಕವು ಆಂಧ್ರ ಪ್ರದೇಶದ ನೆಲ್ಲೂರ್, ವಾರಂಗಲ್, ಕೃಷ್ಣಾ ಮತ್ತು ಪೂರ್ವ ಗೋದಾವರಿ ಜಿಲ್ಲೆಗಳು, ಜಾರ್ಖಂಡ ರಾಜ್ಯದ ಧನಭಾದ್, ಪಲಮಾವು, ಗಿರಧಿ, ಕೋಡರ್ಮ; ಬಿಹಾರದ ಗಯಾ, ಮೊಂಗೈರ್, ಬಾಗಲ್‌ಪುರ, ನಾವಡ ಜಿಲ್ಲೆಗಳು; ರಾಜಸ್ತಾನದ ಉದಯಪುರ, ಅಜ್ಮೀರ ಬಿಲ್ವಾರ, ಜೈಪುರ; ಕೇರಳದ ತಿರುವನಂತಪುರ; ತಮಿಳುನಾಡಿನ ಸೇಲಂ; ಮಧ್ಯ ಪ್ರದೇಶದ ಜಿಂದ್ವಾರ, ಬಸ್ತಾರ್, ಬಾಲಘಾಟಗಳಲ್ಲಿ ಹಂಚಿಕೆಯಾಗಿದೆ. ಹಿಂದಿನ ವರ್ಷಗಳಲ್ಲಿ ಭಾರತವು ಅಪಾರ ಪ್ರಮಾಣದಲ್ಲಿ ಉತ್ಪಾದಿಸಿ, ರಫ್ತು ಮಾಡುತ್ತಿತ್ತು. ಇಂದು ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿದ್ದು, ಇದರ ರಫ್ತು ಕಡಿಮೆಯಾಗಿದೆ.

**5. ಚಿನ್ನದ ಅದಿರು :** ಚಿನ್ನವು ಅತ್ಯಮೂಲ್ಯವಾದ ಲೋಹವಾಗಿದ್ದು, ಪ್ರಪಂಚದಾದ್ಯಂತ ಪ್ರಾಚೀನ ಕಾಲದಿಂದಲೂ ಅತ್ಯಂತ ಹೆಚ್ಚಿನ ಮೌಲ್ಯವನ್ನು ಹೊಂದಿದೆ. ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿ ಹಾಗೂ ಅಂತರರಾಷ್ಟ್ರೀಯ ಮೌಲ್ಯ ನಿರ್ಧರಿಸುವಲ್ಲಿ ಚಿನ್ನವು ನಿರ್ಧಾರಕ ಮಾಧ್ಯಮವಾಗಿ ಬಳಸಲ್ಪಡುವುದು. ಭಾರತದಲ್ಲಿ ಚಿನ್ನದ ನಿಕ್ಷೇಪ ಬಹಳ ಕಡಿಮೆ ಇದೆ. ಕರ್ನಾಟಕದ ಕೋಲಾರ, ರಾಯಚೂರು, ಹಟ್ಟಿ ನಿಕ್ಷೇಪಗಳು, ಆಂಧ್ರ ಪ್ರದೇಶದ ಅನಂತಪುರ, ಬಿಹಾರ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಕಂಡುಬರುತ್ತವೆ. ಇದಲ್ಲದೆ ಗದಗ ಬಳಿ ಇರುವ ಕಪ್ಪತಗುಡ್ಡದಲ್ಲಿ ಬೆಣಚುಕಲ್ಲಿನ ಶಿಲಾಸ್ತರಗಳಲ್ಲಿ ಎಳೆಗಳ ರೂಪದಲ್ಲಿ ದೊರೆಯುತ್ತದೆ. ಸದ್ಯದಲ್ಲಿ ಹಟ್ಟಿಗಣಿ ದೇಶದಲ್ಲಿ ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುತ್ತಿದೆ.

© KTBS NOT TO BE REPUBLISHED

## ಶಕ್ತಿ ಸಂಪನ್ಮೂಲಗಳು (Power Resources) :

ಶಕ್ತಿ ಸಂಪನ್ಮೂಲಗಳು ದೇಶದ ಆರ್ಥಿಕ ಅಭಿವೃದ್ಧಿಗೆ ಅತ್ಯವಶ್ಯಕವಾಗಿವೆ. ಸಾಂಪ್ರದಾಯಿಕ (conventional) ಹಾಗೂ ಮುಗಿದು ಹೋಗುವ ಶಕ್ತಿ ಸಂಪನ್ಮೂಲಗಳಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ, ಅಣುಶಕ್ತಿಗಳನ್ನು ಉದಾಹರಿಸಬಹುದಾಗಿದೆ. ಮುಗಿಯದೇ ಇರುವ ಶಕ್ತಿ ಸಂಪನ್ಮೂಲಗಳಲ್ಲಿ ಸೌರಶಕ್ತಿ, ಗಾಳಿ, ಜಲವಿದ್ಯುತ್‌ಗಳು ಪ್ರಮುಖವಾಗಿವೆ.

**ಕಲ್ಲಿದ್ದಲು (Coal) :** ಭಾರತವು ಉತ್ಪಾದಿಸುತ್ತಿರುವ ಹಾಗೂ ಬಳಕೆ ಮಾಡುತ್ತಿರುವ ಶಕ್ತಿ ಸಂಪನ್ಮೂಲಗಳಲ್ಲಿ ಕಲ್ಲಿದ್ದಲು ಅತ್ಯಂತ ಪ್ರಮುಖವಾದುದು. ಭಾರತವು ಪ್ರಪಂಚದಲ್ಲಿ ಕಲ್ಲಿದ್ದಲಿನ ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದೆ. ಕೋಟ್ಯಂತರ ವರ್ಷಗಳ ಹಿಂದೆ ಭೂಮಿಯಲ್ಲಿ ದಟ್ಟವಾದ ಅರಣ್ಯಗಳಿಂದ ಕೂಡಿದ್ದವೆಂದೂ, ಕ್ರಮೇಣ ಇವುಗಳು ಭೂಮಿಯ ಪದರುಗಳಲ್ಲಿ ಹುದುಗಿ ಹೋಗಿ ಶಾಖ ಮತ್ತು ಒತ್ತಡದಿಂದ ಕಲ್ಲಿದ್ದಲಾಗಿ ಮಾರ್ಪಾಡು ಹೊಂದಿದವೆಂದು ನಂಬಲಾಗಿದೆ. ಕಲ್ಲಿದ್ದಲು ಕೇವಲ ಶಕ್ತಿಯ ಖನಿಜವಾಗಿರದೇ ಕೀಟ ನಿರೋಧಕಗಳು, ಸ್ಫೋಟಕ ವಸ್ತುಗಳು, ಕೃತಕ ನಾರು, ಕೃತಕ ರಬ್ಬರ್, ಪ್ಲಾಸ್ಟಿಕ್, ರಾಸಾಯನಿಕ ಗೊಬ್ಬರ, ಮುಂತಾದವುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಕಲ್ಲಿದ್ದಲು ಬಹು ಉಪಯೋಗಿ ಖನಿಜವಾಗಿರುವುದರಿಂದ ಇದನ್ನು "ಕಪ್ಪು ಬಂಗಾರ" (Black Gold) ಎಂದು ಕರೆಯುವರು.

> **ನಿಮಗೆ ತಿಳಿದಿರಲಿ**
>
> ಕಲ್ಲಿದ್ದಲಿನಲ್ಲಿರುವ ಇಂಗಾಲ ಮತ್ತು ಅದು ಕೊಡುವ ಉಷ್ಣಾಂಶವನ್ನಾಧರಿಸಿ ನಾಲ್ಕು ವಿಧಗಳನ್ನಾಗಿ ವಿಂಗಡಿಸಲಾಗಿದೆ. 1) ಅಂತ್ರಸೈಟ್ 2) ಬಿಟುಮಿನಸ್, 3) ಲಿಗ್ನೈಟ್, 4) ಪೀಟ್

ಭಾರತದಲ್ಲಿ ಕಲ್ಲಿದ್ದಲಿನ ನಿಕ್ಷೇಪಗಳು ದಾಮೋದರ ನದಿ ಕಣಿವೆಯಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿವೆ. ಜಾರ್ಖಂಡ, ಛತ್ತೀಸಘಡ್ ರಾಜ್ಯಗಳು ಅತಿ ಹೆಚ್ಚು ಕಲ್ಲಿದ್ದಲನ್ನು ಉತ್ಪಾದಿಸುವ ರಾಜ್ಯಗಳಾಗಿವೆ. ಝುರಿಯಾ, ಬೊಕಾರೊ, ಗಿರಿಧಿ, ಕರಣಪುರ ಮುಖ್ಯ ಪ್ರದೇಶಗಳಾಗಿವೆ. ಇವಲ್ಲದೆ ಗೋದಾವರಿ, ಮಹಾನದಿ ಮತ್ತು ವಾರ್ಧಾ ನದಿಗಳ ಕಣಿವೆಯಲ್ಲಿ ನಿಕ್ಷೇಪಗಳಿವೆ. ಕಲ್ಲಿದ್ದಲನ್ನು ಉತ್ಪಾದಿಸುವ ಮುಖ್ಯ ರಾಜ್ಯಗಳೆಂದರೆ ಜಾರ್ಖಂಡ್, ಛತ್ತೀಸ್‌ಘಡ, ಒರಿಸ್ಸಾ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶ. ದೇಶದಲ್ಲಿ ಕಲ್ಲಿದ್ದಲಿನ ಬೇಡಿಕೆ ಅಧಿಕವಾಗಿದ್ದು, ಇದರಿಂದ ಉತ್ತಮ ದರ್ಜೆಯ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲಾಗುತ್ತದೆ.

**ಪೆಟ್ರೋಲಿಯಂ (Petrolieum)** ಪೆಟ್ರೋಲಿಯಂ ಪುರಾತನ ಕಾಲದಲ್ಲಿ ಜೀವಿಗಳ ಅವಶೇಷಗಳಿಂದ ಉತ್ಪತ್ತಿ ಹೊಂದಿರುವುದೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿರುವರು. ಭೂಮಿಯಿಂದ ಹೊರ ತೆಗೆಯುವ ಪೆಟ್ರೋಲಿಯಂ ಹಲವಾರು ಬಗೆಯ ಮಿಶ್ರಣಗಳಿಂದ ಕೂಡಿದ್ದು, ಅದನ್ನು 'ಕಚ್ಚಾತೈಲ' (Crude oil) ಎಂದು ಕರೆಯುವರು. ಇದನ್ನು ಶುದ್ಧೀಕರಣ ಕೇಂದ್ರಗಳಲ್ಲಿ ಶುದ್ಧೀಕರಿಸಿ ಗ್ಯಾಸೋಲಿನ್, ಪೆಟ್ರೋಲ್, ಡೀಸಲ್, ಸೀಮೆಎಣ್ಣೆ ಮುಂತಾದವುಗಳನ್ನು ಪಡೆಯಲಾಗುವುದು. ಪೆಟ್ರೋಲಿಯಂ ಪ್ರಮುಖವಾದ ಶಕ್ತಿ ಸಂಪನ್ಮೂಲ ಮಾತ್ರವಾಗಿರದೆ, ಒಂದು ಮುಖ್ಯ ಕಚ್ಚಾ ವಸ್ತುವೂ ಸಹ ಆಗಿದೆ. ಇದನ್ನು ಕಚ್ಚಾ ವಸ್ತುವನ್ನಾಗಿ ಅವಲಂಬಿಸಿದ ಅನೇಕ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ವ್ಯವಸಾಯ, ಕೈಗಾರಿಕೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಪೆಟ್ರೋಲಿಯಂ ಅಮೂಲ್ಯ ಶಕ್ತಿ ಸಂಪನ್ಮೂಲ. ಇದು ಶಾಂತಿ ಹಾಗೂ ಯುದ್ಧ ಕಾಲಗಳೆರಡರಲ್ಲೂ ಅಮೂಲ್ಯವಾದುದು. ಆದುದರಿಂದಲೇ ಇದನ್ನು 'ದ್ರವರೂಪದ ಚಿನ್ನ' ಎಂದು ಕರೆಯಲಾಗಿದೆ.

ಭಾರತದಲ್ಲಿ ಅಸ್ಸಾಂನ 'ದಿಗ್ಬಾಯ್' ಎಂಬಲ್ಲಿ ಪೆಟ್ರೋಲಿಯಮ್‌ನ್ನು ಮೊದಲು ಪತ್ತೆ ಮಾಡಲಾಯಿತು. ಸ್ವಾತಂತ್ರ್ಯ ಬರುವವರೆಗೆ ಅದೊಂದೇ ತೈಲ ಉತ್ಪಾದನಾ ಪ್ರದೇಶವಾಗಿತ್ತು. ಇಂದು ಲಕಿಮ್‌ಪುರ ಹುಗ್ರಿಜನ್, ಮೊರಾನ್, ನಹರ್‌ಕಟಿಯಾ ಹಾಗೂ ಇತರ ಬಾವಿಗಳಿಂದ ಎಣ್ಣೆಯನ್ನು ಉತ್ಪಾದಿಸಲಾಗುತ್ತದೆ.

ಗುಜರಾತ್ ರಾಜ್ಯವು ಕಚ್ಚಾ ತೈಲವನ್ನು ಉತ್ಪಾದಿಸುವ ಮತ್ತೊಂದು ಪ್ರದೇಶವಾಗಿದೆ. ಅಂಕಲೇಶ್ವರದಲ್ಲಿ ಮೊದಲನೇ ತೈಲ ಬಾವಿಯನ್ನು ಕೊರೆಯಲಾಯಿತು. 1974ರಲ್ಲಿ ಅರಬ್ಬೀ ಸಮುದ್ರದಲ್ಲಿ ಮುಂಬೈಯಿಂದ 110 ಕಿ.ಮೀ. ದೂರದ 'ಬಾಂಬೆ ಹೈ' ನಲ್ಲಿ ತೈಲವನ್ನು ಪತ್ತೆಮಾಡಿ 1976ರಲ್ಲಿ ತೈಲೋತ್ಪಾದನೆಯನ್ನು ಪ್ರಾರಂಭಿಸಲಾಯಿತು. ಇದು ಭಾರತದ ಅತಿ ದೊಡ್ಡ ತೈಲ ನಿಕ್ಷೇಪವಾಗಿದೆ. ಇತ್ತೀಚೆಗೆ ಕಾವೇರಿ, ಕೃಷ್ಣಾ, ಗೋದಾವರಿ ಮತ್ತು ಮಹಾನದಿಗಳ ಮುಖಜ ಭೂಮಿಯಲ್ಲಿ ತೈಲ ನಿಕ್ಷೇಪವನ್ನು ಪತ್ತೆ ಮಾಡಲಾಗಿದೆ. ಈಗ ಒಟ್ಟು 19 ತೈಲ ಶುದ್ಧೀಕರಣ ಕೇಂದ್ರಗಳಿದ್ದು, ಇವುಗಳ ಮುಖಾಂತರ ಕಚ್ಚಾತೈಲವನ್ನು ಪಡೆಯಲಾಗುತ್ತದೆ. ಭಾರತದಲ್ಲಿ ಉತ್ಪಾದನೆ ಕಡಿಮೆ ಇದ್ದು, ಇರಾನ್, ಇರಾಕ್, ಸೌದಿ ಅರೇಬಿಯಾ ಮತ್ತು ರಷ್ಯಾದಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ.

**ಪರಮಾಣು ಖನಿಜಗಳು (Atomic Minerals) :**

ಭಾರತವು ಹೇರಳವಾದ ಪರಮಾಣು ಖನಿಜಗಳನ್ನು ಹೊಂದಿರುವ ದೇಶ. ಪರಮಾಣು ಖನಿಜಗಳಿಂದ ಅಣುಶಕ್ತಿಯನ್ನು ಉತ್ಪಾದಿಸಲಾಗುತ್ತದೆ. ಒಂದು ದೇಶದ ಸ್ಥಾನಮಾನ ಮತ್ತು ಶಕ್ತಿಯನ್ನು ಪ್ರದರ್ಶಿಸುವಲ್ಲಿ ಪರಮಾಣುಶಕ್ತಿಯ ಪಾತ್ರ ಅತಿ ಮಹತ್ವದ್ದಾಗಿದೆ. ಪರಮಾಣು ಶಕ್ತಿಯನ್ನು ಕೇವಲ ದೇಶದ ರಕ್ಷಣಾ ವ್ಯವಸ್ಥೆಗೆ ಮಾತ್ರ ಬಳಸಲಾಗುತ್ತಿತ್ತು. ಇಂದು ಇದರ ವಿದ್ಯುತ್ ಉತ್ಪಾದನೆಯೂ ಪ್ರಮುಖವಾಗಿದೆ. ಭಾರತದಲ್ಲಿ ಕಂಡು ಬರುವ ಪರಮಾಣು ಖನಿಜಗಳಲ್ಲಿ ಯುರೇನಿಯಂ, ಥೋರಿಯಂ. ಬೆರಿಲಿಯಂ, ಲಿಥಿಯಂ ಮುಂತಾದವುಗಳು ಪ್ರಮುಖವಾಗಿವೆ.

© KTBS NOT TO BE REPUBLISHED

ಎ) **ಯುರೇನಿಯಂ** : ಜಾರ್ಖಂಡ್‌ನ ಸಿಂಗಭೂಮ್, ಗಯಾ ಮತ್ತು ಹಜಾರಿಬಾಗ್ ಜಿಲ್ಲೆಗಳು, ಉತ್ತರ ಪ್ರದೇಶದ ಶಹರಣ್‌ಪುರದ ಮೆಕ್ಕಲು ಮಣ್ಣು, ಕೇರಳದ ತೀರದಲ್ಲಿ ಹಂಚಿಕೆಯಾಗಿದೆ.

ಬಿ) **ಥೋರಿಯಂ :** ಇದು ಕೇರಳ, ಬಿಹಾರ, ತಮಿಳುನಾಡು ಮತ್ತು ರಾಜಸ್ತಾನಗಳಲ್ಲಿ ಹಂಚಿಕೆಯಾಗಿದೆ.

ಸಿ) **ಬೆರಿಲಿಯಂ :** ಬೆರಿಲಿಯಂ ಅಕ್ಸೈಡ್‌ನ್ನು ಪರಮಾಣು ವಿದ್ಯುತ್ ಉತ್ಪಾದನೆಯ ರಿಯಾಕ್ಟರುಗಳಲ್ಲಿ 'ಮಾಡರೇಟರ್' ಕಾರ್ಯಕ್ಕಾಗಿ ಬಳಸಲಾಗುವುದು. ಭಾರತವು ಅಗತ್ಯವಾದಷ್ಟು ಬೆರಿಲಿಯಂ ನಿಕ್ಷೇಪವನ್ನು ಹೊಂದಿದೆ.


ಡಿ) **ಲಿಥಿಯಂ :** ಇದು ಹಗುರವಾದ ಲೋಹವಾಗಿದ್ದು ಲೆಪಿಡೋಲೆಟ್ ಹಾಗೂ ಸ್ಪ್ಯೂಡೋಮಿನ್ ಅದಿರುಗಳಿಂದ ಪಡೆಯಲಾಗುವುದು. ಭಾರತದಲ್ಲಿ ಜಾರ್ಖಂಡ್ ಹಾಗೂ ಮಧ್ಯ ಪ್ರದೇಶಗಳಲ್ಲಿ ಇದು ವ್ಯಾಪಕವಾಗಿ ಹಂಚಿಕೆಯಾಗಿದೆ.

**ಅಸಾಂಪ್ರದಾಯಿಕ ಶಕ್ತಿ ಮೂಲಗಳು (Non-conventional Energy Sources) :** ಪ್ರಪಂಚದಾದ್ಯಂತ ಸಾಂಪ್ರದಾಯಿಕ ಶಕ್ತಿ ಮೂಲಗಳ ಬಳಕೆಯಿಂದ ಹಸಿರು ಮನೆಯ ಪರಿಣಾಮ ಉಂಟಾಗುತ್ತಿದ್ದು, ಭೂಮಿಯ ವಾಯುಮಂಡಲದ ಉಷ್ಣಾಂಶ ಹೆಚ್ಚಾಗುವ ಸಂಭವನೀಯತೆಯನ್ನು ಗಮನಿಸಲಾಗಿದೆ. ಇದನ್ನೇ 'ಗ್ಲೋಬಲ್ ವಾರ್ಮಿಂಗ್' (ಜಾಗತಿಕ ತಾಪಮಾನ ಏರಿಕೆ) ಎಂದು ಕರೆಯಲಾಗಿದೆ. ಅಲ್ಲದೆ ಜನಸಂಖ್ಯಾ ಹೆಚ್ಚಳ, ನಗರೀಕರಣ, ಕೈಗಾರಿಕಾಭಿವೃದ್ಧಿ ಮೊದಲಾದವು ಈ ಸಾಂಪ್ರದಾಯಿಕ ಇಂಧನಗಳ ಬಳಕೆಯು ನಿರಂತರವಾಗಿ ಹೆಚ್ಚಲು ಕಾರಣವಾಗಿದೆ. ಇದರಿಂದ ಪರಿಸರ ಮಾಲಿನ್ಯ ಸಹ ಹೆಚ್ಚಾಗುತ್ತಿದೆ. ಆದ್ದರಿಂದ ಇವುಗಳ ಬಳಕೆಯನ್ನು ಮಿತಿ ಗೊಳಿಸಿ ಅಸಾಂಪ್ರದಾಯಿಕ ಶಕ್ತಿ ಮೂಲಗಳನ್ನು ಉಪಯೋಗಿಸುವುದು ಅಗತ್ಯವಾಗಿದೆ.

ಪುನರ್ ಬಳಕೆ ಮಾಡಬಹುದಾದ ಶಕ್ತಿ ಮೂಲಗಳಾದ ಸೌರಶಕ್ತಿ, ಪವನ ಶಕ್ತಿ, ಸಾಗರ ಉಬ್ಬರ ಇಳಿತ ಶಕ್ತಿ, ಭೂ ಅಂತರಾಳದ ಶಕ್ತಿ, ಜೈವಿಕ ಅನಿಲ ಶಕ್ತಿ ಮೊದಲಾದವುಗಳನ್ನು ಅಸಾಂಪ್ರದಾಯಕ ಶಕ್ತಿ ಮೂಲಗಳೆಂದು ಕರೆಯುವರು.

**1) ಸೌರಶಕ್ತಿ (Solar Energy) :** ಸೂರ್ಯನ ಕಿರಣಗಳಿಂದ ಹೊರ ಸೂಸಲ್ಪಡುವ ಶಾಖದ ಬಳಕೆಯನ್ನೇ 'ಸೌರಶಕ್ತಿ' ಎಂದು ಕರೆಯುವರು. ಇದು ಮುಗಿಯದ ಶಕ್ತಿ ಸಂಪನ್ಮೂಲವಾಗಿದ್ದು, ಸೌರ ಶಕ್ತಿಯನ್ನು ನೇರವಾಗಿ ಶಾಖ ಶಕ್ತಿಯನ್ನಾಗಿ ಪರಿವರ್ತಿಸಬಹುದು. ಸೌರಶಕ್ತಿಯನ್ನು ಈಗಾಗಲೇ ವಿವಿಧ ವಿಧಾನಗಳಲ್ಲಿ ಬಳಸಲಾಗುತ್ತಿದ್ದು, ಇವುಗಳಲ್ಲಿ ಸೋಲಾರ್ ವಾಟರ್ ಹೀಟರ್, ಕುಕ್ಕರ್, ಸೋಲಾರ್ ಥರ್ಮಲ್, ವಿದ್ಯುತ್ ದೀಪ, ರೈಲ್ವೆ ಸಿಗ್ನಲ್, ನೀರೆತ್ತಲು ಹಾಗೂ ಸಂಪರ್ಕ ಮಾಧ್ಯಮಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಮೊದಲ ಸೌರ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ರಾಜಸ್ತಾನದ 'ಬಾರ್‌ಮರ್'ನಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ. ಇತ್ತೀಚೆಗೆ ಕರ್ನಾಟಕದ ಚಿಕ್ಕ ಬಳ್ಳಾಪುರ ಜಿಲ್ಲೆಯಲ್ಲಿಯೂ ಸೌರ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

**2) ಪವನ ಶಕ್ತಿ (Wind Energy) :** ಭಾರತದಲ್ಲಿ ಪವನ ಶಕ್ತಿಯು ವಾಣಿಜ್ಯ ಪ್ರಮಾಣದಲ್ಲಿ ಉತ್ಪಾದಿಸಲ್ಪಡುತ್ತಿದ್ದು, ಮುಂದಿನ ದಶಕಗಳಲ್ಲಿ ದೇಶದ ಹಲವಾರು ಭಾಗಗಳು ಪವನ ಶಕ್ತಿಯನ್ನು ಪ್ರಧಾನವಾಗಿ ಬಳಸಬಹುದಾದ ಸಾಧ್ಯತೆಗಳು ಕಂಡು ಬರುತ್ತಿವೆ. ಭಾರತವು ಪ್ರಪಂಚದಲ್ಲಿ ಗಾಳಿಯಿಂದ ವಿದ್ಯುತ್ತನ್ನು ಉತ್ಪಾದಿಸುವ. ಐದನೆಯ ದೊಡ್ಡ ದೇಶವಾಗಿದೆ. ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕ, ರಾಜಸ್ತಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಪವನ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗುತ್ತಿದೆ.




@KTBS
NOT TO BE REPUBLISHED

**ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ (Need for non-conventional Energy):** ಭಾರತದಲ್ಲಿ ಬಳಸುವ ಶಕ್ತಿ ಸಂಪನ್ಮೂಲಗಳಲ್ಲಿ ಮುಗಿದುಹೋಗುವ (ಸಂಪ್ರದಾಯಿಕ) ಸಂಪನ್ಮೂಲಗಳೇ ಪ್ರಧಾನವಾಗಿವೆ. ಇವುಗಳ ಉತ್ಪಾದನೆಯು ಕಡಿಮೆ ಇದ್ದು, ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗಿದೆ. ಇದರಿಂದ ರಾಷ್ಟ್ರೀಯ ಆದಾಯದ ಮೇಲೆ ಪರಿಣಾಮ ಉಂಟಾಗುತ್ತದೆ.

ಆದ್ದರಿಂದಾಗಿ ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಉಪಯೋಗ ಅನಿವಾರ್ಯವಾಗಿದೆ. ಮುಗಿಯದೇ ಇರುವ ಸಂಪನ್ಮೂಲಗಳ ಶೋಧನೆ ಮತ್ತು ಬಳಕೆಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಸಾಕಷ್ಟು ಪ್ರಾಮುಖ್ಯ ನೀಡಲಾಗುತ್ತಿದೆ.

**ಪರಿಹಾರಗಳು (Remedies) :** ಭಾರತದಲ್ಲಿ ಉಂಟಾಗುತ್ತಿರುವ ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನೀಗಿಸಲು ಹಲವಾರು ಪರಿಹಾರಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ ಮತ್ತು ಅನಿವಾರ್ಯವಾಗಿದೆ. 1) ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸುವುದು 2) ಜಲವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯ ನೀಡುವುದು 3) ಬದಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು 4) ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆಯನ್ನು ಪ್ರೋತ್ಸಾಹಿಸುವುದು 5) ಶಕ್ತಿ ಸಂಪನ್ಮೂಲಗಳನ್ನು ಮಿತವಾಗಿ ಬಳಸಲು ತಿಳುವಳಿಕೆ ನೀಡುವುದು 6) ನಿರುಪಯುಕ್ತ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದು ಮೊದಲಾದವು.

NOT TO BE REPUBLISHED @KTBS

## ಅಭ್ಯಾಸಗಳು

**I ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.**

1) ಭಾರತದಲ್ಲಿ __________ ಮತ್ತು __________ ರಾಜ್ಯಗಳು ಅತಿ ಹೆಚ್ಚು ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿವೆ.
2) ಬಾಕ್ಸೈಟ್ ಅದಿರಿನಿಂದ __________ ಲೋಹವನ್ನು ಉತ್ಪಾದಿಸುತ್ತಾರೆ.
3) ಅಭ್ರಕವನ್ನು __________ ಬಂಗಾರ ಎಂದು ಕರೆಯುತ್ತಾರೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

1) ಭಾರತದಲ್ಲಿ ದೊರಕುವ ಖನಿಜ ಸಂಪನ್ಮೂಲಗಳಾವುವು?
2) ಭಾರತದಲ್ಲಿ ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ರಾಜ್ಯಗಳು ಯಾವುವು?
3) ಭಾರತದಲ್ಲಿ ಉತ್ಪಾದಿಸುವ ಕಬ್ಬಿಣದ ಅದಿರಿನ ವಿಧಗಳನ್ನು ತಿಳಿಸಿ.
4) ಭಾರತದ ಪ್ರಮುಖ ಶಕ್ತಿ ಸಂಪನ್ಮೂಲಗಳಾವುವು? ವಿವರಿಸಿ.
5) ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳೆಂದರೇನು? ಅವುಗಳ ಪ್ರಾಮುಖ್ಯತೆಯನ್ನು ವಿವರಿಸಿ.
6) ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಲು ನಿಮ್ಮದೇ ಆದ ಸಲಹೆಗಳನ್ನು ನೀಡಿ.

**III ಚಟುವಟಿಕೆಗಳು :**

1) ಖನಿಜಗಳ ಹಂಚಿಕೆಯನ್ನು ಭಾರತದ ನಕ್ಷೆಯಲ್ಲಿ ಗುರುತಿಸಿ ಮತ್ತು ಹೆಸರಿಸಿ.

**IV. ಯೋಜಿತ ಕಾರ್ಯ :**

1) ಭಾರತದಲ್ಲಿ ದೊರೆಯುವ ಖನಿಜಗಳ ಮಾದರಿಯನ್ನು ಸಂಗ್ರಹಿಸಿರಿ ಮತ್ತು ಟಿಪ್ಪಣಿ ಬರೆಯಿರಿ.

## ಅಧ್ಯಾಯ – 27

# ಭಾರತದ ಸಾರಿಗೆ ಹಾಗೂ ಸಂಪರ್ಕ

H9N3A1

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಭಾರತದಲ್ಲಿ ಸಾರಿಗೆಯ ಮಹತ್ವ.
- ರಸ್ತೆ ಸಾರಿಗೆ ವಿಧಗಳು–ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳು.
- ರಸ್ತೆ ಸಾರಿಗೆಯ ಸಮಸ್ಯೆಗಳು.
- ಸಮೂಹ ಮಾಧ್ಯಮಗಳ ಬಗ್ಗೆ ತಿಳಿಯುವುದು.
- ಸಂಪರ್ಕದ ವಿಧಗಳು, ಸಂಪರ್ಕದ ಪ್ರಾಮುಖ್ಯತೆ.
- ಭೌಗೋಳಿಕ ಮಾಹಿತಿ ವ್ಯವಸ್ಥೆ.
- ಜಿ.ಪಿ.ಎಸ್.ದೂರಸಂವೇದಿ ತಂತ್ರಜ್ಞಾನ

ವಸ್ತುಗಳು, ಸೇವೆಗಳು, ಮಾಹಿತಿ ಮತ್ತು ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದನ್ನೇ 'ಸಾರಿಗೆ' ಎಂದು ಕರೆಯುವರು. ಸರಕು ಮತ್ತು ಸೇವೆಗಳನ್ನು ಉತ್ಪಾದಿತ ಪ್ರದೇಶ ಗಳಿಂದ ಬೇಡಿಕೆಯಿರುವ ಪ್ರದೇಶಗಳಿಗೆ ಪೂರೈಸುವುದು. ಸಾರಿಗೆಯ ಮೂಲಕ ವಸ್ತುಗಳು ಮತ್ತು ಸೇವೆಗಳು ಉತ್ಪಾದಿಸುವ ಪ್ರದೇಶಗಳಿಂದ ಕೊರತೆಯಿರುವ ಪ್ರದೇಶಗಳಿಗೆ ಸಾಗಿಸಲ್ಪಟ್ಟು ಬಳಕೆಗೆ ಸಹಾಯಕವಾಗುವುದು.

ಸಾರಿಗೆಯು ಆರ್ಥಿಕ ಅಭಿವೃದ್ಧಿಯಲ್ಲಿ ನಿರ್ವಹಿಸುವ ಪಾತ್ರ ಮಹತ್ತರವಾದುದು. ಆರ್ಥಿಕತೆಯ ಮುಖ್ಯ ಕ್ಷೇತ್ರಗಳಾದ ವ್ಯವಸಾಯ, ಕೈಗಾರಿಕೆ, ಗಣಿಗಾರಿಕೆ, ಅರಣ್ಯಗಾರಿಕೆ, ಮೀನುಗಾರಿಕೆ, ಹೈನುಗಾರಿಕೆ ಮೊದಲಾದವುಗಳನ್ನು ಸಾರಿಗೆಯು ಮಾರುಕಟ್ಟೆಗಳೊಡನೆ ಸಂಪರ್ಕಿಸುವುದು. ಇದರಿಂದ ತ್ವರಿತ ಗತಿಯ ಆರ್ಥಿಕ ಬೆಳವಣಿಗೆಗೆ ಸಾರಿಗೆಯ ಅಭಿವೃದ್ಧಿಯು ಅಗತ್ಯವಾಗಿದೆ.

**ನಿಮಗಿದು ತಿಳಿದಿರಲಿ :**

ವ್ಯವಸಾಯ ಮತ್ತು ಕೈಗಾರಿಕೆ ಒಂದು ರಾಷ್ಟ್ರದ ದೇಹ ಮತ್ತು ಎಲುಬುಗಳಾಗಿದ್ದರೆ, ಸಾರಿಗೆಯು ರಕ್ತನಾಳಗಳಂತೆ ಕಾರ್ಯ ನಿರ್ವಹಿಸುತ್ತದೆ.

**ಸಾರಿಗೆಯ ವಿಧಗಳು :** ಸಾರಿಗೆಯಲ್ಲಿ ಮುಖ್ಯವಾಗಿ ನಾಲ್ಕು ಪ್ರಕಾರಗಳಿವೆ : 1) ರಸ್ತೆ ಸಾರಿಗೆ 2) ರೈಲು ಸಾರಿಗೆ 3) ವಾಯು ಸಾರಿಗೆ 4) ಜಲ ಸಾರಿಗೆ.

**1) ರಸ್ತೆ ಸಾರಿಗೆ (Road transport) :** ಭಾರತದಲ್ಲಿ ಪುರಾತನ ಕಾಲದಿಂದಲೂ ರಸ್ತೆಗಳು ನಿರ್ಮಾಣಗೊಂಡಿವೆ. ಪ್ರಾಚೀನ ಭಾರತದಲ್ಲಿ ಅನೇಕ ರಾಜರುಗಳು ರಸ್ತೆಗಳ ನಿರ್ಮಾಣಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದರು. ಬ್ರಿಟೀಷರ ಕಾಲದಲ್ಲಿ ರಸ್ತೆಗಳನ್ನು ಬಹುಮಟ್ಟಿಗೆ ರಕ್ಷಣಾ ವ್ಯವಸ್ಥೆಗಳಿಗಾಗಿ ನಿರ್ಮಿಸಲಾಗಿತ್ತು.

**ಭಾರತದಲ್ಲಿ ರಸ್ತೆಗಳ ಪ್ರಾಮುಖ್ಯತೆ :** ಭಾರತ ಹಳ್ಳಿಗಳ ದೇಶ ಹಾಗೂ ಕೃಷಿ ಪ್ರಧಾನವಾದ ದೇಶ. ಹಳ್ಳಿಯ ಮತ್ತು ಕೃಷಿಯ ಅಭಿವೃದ್ಧಿಗೆ ರಸ್ತೆಗಳ ಅವಶ್ಯಕತೆ ಮುಖ್ಯವಾಗಿದೆ. ರೈತರು ತಾವು ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಗೆ ಒಯ್ಯಲು ರಸ್ತೆಗಳ ಸಹಾಯದಿಂದ ಮಾತ್ರ ಸಾಧ್ಯ. ಹಳ್ಳಿಗಳಿಗೆ ಬೇಕಾದ

@KTBS NOT TO BE REPUBLISHED

ಅವಶ್ಯಕ ವಸ್ತುಗಳನ್ನು ಪೂರೈಸಿಕೊಳ್ಳಲು ರಸ್ತೆಗಳು ಸಹಾಯ ಮಾಡುತ್ತವೆ. ರಸ್ತೆ ಸಾರಿಗೆಗಳು ರೈಲು ಸಾರಿಗೆಗೆ ಪೂರಕವಾಗಿವೆ. ಸರಕು ಸಾಗಾಣಿಕೆ ರಸ್ತೆ ಮಾರ್ಗಗಳಿಂದ ಸಾಧ್ಯವಾಗಿದೆ. ರಸ್ತೆ ಸಾರಿಗೆಯನ್ನು ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು, ಜಿಲ್ಲಾ ರಸ್ತೆಗಳು ಮತ್ತು ಗ್ರಾಮೀಣ ರಸ್ತೆಗಳು ಎಂದು ವರ್ಗೀಕರಿಸಲಾಗಿದೆ.

**ರಾಷ್ಟ್ರೀಯ ಹೆದ್ದಾರಿಗಳು (National Highways) :**

ಇವು ದೇಶದ ಅತಿ ಮುಖ್ಯ ರಸ್ತೆಗಳು. ದೇಶದ ಉದ್ದಗಲಕ್ಕೂ ನಿರ್ಮಿತವಾಗಿವೆ. ರಾಜ್ಯದ ರಾಜಧಾನಿಗಳು, ಪ್ರಧಾನ ಬಂದರುಗಳು ಮತ್ತು ಕೈಗಾರಿಕಾ ನಗರಗಳನ್ನು ಸಂಪರ್ಕಿಸುತ್ತವೆ. ಇವುಗಳ ನಿರ್ಮಾಣ ಮತ್ತು ನಿರ್ವಹಣೆ ಕೇಂದ್ರ ಸರಕಾರದ ಜವಾಬ್ದಾರಿಯಾಗಿದೆ. ಭಾರತವು ಸುಮಾರು 70,934 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ಮಾರ್ಗಗಳನ್ನು ಒಳಗೊಂಡಿದೆ. ಭಾರತ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಗೆ 1989 ರಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (National Highway Authority of India) (NHAI) ವನ್ನು ಸ್ಥಾಪಿಸಿದೆ, ಮೊದಲ ವರ್ಗದ ರಾಷ್ಟ್ರೀಯ ಹೆದ್ದಾರಿಗಳು ಭಾರತವನ್ನು ನೆರೆಯ ರಾಷ್ಟ್ರಗಳ ರಾಜಧಾನಿಯೊಡನೆ ಸಂಪರ್ಕಿಸುತ್ತವೆ. ಉದಾ : ಲಾಹೋರ–ಅಮೃತಸರ–ದೆಹಲಿ–ಆಗ್ರಾ–ಕೋಲ್ಕೊತ್ತಾ–ಇಂಫಾಲ, ಹಾಗೂ ಮಾಂಡಲೆ–ಬಾರಿ–ಕಟ್ಮಂಡು ಹೆದ್ದಾರಿಗಳು. ಎರಡನೆಯ ಪ್ರಕಾರದ ರಾಷ್ಟ್ರೀಯ ಹೆದ್ದಾರಿಗಳು ರಾಜ್ಯದ ರಾಜಧಾನಿಗಳು ಹಾಗೂ ಪ್ರಧಾನ ಬಂದರುಗಳನ್ನು ಸಂಪರ್ಕಿಸುತ್ತವೆ. ಇವುಗಳಲ್ಲಿ ವಾರಾಣಾಸಿ–ಕನ್ಯಾಕುಮಾರಿಗಳನ್ನು 7ನೇ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ಸಂಪರ್ಕಿಸುವುದು. ಇದು 2343 ಕಿ.ಮೀ ಉದ್ದವಾಗಿದ್ದು, ದೇಶದ ಅತಿ ಉದ್ದವಾದ ರಾಷ್ಟ್ರೀಯ ಹೆದ್ದಾರಿಯಾಗಿದೆ. ಕುಲುಮನಾಲಿ (ಹಿಮಾಚಲಪ್ರದೇಶ) ಮತ್ತು ಲ್ಹೇ (ಕಾಶ್ಮೀರ)ಗಳನ್ನು ಸಂಪರ್ಕಿಸುವ ಹೆದ್ದಾರಿ 4267 ಮೀ. ಎತ್ತರದಲ್ಲಿದೆ. ಇದು ಜಗತ್ತಿನ ಎತ್ತರದ ರಸ್ತೆಮಾರ್ಗವಾಗಿದೆ.

> **ಚಟುವಟಿಕೆ :** ನೀವು ಸಚಿವರೆಂದು ಊಹಿಸಿಕೊಂಡು ರಸ್ತೆಗಳು ಹಾಳಾಗದಂತೆ ಉತ್ತಮ ಪಡಿಸಲು ಕ್ರಮಗಳನ್ನು ಪಟ್ಟಿಮಾಡಿ.

> **ನಿಮಗೆ ತಿಳಿದಿರಲಿ**
>
> ವಿಶ್ವಬ್ಯಾಂಕಿನ ಅಧ್ಯಯನದ ಅಂದಾಜಿನಂತೆ ಸುವರ್ಣ ಚತುಷ್ಕೋನ ಯೋಜನೆಯಿಂದ ಪ್ರತಿ ವರ್ಷ 800 ಕೋಟಿ ರೂ.ಗಳ ಆದಾಯವಿರುವುದು.

**ಸುವರ್ಣ ಚತುಷ್ಕೋನ ಮತ್ತು ಕಾರಿಡಾರ್ ಹೆದ್ದಾರಿಗಳು :**

**(Golden Quadrilateral and Corrider project) :** ಈ ಯೋಜನೆಯು ಚತುಷ್ಪಥ\ಷಟ್ಪಥ ರಸ್ತೆಗಳನ್ನು ಹೊಂದಿದ 15000 ಕಿ.ಮೀ. ಗಳಷ್ಟು ಉದ್ದವಾಗಿರುವ ರಾಷ್ಟ್ರೀಯ ಹೆದ್ದಾರಿಯಾಗಿದೆ. ಈ ಯೋಜನೆಯನ್ನು 1999 ರಲ್ಲಿ ಆರಂಭಿಸಿದ್ದು, ಈ ಯೋಜನೆಯ ಒಟ್ಟು ವೆಚ್ಚ 54000 ಕೋಟಿ ರೂ. ಗಳಾಗಿರುವುದು. ಇದು ಪ್ರಪಂಚದ ಯಾವುದೇ ಒಂದು ದೇಶವು ಒಂದು ಅವಧಿಯಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಯೋಜನೆಗಳಿಗಿಂತ ಅತಿ ದೊಡ್ಡದಾಗಿದೆ. ಈ ಯೋಜನೆಯು ದೇಶದ ಆರ್ಥಿಕ ಅಭಿವೃದ್ಧಿಗೆ ಅತಿ ಅಗತ್ಯವಾಗಿದೆ.

ಕಾರಿಡಾರ್ ರಸ್ತೆಗಳು ಆರ್ಥಿಕವಾಗಿ ಮಾತ್ರವಲ್ಲದೆ ರಾಜಕೀಯವಾಗಿಯೂ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ದೇಶವನ್ನು ಉತ್ತರ ಹಾಗೂ ದಕ್ಷಿಣ ಮತ್ತು ಪೂರ್ವ ಹಾಗೂ ಪಶ್ಚಿಮವಾಗಿ ಸಂಪರ್ಕಿಸುವ ಹೆದ್ದಾರಿಗಳೇ ಕಾರಿಡಾರ್ ರಸ್ತೆಗಳು. ಸರಕು ಸಾಮಗ್ರಿಗಳನ್ನು ಅತ್ಯಲ್ಪ ಅವಧಿಯಲ್ಲಿ ದೇಶದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅತಿ ಕಡಿಮೆ ವೆಚ್ಚದಲ್ಲಿ ಸಾಗಿಸಲು ಉಪಯುಕ್ತವಾಗಿದೆ. ಈ ಯೋಜನೆಯು ಕೈಗಾರಿಕೆಗಳಿಗೆ ವರದಾನವಾಗಿದೆ.

@KTBS NOT TO BE REPUBLISHED

ಸುವರ್ಣ ಚತುಷ್ಕೋನ ಹೆದ್ದಾರಿಯು ದೇಶದ ಮಹಾನಗರಗಳಾದ ದೆಹಲಿ, ಮುಂಬಯಿ, ಬೆಂಗಳೂರು, ಚೆನ್ನೈ, ಕೊಲ್ಕತ್ತಾ ನಗರಗಳನ್ನು ಸಂಪರ್ಕಿಸುತ್ತವೆ. ಈ ಹೆದ್ದಾರಿ ಮೂಲಕ ಸಂಪರ್ಕ ಪಡೆಯುವ ಇತರೆ ನಗರಗಳೆಂದರೆ ಪುಣೆ, ಸತಾರ, ಬೆಳಗಾವಿ, ಕಾಂಚೀಪುರಂ, ಆಗ್ರಾ, ಕಾನ್ಪುರ, ಪ್ರಯಾಗ, ವಾರಣಾಸಿ, ವಿಶಾಖಪಟ್ಟಣ, ಖರಗಪುರ, ವಿಜಯವಾಡ.

**ರಸ್ತೆ ಸಾರಿಗೆಯ ತೊಡಕುಗಳು**


1) ಅನೇಕ ಗ್ರಾಮೀಣ ಮತ್ತು ಜಿಲ್ಲಾ ರಸ್ತೆಗಳು ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ಕೆಲವು ವೇಳೆ ಅನುಪಯುಕ್ತವಾಗಿರುತ್ತವೆ.

2) ರಸ್ತೆ ಸಾರಿಗೆಯು ಪರಿಸರ ಮಾಲಿನ್ಯ, ವಾಹನ ದಟ್ಟಣೆ ಹಾಗೂ ಅಪಘಾತಗಳಿಗೂ ಕಾರಣಗಳಾಗಿವೆ.

3) ರಸ್ತೆಗಳು ಮಳೆ, ಪ್ರವಾಹ ಮತ್ತು ಚಂಡಮಾರುತಗಳಿಂದ ಪ್ರತಿ ವರ್ಷವೂ ಹಾಳಾಗುತ್ತಿವೆ.

4) ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯೂ ಅಸಮರ್ಪಕ.

5) ರಸ್ತೆಗಳ ಬದಿಯಲ್ಲಿ ಬೇಕಾದ ಅಗತ್ಯಗಳ ಕೊರತೆಯನ್ನು ದೇಶದಾದ್ಯಂತ ಕಾಣಬಹುದು.




@KTBS
NOT TO BE REPUBLISHED

**ಪ್ರಮುಖ ಬಂದರುಗಳು :** ಭಾರತವು ಪುರಾತನ ಕಾಲದಿಂದಲೂ ಜಲಮಾರ್ಗವನ್ನು ಹೊಂದಿದೆ. ಭಾರತವು ಮೂರೂ ಕಡೆ ಸಮುದ್ರ ಪ್ರದೇಶವನ್ನು ಹೊಂದಿದೆ. ಬಂದರುಗಳನ್ನು ಕೂಡಾ ಹೊಂದಿದೆ. ಕೆಲವು ಬಂದರುಗಳ ಪರಿಚಯ ಇಂತಿದೆ.

**ಕಾಂಡ್ಲಾ –** ಇದು ಕಚ್ ಖಾರಿಯ ಶಿರೋಭಾಗದಲ್ಲಿದೆ.

**ಮುಂಬಯಿ –** ಇದು ಮಹಾರಾಷ್ಟ್ರ ರಾಜ್ಯದಲ್ಲಿದೆ. ಈ ಬಂದರು ಹೆಚ್ಚಿನ ಒತ್ತಡವನ್ನು ಹೊಂದಿದ್ದರಿಂದ ಈ ಬಂದರಿನ ಆಚೆಗೆ ನವಾಶೇವಾ ಎಂಬ ಬಂದರನ್ನು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ನಿರ್ಮಿಸಲಾಗಿದೆ. ಮುಂಬೈ ಬಂದರನ್ನು 'ಭಾರತದ ಹೆಬ್ಬಾಗಿಲು' ಎಂದು ಕರೆಯುತ್ತೇವೆ.

**ಮರ್ಮಗೋವಾ –** ಈ ಬಂದರು ಗೋವಾ ರಾಜ್ಯದ ಝುವಾರಿ ಕೊಲ್ಲಿಯ ಪ್ರದೇಶದಲ್ಲಿದೆ.

**ನವ ಮಂಗಳೂರು –** ಕರ್ನಾಟಕ ರಾಜ್ಯದಲ್ಲಿದ್ದು, ಕರ್ನಾಟಕದ ಪ್ರಮುಖ ಬಂದರಾಗಿದೆ.

**ಕೊಚ್ಚಿ –** ಇದು ಕೇರಳ ರಾಜ್ಯದಲ್ಲಿದೆ.

**ತುತುಕುಡಿ –** ಇದು ತಮಿಳುನಾಡು ರಾಜ್ಯದಲ್ಲಿದೆ.

**ಚೆನ್ನೈ –** ಈ ಬಂದರು ಕೃತಕ ಬಂದರಾಗಿದ್ದು ಹಳೆಯ ಬಂದರುಗಳಲ್ಲಿ ಒಂದು. ಇದು ಕೂಡಾ ತಮಿಳುನಾಡು ರಾಜ್ಯದಲ್ಲಿದೆ.

**ವಿಶಾಖ ಪಟ್ಟಣ –** ಇದು ನೈಸರ್ಗಿಕ ಬಂದರಾಗಿದ್ದು ಆಂಧ್ರಪ್ರದೇಶ ರಾಜ್ಯದಲ್ಲಿದೆ.

**ಪಾರಾ ದೀಪ –** ಒಡಿಸ್ಸಾ ರಾಜ್ಯದಲ್ಲಿದ್ದು, ಇತ್ತೀಚೆಗೆ ಅಭಿವೃದ್ಧಿ ಪಡಿಸಿದ ಬಂದರಾಗಿದೆ.

**ಕೊಲ್ಕತ್ತಾ –** ಇದು ಪಶ್ಚಿಮ ಬಂಗಾಳ ರಾಜ್ಯದಲ್ಲಿದೆ. ಇದು ನೈಸರ್ಗಿಕ ರೇವು ಪಟ್ಟಣವಾಗಿರುತ್ತದೆ. ಈ ಬಂದರನ್ನು 'ಭಾರತದ ಚಹದ ಬಂದರು' ಎಂದು ಕರೆಯಲಾಗಿದೆ.

**ಹಾಲ್ದಿಯಾ –** ಕೊಲ್ಕಾತ್ತಾದ ಬಂದರಿನ ಒತ್ತಡ ಕಡಿಮೆ ಮಾಡಲು ನಿರ್ಮಿಸಿರುವ ಕೃತಕ ಬಂದರಾಗಿರುತ್ತದೆ. ಇದೂ ಕೂಡಾ ಪಶ್ಚಿಮ ಬಂಗಾಳ ರಾಜ್ಯದಲ್ಲಿದೆ.

**ಪ್ರಮುಖ ವಿಮಾನ ನಿಲ್ದಾಣಗಳು :** ಸುವರ್ಣ ಚತುಷ್ಕೋನ ಮತ್ತು ಕಾರಿಡಾರ್ ರಸ್ತೆಗಳು ಭಾರತದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೆ ಸಂಪರ್ಕವನ್ನು ಕಲ್ಪಿಸುತ್ತವೆ.

ಭಾರತ ಸರಕಾರವು 1955 ರಲ್ಲಿ **'ದಿ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ'** ಸಂಸ್ಥೆಯನ್ನು ಸ್ಥಾಪಿಸಿದ್ದು, ದೇಶದ ವಿಮಾನ ನಿಲ್ದಾಣಗಳ ನಿರ್ವಹಣೆಯನ್ನು ನೀಡಲಾಗಿದೆ. ಇದು ಭಾರತದಲ್ಲಿ 11 ಅಂತರರಾಷ್ಟ್ರೀಯ ನಿಲ್ದಾಣ ಹಾಗೂ 115 ಆಂತರಿಕ ವಿಮಾನ ನಿಲ್ದಾಣಗಳನ್ನು ನಿರ್ವಹಿಸುತ್ತಿದೆ. ಪ್ರಮುಖ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳೆಂದರೆ 1) ಮುಂಬೈ (ಸಹರಾ ಮತ್ತು ಸಾಂತಾಕ್ರೂಜ್) 2) ದೆಹಲಿ (ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ 3) ಕೋಲ್ಕತ್ತಾ (ಸುಭಾಷ್‌ಚಂದ್ರ ಬೋಸ್ ವಿಮಾನ ನಿಲ್ದಾಣ) 4) ಚೆನ್ನೈ (ಅಣ್ಣಾ ಅಥವಾ ಮೀನಂಬಾಕಂ) 5) ಬೆಂಗಳೂರು (ನಾಡಪ್ರಭು ಕೆಂಪೇಗೌಡ) 6) ಹೈದರಾಬಾದ್ 7) ಅಹಮದಾಬಾದ್ 8) ಪಣಜಿ 9) ಅಮೃತಸರ್ 10) ಗುವಾಹಟಿ 11) ತಿರುವನಂತಪುರ–ಇವುಗಳಿಗೆ ಎಲ್ಲ ಹೆದ್ದಾರಿಗಳು ಮತ್ತು ಕಾರಿಡಾರ್ ರಸ್ತೆಗಳು ಸಂಪರ್ಕ ಪಡೆಯುತ್ತವೆ.

@KTBS
NOT TO BE REPUBLISHED

# ಸಂಪರ್ಕ

ಇಂದು ಹಲವಾರು ಸಂಪರ್ಕ ಮಾಧ್ಯಮಗಳು ರೂಢಿಯಲ್ಲಿದ್ದು, ವಿವಿಧ ಪ್ರದೇಶಗಳ ಜನರೊಡನೆ ಸುಲಭವಾಗಿ ಸಂಪರ್ಕಿಸಬಹುದು. ಹೀಗೆ ಎಲ್ಲಾ ಜನರನ್ನು ತಲುಪುವ ಸಂಪರ್ಕ ಮಾಧ್ಯಮವೇ 'ಸಮೂಹ ಮಾಧ್ಯಮ'. ಸಾಂಪ್ರದಾಯಿಕ ವೃತ್ತ ಪತ್ರಿಕೆ, ರೇಡಿಯೋಗಳಲ್ಲದೆ, ವಿದ್ಯುನ್ಮಾನ ತಾಂತ್ರಿಕ ಸಂಶೋಧನೆಗಳ ಸಂಪರ್ಕದ ಜಾಲವು ಭಾರತದಲ್ಲಿ ವಿಸ್ತೃತವಾಗಿ ಹಂಚಿಕೆಯಾಗಿದ್ದು, ಇಂದು ಮಹತ್ತರವಾದ ಕಾರ್ಯವನ್ನು ನಿರ್ವಹಿಸುತ್ತಿದೆ.

**ಸಂಪರ್ಕದ ವಿಧಗಳು :**

ವಿದ್ಯುನ್ಮಾನ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಇಂದು ಹಲವಾರು ಸಂಪರ್ಕ ಮಾಧ್ಯಮಗಳು ರೂಢಿಗೆ ಬಂದಿವೆ. ಸಾಂಪ್ರದಾಯಿಕ ವಿಧಾನಗಳಾದ ಅಂಚೆ ಮತ್ತು ವೃತ್ತ ಪತ್ರಿಕೆಗಳ ಜೊತೆಗೆ ರೇಡಿಯೋ, ದೂರದರ್ಶನ, ಕೃತಕ ಉಪಗ್ರಹಗಳು, ಕಂಪ್ಯೂಟರ್ ಜಾಲ, ಅಂತರ್ಜಾಲ, ಇ–ಮೇಲ್, ಸಂಚಾರಿ ದೂರವಾಣಿಗಳು ಮೊದಲಾದವುಗಳು ಇಂದು ಸಂಪರ್ಕದ ಪ್ರಧಾನ ವಿಧಗಳಾಗಿವೆ.

@KTBS NOT TO BE REPUBLISHED

**ಸಂಪರ್ಕದ ಪ್ರಾಮುಖ್ಯತೆ :**

- ಸಂಪರ್ಕ ಮಾಧ್ಯಮಗಳು ದೇಶದ ಜನರಿಗೆ ವಿವಿಧ ಪ್ರದೇಶದ ಆಗು–ಹೋಗುಗಳನ್ನು ತಿಳಿಯಲು ಅಗತ್ಯವಾಗಿದೆ.
- ಸರಕಾರದ ನೀತಿ ನಿಯಮಗಳನ್ನು ತಿಳಿಯಪಡಿಸಿ ಅದರ ಬಗ್ಗೆ ತಿಳುವಳಿಕೆಯನ್ನು ಮೂಡಿಸಬಹುದು.
- ಜನರಿಗೆ ಬೇಕಾದ ವ್ಯವಸಾಯ, ಕೈಗಾರಿಕೆ ಮುಂತಾದವುಗಳ ಜ್ಞಾನವನ್ನು ನೀಡುವುದರಿಂದ ಅಭಿವೃದ್ಧಿಯ ಪ್ರಕ್ರಿಯೆಯು ಶೀಘ್ರವಾಗಿ ಮುಂದುವರಿಯುವುದು.
- ವಾಣಿಜ್ಯ ವ್ಯಾಪಾರದ ಅಭಿವೃದ್ಧಿಗೆ ಸಂಪರ್ಕ ಮಾಧ್ಯಮಗಳು ಮೂಲ ಅಗತ್ಯವಾಗಿವೆ.
- ದೇಶದ ಏಕತೆ, ಒಗ್ಗಟ್ಟು ಹಾಗೂ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಅನುಕೂಲವಾಗುವುದು.

**1) ಭೌಗೋಳಿಕ ಮಾಹಿತಿ ವ್ಯವಸ್ಥೆ (GIS-Geographical Information System) :**

ಪೃಥ್ವಿಯ ಮೇಲ್ಮೈನ ಅಂಕಿ–ಅಂಶ ಅಥವಾ ಮಾಹಿತಿಯನ್ನು ಕಲೆಹಾಕುವ, ಸಂಗ್ರಹಿಸುವ, ಅಗತ್ಯವಿದ್ದಾಗ ಬಳಕೆ ಮಾಡುವ, ಮಾರ್ಪಡಿಸುವ ಹಾಗೂ ತೋರಿಸುವ ಪ್ರಬಲ ಸಲಕರಣೆಯ ಸಮೂಹವನ್ನು ಭೌಗೋಳಿಕ ಮಾಹಿತಿ ವ್ಯವಸ್ಥೆ (GIS) ಎಂದು ಕರೆಯಲಾಗಿದೆ. 1960 ರಲ್ಲಿ ಕೆನಡಾದಲ್ಲಿ ಆರಂಭಗೊಂಡು ಇಂದು ಇದರ ಬಳಕೆ ವಿಶ್ವವ್ಯಾಪಿಯಾಗಿದೆ.

ಭೂ ಮೇಲ್ಮೈ ವಿವಿಧ ಬಗೆಯ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಲಕ್ಷಣಗಳೆರಡನ್ನು ಸಹ ಒಳಗೊಂಡಿರುವುದು. ಇದರಲ್ಲಿ ಜಿಲ್ಲೆಗಳು, ಭೂಸ್ವರೂಪಗಳು, ನದಿ ವ್ಯವಸ್ಥೆ, ವಸತಿಗಳ ಹಂಚಿಕೆ, ಭೂ ಸ್ವರೂಪ, ಭೂ ಬಳಕೆ, ಮಣ್ಣು–ಬೆಳೆಗಳ ಹಂಚಿಕೆ ಮೊದಲಾದವುಗಳನ್ನು ಒಂದರ ಮೇಲೊಂದರಂತೆ

ಇರಿಸಿ ಅವುಗಳ ಸಂಬಂಧವನ್ನು ಸುಲಭವಾಗಿ ವಿಶ್ಲೇಷಿಸಬಹುದು. ಹೀಗೆ "ಜಿ.ಐ.ಎಸ್. ಕಂಪ್ಯೂಟರ್ ಆಧಾರಿತ ಭೂಮೇಲ್ಮೈಯ ವೈವಿಧ್ಯಮಯ ಅಂಕಿ-ಅಂಶಗಳನ್ನು ಸಂಸ್ಕರಿಸುವ ಮತ್ತು ವಿಶ್ಲೇಷಿಸುವ ಒಂದು ವ್ಯವಸ್ಥೆ"ಯಾಗಿದೆ.

**ಉಪಯೋಗಗಳು :**

- ಜಿ.ಐ.ಎಸ್ ತಂತ್ರಜ್ಞಾನ ಆಧಾರಿತ ನಕ್ಷೆಗಳು ಹೆಚ್ಚು ಆಕರ್ಷಕ ಹಾಗೂ ಮಾಹಿತಿಯನ್ನು ಸ್ಪಷ್ಟವಾಗಿ ನೀಡುತ್ತವೆ.
- ವಿವಿಧ ಬಗೆಯ ಭೌಗೋಳಿಕ ಸಾಮಾಜಿಕ, ಆರ್ಥಿಕ ಭೂಮೇಲ್ಮೈ ಮಾಹಿತಿಯನ್ನು ಸುಲಭವಾಗಿ ವಿಶ್ಲೇಷಿಸಬಹುದು ಹಾಗೂ ಅವುಗಳ ಮಾದರಿಯನ್ನು ರಚಿಸಬಹುದು.
- ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಜಿಐಎಸ್ ತಂತ್ರಜ್ಞಾನದ ಪ್ರಾಮುಖ್ಯತೆ ಹೆಚ್ಚು ಕಂಡು ಬರುತ್ತದೆ.
- ಇದು ಕಂಪ್ಯೂಟರ್ ಆಧಾರಿತ ವಿಶ್ಲೇಷಣೆಯಾಗಿದ್ದು, ನಕ್ಷೆಗಳನ್ನು ಅತಿ ಶೀಘ್ರವಾಗಿ, ಅಗತ್ಯಕ್ಕೆ ತಕ್ಕಂತೆ ನಕ್ಷಾ ಶಾಸ್ತ್ರಜ್ಞರ ನೆರವಿಲ್ಲದೆ ಅತಿ ಕಡಿಮೆ ಅವಧಿಯಲ್ಲಿ ಪಡೆಯಬಹುದು ಹಾಗೂ ನಕ್ಷೆಗಳನ್ನು ಮಾರ್ಪಡಿಸಬಹುದು.

ಪ್ರಸ್ತುತ ಬಳಕೆಯಾಗುತ್ತಿರುವ ಭೌಗೋಳಿಕ ಮಾಹಿತಿ ವ್ಯವಸ್ಥೆ ಹಾಗೂ ನಕ್ಷೆಗಳ ರಚನೆಯ ತಂತ್ರಾಂಶದಲ್ಲಿ ಆ್ಯಪಲ್, ಆರ್ಕ್ ಇನ್ಫೋ, ಆ್ಯಟೋಕ್ಯಾಡ್, ಮ್ಯಾಪ್ ಇನ್ ಫೋ, ಆರ್ಕ್‌ವ್ಯೂ ಮೊದಲಾದವುಗಳು ಅತಿ ಮುಖ್ಯವಾಗಿವೆ.

**2) ಗ್ಲೋಬಲ್ ಪೊಜಿಶನಿಂಗ್ ಸಿಸ್ಟಂ (GPS) :**

ಇದರ ಮುಖ್ಯ ಕಾರ್ಯ ಭೂ ಮೇಲ್ಮೈಯಲ್ಲಿನ ಯಾವುದೇ ಒಂದು ಸ್ಥಿರವಾಗಿರುವ ಅಥವಾ ಚಲಿಸುತ್ತಿರುವ ವಸ್ತು ಅಥವಾ ವ್ಯಕ್ತಿಯ ಸ್ಥಾನವನ್ನು ಅಕ್ಷಾಂಶ ಮತ್ತು ರೇಖಾಂಶಗಳ ಮೂಲಕ ನಿಖರವಾಗಿ ಸೂಚಿಸುವುದು ಹಾಗೂ ಆ ವಸ್ತುವಿನ ಸ್ಥಾನದ ಎತ್ತರವನ್ನು ಸಹ ಸೂಚಿಸುವುದು.

**ಚರ್ಚಿಸಿ :** 'ಮೊಬೈಲ್ ದೂರವಾಣಿಗಳು ಇಂದು ಅನಿವಾರ್ಯ.' ಹೇಗೆ?

ಈ ವ್ಯವಸ್ಥೆಯು ಇಂದು ಅತಿ ಹೆಚ್ಚು ಉಪಯುಕ್ತತೆಯನ್ನು ಹೊಂದಿದ್ದು, ಹಲವಾರು ಕ್ಷೇತ್ರಗಳಲ್ಲಿ ಲಾಭದಾಯಕವಾಗಿ ಈ ತಂತ್ರಜ್ಞಾನವನ್ನು ಬಳಕೆ ಮಾಡಲಾಗುತ್ತಿದೆ. ಜಿ.ಪಿ.ಎಸ್. ತಂತ್ರಜ್ಞಾನವು ಕೃತಕ ಉಪಗ್ರಹಗಳು ಕಳುಹಿಸುವ ಮಾಹಿತಿ ಹಾಗೂ ಭೂ ಮೇಲ್ಮೈಯಲ್ಲಿ ಯಾವುದೇ ವ್ಯಕ್ತಿಯ ಬಳಿಯಿರುವ ರಿಸೀವರ್‌ಗಳಿಂದ ಕಾರ್ಯ ನಿರ್ವಹಿಸಲ್ಪಡುವುದು.

**ಕಾರ್ಯ ನಿರ್ವಹಣೆ :**

ಜಿ.ಪಿ.ಎಸ್ ವ್ಯವಸ್ಥೆಯು ಇಪ್ಪತ್ತಕ್ಕೂ ಹೆಚ್ಚು ಕೃತಕ ಉಪಗ್ರಹಗಳ ವ್ಯವಸ್ಥೆಯನ್ನು ಒಳಗೊಂಡಿದ್ದು, ಇದನ್ನು ಅಮೆರಿಕಾ ಸಂಯುಕ್ತ ಸಂಸ್ಥಾನವು ನಿರ್ವಹಿಸುತ್ತಿದೆ. ಈ ಉಪಗ್ರಹಗಳು ಭೂಮಿಯನ್ನು

© KTBS NOT TO BE REPUBLISHED

ನಿರಂತರವಾಗಿ ಸುತ್ತುತ್ತಿವೆ. ಪ್ರತಿಯೊಂದು ಉಪಗ್ರಹವು ಪ್ರಬಲವಾದ ಕ್ಯಾಮರಾ ಹಾಗೂ ಸೌರ ಶಕ್ತಿಯಿಂದ ನಡೆಯುವ ನಿಖರವಾದ ಪರಮಾಣು, ಗಡಿಯಾರ ಮತ್ತು ಮಾಹಿತಿ ರವಾನೆಯ ಆ್ಯಂಟೆನಾವನ್ನು ಒಳಗೊಂಡಿರುತ್ತದೆ. ಇವುಗಳಿಂದ ಕಳುಹಿಸುವ ಮಾಹಿತಿಯನ್ನು ಭೂಮಿಯಲ್ಲಿ ಯಾವುದೇ ವ್ಯಕ್ತಿಯ ಬಳಿಯಿರುವ ರಿಸೀವರ್ ಪಡೆದು ವಿಶ್ಲೇಷಿಸಿ ಆ ವ್ಯಕ್ತಿಯು ಇರುವ ಸ್ಥಾನ ಹಾಗೂ ವ್ಯಕ್ತಿಯು ಇರುವ ಸ್ಥಳದ ಎತ್ತರವನ್ನು ಸೂಚಿಸುವುದು. ಉಪಗ್ರಹಗಳಿಂದ ಪಡೆಯುವ ಮಾಹಿತಿಯ ಆಧಾರದ ಮೇಲೆ ಆ ವಸ್ತುವಿನಿಂದ ಆಯಾ ಉಪಗ್ರಹಗಳು ಎಷ್ಟು ದೂರದಲ್ಲಿವೆ ಎಂಬುದನ್ನು ಲೆಕ್ಕಾಚಾರ ಮಾಡಿ ಆ ವಸ್ತುವಿನ ಸ್ಥಾನವನ್ನು ಅಕ್ಷಾಂಶ ಮತ್ತು ರೇಖಾಂಶಗಳ ಮೂಲಕ ಸ್ಪಷ್ಟವಾಗಿ ತಿಳಿಯಪಡಿಸುವುದು. ಇದರಿಂದಾಗಿ ಜಿ.ಪಿ.ಎಸ್. ವ್ಯವಸ್ಥೆಯನ್ನು 'ಮಾರ್ಗಸೂಚಿ' ಅಥವಾ ಪಾತ್ ಫೈಂಡರ್ (Path finder) ಎಂದೂ ಕರೆಯುವರು. ಇಂದು ಜಿಪಿಎಸ್ ವ್ಯವಸ್ಥೆಯು ರಕ್ಷಣಾ ದೃಷ್ಟಿಯಿಂದಲೂ ಅತಿಮುಖ್ಯ. ಇದರಿಂದಾಗಿ ಭಾರತವು ತನ್ನದೇ ಆದ ಪ್ರಾದೇಶಿಕ ಜಿಪಿಎಸ್ ವ್ಯವಸ್ಥೆಯನ್ನು ಹೊಂದಲು ಏಳು ಉಪಗ್ರಹಗಳನ್ನು ಉಡಾಯಿಸಿದೆ. ಭಾರತದ ಪ್ರಾದೇಶಿಕ ಮತ್ತು ಸ್ವತಂತ್ರ ಜಿ.ಪಿ.ಎಸ್. ವ್ಯವಸ್ಥೆಗೆ ನಾವಿಕ್ ಎಂಬ ಹೆಸರು.

**ಉಪಯೋಗಗಳು :**

- ಪ್ರಾಕೃತಿಕ ವಿಕೋಪಗಳ ಸ್ಪಷ್ಟ ಭೌಗೋಳಿಕ ಸ್ಥಾನವನ್ನು ಗುರುತಿಸಿ ಪರಿಹಾರ ಕೈಗೊಳ್ಳಲು ಇವುಗಳು ಉಪಯುಕ್ತ.
- ಅರಣ್ಯ ಹಾಗೂ ಪರ್ವತ ಚಾರಣ ಮಾಡುವವರಿಗೆ ಮಾರ್ಗ ತಿಳಿಯಲು ಉಪಯುಕ್ತವಾಗಿವೆ.
- ಸೈನಿಕರು, ವೈಮಾನಿಕರು, ಮೀನುಗಾರರು ಹಾಗೂ ನಾವಿಕರು ಸರಿಯಾದ ಮಾರ್ಗವನ್ನು ಅನುಸರಿಸಲು ಜಿ.ಪಿ.ಎಸ್. ವ್ಯವಸ್ಥೆ ಅಗತ್ಯ ಮಾಹಿತಿಯನ್ನು ನೀಡುವುದು. ಇಂದು ಸಾರಿಗೆ ನಿರ್ವಹಣೆಯಲ್ಲಿಯೂ ಇದರ ಬಳಕೆ ಹೆಚ್ಚಾಗಿದೆ.
- ನಗರಗಳಲ್ಲಿ 'ಮನೆಬಾಗಿಲ ಸೇವೆ' ಕೊಡುವ ಹಲವು ಸಂಸ್ಥೆಗಳಿಗೆ ಇಂದು ಜಿ.ಪಿ.ಎಸ್. ವ್ಯವಸ್ಥೆಯೇ ಜೀವಾಳ.
- ಗೂಗಲ್ ಮ್ಯಾಪ್‌ನಂಥ ವ್ಯವಸ್ಥೆಗಳು ಜಿ.ಪಿ.ಎಸ್. ವ್ಯವಸ್ಥೆ ಬಳಸಿ ದಾರಿ ತೋರಿಸುತ್ತವೆ.

**3) ದೂರ ಸಂವೇದಿ ತಂತ್ರಜ್ಞಾನ (Remote Sensing Technology) :** ಭೂ ಮೇಲ್ಮೈಗೆ ಸಂಬಂಧಿಸಿದ ಅಂಕಿ–ಅಂಶಗಳ ಸಂಗ್ರಹಣೆಯಲ್ಲಿ ಇಂದು ಬಳಕೆಯಲ್ಲಿರುವ ಆಧುನಿಕ ತಂತ್ರಜ್ಞಾನಗಳಲ್ಲಿ 'ದೂರಸಂವೇದಿ' ಅತಿ ಮುಖ್ಯವಾದುದು. ವಸ್ತುಗಳನ್ನು ಭೌತಿಕವಾಗಿ ಸ್ಪರ್ಶಿಸದೆ ದೂರದಿಂದಲೇ ಅವುಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಣೆಯನ್ನು 'ದೂರ ಸಂವೇದಿ' **(Remote Sensing)** ಎಂದು ಕರೆಯುವರು. ವೈಮಾನಿಕ ಚಿತ್ರಗಳು ಹಾಗೂ ಉಪಗ್ರಹಗಳಿಂದ ಪಡೆದ ಚಿತ್ರಗಳು ದೂರ ಸಂವೇದಿ ಚಿತ್ರಗಳಾಗಿವೆ.

**ಉಪಯೋಗಗಳು :**

- ಈ ಚಿತ್ರಗಳಿಂದ ಆ ಕಾಲದ ಅವಧಿಯಲ್ಲಿನ ನೈಜ ಹಾಗೂ ನಂಬಲರ್ಹವಾದ ಸ್ಪಷ್ಟ ಮಾಹಿತಿ ದೊರೆಯುವುದು.

© KTBS NOT TO BE REPUBLISHED

- ಇದು ಭೂ ಮೇಲ್ಮೈನ ಸರ್ವೇಕ್ಷಣೆಗಿಂತ ಅತಿ ಶೀಘ್ರ, ಅಲ್ಪಾವಧಿ ಹಾಗೂ ಕಡಿಮೆ ವೆಚ್ಚದ ಮಾಹಿತಿ ಸಂಗ್ರಹಣೆಯ ವಿಧಾನವಾಗಿದೆ.
- ಇದರಿಂದ ಪಡೆಯುವ ಮಾಹಿತಿಯನ್ನು ಸುಲಭವಾಗಿ ಕಂಪ್ಯೂಟರುಗಳಿಂದ ವಿಶ್ಲೇಷಿಸಬಹುದು.
- ಹವಾಮಾನದ ವೈಪರೀತ್ಯ ಹಾಗೂ ಭೂ ಮೇಲ್ಮೈ ಅಡಚಣೆಗಳಿದ್ದರೂ ದೂರ ಸಂವೇದಿ ಚಿತ್ರಗಳನ್ನು ಉಪಗ್ರಹಗಳಿಂದ ಪಡೆಯಬಹುದು.
- ಚಂಡಮಾರುತ, ಬಿರುಗಾಳಿ, ಪ್ರವಾಹ, ಬರಗಾಲ ಮೊದಲಾದ ನೈಸರ್ಗಿಕ ಪ್ರಕೋಪಗಳ ಪ್ರಭಾವದ ಪ್ರದೇಶ ಹಾಗೂ ಅವುಗಳ ಅನಾಹುತಗಳ ತೀವ್ರತೆಯ ಅಧ್ಯಯನಗಳಿಗೆ ದೂರಸಂವೇದಿ ಚಿತ್ರಗಳು ಅತ್ಯಂತ ಉಪಯುಕ್ತವಾಗಿವೆ.
- ಉಪಗ್ರಹ ಚಿತ್ರಗಳು, ಭೂಬಳಕೆ, ಅರಣ್ಯ ಪ್ರದೇಶ, ಜಲರಾಶಿಗಳು, ವಸತಿ ಪ್ರದೇಶಗಳು, ಬೆಳೆಗಳ ಹಂಚಿಕೆ, ಭೂ ಸವೆತ, ಖನಿಜ ನಿಕ್ಷೇಪಗಳು. ಹೀಗೆ ವಿವಿಧ ಬಗೆಯ ಪ್ರಾಕೃತಿಕ ಸಂಪನ್ಮೂಲಗಳ ವಿಶ್ಲೇಷಣೆಯಲ್ಲಿ ಅತ್ಯಂತ ಮಹತ್ತರವಾದವು.

## ಅಭ್ಯಾಸಗಳು

**I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.**

1) ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು __________
2) ಹಳ್ಳಿಗಳು ಮತ್ತು ಕೃಷಿ ಅಭಿವೃದ್ಧಿಗೆ __________ ಅವಶ್ಯಕವಾಗಿದೆ.
3) ಭಾರತದ ಹೆಬ್ಬಾಗಿಲು ಎಂದು __________ ಬಂದರನ್ನು ಕರೆಯುತ್ತಾರೆ.
4) ಬೆಂಗಳೂರು, ಮುಂಬೈ ನಡುವೆ ಇರುವ ರಾಷ್ಟ್ರಿಯ ಹೆದ್ದಾರಿ ಸಂಖ್ಯೆ __________ .

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

1) ಸಾರಿಗೆಯಿಂದಾಗುವ ಪ್ರಯೋಜನಗಳಾವುವು?
2) ಭಾರತದಲ್ಲಿರುವ ನಾಲ್ಕು ಪ್ರಕಾರದ ಮುಖ್ಯ ರಸ್ತೆಗಳಾವುವು?
3) ಸುವರ್ಣ ಚತುಷ್ಕೋನ ಯೋಜನೆ ಎಂದರೇನು?
4) ರಾಷ್ಟ್ರೀಯ ಹೆದ್ದಾರಿಗಳ ಕಾರ್ಯವನ್ನು ವಿವರಿಸಿ.
5) ಭಾರತದಲ್ಲಿರುವ ಪ್ರಮುಖ ಬಂದರುಗಳ ಪಟ್ಟಿ ಮಾಡಿ.
6) ಭಾರತದ ನಕ್ಷೆಯನ್ನು ಬರೆದು ಮುಖ್ಯ ರಾಷ್ಟ್ರೀಯ ಹೆದ್ದಾರಿಗಳನ್ನು ಗುರುತಿಸಿರಿ.
7) ಸಂಪರ್ಕ ಮಾದ್ಯಮ ಎಂದರೇನು?
8) ಸಂಪರ್ಕದ ವಿಧಗಳಾವುವು?

NOT TO BE REPUBLISHED ©KTBS

9) ಸಂಪರ್ಕದ ಪ್ರಾಮುಖ್ಯವನ್ನು ತಿಳಿಸಿರಿ.

10) ಜಿ.ಐ.ಎಸ್. ಎಂದರೇನು? ಹಾಗೂ ಅದರ ಉಪಯೋಗಗಳನ್ನು ತಿಳಿಸಿರಿ.

11) ದೂರ ಸಂವೇದಿ ತಂತ್ರಜ್ಞಾನವನ್ನು ಕುರಿತು ಬರೆಯಿರಿ.

**III. ಚಟುವಟಿಕೆಗಳು :**

1) ಭಾರತದಲ್ಲಿ ಕಂಡು ಬರುವ ಸುವರ್ಣ ಕಾರಿಡಾರ್ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ನಕ್ಷೆಯಲ್ಲಿ ಗುರುತಿಸಿ ಮತ್ತು ಹೆಸರಿಸಿ.

2) ಭಾರತದ ಕೃತಕ ಉಪಗ್ರಹ ಉಡಾವಣೆಯ ಚಿತ್ರಗಳನ್ನು ಸಂಗ್ರಹಿಸಿ.

**IV. ಯೋಜಿತ ಕಾರ್ಯಗಳು :**

1) ನಿಮ್ಮ ಪ್ರದೇಶದ ಸಾರಿಗೆ ವ್ಯವಸ್ಥೆಯನ್ನು ಕುರಿತು ನಿಮ್ಮ ಸ್ನೇಹಿತರ ಜೊತೆ ತರಗತಿಯಲ್ಲಿ ಚರ್ಚಿಸಿ.

2) ಹಳ್ಳಿ ರಸ್ತೆಗಳ ಸ್ಥಿತಿಗತಿ ಬಗೆಗೆ ನಿರ್ವಹಣೆಯ ಅಗತ್ಯತೆಯನ್ನು ಕುರಿತು ಚರ್ಚಿಸಿರಿ.

3) ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಸಾರಿಗೆಗಳ ಪಾತ್ರವನ್ನು ಚರ್ಚಿಸಿ.

4) ಕರ್ನಾಟಕದಲ್ಲಿ ಇಸ್ರೊ ಕಾರ್ಯ ಚಟುವಟಿಕೆಗಳ ಬಗ್ಗೆ ವಿಷಯ ಸಂಗ್ರಹಿಸಿ.

@KTBS
NOT TO BE REPUBLISHED

## ಅಧ್ಯಾಯ – 28

# ಭಾರತದ ಪ್ರಮುಖ ಕೈಗಾರಿಕೆಗಳು

S4S9D2

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಭಾರತದ ಕೈಗಾರಿಕೆಗಳ ಮಹತ್ವ ಮತ್ತು ಪ್ರಮುಖ ಕೈಗಾರಿಕಾ ಪ್ರದೇಶಗಳು.
- ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು.
- ವಿವಿಧ ಕೈಗಾರಿಕೆಗಳ ಪರಿಚಯ.
- ಜ್ಞಾನಾಧಾರಿತ ಕೈಗಾರಿಕೆಗಳು; ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಉನ್ನತ ತಂತ್ರಜ್ಞಾನ.

ಮಾನವನ ಆಧುನಿಕ ಆರ್ಥಿಕ ಚಟುವಟಿಕೆಗಳಲ್ಲಿ ಕೈಗಾರಿಕೆಗಳು ಅತ್ಯಂತ ಮಹತ್ವದ್ದಾಗಿವೆ. ಯಾವುದೇ ದೇಶದ ಆರ್ಥಿಕ ಪ್ರಗತಿಯನ್ನು ನಿರ್ಧರಿಸಲು ಆ ದೇಶವು ಹೊಂದಿರುವ ಕೈಗಾರಿಕೆಯ ಅಭಿವೃದ್ಧಿಯನ್ನು ಸಹ ಪ್ರಧಾನವಾಗಿ ಪರಿಗಣಿಸಲಾಗುವುದು. ಕೈಗಾರಿಕೆಗಳು ಆಧುನಿಕ ನಾಗರಿಕತೆಯ ಲಕ್ಷಣಗಳಾಗಿದ್ದು, ನಮಗೆ ಅವಶ್ಯಕವಾದ ವಸ್ತುಗಳನ್ನು ಪೂರೈಸುವುದಲ್ಲದೆ ಸಾಕಷ್ಟು ಉದ್ಯೋಗಾವಕಾಶಗಳನ್ನು ದೊರಕಿಸಿಕೊಡುತ್ತವೆ. ಸಾಮಾನ್ಯವಾಗಿ ಕಚ್ಚಾವಸ್ತುಗಳನ್ನು ಸಿದ್ಧ ವಸ್ತುಗಳನ್ನಾಗಿ ಪರಿವರ್ತಿಸುವ ಮಾನವನ ಎಲ್ಲ ಉದ್ಯೋಗಗಳನ್ನು ಕೈಗಾರಿಕೆ ಎಂದು ಕರೆಯುತ್ತಾರೆ.

ಉದಾ : ಕಬ್ಬನ್ನು ಸಕ್ಕರೆಯಾಗಿ, ಹತ್ತಿಯನ್ನು ಬಟ್ಟೆಯನ್ನಾಗಿ, ಬಾಕ್ಸೈಟನ್ನು ಅಲ್ಯುಮಿನಿಯಂ ಲೋಹವನ್ನಾಗಿ, ಮರದ ತಿರುಳನ್ನು ಕಾಗದವನ್ನಾಗಿ ಪರಿವರ್ತಿಸುವುದು.

**ನಿಮಗಿದು ತಿಳಿದಿರಲಿ**

ಕೈಗಾರಿಕೆಗಳ ವಿಧಗಳು :

1) ದೊಡ್ಡ ಪ್ರಮಾಣದ ಕೈಗಾರಿಕೆಗಳು.
2) ಮಧ್ಯಮ ಪ್ರಮಾಣದ ಕೈಗಾರಿಕೆಗಳು.
3) ಸಣ್ಣ ಪ್ರಮಾಣದ ಕೈಗಾರಿಕೆಗಳು.

**ಕಚ್ಚಾವಸ್ತುಗಳನ್ನಾಧರಿಸಿ ಕೈಗಾರಿಕೆಗಳನ್ನು ವಿವಿಧ ಪ್ರಕಾರಗಳನ್ನಾಗಿ ವಿಂಗಡಿಸಲಾಗಿದೆ.**

1) ವ್ಯವಸಾಯ ಆಧಾರಿತ ಕೈಗಾರಿಕೆಗಳು
2) ಖನಿಜ ಆಧಾರಿತ ಕೈಗಾರಿಕೆಗಳು
3) ಅರಣ್ಯ ಆಧಾರಿತ ಕೈಗಾರಿಕೆಗಳು
4) ರಾಸಾಯನಿಕ ಕೈಗಾರಿಕೆಗಳು

### ಭಾರತದ ಕೈಗಾರಿಕಾ ಪ್ರದೇಶಗಳು (Industrial Regions of India)

ಭಾರತದಲ್ಲಿ ಸ್ವಾತಂತ್ರ್ಯ ನಂತರದ ಅವಧಿಯ ಎಲ್ಲ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಕೈಗಾರಿಕೆಗಳಿಗೆ ಆದ್ಯತೆ ನೀಡಲಾಯಿತು. ಕಳೆದ ಐದು ದಶಕಗಳಲ್ಲಿ ಭಾರತವು ಕೈಗಾರಿಕೆ ಮತ್ತು ತಾಂತ್ರಿಕತೆಯ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿ ಮಹತ್ವಪೂರ್ಣವಾದುದು. ಕೈಗಾರಿಕೆಗಳು ದೇಶದ ಸಮಗ್ರ ರಾಷ್ಟ್ರೀಯ ಆದಾಯದ ಶೇ.35 ರಷ್ಟು ಪೂರೈಸುತ್ತಿದ್ದು, ದೇಶದ ಒಟ್ಟು ಕಾರ್ಮಿಕರಲ್ಲಿ ಶೇ 16 ರಷ್ಟು ಜನರಿಗೆ ಉದ್ಯೋಗವನ್ನು ಕಲ್ಪಿಸಿವೆ. ಆದಾಯ ಹಾಗೂ ಉದ್ಯೋಗ ನೀಡಿಕೆಗಳೆರಡರಲ್ಲಿಯೂ ಕೈಗಾರಿಕೆಗಳು ಭಾರತದಲ್ಲಿ ವ್ಯವಸಾಯದ ನಂತರ ಎರಡನೆಯ ಸ್ಥಾನದಲ್ಲಿವೆ.

ದೇಶದ ಕೆಲವು ಭಾಗಗಳಲ್ಲಿ ಕೈಗಾರಿಕೆಗಳು ಹೆಚ್ಚು ಕೇಂದ್ರೀಕೃತವಾಗಿವೆ. ಇಂತಹವುಗಳನ್ನು 'ಕೈಗಾರಿಕಾ ವಲಯ'ವೆಂದು ಕರೆಯುವರು.

© KTBS NOT TO BE REPUBLISHED

ಭಾರತದಲ್ಲಿ 8 ಪ್ರಧಾನ ಕೈಗಾರಿಕಾ ವಲಯಗಳನ್ನು ಗುರುತಿಸಲಾಗಿದೆ. ಇವುಗಳೆಂದರೆ, 1) ಹೂಗ್ಲಿ ಪ್ರದೇಶ 2) ಮುಂಬೈ–ಪೂನಾ ಪ್ರದೇಶ 3) ಅಹಮದಾಬಾದ್–ವಡೋದರ ಪ್ರದೇಶ 4) ದಾಮೋದರ ಕಣಿವೆ ಪ್ರದೇಶ 5) ದಕ್ಷಿಣದ ಕೈಗಾರಿಕಾ ಪ್ರದೇಶ 6) ನ್ಯಾಷನಲ್ ಕ್ಯಾಪಿಟಲ್ ಪ್ರದೇಶ 7) ವಿಶಾಖಪಟ್ಟಣ–ಗುಂಟೂರು ಪ್ರದೇಶ 8) ಕೊಲ್ಲಂ–ತಿರುವನಂತಪುರ ಪ್ರದೇಶ.

**ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು :**

ಕೈಗಾರಿಕೆಗಳು ಅತ್ಯಂತ ಅನುಕೂಲಕರವಾದ ಸ್ಥಾನಗಳಲ್ಲಿ ಮಾತ್ರ ಸ್ಥಾಪನೆಗೊಂಡಿರುತ್ತವೆ. ಇವುಗಳ ಸ್ಥಾನದ ಮೇಲೆ ಕಚ್ಚಾವಸ್ತುಗಳು, ಶಕ್ತಿ ಸಂಪನ್ಮೂಲಗಳು, ಮಾರುಕಟ್ಟೆ, ಸಂಚಾರ ಸೌಲಭ್ಯ, ಕಾರ್ಮಿಕರ ಪೂರೈಕೆ, ಬಂದರುಗಳ ಸೌಲಭ್ಯ ಮೊದಲಾದ ಹಲವಾರು ಅಂಶಗಳು ಪ್ರಭಾವ ಬೀರುತ್ತವೆ. ಕೈಗಾರಿಕೆಗಳ ಸ್ಥಾನವು ಕಡಿಮೆ ದರದ ಭೂಮಿ ದೊರೆಯುವಿಕೆ, ತಾಂತ್ರಿಕತೆ, ಸರ್ಕಾರದ ನೀತಿ ನಿಯಮಗಳಿಂದಲೂ ಪ್ರಭಾವಿತವಾಗಿರುವುದು. ಕೈಗಾರಿಕೆಗಳ ಸ್ಥಾನೀಕರಣದ ಅಂಶಗಳು ಒಂದು ಬಗೆಯ ಕೈಗಾರಿಕೆಯಿಂದ ಮತ್ತೊಂದು ಬಗೆಯ ಕೈಗಾರಿಕೆಗಳಿಗೆ ವ್ಯತ್ಯಾಸ ಹೊಂದುತ್ತವೆ.

**ಭಾರತದ ಪ್ರಮುಖ ಕೈಗಾರಿಕೆಗಳು :**

**ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ :**

ಇದನ್ನು ಮೂಲ ಕೈಗಾರಿಕೆ ಎಂದು ಕರೆಯುತ್ತಾರೆ. ಇದಕ್ಕೆ ಕಾರಣವೆಂದರೆ ಈ ಕೈಗಾರಿಕೆಯು ಯಂತ್ರೋಪಕರಣ, ರೈಲ್ವೆ, ಹಡಗು ನಿರ್ಮಾಣ, ವಿದ್ಯುತ್ ಯೋಜನೆ, ನೀರಾವರಿ ಯೋಜನೆ, ಕಟ್ಟಡ ನಿರ್ಮಾಣ, ಗೃಹ ನಿರ್ಮಾಣ ಮುಂತಾದ ಇನ್ನಿತರ ಹಲವಾರು ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾವಸ್ತುವನ್ನು ಒದಗಿಸುವುದು.

**ಹಂಚಿಕೆ :**

ಭಾರತದಲ್ಲಿ ಒಟ್ಟು 9 ಬೃಹತ್ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಿವೆ. ದೇಶದಲ್ಲಿ ಪ್ರಥಮ ಉಕ್ಕಿನ ಕೈಗಾರಿಕೆಯು 1870 ರಲ್ಲಿ ಪಶ್ಚಿಮ ಬಂಗಾಳದ 'ಕುಲ್ಟಿ' ಎಂಬಲ್ಲಿ ಬೆಂಗಾಲ್ ಐರನ್ ಕಂಪನಿ ಲಿ., ಸಂಸ್ಥೆಯಿಂದ ಸ್ಥಾಪಿತಗೊಂಡಿತು. ನಂತರ 1907 ರಲ್ಲಿ ಟಾಟಾ ಐರನ್ ಅಂಡ್ ಸ್ಟೀಲ್ ಕಂಪನಿಯು ಜಮ್‌ಶೆಡ್‌ಪುರ ಬಳಿ ಹಾಗೂ 1919 ರಲ್ಲಿ ದಿ ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪನಿಯು ಪಶ್ಚಿಮ ಬಂಗಾಳದ ಬರ್ನಪುರ ಎಂಬಲ್ಲಿ ಉಕ್ಕಿನ ಸ್ಥಾವರವನ್ನು ಆರಂಭಿಸಿತು. 1923 ರಲ್ಲಿ ಮೈಸೂರು ರಾಜ ಸಂಸ್ಥಾನವು ದಿ ಮೈಸೂರ್ ಐರನ್ ಅಂಡ್ ಸ್ಟೀಲ್ ವರ್ಕ್ಸ್ ಕೈಗಾರಿಕೆಯನ್ನು ಭದ್ರಾವತಿಯಲ್ಲಿ ಸ್ಥಾಪಿಸಿತು.

ಪ್ರಸ್ತುತ ಭಾರತದಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಮುಖ್ಯ ಕೈಗಾರಿಕೆಗಳೆಂದರೆ :

1) ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ (Tisco) ಜಮ್‌ಶೆಡ್‌ಪುರ (ಜಾರ್ಖಂಡ್)
2) ಇಂಡಿಯನ್ ಐರನ್ ಮತ್ತು ಸ್ಟೀಲ್ ಕಂಪನಿ (IISCO), ಬರ್ನಪುರ–ಪಶ್ಚಿಮಬಂಗಾಳ
3) ವಿಶ್ವೇಶ್ವರಯ್ಯ ಐರನ್ ಮತ್ತು ಸ್ಟೀಲ್ ಕಂಪನಿ (VISCO), ಭದ್ರಾವತಿ, ಕರ್ನಾಟಕ
4) ಬಿಲಾಯಿ ಐರನ್ ಮತ್ತು ಸ್ಟೀಲ್ ಕಂಪನಿ, ಬಿಲಾಯಿ, ಛತ್ತೀಸ್‌ಘಡ್
5) ಐರನ್ ಮತ್ತು ಸ್ಟೀಲ್ ಕಂಪನಿ, ರೂರ್ಕೆಲ ಒರಿಸ್ಸಾ
6) ಐರನ್ ಮತ್ತು ಸ್ಟೀಲ್ ಕಂಪನಿ, ದುರ್ಗಾಪುರ – ಪಶ್ಚಿಮ ಬಂಗಾಳ

@KTBS NOT TO BE REPUBLISHED

7) ಐರನ್ ಮತ್ತು ಸ್ಟೀಲ್ ಕಂಪನಿ, ಬೋಕಾರೋ – ಝಾರ್ಖಂಡ್

8) ಐರನ್ ಮತ್ತು ಸ್ಟೀಲ್ ಕಂಪನಿ, ಸೇಲಂ – ತಮಿಳುನಾಡು

9) ಐರನ್ ಮತ್ತು ಸ್ಟೀಲ್ ಕಂಪನಿ, ವಿಶಾಖಪಟ್ಟಣ – ಆಂಧ್ರಪ್ರದೇಶ

ಇತ್ತೀಚೆಗೆ ಅನೇಕ ಖಾಸಗಿ ಸಂಸ್ಥೆಗಳು ಉಕ್ಕಿನ ಕಾರ್ಖಾನೆಗಳನ್ನು ಸ್ಥಾಪಿಸುತ್ತಿವೆ. ಭಾರತವು ಉಕ್ಕಿನ ಉತ್ಪಾದನೆ ಹಾಗೂ ರಫ್ತಿಗೆ ಉತ್ತಮ ಅವಕಾಶವನ್ನು ಹೊಂದಿದ್ದು, ಇದರಿಂದಾಗಿ ರಫ್ತು ಅಧಿಕಗೊಳ್ಳುತ್ತಿದೆ.

**2) ಹತ್ತಿ ಬಟ್ಟೆ ಕೈಗಾರಿಕೆ**

ವಿವಿಧ ಬಗೆಯ ನಾರುಗಳಿಂದ ಬಟ್ಟೆಯನ್ನು ತಯಾರಿಸುವುದನ್ನು 'ಜವಳಿ ಕೈಗಾರಿಕೆ' (Textile Industry) ಯೆಂದು ಕರೆಯುವರು. ಜವಳಿ ಕೈಗಾರಿಕೆಯಲ್ಲಿ ಹತ್ತಿ ಬಟ್ಟೆ ಕೈಗಾರಿಕೆ, ಸೆಣಬಿನ ಕೈಗಾರಿಕೆ, ರೇಷ್ಮೆ ಕೈಗಾರಿಕೆ, ಉಣ್ಣೆ ಬಟ್ಟೆ ಕೈಗಾರಿಕೆ ಮತ್ತು ಕೃತಕ ನಾರಿನ ಬಟ್ಟೆ ತಯಾರಿಕೆ ಮೊದಲಾದವುಗಳಿವೆ. ಹತ್ತಿ ಬಟ್ಟೆ ಕೈಗಾರಿಕೆಯ ಇತಿಹಾಸವು ಇತರೆ ಕೈಗಾರಿಕೆಗಳಿಗಿಂತ ಸುದೀರ್ಘವಾದುದು. ದೇಶದಲ್ಲಿ ಹತ್ತಿ ಗಿರಣಿಗಳು ಮೊದಲು 1854 ರಲ್ಲಿ ಮುಂಬೈ ಹಾಗೂ ಬರೂಚ್‌ಗಳಲ್ಲಿ ಸ್ಥಾಪಿಸಲ್ಪಟ್ಟವು. 1951 ರಲ್ಲಿ ದೇಶವು ಒಟ್ಟು 378 ಹತ್ತಿ ಬಟ್ಟೆ ಕೈಗಾರಿಕೆಗಳನ್ನು ಹೊಂದಿದ್ದು, 2008 ರಲ್ಲಿ ಇವುಗಳ ಸಂಖ್ಯೆ 1773ಕ್ಕೆ ಏರಿದೆ. ಇವು ದೇಶದ 175 ಪಟ್ಟಣ ಮತ್ತು ನಗರಗಳಲ್ಲಿ ಹಂಚಿಕೆಯಾಗಿವೆ.

**ಹಂಚಿಕೆ :**

ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಕರ್ನಾಟಕ, ಉತ್ತರ ಪ್ರದೇಶ, ಮಧ್ಯಪ್ರದೇಶ ರಾಜ್ಯಗಳು ಬಹುಪಾಲು ಹತ್ತಿ ಬಟ್ಟೆ ಕೈಗಾರಿಕೆಗಳನ್ನು ಹೊಂದಿವೆ. ಮಹಾರಾಷ್ಟ್ರದ ಮುಂಬಯಿಯಲ್ಲಿ ಅತಿ ಹೆಚ್ಚು ಹತ್ತಿ ಗಿರಣಿಗಳಿದ್ದು ಇದನ್ನು ಭಾರತದ 'ಮ್ಯಾಂಚೆಸ್ಟರ್' (ಇಂಗ್ಲೆಂಡಿನ ಅತಿ ಪ್ರಮುಖ ಹತ್ತಿ ಬಟ್ಟೆ ಕೈಗಾರಿಕಾ ಕೇಂದ್ರ) ಅಥವಾ ಭಾರತದ 'ಕಾಟನೋಪೊಲಿಸ್' ಎಂದು ಕರೆಯುತ್ತಾರೆ. ಇದಲ್ಲದೆ ನಾಗಪುರ, ಸೊಲ್ಲಾಪುರ, ಪಶ್ಚಿಮ ಬಂಗಾಳ, ಕೊಲ್ಕತ್ತಾ, ಉತ್ತರಪ್ರದೇಶದ ಕಾನ್ಪುರ, ಮಧ್ಯಪ್ರದೇಶದ ಇಂದೋರ್, ಗುಜರಾತಿನ ಸೂರತ್, ತಮಿಳುನಾಡಿನ ಕೊಯಿಮತ್ತೂರ, ಸೇಲಂ, ಚೆನ್ನೈ, ಕರ್ನಾಟಕದ ಬೆಂಗಳೂರು, ದಾವಣಗೆರೆಗಳಲ್ಲಿ ಪ್ರಮುಖ ಹತ್ತಿ ಬಟ್ಟೆ ಕೈಗಾರಿಕಾ ಕೇಂದ್ರಗಳಾಗಿವೆ.

**3) ಸಕ್ಕರೆ ಕೈಗಾರಿಕೆ :**

ಭಾರತವು ಪ್ರಪಂಚದಲ್ಲಿ ಸಕ್ಕರೆ ಉತ್ಪಾದನೆಯಲ್ಲಿ ಬ್ರೆಜಿಲ್ ನಂತರ ಎರಡನೆಯ ಸ್ಥಾನವನ್ನು ಪಡೆದಿದೆ. ಸಕ್ಕರೆ ತಯಾರಿಕೆ ಭಾರತೀಯರಿಗೆ ಪುರಾತನ ಕಾಲದಿಂದಲೂ ತಿಳಿದಿದೆ. ಈ ಕೈಗಾರಿಕೆಯನ್ನು ಕಬ್ಬು ಬೆಳೆಯುವ ಪ್ರದೇಶದಲ್ಲಿ ಸ್ಥಾಪಿಸಲಾಗುತ್ತಿದೆ. ಭಾರತದ ಬಹಳಷ್ಟು ಸಕ್ಕರೆ ಕೈಗಾರಿಕೆಗಳು ಗಂಗಾ ನದಿಯ ಮೈದಾನ ಪ್ರದೇಶದಲ್ಲಿ ಸ್ಥಾಪಿತಗೊಂಡಿವೆ. ಈ ಕೈಗಾರಿಕೆಯನ್ನು ಹೊಂದಿರುವ ಪ್ರಮುಖ ರಾಜ್ಯಗಳೆಂದರೆ ಮಹಾರಾಷ್ಟ್ರ, ಉತ್ತರ ಪ್ರದೇಶ, ತಮಿಳುನಾಡು, ಕರ್ನಾಟಕ, ಆಂಧ್ರ ಪ್ರದೇಶ, ಮಧ್ಯ ಪ್ರದೇಶ ಮೊದಲಾದವು. ಭಾರತದಲ್ಲಿ ಒಟ್ಟು 516 ಸಕ್ಕರೆ ಕೈಗಾರಿಕೆಗಳಿದ್ದು, ಸುಮಾರು 263.6 ಲಕ್ಷ ಟನ್‌ಗಳಷ್ಟು ಸಕ್ಕರೆಯನ್ನು ಉತ್ಪಾದಿಸುತ್ತದೆ. ಭಾರತದಿಂದ ಸಕ್ಕರೆಯು ಯು.ಎಸ್.ಎ. ಬ್ರಿಟನ್, ಇರಾನ, ಕೆನಡಾ, ಮಲೇಷಿಯಾ ದೇಶಗಳಿಗೆ ರಫ್ತಾಗುತ್ತದೆ.

**ನಿಮಗಿದು ತಿಳಿದಿರಲಿ**

ಸಕ್ಕರೆಯು ಇಂಗ್ಲಿಷ್ ಸಂವಾದ ಪದ 'ಶುಗರ್'. ಇದರ ಮೂಲ ಸಂಸ್ಕೃತ ಭಾಷೆಯ 'ಶರ್ಕರ'. ಇದೇ ಕನ್ನಡದಲ್ಲಿ 'ಸಕ್ಕರೆ' ಆಯಿತು.

ಉತ್ತರ ಪ್ರದೇಶದ ಗೋರಖಪುರ ಜಿಲ್ಲೆ ಹೆಚ್ಚು ಸಕ್ಕರೆ ಕೈಗಾರಿಕೆಗಳನ್ನು ಹೊಂದಿರುವದರಿಂದ ಇದನ್ನು **ಭಾರತದ ಜಾವಾ** ಎಂದು ಕರೆಯುವರು.


NOT TO BE REPUBLISHED © KTBS

4) **ಅಲ್ಯೂಮಿನಿಯಂ ಕೈಗಾರಿಕೆ :**

ಅಲ್ಯೂಮಿನಿಯಂ 1886 ರಲ್ಲಿ ಶೋಧಿಸಲ್ಪಟ್ಟಿತು. ಭಾರತವು ಉತ್ಪಾದಿಸುವ ಕಬ್ಬಿಣೇತರ ಲೋಹಗಳಲ್ಲಿ ಅಲ್ಯೂಮಿನಿಯಂ ಅತೀ ಮುಖ್ಯವಾದುದು. ಅಲ್ಯೂಮಿನಿಯಂ ಕೈಗಾರಿಕೆಗಳು ದೇಶದ ಕೆಲವೇ ಸ್ಥಳಗಳಲ್ಲಿ ಮಾತ್ರ ಸ್ಥಾಪಿಸಲ್ಪಟ್ಟಿವೆ. ಈ ಕೈಗಾರಿಕೆಯು ಪ್ರಮುಖ ಮೂರು ಅಂಶಗಳನ್ನು ಅವಲಂಬಿಸಿದೆ. ವಿದ್ಯುಚ್ಛಕ್ತಿಯ ದೊರೆಯುವಿಕೆ, ಬಾಕ್ಸೈಟ್‌ನ ಪೂರೈಕೆ, ಇತರ ಲೋಹ ಮತ್ತು ಬಂಡವಾಳದ ಪೂರೈಕೆ. ಭಾರತದಲ್ಲಿ ಒರಿಸ್ಸಾ, ಜಾರ್ಖಂಡ್, ಛತ್ತೀಸಗರ್, ಮಧ್ಯಪ್ರದೇಶ, ಗುಜರಾತ, ಮಹಾರಾಷ್ಟ್ರ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಈ ಕೈಗಾರಿಕೆಗಳಿವೆ.

5) **ಕಾಗದದ ಕೈಗಾರಿಕೆ :**

ಭಾರತದಲ್ಲಿ ಮೊದಲ ಕಾಗದದ ಕಾರ್ಖಾನೆಯು 1840 ರಲ್ಲಿ ಪಶ್ಚಿಮ ಬಂಗಾಳದ ಸೆರಾಂಪುರದಲ್ಲಿ ಹೂಗ್ಲಿನದಿಯ ದಡದಲ್ಲಿ ಸ್ಥಾಪನೆಗೊಂಡಿತು. ನಂತರ 1867 ರಲ್ಲಿ ಮತ್ತೊಂದು ಕಾರ್ಖಾನೆಯು ಕೋಲ್ಕತ್ತಾದ ಬಳಿಯಿರುವ ಬಾಲ್ಲಿ ನಗರದಲ್ಲಿ ಆರಂಭಗೊಂಡಿತು. ಅರಣ್ಯಗಳಿಂದ ದೊರೆಯುವ ಬಿದಿರು, ಮರದ ತಿರುಳು, ಹುಲ್ಲು, ಕಾಗದ ತಯಾರಿಕೆಯಲ್ಲಿ ಬಳಸುವ ಪ್ರಮುಖ ಕಚ್ಚಾ ವಸ್ತುಗಳು ದೇಶದ ಹೆಚ್ಚಿನ ಕಾಗದ ಕಾರ್ಖಾನೆಗಳು ಪಶ್ಚಿಮ ಬಂಗಾಳದಲ್ಲಿ ಕಂಡುಬರುತ್ತವೆ. ಇದಲ್ಲದೆ ಮುಂಬೈ, ಪೂನಾ, ಚಿಂದ್ವಾರ, ಅಮರಾವತಿ, ನಾಗಪುರ, ನಾಸಿಕ, ಕರಾಡ, ಆಂಧ್ರಪ್ರದೇಶದ ರಾಜಮಂಡ್ರಿ, ರಾಯಘಡ್, ತಿರುಪತಿ, ಉತ್ತರ ಪ್ರದೇಶದ ಮಿರತ, ವಾರಣಾಸಿ, ಗಾಜಿಯಾಬಾದ, ಲಕ್ನೋ, ಪ್ರಮುಖವಾಗಿವೆ. ಗುಜರಾತ, ಓರಿಸ್ಸಾ, ಮಧ್ಯಪ್ರದೇಶ, ತಮಿಳುನಾಡಿನ ಹಲವುಕಡೆ ಕಾಗದ ಕಾರ್ಖಾನೆ ಸ್ಥಾಪನೆಗೊಂಡಿವೆ. ದೇಶದಲ್ಲಿ ಒಟ್ಟು 568 ಕಾಗದ ಕೈಗಾರಿಕೆಗಳಿವೆ, ನ್ಯೂಸ್ ಪ್ರಿಂಟ್ ಕಾಗದವನ್ನು ನಾರ್ವೆ, ಸ್ವೀಡನ್, ಕೆನಡಾ ಮತ್ತು ಯುಎಸ್‌ಎ ದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.




6) **ಜ್ಞಾನಾಧಾರಿತ ಕೈಗಾರಿಕೆಗಳು (Knowledge based Industry) :**

ಭಾರತದಲ್ಲಿ ಪ್ರಸ್ತುತ ಅತಿ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಕೈಗಾರಿಕೆಯೆಂದರೆ ಮಾಹಿತಿ ತಂತ್ರಜ್ಞಾನ (Information Technology). ಇದನ್ನೇ 'ಜ್ಞಾನಾಧಾರಿತ ಕೈಗಾರಿಕೆ'ಯೆಂದು ಕರೆಯಲಾಗಿದೆ. ಇದಕ್ಕೆ ಮಾನವನ ಜ್ಞಾನವೇ ಆಧಾರವಾಗಿರುವುದರಿಂದ ಇದನ್ನು ಈ ಹೆಸರಿಂದ

@KTBS NOT TO BE REPUBLISHED

ಕರೆಯಲಾಗಿದೆ. ಇದು ದೇಶದ ಆರ್ಥಿಕತೆ ಹಾಗೂ ಜನರ ಜೀವನ ಶೈಲಿಯ ಮೇಲೆ ಅಪಾರ ಪರಿಣಾಮವನ್ನು ಬೀರಿದೆ. ಇದರ ಬೆಳವಣಿಗೆಯ ಪ್ರಮಾಣವು ಉಳಿದ ಎಲ್ಲಾ ಕೈಗಾರಿಕೆಗಳಿಗಿಂತಲೂ ಮುಂದಿದೆ.

**a) ಮಾಹಿತಿ ತಂತ್ರಜ್ಞಾನ (IT-Information Technology) :**

ಭಾರತ ಸರಕಾರವು ಸಾಫ್ಟವೇರ್ ಉದ್ಯಮ ಬೆಳವಣಿಗೆಯನ್ನು ಪ್ರೋತ್ಸಾಹಿಸಿ ರಫ್ತನ್ನು ಉತ್ತೇಜಿಸಲು ಸಾಫ್ಟವೇರ್ ಟೆಕ್ನಾಲಜಿ ಪಾರ್ಕ್‌ಗಳನ್ನು (STP) 1991 ರಲ್ಲಿಯೇ ಸ್ಥಾಪಿಸಿತು. ಇಂದು ದೇಶದಲ್ಲಿ ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ಮತ್ತು ಆಂಧ್ರ ಪ್ರದೇಶ ರಾಜ್ಯಗಳು ಈ ಉದ್ಯಮದ ಮೇಲೆ ಸಂಪೂರ್ಣ ಹತೋಟಿಯನ್ನು ಸಾಧಿಸಿವೆ. ಈ ರಾಜ್ಯಗಳಲ್ಲಿ ಮಾಹಿತಿ ತಂತ್ರಜ್ಞಾನದ ತರಬೇತಿ ಕೇಂದ್ರ ಹಾಗೂ ವಿಶ್ವವಿದ್ಯಾನಿಲಯಗಳನ್ನು ಅಭಿವೃದ್ಧಿ ಪಡಿಸಿವೆ. ಸಾಫ್ಟ್‌ವೇರ್ ಮುಖ್ಯ ರಫ್ತಿನ ಸರಕಾಗಿದ್ದು, ವಿದೇಶೀ ವಿನಿಮಯ ಗಳಿಕೆಗೆ ಸಹಾಯಕವಾಗಿದೆ. ಬೆಂಗಳೂರು ಮಾಹಿತಿ ತಂತ್ರಜ್ಞಾನದ ಮುಖ್ಯ ಕೇಂದ್ರವಾಗಿದ್ದು ಇದನ್ನು 'ಸಿಲಿಕಾನ್ ಸಿಟಿ' ಎಂದು ಕರೆಯಲಾಗಿದೆ.

> **ಚಟುವಟಿಕೆ :** ಮಾಹಿತಿ ತಂತ್ರಜ್ಞಾನವನ್ನು ನಿಮ್ಮ ಶಾಲೆಯಲ್ಲಿ ಯಾವ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ, ತಿಳಿಯಿರಿ.

**b) ಜೈವಿಕ ತಂತ್ರಜ್ಞಾನ (BT-Biotechnology) :**

ಭಾರತ ಸರಕಾರವು 1980 ರಲ್ಲಿ ಜೈವಿಕ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಪ್ರತ್ಯೇಕವಾದ ಸಂಸ್ಥೆಯನ್ನು ಹುಟ್ಟುಹಾಕಿತು. ಇದರಿಂದ ವ್ಯವಸಾಯದಲ್ಲಿ ದೊಡ್ಡ ಕ್ರಾಂತಿಯೇ ಜರುಗಲು ಪ್ರಾರಂಭಿಸಿತು.

ಸಸ್ಯ, ಪ್ರಾಣಿ ಮೊದಲಾದವುಗಳಿಗೆ ಕಸಿ ಮಾಡುವಿಕೆಯಿಂದ ಹೊಸ ಹೊಸ ಬೀಜ, ಔಷಧ, ರಸಗೊಬ್ಬರ, ಜೈವಿಕ ಗೊಬ್ಬರ ಬಳಕೆಯಿಂದ ಸೋಯಾ ಅವರೆ, ಮೆಕ್ಕೆಜೋಳ (ಗೋವಿನಜೋಳ), ಹತ್ತಿ, ಮೊದಲಾದ ಸಮ್ಮಿಶ್ರ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇತ್ತೀಚೆಗೆ ಸಸ್ಯ ಜೈವಿಕ ತಂತ್ರಜ್ಞಾನ, ಪರಿಸರ, ಜೈವಿಕ ವೈವಿಧ್ಯ, ವೈದ್ಯಕೀಯ ಜೈವಿಕ ತಂತ್ರಜ್ಞಾನವನ್ನು ಸಹ ಬಳಸಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಸಾಕಷ್ಟು ರಾಜ್ಯಗಳು ಜೈವಿಕ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿವೆ. ಇವುಗಳಲ್ಲಿ ಉತ್ತರ ಪ್ರದೇಶ ಅರುಣಾಚಲ ಪ್ರದೇಶ, ಮಧ್ಯ ಪ್ರದೇಶ, ಕೇರಳ, ಪಶ್ಚಿಮ ಬಂಗಾಳ, ಜಮ್ಮು ಕಾಶ್ಮೀರ, ಹರಿಯಾಣ, ಪಂಜಾಬ, ಗುಜರಾತ್ ಮತ್ತು ಕರ್ನಾಟಕ ಮುಖ್ಯವಾದವು.

**3) ಉನ್ನತ ತಂತ್ರಜ್ಞಾನ (AT : Advanced Technology) :**

ಮಾನವನ ಜ್ಞಾನ ಅಭಿವೃದ್ಧಿ ಹೊಂದಿದಂತೆ ಉನ್ನತ ಅಥವಾ ಸುಧಾರಿಸಿದ ತಂತ್ರಜ್ಞಾನ ಬಹುತೇಕವಾಗಿ ಬಳಕೆಯಾಗುತ್ತಿದ್ದು, ಕಾನೂನಾತ್ಮಕವಾಗಿ ಕೇಂದ್ರ ಸರಕಾರವು ನವಂಬರ್ 1990 ರಲ್ಲಿ (Advanced Technology Attachment) "ಉನ್ನತ ತಂತ್ರಜ್ಞಾನದ" ಬಳಕೆಯನ್ನು ಅಧಿಕೃತವಾಗಿ ಜಾರಿಗೆ ತಂದಿತು. ಇದರಿಂದಾಗಿ ಟೆಲಿಫೋನ್, ಅಂತರ್‌ಜಾಲ ಸಂಪರ್ಕ, ರಕ್ಷಣಾ ಇಲಾಖೆಗೆ ಸಂಬಂಧಿಸಿದಂತೆ ಫೋನ್, ಯುದ್ಧ ಸಾಮಗ್ರಿಗಳ ತಯಾರಿಕೆ, ಪರಮಾಣುಬಾಂಬ್ ತಯಾರಿಕೆ, ಉಪಗ್ರಹ ಉಡಾವಣೆ, ಚಂದ್ರನ ಮೇಲೆ ಪಾದಾರ್ಪಣೆ, ಸರಕಾರಿ ಕಚೇರಿಗಳಲ್ಲಿ ಪಾರದರ್ಶಕ ಇ–ಆಡಳಿತ. (ಉದಾ : ನೆಮ್ಮದಿ, ಆಧಾರ ಸಕಾಲ ಇತ್ಯಾದಿ,) ಜಾಗತಿಕ ಆರ್ಥಿಕ ವ್ಯವಸ್ಥೆ ಸುಧಾರಣೆ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಚುನಾವಣೆಗಳಿಗೆ ಸಂಬಂಧಿಸಿದಂತೆ ಉನ್ನತ ತಂತ್ರಜ್ಞಾನ ಬಳಸಿಕೊಳ್ಳುವುದಾಗಿದೆ.

## ಅಭ್ಯಾಸಗಳು

**I. ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.**

1) ಬೆಂಗಾಲ್ ಐರನ್ ಕಂಪನಿಯು ಪಶ್ಚಿಮ ಬಂಗಾಳದ ________ ಎಂಬಲ್ಲಿ ಸ್ಥಾಪಿತಗೊಂಡಿತು.
2) ವಿವಿಧ ಬಗೆಯ ನಾರುಗಳಿಂದ ಬಟ್ಟೆಯನ್ನು ತಯಾರಿಸುವುದನ್ನೇ ____________ ಎಂದು ಕರೆಯುವರು.
3) ಸಕ್ಕರೆ ಕೈಗಾರಿಕೆಯ ಮುಖ್ಯ ಕಚ್ಚಾ ವಸ್ತು ____________ .
4) ಭಾರತದ ಮೊದಲ ಕಾಗದದ ಕೈಗಾರಿಕೆಯು ____________ ನದಿಯ ದಡದಲ್ಲಿ ಸ್ಥಾಪನೆಗೊಂಡಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

1) ಕೈಗಾರಿಕಾ ವಲಯಗಳ ಪಟ್ಟಿ ತಯಾರಿಸಿ.
2) ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಇರುವ ಸ್ಥಳಗಳಾವುವು?
3) ಗಂಗಾನದಿ ಬಯಲು ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆಯು ಹೆಚ್ಚು ಕೇಂದ್ರೀಕೃತವಾಗಿದೆ. ಏಕೆ?
4) ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
5) ಕಾಗದ ತಯಾರಿಕೆಯಲ್ಲಿ ಬಳಸುವ ಕಚ್ಚಾವಸ್ತುಗಳು ಯಾವುವು ?
6) ಹತ್ತಿ ಬಟ್ಟೆ ಕೈಗಾರಿಕೆಯ ಹಂಚಿಕೆಯನ್ನು ವಿವರಿಸಿ.
7) ಜೈವಿಕ ತಂತ್ರಜ್ಞಾನದಿಂದ ಕೃಷಿ ಕ್ಷೇತ್ರದ ಮೇಲಿನ ಪರಿಣಾಮಗಳೇನು ?
8) ಸುಧಾರಿತ ತಂತ್ರಜ್ಞಾನದ ಬಳಕೆಯಿಂದ ಆದ ಬದಲಾವಣೆಗಳೇನು ?

**III. 'ಅ' ಪಟ್ಟಿಯಲ್ಲಿರುವ ನಗರಗಳಿಗೆ 'ಬ' ಪಟ್ಟಿಯಲ್ಲಿನ ಕೈಗಾರಿಕೆಗಳನ್ನು ಹೊಂದಿಸಿ ಬರೆಯಿರಿ.**

| ಅ | ಬ |
|---|---|
| 1) ಮುಂಬಯಿ | ಎ) 'ಸಿಲಿಕಾನ್ ಸಿಟಿ' |
| 2) ಬೆಂಗಳೂರು | ಬಿ) ಸಕ್ಕರೆ ಕೈಗಾರಿಕೆಗಳು |
| 3) ಭದ್ರಾವತಿ | ಸಿ) ಮ್ಯಾಂಚೆಸ್ಟರ್ ಆಫ್ ಇಂಡಿಯಾ |
| 4) ಬೆಳಗಾವಿ ಜಿಲ್ಲೆ | ಡಿ) ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಕಂಪನಿ |
| | ಇ) ಜೈವಿಕ ತಂತ್ರಜ್ಞಾನ |

**IV. ಚಟುವಟಿಕೆಗಳು :**

1) ಭಾರತದ ನಕ್ಷೆ ಬರೆದು ವಿವಿಧ ಕೈಗಾರಿಕಾ ಪ್ರದೇಶಗಳನ್ನು ಗುರುತಿಸಿ.

**V. ಯೋಜಿತ ಕಾರ್ಯ :**

ನಿಮ್ಮ ಸಮೀಪದ ಯಾವುದಾದರೊಂದು ಕೈಗಾರಿಕೆಗೆ ಭೇಟಿ ನೀಡಿ, ಅಲ್ಲಿ ಪೂರೈಕೆಯಾಗುವ ಕಚ್ಚಾವಸ್ತುಗಳು ಉತ್ಪಾದಿಸುವ ವಸ್ತುವಿನ ಬಗ್ಗೆ ಮಾಹಿತಿ ಸಂಗ್ರಹಿಸಿ.

©KTBS NOT TO BE REPUBLISHED

ಅಧ್ಯಾಯ – 29

# ನೈಸರ್ಗಿಕ ವಿಕೋಪಗಳು

Y2B1K2

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ನೈಸರ್ಗಿಕ ಪ್ರಕೋಪಗಳಾದ ಚಂಡಮಾರುತಗಳು, ಕಾರಣಗಳು, ಪರಿಣಾಮಗಳು, ಮುನ್ನೆಚ್ಚರಿಕೆ ಕ್ರಮಗಳು.
- ಪ್ರವಾಹಗಳು, ಕಾರಣಗಳು, ಒಳಪಡುವ ಪ್ರದೇಶಗಳು, ಪರಿಣಾಮಗಳು, ನಿಯಂತ್ರಣಗಳು.
- ಭೂಕುಸಿತದ, ಕಡಲಕೊರೆತ, ಭೂಕಂಪಗಳು.

## ನೈಸರ್ಗಿಕ ವಿನಾಶಕಾರಕಗಳು (Natural disasters) :

ಪ್ರಕೃತಿಯಲ್ಲಿ ಸಂಭವಿಸುವ ಹಲವಾರು ಘಟನೆಗಳು ಮಾನವಾತೀತವಾದವು. ಇವುಗಳನ್ನು ತಡೆಗಟ್ಟುವುದು, ಅವುಗಳು ಎಲ್ಲಿ, ಯಾವಾಗ, ಹೇಗೆ ಸಂಭವಿಸುತ್ತವೆಯೆಂಬುದನ್ನು ಕರಾರುವಕ್ಕಾಗಿ ಊಹಿಸುವುದು ಇಂದಿನ ವೈಜ್ಞಾನಿಕ ಕಾಲದಲ್ಲಿಯೂ ಅಸಾಧ್ಯವಾಗಿದೆ. ಪ್ರಾಕೃತಿಕವಾಗಿ ಸಂಭವಿಸುವ ಮಾನವನ ಪ್ರಾಣ, ಆಸ್ತಿ – ಪಾಸ್ತಿ ಸೇರಿದಂತೆ ನೈಸರ್ಗಿಕ ಸಂಪತ್ತುಗಳ ನಾಶಕ್ಕೆ ಕಾರಣವಾಗುವ ವಿನಾಶಕಾರಿ ಘಟನೆಗಳನ್ನು ಪ್ರಾಕೃತಿಕ ವಿನಾಶಕಾರಕಗಳೆಂದು ಕರೆಯುವರು. ಇಂತಹ ಪ್ರಾಕೃತಿಕ ವಿನಾಶಕಾರಕಗಳಲ್ಲಿ ಭೂಕಂಪಗಳು, ಪ್ರವಾಹಗಳು, ಕ್ಷಾಮಗಳು, ಚಂಡಮಾರುತಗಳು, ಭೂ ಕುಸಿತ, ಕರಾವಳಿ ಕೊರೆತ, ಹಿಮಪಾತ ಮೊದಲಾದವು ಮುಖ್ಯವಾದವು.

## ಚಂಡಮಾರುತಗಳು (Cyclones) :

ಪೃಥ್ವಿಯ ಮೇಲೆ ಸಂಭವಿಸುವ ನೈಸರ್ಗಿಕ ವಿಕೋಪಗಳಲ್ಲಿ ಆವರ್ತಗಾಳಿಗಳು ಅತ್ಯಂತ ಹಾನಿಕಾರಕ ಮತ್ತು ವಿನಾಶಕಾರಕಗಳಾಗಿವೆ. ಈ ಗಾಳಿಗಳನ್ನು ಸಾಮಾನ್ಯವಾಗಿ ಚಂಡ ಮಾರುತಗಳೆಂದು ಕರೆಯಲಾಗುವುದು.

**ಚಂಡ ಮಾರುತಗಳು ಉಂಟಾಗಲು ಕಾರಣಗಳು :** ಚಂಡ ಮಾರುತಗಳು ಬಂಗಾಳಕೊಲ್ಲಿಯಲ್ಲಿ ಉಗಮಗೊಳ್ಳುತ್ತವೆ. ಮೂರು ಕಡೆಗಳಲ್ಲಿ ಭೂಭಾಗವಿದ್ದು ಭೂಮಿ ಸಾಗರ ಭಾಗಗಳ ನಡುವೆ ಉಷ್ಣಾಂಶ ಹಾಗೂ ಒತ್ತಡದಲ್ಲಿ ತೀವ್ರ ವ್ಯತ್ಯಾಸವಿದ್ದು ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ಉಂಟಾಗಲು ಕಾರಣವಾಗಿವೆ.

- ಸಾಮಾನ್ಯವಾಗಿ ಇವು ಬಂಗಾಳ ಉಪಸಾಗರದಲ್ಲಿ ಉಗಮಗೊಂಡು ಪಶ್ಚಿಮದ ಕಡೆಗೆ ಚಲಿಸಿ ತಮಿಳು ನಾಡು ಅಥವಾ ಆಂಧ್ರ ಪ್ರದೇಶದ ತೀರಕ್ಕೆ ಅಪ್ಪಳಿಸುತ್ತವೆ. ಕೆಲವೊಮ್ಮೆ ವಾಯುವ್ಯಕ್ಕೆ ಚಲಿಸಿ ಒಡಿಶಾ ತೀರವನ್ನು ಅಪ್ಪಳಿಸುತ್ತವೆ. ಭಾರತದಲ್ಲಿ ಚಂಡಮಾರುತಗಳು ಎರಡು ಅವಧಿಯಲ್ಲಿ ಹೆಚ್ಚು ಸಂಭವಿಸುತ್ತವೆ. ಇವುಗಳು

**ನಿಮಗಿದು ತಿಳಿದಿರಲಿ**


ಚಂಡಮಾರುತಗಳಿಗೆ 2004ರ ಅಂತರಾಷ್ಟ್ರೀಯ ಒಪ್ಪಂದದ ರೀತಿಯಲ್ಲಿ ಹೆಸರುಗಳನ್ನು ನೀಡಲಾಗುವುದು. ಇದರಂತೆ ಉತ್ತರ ಹಿಂದೂ ಮಹಾಸಾಗರದ ತೀರವನ್ನು ಹೊಂದಿರುವ ಬಾಂಗ್ಲಾ, ಭಾರತ, ಮಾಲ್ದೀವ್ಸ್, ಮಯಾನ್ಮಾರ, ಓಮನ್, ಪಾಕಿಸ್ತಾನ, ಶ್ರೀಲಂಕಾ ಮತ್ತು ಥೈಲ್ಯಾಂಡಗಳು ತಮ್ಮ ಆಯ್ಕೆಯ ಚಂಡ ಮಾರುತಗಳ ಹೆಸರನ್ನು ಭಾರತೀಯ ಹವಾಮಾನ ಸಂಸ್ಥೆಯ ಪ್ರಾದೇಶಿಕ ಕಚೇರಿ ದೆಹಲಿಗೆ ಸಲ್ಲಿಸುತ್ತವೆ. ಇತ್ತೀಚೆಗೆ ಸಂಭವಿಸಿದ ಚಂಡಮಾರುತವನ್ನು ಪಾಕಿಸ್ತಾನ ಸೂಚಿಸಿದ “ಲೈಲಾ” ಎಂದು ಕರೆಯಲಾಯಿತು. ನಂತರದಲ್ಲಿ ಶ್ರೀಲಂಕಾದ ‘ಬಂಡೂ’ ಥೈಲ್ಯಾಂಡಿನ ‘ಫೆಟ್’, ಬಾಂಗ್ಲಾದ ‘ಗಿರಿ’ ಭಾರತದ ‘ಜಲ್’ ಮುಂತಾದ ಹೆಸರುಗಳನ್ನು ಚಂಡಮಾರುತಗಳಿಗೆ ಇಡಲಾಯಿತು.

© KTBS
NOT TO BE REPUBLISHED

ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಹೆಚ್ಚು ಸಂಭವಿಸುತ್ತವೆ. ಮೇ–ಜೂನ್ ತಿಂಗಳಲ್ಲಿಯೂ ಸಂಭವಿಸುತ್ತವೆ.

**ಚಂಡಮಾರುತದ ಪರಿಣಾಮಗಳು :**

- ಕೆಲವು ವೇಳೆ ಚಂಡಮಾರುತ ಅಪ್ಪಳಿಸಿದ ಪ್ರದೇಶದ ಜನಜೀವನವೇ ಸಂಪೂರ್ಣ ಮಾರ್ಪಾಡು ಹೊಂದುವುದು.
- ಇವುಗಳಿಂದ ಅಪಾರ ಸಾವು ನೋವು ಉಂಟಾಗುತ್ತದೆ.
- ಸಾಗರದ ಅಲೆಗಳು ಒಳನಾಡಿಗೆ ಚಾಚಿ ಜಲರಾಶಿಗಳು ಲವಣಯುಕ್ತವಾಗುತ್ತವೆ.
- ಬೆಳೆಗಳು ಸಂಪೂರ್ಣ ನಾಶವಾಗುತ್ತವೆ.




@KTBS NOT TO BE REPUBLISHED

- ಸಾರಿಗೆ ಸಂಪರ್ಕ, ವಿದ್ಯುತ್ ಸೌಕರ್ಯ, ಜನಜೀವನ ಅಸ್ತವ್ಯಸ್ತವಾಗುವುದು.
- ಚಂಡಮಾರುತಗಳು ನಿಂತ ನಂತರ ಸಾಂಕ್ರಾಮಿಕ ರೋಗಗಳು ಅಪಾರ ಹಾನಿಯನ್ನುಂಟು ಮಾಡುತ್ತವೆ.

**ಮುನ್ನೆಚ್ಚರಿಕೆಯ ಕ್ರಮಗಳು :**

- ಅಪಾಯಕಾರಿ ತಗ್ಗು ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸುವುದು.
- ವಿದ್ಯುಜ್ಜನಕ ಯಂತ್ರಗಳು, ದೋಣಿಗಳು, ಹೆಲಿಕಾಪ್ಟರ್ ಮೊದಲಾದ ಸಾರಿಗೆಗಳನ್ನು ಸಜ್ಜಾಗಿರಿಸುವುದು.
- ರೈಲು-ಬಸ್ಸು ಮೊದಲಾದ ಮಾರ್ಗಗಳನ್ನು ಚಂಡಮಾರುತ ಪ್ರಭಾವದ ವಲಯದಿಂದ ಬದಲಾಯಿಸುವುದು.
- ಸಮೂಹ ಮಾಧ್ಯಮಗಳ ಮೂಲಕ ಚಂಡಮಾರುತಗಳ ಬಗ್ಗೆ ವಿವರಗಳನ್ನು ನಿರಂತರವಾಗಿ ಜನರಿಗೆ ನೀಡುವುದು.
- ಅಗತ್ಯವಿರುವ ಸೇನಾ ತುಕಡಿಗಳನ್ನು ಸಿದ್ಧಗೊಳಿಸಿಡುವುದು.
- ಸಾಕಷ್ಟು ಸಿಹಿನೀರು ಹಾಗೂ ಉಡುಪುಗಳನ್ನು ಸಂಗ್ರಹಿಸಿಡುವುದು.
- ಔಷಧ ಹಾಗೂ ಇತರ ವೈದ್ಯಕೀಯ ನೆರವಿಗಾಗಿ ಸಿದ್ಧರಾಗಿರುವುದು.

**2) ಪ್ರವಾಹಗಳು (Floods) :**

ಭಾರತವು ಪ್ರತಿ ವರ್ಷ ಎದುರಿಸುತ್ತಿರುವ ನೈಸರ್ಗಿಕ ವಿಕೋಪಗಳಲ್ಲಿ ಪ್ರವಾಹಗಳು ಅತ್ಯಂತ ಅಪಾಯಕಾರಿಯಾಗಿವೆ. ಅತ್ಯಧಿಕ ಮಳೆ ಸುರಿದಾಗ ಮತ್ತು ಅತ್ಯಧಿಕ ಪ್ರಮಾಣದಲ್ಲಿ ಹಿಮ ಕರಗಿದಾಗ ನದಿಗಳ ನೀರಿನ ಪ್ರಮಾಣವು ಅವುಗಳ ಪಾತ್ರದ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ನದಿ ದಂಡೆಗಳ ಇಕ್ಕೆಲಗಳಲ್ಲಿ ಉಕ್ಕಿ ಹರಿಯುವುದು. ಇದನ್ನು **ನದಿ ಪ್ರವಾಹ**ಗಳೆಂದು ಕರೆಯುತ್ತಾರೆ. ನದಿಗಳ ನೀರು ನದಿಯ ಪಾತ್ರದಲ್ಲಿ ಹರಿಯಲಾಗದೆ ಎರಡೂ ಕಡೆಯ ತಗ್ಗು ಭಾಗಗಳನ್ನು ಆವರಿಸುವುದು. ಕೆಲವು ವೇಳೆ ಒಂದೇ ಕಡೆಯಲ್ಲಿ ಧಾರಾಕಾರವಾದ ಮಳೆ ಬೀಳುವುದರಿಂದ ಒಮ್ಮೆಲೇ ನದಿಗಳು ಉಕ್ಕಿ ಹರಿಯುತ್ತವೆ.

> **ನಿಮಗಿದು ತಿಳಿದಿರಲಿ**
>
> ಜುಲೈ 17, 2013ರಂದು ಉತ್ತರಾಖಂಡದಲ್ಲಿ ಮಂದಾಕಿನಿನದಿಯು ಪ್ರವಾಹದಿಂದ ಕೇದಾರನಾಥದಲ್ಲಿ ಉಂಟಾದ ಅನಾಹುತ ಅತ್ಯಂತ ಭೀಕರವಾಗಿದ್ದಿತು.

**ಪ್ರವಾಹಗಳು ಉಂಟಾಗಲು ಕಾರಣಗಳು (Causes of floods) :**

- ಮಾನ್‌ಸೂನ್ ಮಳೆ ಅನಿಶ್ಚಿತ. ಕೆಲವು ವೇಳೆ ಅತ್ಯಧಿಕ ಮಳೆ ಬೀಳುವುದರಿಂದ ಪ್ರವಾಹಗಳುಂಟಾಗುತ್ತವೆ.
- ನದಿಯ ಪಾತ್ರಗಳಲ್ಲಿ ಹೂಳು ತುಂಬಿ ನೀರು ಇಕ್ಕೆಲಗಳಲ್ಲಿಯೂ ಹರಿದು ಪ್ರವಾಹಗಳು ಉಂಟಾಗುತ್ತವೆ.
- ಅಣೆಕಟ್ಟು ಹಾಗೂ ಇತರೆ ಅಡ್ಡಗಟ್ಟೆಗಳು ಒಡೆದು ಒಮ್ಮೆಗೇ ಬಿಡುಗಡೆಯಾಗುವ ನೀರಿನಿಂದ ಪ್ರವಾಹಗಳು ಉಂಟಾಗುತ್ತವೆ.

© KTBS NOT TO BE REPUBLISHED

- ನದಿಗಳು ಪಾತ್ರವನ್ನು ಬದಲಾಯಿಸುವುದರಿಂದಲೂ ಪ್ರವಾಹಗಳು ಉಂಟಾಗುತ್ತವೆ.
- ಚಂಡಮಾರುತಗಳಿಂದ ಅಪಾರ ಮಳೆ ಬೀಳುವುದೂ ಸಹ ಪ್ರವಾಹಗಳಿಗೆ ಕಾರಣವಾಗುವುದು.
- ಸಮುದ್ರಗಳ ಮಧ್ಯದಲ್ಲಿ ಭೂಕಂಪನಗಳು ಸಂಭವಿಸುವುದರಿಂದಲೂ ಪ್ರವಾಹಗಳುಂಟಾಗುತ್ತವೆ.

ಮೇಲಿನ–ನೈಸರ್ಗಿಕ ಕಾರಣಗಳಷ್ಟೇ ಅಲ್ಲದೆ ಮಾನವಿಕ ಕಾರಣಗಳಾದ ಅರಣ್ಯನಾಶ, ಸರಿಯಾದ ರೀತಿಯಲ್ಲಿ ಕಟ್ಟಿರದ ಸೇತುವೆಗಳು, ಒಡ್ಡುಗಳು, ನದಿ ಪಾತ್ರ, ಅಕ್ರಮವಾಗಿ ಭೂ ಬಳಕೆಯಲ್ಲಾಗುತ್ತಿರುವ ಬದಲಾವಣೆ ಮುಂತಾದವುಗಳು ಪ್ರಮುಖವಾಗಿವೆ.

**ಪ್ರವಾಹಕ್ಕೆ ಒಳಪಡುವ ಪ್ರದೇಶಗಳು :**

ದೇಶದಾದ್ಯಂತ ಪ್ರವಾಹಕ್ಕೆ ಒಳಪಡುವ ಪ್ರದೇಶಗಳು ಕಂಡುಬರುತ್ತವೆ.

- ಗಂಗಾ ನದಿಯ ಉಪನದಿಗಳಾದ ಯಮುನಾ, ಗಂಡಕ್, ಕೋಸಿ, ಘಾಘ್ರ ನದಿಗಳು. ಉತ್ತರ ಪ್ರದೇಶ, ಬಿಹಾರಗಳಲ್ಲಿ ಪ್ರವಾಹವನ್ನುಂಟು ಮಾಡುತ್ತವೆ.
- ದಾಮೋದರ ಮತ್ತು ಸುವರ್ಣ ರೇಖಾ ನದಿಗಳು ಛತ್ತೀಸಘಡ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಪ್ರವಾಹವನ್ನುಂಟು ಮಾಡುತ್ತವೆ.
- ಬ್ರಹ್ಮಪುತ್ರ ಮತ್ತು ಇದರ ಉಪನದಿಗಳಾದ ದಿಹಾಂಗ, ದಿಬಾಂಗ, ಸುಬನ್‌ಸಿರಿ ಮತ್ತು ಲೂಹಿತ್– ಅಸ್ಸಾಂ ಕಣಿವೆ ನದಿಗಳಿಂದ ಅಸ್ಸಾಂನಲ್ಲಿ ಪ್ರವಾಹ ಉಂಟಾಗುತ್ತವೆ.
- ಹಿಮಾಲಯ ಪರ್ವತಗಳಲ್ಲಿ ಮೇಘಸ್ಫೋಟದಿಂದ ಆಗಿಂದಾಗ್ಗೆ ಕ್ಷಿಪ್ರ ಪ್ರವಾಹಗಳುಂಟಾಗುತ್ತವೆ.
- ನರ್ಮದಾ, ತಪತಿ, ಸಬರಮತಿ ಮತ್ತು ಮಹಿ ನದಿಗಳು ವರ್ಷದ ಕೆಲವು ದಿನಗಳಲ್ಲಿ ಗುಜರಾತ್ ರಾಜ್ಯದಲ್ಲಿ ಪ್ರವಾಹ ಉಂಟುಮಾಡುತ್ತವೆ.
- ಕರ್ನಾಟಕದಲ್ಲಿ ಕೃಷ್ಣಾ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ದೋಣಿನದಿ, ಬೆಣ್ಣೆಹಳ್ಳ, ಮುಂತಾದವುಗಳು ಮಳೆಗಾಲದಲ್ಲಿ ರಭಸವಾಗಿ ಹರಿದು ಪ್ರವಾಹವನ್ನುಂಟು ಮಾಡುತ್ತವೆ.

**ಪ್ರವಾಹಗಳಿಂದುಂಟಾಗುವ ಪರಿಣಾಮಗಳು :**

- ಪ್ರವಾಹಗಳು ಜನರ ಆಸ್ತಿ–ಪಾಸ್ತಿ, ಮನೆ, ಭೂಮಿ ಮತ್ತು ಬೆಳೆಗಳನ್ನು ಹಾನಿಗೀಡುಮಾಡುತ್ತವೆ.
- ದೂರ ಸಂಪರ್ಕ, ವಿದ್ಯುತ್ ಪೂರೈಕೆ, ಸಾರಿಗೆ ಸೌಲಭ್ಯ ಮುಂತಾದವುಗಳು ಅಸ್ತ–ವ್ಯಸ್ತಗೊಳ್ಳುತ್ತವೆ.
- ಪ್ರವಾಹಗಳ ಪರಿಣಾಮದಿಂದ ಫಲವತ್ತಾದ ಮಣ್ಣಿನ ಮೇಲ್ಭಾಗವು ಕೊಚ್ಚಿಹೋಗುತ್ತದೆ ಹಾಗೂ ಅನೇಕ ಗಿಡ ಮರಗಳು ಹಾನಿಗೊಳಗಾಗುತ್ತವೆ.
- ಪ್ರವಾಹಗಳಿಂದ ವಿಶಾಲವಾಗಿ ಹರಡಿದ ನೀರು ಅನೇಕ ರೋಗಗಳ ಉಲ್ಬಣಕ್ಕೆ ಕಾರಣವಾಗುತ್ತದೆ.

**ಪ್ರವಾಹ ನಿಯಂತ್ರಣ ಕ್ರಮಗಳು :**

- ಪ್ರವಾಹ ನಿಯಂತ್ರಣಕ್ಕೆ ನದಿಯ ಇಕ್ಕೆಲಗಳಲ್ಲಿ ಅಡ್ಡಗಟ್ಟೆಗಳನ್ನು ನಿರ್ಮಿಸುವುದು.
- ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿ ಜಲಾಶಯಗಳಲ್ಲಿ ನೀರನ್ನು ಸಂಗ್ರಹಿಸಿ ಇತರ ಕಡೆಗಳಿಗೆ ನೀರನ್ನು ಹರಿಸುವುದು.

© KTBS NOT TO BE REPUBLISHED

- ಪ್ರವಾಹಗಳ ಮುನ್ಸೂಚನೆಯನ್ನು ನೀಡಲು ಕೇಂದ್ರಗಳನ್ನು ಸ್ಥಾಪಿಸುವುದು.
- ಜಲಾನಯನ ಪ್ರದೇಶಗಳಲ್ಲಿ ಅರಣ್ಯಗಳನ್ನು ಬೆಳೆಸುವುದು. ಇದರಿಂದ ಮಣ್ಣಿನ ಸವೆತವನ್ನು ನಿಯಂತ್ರಿಸಿ, ನದಿ ಹಾಗೂ ಜಲಾಶಯಗಳಲ್ಲಿ ಹೂಳು ತುಂಬುವುದನ್ನು ತಪ್ಪಿಸಿ ಪ್ರವಾಹಗಳನ್ನು ತಡೆಗಟ್ಟಬಹುದು.

### 3) ಭೂಕುಸಿತ ಅಥವಾ ಭೂಪಾತ (Land Slide)

ಪರ್ವತಗಳ ಅಥವಾ ಬೆಟ್ಟಗಳ ಮೇಲ್ಭಾಗದಿಂದ ಕಡಿದಾದ ಇಳಿಜಾರಿನಗುಂಟ ಕೆಳಕ್ಕೆ ಜಾರುವ ಭೂರಾಶಿಗೆ ಭೂಕುಸಿತಗಳೆನ್ನುವರು. ಪರ್ವತಗಳಿಂದ ಕೆಳಕ್ಕೆ ಜಾರುವ ವಸ್ತುಗಳಲ್ಲಿ ಕಲ್ಲು, ಮಣ್ಣು ಮತ್ತು ಭಗ್ನಾವಶೇಷಗಳು ಪ್ರಮುಖವಾಗಿವೆ. ಅತಿ ಹೆಚ್ಚು ಕಡಿದಾದ ಪರ್ವತ ಪ್ರದೇಶಗಳಲ್ಲಿ ಭೂಕುಸಿತವಾದರೆ, ಅವು ಹೆಚ್ಚು ವಿನಾಶಕಾರಿಯಾಗಿರುತ್ತವೆ. ಹಿಮಾಲಯ ಪ್ರದೇಶದಲ್ಲಿ ಭೂಕುಸಿತದ ಜೊತೆಗೆ ಹಿಮಪಾತಗಳು ಉಂಟಾಗಿ ಜನಜೀವನಕ್ಕೆ ಹಾನಿಯನ್ನುಂಟು ಮಾಡುತ್ತವೆ.

**ಭೂ ಕುಸಿತಕ್ಕೆ ಕಾರಣಗಳು :**

- ಪರ್ವತ ಮತ್ತು ಸಮುದ್ರ ತೀರಗಳಲ್ಲಿ ಕ್ರಮವಾಗಿ ಹರಿಯುವ ನೀರು ಹಾಗೂ ಅಲೆಗಳು ಭೂಮಿಯನ್ನು ಕೊರೆದು ಇಳಿಜಾರನ್ನು ನಿರ್ಮಿಸಿ ಭೂಕುಸಿತವುಂಟಾಗಲು ಕಾರಣವಾಗುತ್ತವೆ.
- ಕಡಿದಾದ ಪರ್ವತ ವಲಯಗಳಲ್ಲಿ ರಸ್ತೆ, ರೈಲು ಮಾರ್ಗ, ಕಾಲುವೆ ಮೊದಲಾದವುಗಳನ್ನು ನಿರ್ಮಿಸಿದಾಗ ಇಳಿಜಾರು ಮತ್ತಷ್ಟು ಕಡಿದಾಗಿ ಭೂಕುಸಿತಗಳುಂಟಾಗುತ್ತವೆ.
- ಜೇಡಿಮಣ್ಣಿನ ಪದರದ ಮೇಲೆ ಸಡಿಲವಾದ ಮಣ್ಣಿನ ಪದರವಿದ್ದಲ್ಲಿ, ಇಳಿಜಾರು ಕಡಿದಾಗಿದ್ದು ಭೂ ಕುಸಿತವುಂಟಾಗುವುದು.
- ಗಣಿಗಾರಿಕೆಯ ಪ್ರದೇಶದಲ್ಲಿ ಭೂಕುಸಿತಗಳು ಸಾಮಾನ್ಯ. ಆಳದಲ್ಲಿರುವ ಅದಿರಿನ ನಿಕ್ಷೇಪದವರೆಗೆ ಗಣಿಗಳನ್ನು ತೆಗೆದಿದ್ದು ಇದರಿಂದ ಭೂಕುಸಿತಗಳುಂಟಾಗುತ್ತವೆ.
- ಅರಣ್ಯಗಳನ್ನು ಕಡಿಯುವುದರಿಂದ ಹಾಗೂ ಕಡಿದಾದ ಇಳಿಜಾರನ್ನು ಆಳವಾಗಿ ಉಳುಮೆ ಮಾಡುವುದರಿಂದ ಭೂಕುಸಿತಗಳುಂಟಾಗುತ್ತವೆ.

**ಭೂಕುಸಿತದ ಪರಿಣಾಮಗಳು :**

- ಭೂಕುಸಿತದಿಂದಾಗಿ ಅನೇಕ ಚಿಕ್ಕ ನದಿಗಳು ಹರಿಯುವುದಕ್ಕೆ ಅಡ್ಡಿ ಉಂಟಾಗುತ್ತದೆ.
- ಸಾರಿಗೆ ಸಂಚಾರಕ್ಕೆ ಅಡ್ಡಿ ಉಂಟಾಗುತ್ತದೆ.
- ಹಳ್ಳಗಳು ಮತ್ತು ಅನೇಕ ಸಸ್ಯವರ್ಗಗಳು ಭೂಗತವಾಗುತ್ತವೆ.
- ಭೂಕುಸಿತಗಳು ಅನೇಕ ಜೀವಹಾನಿ ಮತ್ತು ಆಸ್ತಿ ಹಾನಿಯನ್ನುಂಟುಮಾಡುತ್ತವೆ.

### 4) ಕಡಲಕೊರೆತ (Coastal erosion) :

ಸಮುದ್ರದ ಅಲೆಗಳು ನಿರಂತರವಾಗಿ ತೀರ ಪ್ರದೇಶಗಳಿಗೆ ಅಪ್ಪಳಿಸುತ್ತವೆ. ಇವುಗಳಿಂದ ತೀರ ಪ್ರದೇಶವು ಸವೆತಕ್ಕೀಡಾಗುವುದು. ಹೀಗೆ ಅಲೆಗಳಿಂದ ತೀರ ವಲಯವು ಸವೆಸಲ್ಪಡುವುದನ್ನು ತೀರ ಪ್ರದೇಶದ ಕೊರೆತ ಅಥವಾ ಸಾಮಾನ್ಯವಾಗಿ 'ಕಡಲಕೊರೆತ' ಎಂದು ಕರೆಯುವರು.

ಭಾರತದಲ್ಲಿ ಕಡಲಕೊರೆತ ಅಲೆಗಳ ಅಬ್ಬರ ಹೆಚ್ಚಾಗಿರುವ ನೈರುತ್ಯ ಮಾನ್ಸೂನ್ ಮಾರುತಗಳ ಅವಧಿ ಹಾಗೂ ಚಂಡಮಾರುತಗಳ ಅವಧಿಯಲ್ಲಿ ಅತಿ ಹೆಚ್ಚು. ನೈರುತ್ಯ ಮಾನ್ಸೂನ್ ಮಾರುತಗಳು

© KTBS NOT TO BE REPUBLISHED

ಆರಂಭದಲ್ಲಿ ಅರಬ್ಬಿ ಸಮುದ್ರದಲ್ಲಿ ಅತಿ ಹೆಚ್ಚು ಎತ್ತರದ ಅಲೆಗಳು ತೀರ ಪ್ರದೇಶಕ್ಕೆ ಅಪ್ಪಳಿಸಿ ಭೂ ಪ್ರದೇಶವನ್ನು ಕಬಳಿಸುತ್ತವೆ. ಇದರಿಂದ ಪಶ್ಚಿಮ ತೀರದ ರಾಜ್ಯಗಳಾದ ಕೇರಳ, ಕರ್ನಾಟಕ, ಗೋವಾ ರಾಜ್ಯಗಳಲ್ಲಿ ಕಡಲ ಕೊರೆತ ಹೆಚ್ಚು. ಇದಲ್ಲದೆ ತಮಿಳುನಾಡಿನ ಕನ್ಯಾಕುಮಾರಿ, ಮಹಾರಾಷ್ಟ್ರ ಮತ್ತು ಗುಜರಾತಗಳಲ್ಲಿ ಕಡಲಕೊರೆತ ಕಂಡುಬರುತ್ತದೆ. ಆದರೆ ಪೂರ್ವ ಕರಾವಳಿಯಲ್ಲಿ ಕಡಲ ಕೊರೆತದ ಪ್ರಮಾಣ ಬಹಳ ಕಡಿಮೆ.

**ಪರಿಣಾಮಗಳು :**

- ಅಲೆಗಳು ತೀರ ಸವೆಸುವುದರಿಂದ ಅಪಾರ ಭೂ ಪ್ರದೇಶ ಸಮುದ್ರದ ಪಾಲಾಗುವುದು.
- ಮನೆ, ರಸ್ತೆ ಮೊದಲಾದವು ಮುಳುಗಿ ಅಪಾರ ನಷ್ಟವುಂಟಾಗುವುದು.

**ನಿರ್ವಹಣೆ :**

- ತೀರ ಪ್ರದೇಶದಲ್ಲಿ ಮರಳು ತೆಗೆಯುವುದನ್ನು ನಿಯಂತ್ರಿಸುವುದು.
- ತೀರ ಪ್ರದೇಶದುದ್ದಕ್ಕೂ ಅಲೆಗಳು ಪ್ರಬಲವಾಗಿರುವ ಕಡೆ ತಡೆಗೋಡೆಯನ್ನು ನಿರ್ಮಿಸುವುದು.
- ತೀರದುದ್ದಕ್ಕೂ ದಪ್ಪ ಬಂಡೆಗಳ ರಾಶಿಹಾಕಿ ಅಲೆಗಳ ಪ್ರಭಾವವನ್ನು ನಿಯಂತ್ರಿಸುವುದು.
- ಇವೆಲ್ಲವುಗಳಿಗಿಂತಲೂ ತೀರದುದ್ದಕ್ಕೂ 'ಮ್ಯಾಂಗ್ರೋವ್' ಅರಣ್ಯಗಳನ್ನು ಬೆಳೆಸಲು ಕಾರ್ಯಕ್ರಮ ರೂಪಿಸುವುದು ಅತ್ಯಂತ ಪರಿಣಾಮಕಾರಿ.

**5) ಭೂಕಂಪಗಳು (Earthquakes) :**

ಭೂಮಿಯ ಮೇಲೆ ಸಂಭವಿಸುವ ನೈಸರ್ಗಿಕ ವಿಕೋಪಗಳಲ್ಲಿ ಭೂಕಂಪಗಳು ಪ್ರಮುಖವಾಗಿವೆ. ಭೂಮಿಯ ಒಳಗಿನ ಆಂತರಿಕ ಶಕ್ತಿಯಿಂದ ಅನಿರೀಕ್ಷಿತವಾಗಿ ಭೂಮಿಯ ಮೇಲ್ಪದರವು ಕಂಪಿಸುವುದನ್ನು 'ಭೂಕಂಪ' ಎಂದು ಕರೆಯುವರು. ಇದರಿಂದ ಭೂಮೇಲ್ಮೈ ಕಂಪಿಸುವುದು, ನಡುಗುವುದು ಉಂಟಾಗುತ್ತದೆ.

**ಭೂಕಂಪಕ್ಕೆ ಕಾರಣಗಳು :**

1) ಭೂಮಿಯ ಅಂತರಾಳದಲ್ಲಿರುವ ಶಿಲಾಫಲಕಗಳ ಚಲನೆ.
2) ಶಿಲಾಗೋಳದ ಮೇಲ್ಮೈಯಲ್ಲಿರುವ ದ್ರವ ರೂಪದ ಮ್ಯಾಗ್ಮ ಒಂದೆಡೆಯಿಂದ ಇನ್ನೊಂದೆಡೆಗೆ ಸರಿಯುವುದರಿಂದ.
3) ನಗರೀಕರಣದಿಂದ ಭೂಮಿಯ ಒಡಲಲ್ಲಿ ಒತ್ತಡ ಹೆಚ್ಚಾಗಿ ಭೂಕಂಪನ ಸಂಭವಿಸುತ್ತದೆ.
4) ಅರಣ್ಯನಾಶ, ಅಣೆಕಟ್ಟುಗಳ ನಿರ್ಮಾಣ, ಗಣಿಗಾರಿಕೆಗಳಿಂದಾಗಿ ಭೂಕಂಪನ ಸಂಭವಿಸುತ್ತದೆ.

**ಭಾರತದಲ್ಲಿ ಇವುಗಳ ಹಂಚಿಕೆ :** ಉತ್ತರದ ಹಿಮಾಲಯ ಪರ್ವತ, ಪೂರ್ವ ಆಸ್ಸಾಂ, ಪಶ್ಚಿಮದಲ್ಲಿ ಗುಜರಾತ ವಲಯಗಳಲ್ಲಿ ಬಹುತೇಕ ಭೂಕಂಪಗಳು ಸಂಭವಿಸಿವೆ. ದಕ್ಷಿಣ ಭಾರತದಲ್ಲಿ ಕೊಯ್ನಾ, ಲಾತೂರ್ ಮೊದಲಾದ ಕಡೆಗಳಲ್ಲಿ ಭೂಕಂಪಗಳು ಸಂಭವಿಸಿವೆ.

NOT TO BE REPUBLISHED ©KTBS

**ಭೂಕಂಪದ ಪರಿಣಾಮಗಳು :**

1) ಜನರ ಸಾವು ನೋವು ಮತ್ತು ಆಸ್ತಿ–ಪಾಸ್ತಿಗಳ ಹಾನಿ.

2) ಸಾರಿಗೆ ಸಂಪರ್ಕ ಕಡಿತ.

3) ರೋಗಗಳ ಹರಡುವಿಕೆ

4) ಸಾಗರದ ಅಲೆಗಳು ದಡಗಳಿಗೆ ಅಪ್ಪಳಿಸುವಿಕೆ.

5) ಸುನಾಮಿ.

6) ನದಿಯ ದಿಕ್ಕು ಬದಲಾಗುವಿಕೆ ಇತ್ಯಾದಿ.

**ಭೂಕಂಪದ ಮುನ್ನೆಚ್ಚರಿಕೆಯ ಕ್ರಮಗಳು :**

- ಭೂಕಂಪನ ಸಂಭವನೀಯ ವಲಯಗಳಲ್ಲಿ ಬಹು ಅಂತಸ್ತಿನ ಕಟ್ಟಡಗಳನ್ನು ನಿಷೇಧಿಸುವುದು.
- ಈ ವಲಯಗಳಲ್ಲಿ ಕಟ್ಟಡಗಳನ್ನು ಹಗುರವಾದ ವಸ್ತುಗಳಿಂದ ನಿರ್ಮಿಸುವುದು.
- ಕಟ್ಟಡಗಳು ಸ್ಥಿತಿ ಸ್ಥಾಪಕತ್ವ ಗುಣವನ್ನು ಹೊಂದುವಂತೆ ನಿರ್ಮಿಸುವುದು.
- ಭೂಕಂಪ ಸಂಭವಿಸಿದಾಗ ಹೇಗೆ ವರ್ತಿಸಬೇಕು ಎಂಬ ಬಗ್ಗೆ ಜನರಿಗೆ ತಿಳುವಳಿಕೆ ನೀಡುವುದು.
- ಭೂಕಂಪ ಸಂಭವಿಸಬಹುದಾದ ಪ್ರದೇಶಗಳಿಗೆ ಶೀಘ್ರ ವೈದ್ಯಕೀಯ ಸೇವೆ ಸಿಗುವಂತೆ ವ್ಯವಸ್ಥೆಗಳನ್ನು ಮಾಡಿಕೊಳ್ಳುವುದು.

**ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಪರಿಹಾರೋಪಾಯಗಳು :**

ಸಿದ್ಧಪಡಿಸಿದ ಆಹಾರ, ಆಹಾರದ ಹಂಚಿಕೆ, ಶುದ್ಧ ಕುಡಿಯುವ ನೀರಿನ ಪೂರೈಕೆ, ಔಷಧಿ ಹಂಚಿಕೆ ತಾತ್ಕಾಲಿಕ ವಸತಿ ವ್ಯವಸ್ಥೆ, ಅಗತ್ಯ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸುವಂತಹ ಕ್ರಮಗಳನ್ನು ಕೈಗೊಳ್ಳುವುದು.

© KTBS NOT TO BE REPUBLISHED

## ಅಭ್ಯಾಸಗಳು

**I. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

1) ಪ್ರಾಕೃತಿಕ ವಿನಾಶಕಗಳು ಎಂದರೇನು?

2) ಚಂಡಮಾರುತಗಳ ಪರಿಣಾಮಗಳಾವುವು?

3) ಪ್ರವಾಹಗಳೆಂದರೇನು?

4) ಭೂ ಕುಸಿತ ಎಂದರೇನು?

5) ಭೂಕಂಪ ಎಂದರೇನು?

6) ಪ್ರವಾಹಗಳು ಉಂಟಾಗಲು ಕಾರಣಗಳು ಮತ್ತು ಒಳಪಡುವ ಪ್ರದೇಶಗಳನ್ನು ವಿವರಿಸಿ.

7) ಕಡಲಕೊರೆತ ಎಂದರೇನು? ಅದರ ನಿರ್ವಹಣೆಯನ್ನು ತಿಳಿಸಿ.

8) ಭೂಕಂಪದ ಪರಿಣಾಮಗಳನ್ನು ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.

**II. ಚಟುವಟಿಕೆಗಳು :**

1) ಭಾರತದಲ್ಲಿ ಸಂಭವಿಸುವ ಭೂಕಂಪ 'ಪ್ರವಾಹ ಪೀಡಿತ ಪ್ರದೇಶಗಳನ್ನು ನಕ್ಷೆ'ಯಲ್ಲಿ ಗುರುತಿಸಿರಿ.

2) ಚಂಡಮಾರುತಗಳಿಗೆ ಹೆಸರು ಇಡುವುದರಿಂದ ಏನೇನು ಪ್ರಯೋಜನಗಳಿವೆ ಎಂಬುದರ ಬಗ್ಗೆ ತರಗತಿಯಲ್ಲಿ ಚರ್ಚಿಸಿ.

**III. ಯೋಜಿತ ಕಾರ್ಯ :**

1) ನಿಮ್ಮ ಉಪಾಧ್ಯಾಯರ ಸಹಾಯದಿಂದ ಭಾರತದಲ್ಲಿ ಇದುವರೆಗೆ ಪ್ರವಾಹ ಪೀಡಿತ ಪ್ರದೇಶಗಳೆಂದು ಗುರುತಿಸಲಾಗಿರುವ ಪ್ರದೇಶಗಳನ್ನು ಪಟ್ಟಿಮಾಡಿರಿ.

@KTBS
NOT TO BE REPUBLISHED

ಅರ್ಥಶಾಸ್ತ್ರ

ಅಧ್ಯಾಯ – 30

# ಗ್ರಾಮೀಣಾಭಿವೃದ್ಧಿ

L5P6V6

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಗ್ರಾಮೀಣಾಭಿವೃದ್ಧಿ ಅರ್ಥ ಮತ್ತು ಮಹತ್ವ.
- ಗ್ರಾಮೀಣಾಭಿವೃದ್ಧಿ ಮತ್ತು ವಿಕೇಂದ್ರೀಕರಣ.
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳು.
- ಗ್ರಾಮೀಣಾಭಿವೃದ್ಧಿ ಮತ್ತು ಮಹಿಳೆ.

ಭಾರತ ಹಳ್ಳಿಗಳ ದೇಶ 2011 ರ ಜನಗಣತಿಯ ಪ್ರಕಾರ ಶೇ.68.84 ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಬಹು ಹಿಂದೆಯೇ 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದಿದ್ದರು.

ಸ್ವಾತಂತ್ರ್ಯಾನಂತರ ಸರ್ಕಾರವು ಅನುಸರಿಸಿದ ಅಭಿವೃದ್ಧಿ ತಂತ್ರಗಳು ನಗರ ಕೇಂದ್ರಿತ ಅಭಿವೃದ್ಧಿಗೆ ಅವಕಾಶ ನೀಡಿದವು. ಅಂದರೆ ನಗರಗಳಲ್ಲಿ ಕೈಗಾರಿಕೆಗಳು ಬೆಳವಣಿಗೆ ಹೊಂದಿ, ನಗರಗಳು ವಿಸ್ತರಣೆ ಗೊಂಡವು. ಗ್ರಾಮೀಣ ಕೈಗಾರಿಕೆಗಳು ನಶಿಸಿ, ಗ್ರಾಮೀಣ ಜನರು ನಗರಗಳಿಗೆ ವಲಸೆ ಬರಲಾರಂಭಿಸಿದರು. ಉದಾರೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳ ಜಾರಿಯಿಂದಾಗಿ ಅತ್ಯಾಧುನಿಕ ತಂತ್ರಜ್ಞಾನವನ್ನು ತನ್ನದಾಗಿಸಿಕೊಂಡ ಕೈಗಾರಿಕೆ ಮತ್ತು ಸೇವಾ ವಲಯಗಳು ಬಹಳ ವೇಗವಾಗಿ ವಿಸ್ತರಣೆಗೊಳ್ಳುತ್ತಿವೆ. ಈ ವಲಯಗಳಲ್ಲಿನ ಬಹುತೇಕ ಅವಕಾಶಗಳು ನಗರವಾಸಿಗಳ ಪಾಲಾಗುತ್ತಿವೆ. ಆಧುನಿಕ ಜೀವನಶೈಲಿಯಲ್ಲಿ ನಗರಗಳು ಪ್ರಕಾಶಿಸತೊಡಗಿವೆ.

ಬಹುತೇಕ ಕೃಷಿಯೊಂದನ್ನೇ ಅವಲಂಬಿಸಿರುವ ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಾಗಿದೆ. ಇವರಲ್ಲಿ ಮೂರನೇ ಒಂದು ಭಾಗದ ಜನರು ಕಡು ಬಡತನದಲ್ಲಿ ಬದುಕುತ್ತಿದ್ದಾರೆ. ಆಧುನಿಕತೆಯ ಹೊಡೆತಕ್ಕೆ ಸಿಲುಕಿ ಗ್ರಾಮೀಣ ಗುಡಿಕೈಗಾರಿಕೆಗಳು ನಶಿಸಿಹೋಗಿವೆ. ಸುಮಾರು ಶೇ.60 ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದರೂ, ರಾಷ್ಟ್ರೀಯ ಆದಾಯಕ್ಕೆ ಈ ವಲಯದ ಕೊಡುಗೆ ಅತ್ಯಂತ ಕಡಿಮೆಯಿದ್ದು, ಅದು ನಿರಂತರವಾಗಿ ಕಡಿಮೆಯಾಗುತ್ತಿದೆ. ಇದರಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ದಿನೇ ದಿನೇ ಹೆಚ್ಚುತ್ತಿದೆ. ಈ ಅಸಮತೋಲನವನ್ನು ಹೋಗಲಾಡಿಸಿ, ದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಮೊದಲು ಗ್ರಾಮೀಣ ಪ್ರದೇಶವನ್ನು ಅಭಿವೃದ್ಧಿಪಡಿಸಬೇಕಾದ ಅವಶ್ಯಕತೆಯಿದೆ.

## 1. ಅರ್ಥ ಮತ್ತು ಮಹತ್ವ (Meaning and Importance)

**ಗ್ರಾಮೀಣಾಭಿವೃದ್ಧಿಯ ಅರ್ಥ :** ಗ್ರಾಮೀಣಾಭಿವೃದ್ಧಿಯು ಬಹು ವಿಸ್ತಾರವಾದ ಅರ್ಥವ್ಯಾಪ್ತಿಯನ್ನು ಹೊಂದಿದೆ. ಅದು ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳ ಅಭಿವೃದ್ಧಿಯ ಜೊತೆಗೆ ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸಾರಿಗೆ, ಸಂಪರ್ಕ ಮುಂತಾದ ಸಾಮಾಜಿಕ ಮತ್ತು ಆರ್ಥಿಕ ಮೂಲಸೌಲಭ್ಯಗಳ ಅಭಿವೃದ್ಧಿ, ಉದ್ಯೋಗ ನಿರ್ಮಾಣ, ಸಾಮಾಜಿಕ ಕಲ್ಯಾಣ ಮುಂತಾದ ಹಲವಾರು ಚಟುವಟಿಕೆಗಳನ್ನು ಒಳಗೊಂಡಿರುವ ವಿಸ್ತೃತ ಅಭಿವೃದ್ಧಿ ಕಾರ್ಯಕ್ರಮವಾಗಿದೆ.

© KTBS NOT TO BE REPUBLISHED

ಗ್ರಾಮೀಣಾಭಿವೃದ್ಧಿಯು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕೃಷಿಕರು, ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮುಂತಾದ ಎಲ್ಲ ಹಿಂದುಳಿದ ವರ್ಗಗಳ ಜನರ ಜೀವನಮಟ್ಟವನ್ನು ಉತ್ತಮಪಡಿಸುವ ಮಹತ್ತರ ಆಶಯವನ್ನು ಹೊಂದಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಗ್ರಾಮೀಣ ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಉನ್ನತೀಕರಿಸುವುದನ್ನು ಗ್ರಾಮೀಣಾಭಿವೃದ್ಧಿ ಎಂದು ಕರೆಯಬಹುದಾಗಿದೆ.

**ಗ್ರಾಮೀಣಾಭಿವೃದ್ಧಿಯ ಮಹತ್ವ :** ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಗ್ರಾಮೀಣಾಭಿವೃದ್ಧಿಯು ಹೆಚ್ಚಿನ ಮಹತ್ವ ಪಡೆದಿದೆ. ಗ್ರಾಮೀಣ ಪ್ರದೇಶದಲ್ಲಿ ಅತಿ ಹೆಚ್ಚಿನ ಜನರು ವಾಸಿಸುತ್ತಿದ್ದು, ಅವರು ಬಡತನ, ನಿರುದ್ಯೋಗ, ಅನಕ್ಷರತೆ, ಅನಾರೋಗ್ಯ, ಮೂಲ ಸೌಕರ್ಯಗಳ ಕೊರತೆ ಮುಂತಾದ ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಗ್ರಾಮೀಣ ಭಾರತವನ್ನು ಸಮೃದ್ಧ ಹಾಗೂ ಶ್ರೀಮಂತಗೊಳಿಸಬೇಕಾದ ಅವಶ್ಯಕತೆಯಿದೆ.

ಗ್ರಾಮೀಣ ಜನರಿಗೆ ಶಿಕ್ಷಣ, ತರಬೇತಿ, ಆರೋಗ್ಯ, ನೈರ್ಮಲ್ಯ ಮುಂತಾದ ಸೌಲಭ್ಯಗಳನ್ನು ಒದಗಿಸಿ, ಅವರ ಜ್ಞಾನ, ಕೌಶಲ್ಯ ಮತ್ತು ದುಡಿಯುವ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿದೆ. ಗ್ರಾಮೀಣ ಭಾಗದಲ್ಲಿ ಕೃಷಿಯ ಜೊತೆಗೆ ಪಶುಪಾಲನೆ, ಮೀನುಗಾರಿಕೆ, ರೇಷ್ಮೆಕೃಷಿ, ಕೋಳಿಸಾಕಣೆ ಮುಂತಾದ ಕೃಷಿ ಸಂಬಂಧಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಿ, ಕೃಷಿಯನ್ನು ಒಂದು ಲಾಭದಾಯಕ ಹಾಗೂ ಆಕರ್ಷಕ ಉದ್ಯೋಗವನ್ನಾಗಿ ಅಭಿವೃದ್ಧಿಪಡಿಸಬೇಕಾಗಿದೆ. ಇದರಿಂದ ಗ್ರಾಮೀಣ ಜನರು ನಗರಗಳಿಗೆ ವಲಸೆಹೋಗುವುದನ್ನು ತಪ್ಪಿಸಬಹುದಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಎದ್ದು ಕಾಣುತ್ತದೆ. ವಿದ್ಯುತ್, ನೀರಾವರಿ, ಸಾರಿಗೆ, ಸಂಪರ್ಕ, ಮಾರುಕಟ್ಟೆ ಮುಂತಾದ ಅಗತ್ಯ ಮೂಲ ಸೌಕರ್ಯಗಳನ್ನು ಗ್ರಾಮೀಣ ಜನರಿಗೆ ಒದಗಿಸಿಕೊಟ್ಟು, ಗ್ರಾಮೀಣ ಉತ್ಪಾದಕತೆಯನ್ನು ಹೆಚ್ಚಿಸಬೇಕಾಗಿದೆ. ಕೃಷಿ ಉತ್ಪನ್ನಗಳನ್ನು ಕಚ್ಚಾರೂಪದಲ್ಲಿಯೇ ನಗರಗಳಿಗೆ ಸಾಗಿಸಿ, ಮಾರಾಟಮಾಡುವುದಕ್ಕೆ ಬದಲಾಗಿ, ಅವುಗಳನ್ನು ಹಳ್ಳಿಗಳಲ್ಲಿಯೇ ಸಂಸ್ಕರಿಸಿ, ಸಿದ್ಧವಸ್ತುಗಳನ್ನಾಗಿ ಮಾರ್ಪಡಿಸಿ, ಮೌಲ್ಯವರ್ಧನೆ ಮಾಡಿ ಮಾರಾಟ ಮಾಡಬಹುದು. ಇದರಿಂದ ಹಳ್ಳಿಯ ಜನರಿಗೆ ಉದ್ಯೋಗಾವಕಾಶಗಳು ಹೆಚ್ಚುವುದಲ್ಲದೆ, ಅವರ ಆದಾಯವೂ ಹೆಚ್ಚುವುದು. ಸಣ್ಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ, ಗ್ರಾಮೀಣ ಅರ್ಥವ್ಯವಸ್ಥೆಯನ್ನು ಬಲಪಡಿಸಬಹುದು.


ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಹಾಗೂ ಬಡ ವರ್ಗದ ಜನರಿಗೆ ನಿರಂತರವಾಗಿ ಉದ್ಯೋಗಾವಕಾಶಗಳು ದೊರೆಯುವಂತಹ ವ್ಯವಸ್ಥೆಯನ್ನು ನಿರ್ಮಿಸಬೇಕಾಗಿದೆ.

ನಗರಗಳಲ್ಲಿನ ಜನರಿಗೆ ಲಭ್ಯವಿರುವ ಎಲ್ಲ ಸೌಲಭ್ಯಗಳು ಮತ್ತು ಅವಕಾಶಗಳು ಗ್ರಾಮೀಣ ಜನರಿಗೂ ದೊರೆಯುವಂತಾಗಬೇಕು. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹಳ್ಳಿಗರೂ ಭಾಗವಹಿಸುವಂತಾಗಬೇಕು. ಅಭಿವೃದ್ಧಿಯ ಫಲ ಇವರಿಗೂ ಸಮಾನವಾಗಿ ದೊರೆಯಬೇಕು. ಗ್ರಾಮೀಣಾಭಿವೃದ್ಧಿಯ ಮೂಲಕ ಇದನ್ನು ಸಾಧಿಸಬೇಕಾಗಿದೆ.

© KTBS NOT TO BE REPUBLISHED

## 2. ವಿಕೇಂದ್ರೀಕರಣ (De-centralisation)

ಪ್ರತಿಯೊಂದು ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೇ ವಹಿಸಿಕೊಡುವುದನ್ನು ಅಧಿಕಾರ ವಿಕೇಂದ್ರೀಕರಣ ಎನ್ನುತ್ತಾರೆ. ವಿಕೇಂದ್ರೀಕರಣದಿಂದ ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿಪಡಿಸಬಹುದು. ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು. ವಿಕೇಂದ್ರೀಕರಣವು ಎಲ್ಲ ರೀತಿಯ ಶೋಷಣೆಗಳನ್ನು ತಡೆಯುತ್ತದೆ, ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆ ಹಾಗೂ ಸಹಾನುಭೂತಿ ಮತ್ತು ಸಹಕಾರದಂತಹ ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ.




**ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆ**

ವಿಕೇಂದ್ರೀಕರಣದ ಜಾರಿಗಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಭಾರತ ಸರ್ಕಾರವು 1993 ರ ಸಂವಿಧಾನದ 73 ನೇ ತಿದ್ದುಪಡಿಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದಿತು. ಇದರಿಂದ ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ದೊರೆಯಿತು. ಈ ತಿದ್ದುಪಡಿಯ ಪ್ರಕಾರ ಮೂರು ಹಂತದ (Three tier system) ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಿವೆ. ಅವುಗಳೆಂದರೆ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ. ಪಂಚಾಯತ್ ಸಂಸ್ಥೆಗಳು ಪ್ರಜಾಪ್ರಭುತ್ವದ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

## 3. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ (Role of Panchayath Raj Institutions)

ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಗಳ ಜನರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಹಿರಿದಾದುದು. ಇವು ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಶೌಚಾಲಯ, ಶಾಲೆ ಮತ್ತು ಆಸ್ಪತ್ರೆ ಕಟ್ಟಡಗಳು, ಮಾರುಕಟ್ಟೆ ಮುಂತಾದ ಸಮುದಾಯಕ್ಕೆ ಉಪಯೋಗವಾಗುವ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಸಾಧ್ಯವಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ವಯಸ್ಕ ಶಿಕ್ಷಣ, ತಾಂತ್ರಿಕ ಹಾಗೂ ವೃತ್ತಿ ತರಬೇತಿಗೆ ಪ್ರೋತ್ಸಾಹ, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವಲ್ಲಿಯೂ ಪಂಚಾಯತ್ ಸಂಸ್ಥೆಗಳು ಕಾರ್ಯನಿರ್ವಹಿಸಬೇಕಾಗಿದೆ.

ಗ್ರಾಮೀಣ ಉತ್ಪಾದಕ ಚಟುವಟಿಕೆಗಳಾದ ಕೃಷಿ, ಪಶುಪಾಲನೆ, ಕೋಳಿಸಾಕಣೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ ಮುಂತಾದವುಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜನರಿಗೆ ದುಡಿಯುವ ಅವಕಾಶಗಳನ್ನು ಹೆಚ್ಚಿಸಬಹುದಾಗಿದೆ. ಕೆರೆ ಕಟ್ಟೆಗಳ ನಿರ್ಮಾಣ, ಅವುಗಳ ಹೂಳು ತೆಗೆಯುವುದು, ಕಿರು ನೀರಾವರಿ ಯೋಜನೆಗಳ ನಿರ್ವಹಣೆ ಮುಂತಾದ ಕಾರ್ಯಗಳ ಮೂಲಕ

©KTBS NOT TO BE REPUBLISHED

ಕೃಷಿ ನೀರಾವರಿಯನ್ನು ವಿಸ್ತರಿಸಬಹುದಾಗಿದೆ. ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಹುದು. ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಬಹುದು. ಪಂಚಾಯ್ತಿಗಳ ಮೂಲಕ ಇವುಗಳ ಅಭಿವೃದ್ಧಿಗಾಗಿ ಸಮ್ಮೇಳನಗಳು, ವಿಚಾರ ಸಂಕಿರಣಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು.

'ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' (MGNREGP), 'ಸ್ವರ್ಣಜಯಂತಿ ಗ್ರಾಮ ಸ್ವ-ಉದ್ಯೋಗ ಯೋಜನೆ' (SGSY) ಮುಂತಾದ ಉದ್ಯೋಗ ನಿರ್ಮಾಣ ಹಾಗೂ ಬಡತನ ನಿರ್ಮೂಲನ ಯೋಜನೆಗಳನ್ನು ಪಂಚಾಯತ್ ಸಂಸ್ಥೆಗಳ ಮೂಲಕ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬಹುದಾಗಿದೆ. ಇದರಿಂದ ಗ್ರಾಮೀಣ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಲು ಸಾಧ್ಯವಿದೆ. 'ಇಂದಿರಾ ಆವಾಸ್ ಯೋಜನೆ', 'ಅಂಬೇಡ್ಕರ್-ವಾಲ್ಮೀಕಿ ವಸತಿ ಯೋಜನೆ', 'ಆಶ್ರಯ ಯೋಜನೆ' ಮುಂತಾದ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಎಲ್ಲ ವಸತಿ ಹೀನರಿಗೆ ಮನೆಗಳನ್ನು ನಿರ್ಮಿಸಿಕೊಡಬಹುದು. 'ಸುವರ್ಣ ಗ್ರಾಮೋದಯ ಯೋಜನೆ' ಮೂಲಕ ಮೂಲಭೂತ ಸೌಕರ್ಯಗಳನ್ನು ಬಲಪಡಿಸಬಹುದು. ಗ್ರಾಮಗಳಲ್ಲಿನ ಪಡಿತರ ವ್ಯವಸ್ಥೆಯನ್ನು ಬಲಪಡಿಸಿ, ಅರ್ಹ ಬಡಜನರಿಗೆ ಅಗತ್ಯ ಆಹಾರ ಧಾನ್ಯಗಳು ಸಮರ್ಪಕವಾಗಿ ದೊರೆಯುವಂತೆ ಮಾಡಬಹುದು.

**ನಿಮಗಿದು ತಿಳಿದಿರಲಿ :**

**PURA**

(PURA = Providing Urban Amenities in Rural Areas)

'ಗ್ರಾಮೀಣ ಪ್ರದೇಶಗಳಿಗೆ ನಗರದ ಸೌಲಭ್ಯಗಳನ್ನು ಒದಗಿಸುವುದು' (PURA) ಇದು ಮಾಜಿ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂ ರವರು ಗ್ರಾಮೀಣ ಅಭಿವೃದ್ಧಿಗಾಗಿ ರೂಪಿಸಿದ ಒಂದು ಅತ್ಯುತ್ತಮ ಮಾದರಿ ಯೋಜನೆಯಾಗಿದೆ. PURA ಮಾದರಿಯು ಗ್ರಾಮಗಳ ನಾಲ್ಕು ರೀತಿಯ ಸಂಪರ್ಕಸುವಿಕೆಯನ್ನು ಒಳಗೊಂಡಿದೆ. 1) ಭೌತಿಕ ಸಂಪರ್ಕಸುವಿಕೆಯಲ್ಲಿ 15-25 ಹಳ್ಳಿಗಳ ಒಂದು ಗುಂಪು ಪರಸ್ಪರ ರಸ್ತೆ ಸಂಪರ್ಕ ಪಡೆಯಲಿದೆ. ಈ ಹಳ್ಳಿಗಳಿಗೆ ಹೊಂದಿಕೊಂಡಂತೆ ವರ್ತುಲ ರಸ್ತೆ ಇರಲಿದೆ. ಇದರ ಜೊತೆಗೆ ವಿದ್ಯುತ್ ಸಂಪರ್ಕವನ್ನು ಪಡೆಯಲಿವೆ. 2) ಜ್ಞಾನ ಸಂಪರ್ಕಸುವಿಕೆಯೆಂದರೆ, ವರ್ತುಲ ರಸ್ತೆಯ ಪ್ರತಿ 5-7 ಕಿ.ಮೀ. ಅಂತರದಲ್ಲಿ ಒಂದು ಶಾಲೆ, ಒಂದು ಉನ್ನತ ಶಿಕ್ಷಣ ಕೇಂದ್ರ ಮತ್ತು ಒಂದು ಆಸ್ಪತ್ರೆಯನ್ನು ಸ್ಥಾಪಿಸುವುದು. 3) ಎಲೆಕ್ಟ್ರಾನಿಕ್ ಸಂಪರ್ಕಸುವಿಕೆಯೆಂದರೆ, ಹಳ್ಳಿಗಳಿಗೆ ಆಧುನಿಕ ದೂರಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳನ್ನು ಒದಗಿಸುವುದು. 4) ಆರ್ಥಿಕ ಸಂಪರ್ಕಸುವಿಕೆಯ ಗುರಿ, ಹಳ್ಳಿಗಳ ಗುಂಪಿನ ಒಳಗಡೆ ಉತ್ತಮ ಮಾರುಕಟ್ಟೆ ಸ್ಥಾಪಿಸುವುದು. ಇಲ್ಲಿ ಹಳ್ಳಿಗರ ಎಲ್ಲ ಉತ್ಪನ್ನಗಳನ್ನು ಮಾರಲು ಮತ್ತು ದಿನಬಳಕೆಯ ವಸ್ತುಗಳನ್ನು ಕೊಳ್ಳಲು ಅನುಕೂಲವಾಗಿರಬೇಕು.

ಗ್ರಾಮಗಳಲ್ಲಿನ ವಯೋವೃದ್ಧರು, ಅಂಗವಿಕಲರು, ವಿಧವೆಯರು, ಮಾನಸಿಕ ಅಸ್ವಸ್ಥರು ಮುಂತಾದವರನ್ನು ಗುರುತಿಸಿ, ಅವರಿಗೆ ಸರ್ಕಾರದಿಂದ ಸಿಗಬಹುದಾದ ಸೌಲಭ್ಯಗಳನ್ನು ದೊರಕಿಸಿಕೊಡುವ ಮೂಲಕ ಸಮಾಜ ಕಲ್ಯಾಣ ಸೇವೆಗಳನ್ನು ಒದಗಿಸಬಹುದಾಗಿದೆ. ಮಹಿಳಾ ಸ್ವಸಹಾಯ ಸಂಘಗಳನ್ನು ಸಂಘಟಿಸಿ, ಉತ್ಪಾದಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ, ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬಹುದು.

ಗ್ರಾಮೀಣ ಜಾತ್ರೆಗಳು, ಹಬ್ಬ ಹರಿದಿನಗಳ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹಿಸಬಹುದು. ಇದರಿಂದ ಗ್ರಾಮೀಣ ಕಲೆಗಳು ಬೆಳವಣಿಗೆ ಹೊಂದಿ, ಗ್ರಾಮೀಣ ಸಂಸ್ಕೃತಿ ಶ್ರೀಮಂತಗೊಳ್ಳುತ್ತದೆ.

© KTBS NOT TO BE REPUBLISHED

ಒಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ, ಅಲ್ಲಿನ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸುವಲ್ಲಿ, ಸ್ವಾವಲಂಬಿ ಮತ್ತು ಸಮೃದ್ಧ ಬದುಕನ್ನು ಕಟ್ಟಿಕೊಡುವಲ್ಲಿ, ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಬಹು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಈ ಮೇಲೆ ಪ್ರಸ್ತಾಪಿಸಿರುವ ಎಲ್ಲಾ ಕಾರ್ಯಗಳನ್ನು ಕೈಗೊಂಡಿದ್ದು ಅಭಿವೃದ್ಧಿಯ ಪಥದಲ್ಲಿ ನಡೆಯುತ್ತಿರುವುದನ್ನು ಕಾಣಬಹುದಾಗಿದೆ.

## 4. ಅಭಿವೃದ್ಧಿಯಲ್ಲಿ ಮಹಿಳೆ (Women in Development)

ಮಾನವನ ಬದುಕಿನಲ್ಲಿ ಮಹಿಳೆ ತಾಯಿಯಾಗಿ, ಹೆಂಡತಿಯಾಗಿ, ಸೊಸೆಯಾಗಿ, ಮಗಳಾಗಿ ನಾನಾರೀತಿಯ ಕರ್ತವ್ಯಗಳನ್ನು ನಿರ್ವಹಿಸುತ್ತಾಳೆ. ಮಾನವನ ಬದುಕು ರೂಪುಗೊಳ್ಳುವುದೇ ಮಹಿಳೆಯಿಂದ. ಅವಳು ಮನೆಯೊಳಗೆ ದುಡಿಯುವುದಲ್ಲದೆ, ಮನೆಯ ಹೊರಗೆ ಕೃಷಿಕಳಾಗಿ, ಕಾರ್ಮಿಕಳಾಗಿ, ನೌಕರಳಾಗಿ, ಅಧಿಕಾರಿಯಾಗಿ, ಉದ್ಯಮಿಯಾಗಿ, ನೀತಿರೂಪಕಳಾಗಿ, ಪುರುಷರಿಗೆ ಸರಿಸಮನಾಗಿ ದುಡಿಯುತ್ತಿದ್ದಾಳೆ. ಹಾಗಾಗಿ ದೇಶದ ಅಭಿವೃದ್ಧಿಯಲ್ಲಿ, ಅದರಲ್ಲೂ ವಿಶೇಷವಾಗಿ ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ ನಿರ್ಣಾಯಕವಾದುದು.

ಕೃಷಿ, ಪಶುಪಾಲನೆ, ಮೀನುಗಾರಿಕೆ, ರೇಷ್ಮೆಕೃಷಿ, ತೋಟಗಾರಿಕೆ, ಪುಷ್ಪಕೃಷಿ, ಕೋಳಿಸಾಕಣೆಯ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಾಗಿ ದುಡಿಯುತ್ತಿದ್ದಾರೆ. ಕೃಷಿ ಕಾರ್ಮಿಕರಲ್ಲಿಯೂ ಮಹಿಳೆಯರೇ ಹೆಚ್ಚಾಗಿದ್ದಾರೆ. ವಿದ್ಯಾವಂತ ಮಹಿಳೆಯರು ಅರ್ಥವ್ಯವಸ್ಥೆಯ ವಿವಿಧ ಕ್ಷೇತ್ರಗಳಲ್ಲಿ, ನಾನಾರೀತಿಯ ಉದ್ಯೋಗಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಚೇರಿಗಳು, ವ್ಯಾಪಾರಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ವೃದ್ಧಾಶ್ರಮಗಳು ಮುಂತಾದ ಕಡೆಗಳಲ್ಲೆಲ್ಲಾ ಮಹಿಳೆಯರ ಸೇವೆ ಅಸಾಧಾರಣವಾದುದು. ಅಲ್ಲದೆ ವಿದ್ಯಾವಂತ ಮಹಿಳೆ ಜನಸಂಖ್ಯಾ ನಿಯಂತ್ರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾಳೆ.

©KTBS NOT TO BE REPUBLISHED



ಕೃಷಿಯಲ್ಲಿ ಮಹಿಳೆ



ಕೈಗಾರಿಕೆಯಲ್ಲಿ ಮಹಿಳೆ



ಪೈಲೆಟ್ ಆಗಿ ಮಹಿಳೆ

ಮಹಿಳೆಯರು ರಾಜಕೀಯ ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸುತ್ತಿದ್ದಾರೆ. ಗ್ರಾಮ ಪಂಚಾಯ್ತಿಯಿಂದ ಮೊದಲ್ಗೊಂಡು ರಾಷ್ಟ್ರಪತಿಯವರೆಗೆ ಸರ್ಕಾರದ ವಿವಿಧ ಹಂತಗಳಲ್ಲಿ ರಾಜಕೀಯ ಮುಂದಾಳುಗಳಾಗಿ ಹಲವು ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿರುವುದರಿಂದ, ಸಾಮಾನ್ಯ ಗ್ರಾಮೀಣ ಮಹಿಳೆಯೂ ಅಧಿಕಾರದ ಚುಕ್ಕಾಣಿ ಹಿಡಿದು ಗ್ರಾಮಗಳ ಅಭಿವೃದ್ಧಿಯಲ್ಲಿ ದುಡಿಯಲು ಅವಕಾಶವಾಗಿದೆ. ಸದ್ಯದಲ್ಲಿ ಕರ್ನಾಟಕದ ಪಂಚಾಯತ್ ಸಂಸ್ಥೆಗಳಿಗೆ ಚುನಾಯಿತರಾಗಿರುವ ಸದಸ್ಯರುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳಾ ಸದಸ್ಯರಿರುವುದು ಮಹತ್ವದ ಅಂಶವಾಗಿದೆ.

ಗ್ರಾಮೀಣ ಭಾಗದ ಎಲ್ಲಾ ಹಳ್ಳಿಗಳಲ್ಲಿ **'ಮಹಿಳಾ ಸ್ವಸಹಾಯ ಸಂಘ'** (**ಸ್ತ್ರೀಶಕ್ತಿ ಸಂಘ**)ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಇವು ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುವಲ್ಲಿ ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿವೆ. ಈ ಸಂಘಗಳ ಸದಸ್ಯರಾಗಿರುವ ಮಹಿಳೆಯರು ಇವುಗಳ ಮೂಲಕ ಸುಲಭವಾಗಿ ಸಾಲ ಪಡೆದು ಉತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದಾರೆ. ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಘಗಳು ಉಳಿತಾಯ ಸಂಗ್ರಹದಲ್ಲಿ ಮತ್ತು ಸಾಲ ವಸೂಲಾತಿಯಲ್ಲಿ ಉತ್ತಮ ಸಾಧನೆ ಮಾಡುತ್ತಿವೆ. ಹಳ್ಳಿಗಳಲ್ಲಿ ಕುಡಿತ, ಜೂಜು ಮುಂತಾದ ದುಶ್ಚಟಗಳು ವ್ಯಾಪಕವಾಗಿ ಹೆಚ್ಚುತ್ತಿವೆ. ಬಾಲ್ಯವಿವಾಹ, ವರದಕ್ಷಿಣೆ, ಜಾತಿಪದ್ಧತಿ, ಮೂಢನಂಬಿಕೆ, ಮಹಿಳೆ ಮತ್ತು ಮಕ್ಕಳ ಶೋಷಣೆ ಮೊದಲಾದ ಸಾಮಾಜಿಕ ಪಿಡುಗುಗಳು ಇನ್ನೂ ಜೀವಂತವಾಗಿವೆ. ಎಚ್ಚೆತ್ತ ಮಹಿಳೆಯರು ಸಂಘಟಿತ ಪ್ರಯತ್ನದ ಮೂಲಕ ಇಂತಹ ಅನಿಷ್ಟಗಳನ್ನು ಹೋಗಲಾಡಿಸಬಹುದಾಗಿದೆ. ಆ ಮೂಲಕ ಸ್ವಚ್ಛ ಹಾಗೂ ಪ್ರಗತಿಪರ ಸಮಾಜವನ್ನು ಕಟ್ಟುವಲ್ಲಿ ನೆರವಾಗಬಹುದಾಗಿದೆ.

> **ಚಟುವಟಿಕೆ :**
>
> ನಿಮ್ಮೂರಿನಲ್ಲಿರುವ ಮಹಿಳಾ ಸ್ವ-ಸಹಾಯ ಸಂಘಕ್ಕೆ ಭೇಟಿ ನೀಡಿ ಅದರ ಕಾರ್ಯಗಳನ್ನು ತಿಳಿಯಿರಿ.

ಮಹಿಳೆಯರು ಮನೆಯಲ್ಲಿ ಮಾಡುವ ಕೂಲಿರಹಿತ ದುಡಿಮೆಯನ್ನು ಶ್ರಮ ಎಂದು ಪರಿಗಣಿಸುತ್ತಿಲ್ಲ. ಮನೆಯ ಒಳಗಿನ ಹಾಗೂ ಮನೆಯ ಹೊರಗಿನ ದುಡಿಮೆಯನ್ನು ಗಣನೆಗೆ ತೆಗೆದುಕೊಂಡರೆ ಮಹಿಳೆಯರು ಪುರುಷರಿಗಿಂತ ಹೆಚ್ಚಿನ ಅವಧಿ ದುಡಿಯುತ್ತಾರೆ. ಅದರೂ ಅವರ ದುಡಿಮೆಯ ಮುಕ್ಕಾಲು ಪಾಲು ಕೂಲಿರಹಿತ ದುಡಿಮೆಯಾಗಿದ್ದು, ಅದನ್ನು ರಾಷ್ಟ್ರೀಯ ಆದಾಯದಲ್ಲೂ ಪರಿಗಣಿಸುತ್ತಿಲ್ಲ. ಮಹಿಳಾ ಕಾರ್ಮಿಕರಿಗೆ ಸಮಾನವೇತನ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಭದ್ರತೆಯನ್ನು ಒದಗಿಸಿಕೊಡುವುದು ಅವಶ್ಯಕವಿದೆ. ಒಟ್ಟಿನಲ್ಲಿ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸ್ತ್ರೀ–ಪುರುಷರಿಬ್ಬರೂ ಸಮಾನವಾದ ಜವಾಬ್ದಾರಿಯನ್ನು ಹೊಂದಿದ್ದಾರೆ. ಅವರಿಬ್ಬರೂ ಪ್ರಗತಿ ರಥದ ಎರಡು ಚಕ್ರಗಳಿದ್ದಂತೆ.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ' ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು ___________
2. ಸಂವಿಧಾನದ 73 ನೆಯ ತಿದ್ದುಪಡಿಯ ಪ್ರಕಾರ ಭಾರತದಲ್ಲಿ _________ ಹಂತದ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಿವೆ.
3. ಪಂಚಾಯತ್ ಸಂಸ್ಥೆಗಳು _______ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ.
4. ಗ್ರಾಮೀಣ ಬಡಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು _______ ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.

NOT TO BE REPUBLISHED © KTBS

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ.
2. ಅಧಿಕಾರ ವಿಕೇಂದ್ರೀಕರಣ ಎಂದರೇನು?
3. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.
4. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ.
5. ಮಹಿಳೆಯರ ಯಾವ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ?

**III. ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

1. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?
2. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ.
4. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ಬರೆಯಿರಿ.

**IV. ಚಟುವಟಿಕೆಗಳು.**

1. ನಿಮ್ಮ ಹತ್ತಿರದ ಗ್ರಾಮಪಂಚಾಯ್ತಿಗೆ ಭೇಟಿ ನೀಡಿ. ಅದು ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ನಿರ್ವಹಿಸುತ್ತಿರುವ ಕಾರ್ಯಗಳನ್ನು ಪಟ್ಟಿಮಾಡಿರಿ.
2. ನಿಮ್ಮ ಹತ್ತಿರದಲ್ಲಿರುವ ಮಹಿಳಾ ಸ್ವಸಹಾಯ ಸಂಘಕ್ಕೆ ಭೇಟಿ ನೀಡಿ. ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಅವುಗಳ ಪಾತ್ರವನ್ನು ಕುರಿತು ಮಾಹಿತಿ ಪಡೆದು ತರಗತಿಯಲ್ಲಿ ಚರ್ಚಿಸಿ.

© KTBS
NOT TO BE REPUBLISHED

## ಅಧ್ಯಾಯ – 31

# ಸಾರ್ವಜನಿಕ ಹಣಕಾಸು ಮತ್ತು ಆಯ–ವ್ಯಯ

## (Public Finance and Budget)

D3T1I7

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಸಾರ್ವಜನಿಕ ಹಣಕಾಸಿನ ಅರ್ಥ ಮತ್ತು ಮಹತ್ವ.
- ಆಯ–ವ್ಯಯ • ಸಾರ್ವಜನಿಕ ವೆಚ್ಚಗಳು ಮತ್ತು ಸಾರ್ವಜನಿಕ ಆದಾಯಗಳು
- ಕೊರತೆಯ ಹಣಕಾಸು ಮತ್ತು ವಿತ್ತೀಯ ಕೊರತೆ.

ನಿಮಗೆ ನಿಮ್ಮ ಕುಟುಂಬವು ಯಾವ ಯಾವ ಮೂಲಗಳಿಂದ ಆದಾಯ ಪಡೆಯುತ್ತದೆ? ಮತ್ತು ಎಷ್ಟು ಆದಾಯ ಪಡೆಯುತ್ತದೆಂಬ ಮಾಹಿತಿಯಿದೆಯೆ?. ಸಾಮಾನ್ಯವಾಗಿ ಆದಾಯವನ್ನು ಒಂದು ವರ್ಷದ ಅವಧಿಗೆ ಅಂದಾಜು ಮಾಡಲಾಗುತ್ತದೆ. ಪ್ರತಿಯೊಂದು ಕುಟುಂಬ ಕೃಷಿ, ಕೈಗಾರಿಕೆ ಅಥವಾ ಸೇವಾವಲಯದ ಉದ್ಯೋಗಗಳಲ್ಲಿ ದುಡಿಯುವ ಮೂಲಕ ಆದಾಯ ಪಡೆಯುತ್ತದೆ. ಹೀಗೆ ಪಡೆಯಲಾಗುವ ಆದಾಯವನ್ನು ಅನುಭೋಗ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗುತ್ತದೆ. ವ್ಯಕ್ತಿ ಅಥವಾ ಕುಟುಂಬ ತನ್ನ ಆದಾಯ ಮತ್ತು ವೆಚ್ಚವನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಅಭಿವೃದ್ಧಿಯನ್ನು ಸಾಧಿಸುವುದು ಒಂದು ಕಲೆ. ಆದಾಯಕ್ಕಿಂತ ವೆಚ್ಚ ಅಧಿಕವಾದಾಗ ಸಾಲ ಮಾಡಬೇಕಾಗುತ್ತದೆ. ಹೀಗೆ ವ್ಯಕ್ತಿ ಅಥವಾ ಕುಟುಂಬದ ಆದಾಯ, ವೆಚ್ಚ ಮತ್ತು ಸಾಲದ ನಿರ್ವಹಣೆಯ ಬಗ್ಗೆ ತಿಳಿಸಿಕೊಡುವುದನ್ನು **'ವೈಯಕ್ತಿಕ ಹಣಕಾಸು'** ಎನ್ನುತ್ತೇವೆ. ಅದೇ ರೀತಿಯಲ್ಲಿ ಸರ್ಕಾರವು ತನ್ನದೇ ಹಣಕಾಸನ್ನು ನಿರ್ವಹಿಸುತ್ತದೆ. ಅದೇ ಸಾರ್ವಜನಿಕ ಹಣಕಾಸು. ಈ ಅಧ್ಯಾಯದಲ್ಲಿ ಸರ್ಕಾರವು ತನ್ನ ಹಣಕಾಸನ್ನು ಹೇಗೆ ನಿರ್ವಹಿಸುತ್ತದೆಂಬುದನ್ನು ತಿಳಿಯೋಣ.

### 1. ಸಾರ್ವಜನಿಕ ಹಣಕಾಸಿನ ಅರ್ಥ ಮತ್ತು ಮಹತ್ವ (Meaning and Importance of Public Finance) :

ಸರ್ಕಾರದ ಆದಾಯ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದೇ ಸಾರ್ವಜನಿಕ ಹಣಕಾಸು. "ಸರ್ಕಾರದ ಆದಾಯ ಹಾಗೂ ವೆಚ್ಚಗಳ ನಿರ್ವಹಣೆ ಮತ್ತು ಅವುಗಳಲ್ಲಿನ ಹೊಂದಾಣಿಕೆ ಮಾಡುವ ಪ್ರಕ್ರಿಯೆ ಬಗ್ಗೆ ಅಭ್ಯಸಿಸುವುದೇ ಸಾರ್ವಜನಿಕ ಹಣಕಾಸು" ಎಂದು ಡಾಲ್ಟನ್‌ರವರು ವ್ಯಾಖ್ಯಾನಿಸುತ್ತಾರೆ. ಸಾರ್ವಜನಿಕ ಹಣಕಾಸು ಸರ್ಕಾರದ ಆದಾಯ, ವೆಚ್ಚ ಮತ್ತು ಸಾಲ ನಿರ್ವಹಣೆಯ ಸಮಗ್ರ ಚಿತ್ರಣವನ್ನು ನೀಡುತ್ತದೆ.

ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸಿನ ನಡುವೆ ಕೆಲವು ಮೂಲಭೂತ ಭಿನ್ನತೆಗಳಿವೆ. ಅವುಗಳೆಂದರೆ :

| ವೈಯಕ್ತಿಕ ಹಣಕಾಸು | ಸಾರ್ವಜನಿಕ ಹಣಕಾಸು |
|---|---|
| • ವೈಯಕ್ತಿಕ ಅಥವಾ ಖಾಸಗಿ ಹಣಕಾಸು ಒಬ್ಬ ವ್ಯಕ್ತಿ ಅಥವಾ ಕುಟುಂಬದ ಆದಾಯ–ವೆಚ್ಚಗಳಿಗೆ ಸಂಬಂಧಿಸಿದೆ. | • ಸಾರ್ವಜನಿಕ ಹಣಕಾಸು ಸರ್ಕಾರದ ಆದಾಯ–ವೆಚ್ಚಗಳಿಗೆ ಸಂಬಂಧಿಸಿದೆ. |

© KTBS NOT TO BE REPUBLISHED

| | |
|---|---|
| • ವೈಯಕ್ತಿಕ ಹಣಕಾಸಿನಲ್ಲಿ ವ್ಯಕ್ತಿಗಳು ಮೊದಲು ತಮ್ಮ ಆದಾಯವನ್ನು ಅಂದಾಜುಮಾಡಿ, ನಂತರ ಅದಕ್ಕೆ ಅನುಗುಣವಾಗಿ ವೆಚ್ಚ ಮಾಡುತ್ತಾರೆ. | • ಸಾರ್ವಜನಿಕ ಹಣಕಾಸಿನಲ್ಲಿ ಸರ್ಕಾರವು ಮೊದಲು ತನ್ನ ವೆಚ್ಚವನ್ನು ಅಂದಾಜು ಮಾಡಿ, ಅದಕ್ಕೆ ತಕ್ಕಂತೆ ಆದಾಯವನ್ನು ಹೊಂದಿಸುತ್ತದೆ. |
| • ವೈಯಕ್ತಿಕ ಹಣಕಾಸಿನ ವ್ಯವಹಾರಗಳನ್ನು ಆದಷ್ಟೂ ಗೌಪ್ಯವಾಗಿಡಲಾಗುತ್ತದೆ. | • ಸಾರ್ವಜನಿಕ ಹಣಕಾಸನ್ನು ಶಾಸನ ಸಭೆಗಳಲ್ಲಿ ಚರ್ಚಿಸಲಾಗುತ್ತದೆ, ಅಲ್ಲದೆ ಮಾಧ್ಯಮಗಳಲ್ಲಿ ಎಲ್ಲರಿಗೂ ತಿಳಿಯುವಂತೆ ಪ್ರಚಾರ ಮಾಡಲಾಗುತ್ತದೆ. |
| • ವ್ಯಕ್ತಿ ಅಥವಾ ಕುಟುಂಬ ಉಳಿತಾಯ ಮಾಡಿದರೆ ಅದು ಅವರ ಪ್ರಗತಿಗೆ ಪೂರಕವಾಗಿರುತ್ತದೆ. | • ಸರ್ಕಾರವು ಉಳಿತಾಯ ಮಾಡಿದರೆ ಅದು ಅಭಿವೃದ್ಧಿ ಹೊಂದುತ್ತಿರುವ ದೇಶದ ಪ್ರಗತಿಯನ್ನು ಕುಂಠಿತ ಗೊಳಿಸುತ್ತದೆ. ಆದುದರಿಂದ ಸರ್ಕಾರಗಳು ತಮ್ಮ ಆದಾಯಕ್ಕಿಂತ ಹೆಚ್ಚಿನ ಹಣವನ್ನು ಅಭಿವೃದ್ಧಿ ಕೆಲಸಗಳಿಗಾಗಿ ವೆಚ್ಚ ಮಾಡಲು ಪ್ರಯತ್ನಿಸುತ್ತವೆ. |

**ಸಾರ್ವಜನಿಕ ಹಣಕಾಸಿನ ಮಹತ್ವ :** ಆರ್ಥಿಕ ಅಭಿವೃದ್ಧಿ ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಸರ್ಕಾರವು ತನ್ನ ಆದಾಯ, ವೆಚ್ಚ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನುಸರಿಸುವ ನೀತಿಗೆ ಕೋಶೀಯ ನೀತಿ ಅಥವಾ ವಿತ್ತೀಯ ನೀತಿ *(Fiscal policy)* ಎನ್ನುತ್ತಾರೆ. ಸರ್ಕಾರವು ಕೋಶೀಯ ನೀತಿಯ ಮೂಲಕ ಸಾರ್ವಜನಿಕ ಹಣಕಾಸನ್ನು ನಿರ್ವಹಿಸುತ್ತದೆ. ಸಾರ್ವಜನಿಕ ಹಣಕಾಸು ದೇಶದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ವಹಿಸಲ್ಪಡುತ್ತದೆ.

ಸರ್ಕಾರವು ತನ್ನ ಕೋಶೀಯ ನೀತಿಯ ಮೂಲಕ ದೇಶದಲ್ಲಿರುವ ನೈಸರ್ಗಿಕ ಸಂಪತ್ತು, ಶ್ರಮ ಮತ್ತು ಭೌತಿಕ ಬಂಡವಾಳವು ಉತ್ಪಾದಕರ ನಡುವೆ ಸಮರ್ಪಕವಾಗಿ ಹಂಚಿಕೆಯಾಗುವಂತೆ ಹಾಗೂ ಉತ್ಪಾದನೆಯು ಗರಿಷ್ಠ ಮಟ್ಟಕ್ಕೆ ಹೆಚ್ಚುವಂತೆ ತಂತ್ರಗಳನ್ನು ರೂಪಿಸುತ್ತದೆ. ಹಾಗೆಯೇ ದೇಶದಲ್ಲಿ ಉತ್ಪಾದನೆಯಾಗುವ ಆದಾಯವು ಎಲ್ಲ ಪ್ರಜೆಗಳಲ್ಲಿ ಆದಷ್ಟು ಸಮನಾಗಿ ಹಂಚಿಕೆಯಾಗುವಂತೆ ನೋಡಿಕೊಂಡು, ಸಮಾಜದ ಎಲ್ಲ ವರ್ಗದ ಜನರು ಶಾಂತಿ, ನೆಮ್ಮದಿಯಿಂದ ಬದುಕುವಂತೆ ಮಾಡಲು ಪ್ರಯತ್ನಿಸುತ್ತದೆ. ಇದರಿಂದ ಪ್ರಜೆಗಳ ಕಲ್ಯಾಣ ಹೆಚ್ಚಳವಾಗಿ, ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ.

ಸರ್ಕಾರವು ತನ್ನ ಕೋಶೀಯ ನೀತಿಯ ಮೂಲಕ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಿ, ಕೃಷಿ, ಸಣ್ಣ ಕೈಗಾರಿಕೆ, ಮೂಲಸೌಕರ್ಯ ಮೊದಲಾದ ಆದ್ಯತಾ ವಲಯಗಳಲ್ಲಿ ಬಂಡವಾಳ ಹೂಡಿಕೆಯು ಹೆಚ್ಚುವಂತೆ ಮಾಡುತ್ತದೆ. ಆ ಮೂಲಕ ಅರ್ಥವ್ಯವಸ್ಥೆಯ ಎಲ್ಲ ಕ್ಷೇತ್ರಗಳು ಸಮತೋಲನವಾಗಿ ಅಭಿವೃದ್ಧಿಹೊಂದುವಂತೆ ಕ್ರಮ ಕೈಗೊಳ್ಳುತ್ತದೆ.

ಭಾರತದಂತಹ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಲು ಹಾಗೂ ಆರ್ಥಿಕ ಏರಿಳಿತಗಳನ್ನು, ಬೆಲೆಗಳ ಏರಿಳಿತಗಳನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಹಾಗೂ ನಿಯಂತ್ರಣ ಮಾಡಿ, ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಸಾರ್ವಜನಿಕ ಹಣಕಾಸು ನೀತಿಯನ್ನು ಅಸ್ತ್ರವನ್ನಾಗಿ ಬಳಸಲಾಗುತ್ತಿದೆ.

NOT TO BE REPUBLISHED @KTBS

**ಆಯ-ವ್ಯಯ (ಮುಂಗಡ ಪತ್ರ) :** ಸರ್ಕಾರವು ಪ್ರತಿ ವರ್ಷ ತನ್ನ ಹಣಕಾಸು ವರ್ಷದ ಆಯ-ವ್ಯಯವನ್ನು ಮಂಡಿಸುತ್ತದೆ. ಭಾರತದಲ್ಲಿ ಹಣಕಾಸು ವರ್ಷವು ಆ ವರ್ಷದ ಏಪ್ರಿಲ್ 1 ರಂದು ಪ್ರಾರಂಭವಾಗಿ ಅದರ ಮುಂದಿನ ವರ್ಷದ ಮಾರ್ಚ್ 31 ರಂದು ಮುಕ್ತಾಯವಾಗುತ್ತದೆ. ಸರ್ಕಾರವು ಆಯ-ವ್ಯಯದ ಮೂಲಕ ತನ್ನ ಕೋಶೀಯ ನೀತಿಯ ಉದ್ದೇಶಗಳನ್ನು ಸಾಧಿಸಲು ಪ್ರಯತ್ನಿಸುತ್ತದೆ. ಹಾಗಾದರೆ ಆಯ-ವ್ಯಯ ಎಂದರೇನು?

ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯನ್ನು ಆಯ-ವ್ಯಯ ಪತ್ರ ಅಥವಾ ಮುಂಗಡ ಪತ್ರ ಎಂದು ಕರೆಯುತ್ತಾರೆ. ಇದು ಸರ್ಕಾರದ ಆದಾಯ ಮತ್ತು ವೆಚ್ಚವನ್ನು ತಿಳಿಸುವ ಒಂದು ದಾಖಲೆಯಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮದೇ ಪ್ರತ್ಯೇಕ ಆಯ-ವ್ಯಯವನ್ನು ಮಂಡಿಸುತ್ತವೆ.

ಭಾರತದಲ್ಲಿ ಕೇಂದ್ರ ಸರ್ಕಾರದ ಆಯ-ವ್ಯಯವನ್ನು ಕೇಂದ್ರ ಹಣಕಾಸು ಸಚಿವರು ಹಣಕಾಸು ಇಲಾಖೆಯ ಸಹಕಾರದೊಂದಿಗೆ ತಯಾರಿಸುತ್ತಾರೆ. ಸಾಮಾನ್ಯವಾಗಿ ಹಣಕಾಸು ಸಚಿವರು ಪ್ರತಿವರ್ಷ ಫೆಬ್ರವರಿ ಅಥವಾ ಮಾರ್ಚ್ ತಿಂಗಳ ಅಧಿವೇಶನದಲ್ಲಿ ಲೋಕಸಭೆಯಲ್ಲಿ ಕೇಂದ್ರ ಆಯ-ವ್ಯಯವನ್ನು ಮಂಡಿಸುತ್ತಾರೆ. ಲೋಕಸಭೆ ಮತ್ತು ರಾಜ್ಯಸಭೆಗಳೆರಡರಲ್ಲೂ ಆಯ-ವ್ಯಯ ಪತ್ರದ ಮೇಲೆ ಸುದೀರ್ಘ ಚರ್ಚೆ ನಡೆದು, ಮಾರ್ಚ್ 31 ರ ಒಳಗಾಗಿ ಎರಡೂ ಸದನಗಳ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ.

ಆಯ-ವ್ಯಯ ಪತ್ರದಲ್ಲಿ ಉಳಿತಾಯ ಆಯ-ವ್ಯಯ, ಕೊರತೆಯ ಆಯ-ವ್ಯಯ ಮತ್ತು ಸಮತೋಲನ ಆಯ-ವ್ಯಯ ಹೀಗೆ ಮೂರು ವಿಧಗಳಿವೆ. ಆಯ-ವ್ಯಯ ಪತ್ರದಲ್ಲಿ ಸರ್ಕಾರದ ಆದಾಯವು ಸರ್ಕಾರದ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ, ಅದನ್ನು ಉಳಿತಾಯ ಆಯ-ವ್ಯಯ ಎನ್ನುತ್ತಾರೆ. ಆಯ-ವ್ಯಯ ಪತ್ರದಲ್ಲಿ ಸರ್ಕಾರದ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದನ್ನು ಕೊರತೆಯ ಆಯ-ವ್ಯಯ ಎನ್ನುತ್ತಾರೆ. ಸರ್ಕಾರದ ಆದಾಯ ಮತ್ತು ವೆಚ್ಚವು ಸಮನಾಗಿದ್ದರೆ, ಅದನ್ನು ಸಮತೋಲನ ಆಯ-ವ್ಯಯ ಎನ್ನುತ್ತಾರೆ. ಅಭಿವೃದ್ಧಿಹೊಂದುತ್ತಿರುವ ಭಾರತದಂತಹ ರಾಷ್ಟ್ರಗಳಲ್ಲಿ ಸರ್ಕಾರಗಳು ಕೊರತೆಯ ಆಯ-ವ್ಯಯವನ್ನು ಮಂಡಿಸುವ ಮೂಲಕ ತನ್ನ ವೆಚ್ಚವನ್ನು ಹೆಚ್ಚುಮಾಡಿ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತಿವೆ.

## 2. ಸಾರ್ವಜನಿಕ ವೆಚ್ಚಗಳು (Public Expenditures)

ಸರ್ಕಾರವು ರಾಷ್ಟ್ರ ರಕ್ಷಣೆ, ಆಡಳಿತ ನಿರ್ವಹಣೆ, ಆರ್ಥಿಕ ಅಭಿವೃದ್ಧಿ ಹಾಗೂ ಜನರ ಯೋಗಕ್ಷೇಮದ ದೃಷ್ಠಿಯಿಂದ ವಿವಿಧ ಚಟುವಟಿಕೆಗಳಿಗಾಗಿ ಹಣವನ್ನು ವೆಚ್ಚ ಮಾಡುತ್ತದೆ. ಇದನ್ನು ಸಾರ್ವಜನಿಕ ವೆಚ್ಚ ಎನ್ನುತ್ತಾರೆ. ಅಂದರೆ ಸರ್ಕಾರವು ತನ್ನ ಪ್ರಜೆಗಳ ಹಿತದೃಷ್ಠಿಯಿಂದ ಮಾಡುವ ವೆಚ್ಚವೇ ಸಾರ್ವಜನಿಕ ವೆಚ್ಚ. 20 ನೆಯ ಶತಮಾನದಲ್ಲಿ ಕಲ್ಯಾಣ ರಾಜ್ಯಗಳ ಉದಯದೊಂದಿಗೆ ಆಧುನಿಕ ಸರ್ಕಾರಗಳ ಕಾರ್ಯಕ್ಷೇತ್ರ ಮತ್ತು ಪಾತ್ರ ವಿಸ್ತರಣೆಯಾಗಿದೆ. ಹಾಗಾಗಿ ಸಾರ್ವಜನಿಕ ವೆಚ್ಚವೂ ಹೆಚ್ಚಾಗಿದೆ.

ಭಾರತದಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳು ತಮ್ಮದೇ ಆದ ವೆಚ್ಚಗಳನ್ನು ಹೊಂದಿವೆ. ಕೇಂದ್ರ ಸರ್ಕಾರದ ವೆಚ್ಚದ ಬಾಬ್ತುಗಳನ್ನು ಮುಖ್ಯವಾಗಿ ಎರಡು ಪ್ರಕಾರಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಕಂದಾಯ ವೆಚ್ಚ ಮತ್ತು ಬಂಡವಾಳ ವೆಚ್ಚ.

**I. ಕಂದಾಯ ವೆಚ್ಚ :** ಕೇಂದ್ರ ಸರ್ಕಾರವು ತನ್ನ ಕಂದಾಯ ಆದಾಯದಿಂದ ಮಾಡುವ ವೆಚ್ಚವನ್ನು ಕಂದಾಯ ವೆಚ್ಚ ಎನ್ನುತ್ತಾರೆ. ಈ ವೆಚ್ಚವನ್ನು ವಿವಿಧ ರೀತಿಯ ಆರ್ಥಿಕ ಮತ್ತು ಸಾಮಾಜಿಕ ಸೇವೆಗಳು, ರಾಷ್ಟ್ರರಕ್ಷಣೆ, ಆಡಳಿತ, ಬಡ್ಡಿ ಪಾವತಿ, ರಾಜ್ಯಗಳಿಗೆ ಅನುದಾನ ಮುಂತಾದ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗುತ್ತಿದೆ. ಕಂದಾಯ ವೆಚ್ಚವನ್ನು ಯೋಜನಾ ವೆಚ್ಚ ಮತ್ತು ಯೋಜನೇತರ ವೆಚ್ಚಗಳೆಂದು ಎರಡು ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ.


© KTBS NOT TO BE REPUBLISHED

ಎ) **ಯೋಜನಾ ವೆಚ್ಚ :** ಸರ್ಕಾರವು ವಿವಿಧ ಆರ್ಥಿಕ ಮತ್ತು ಸಾಮಾಜಿಕ ಸೇವೆಗಳು, ರಾಷ್ಟ್ರ ನಿರ್ಮಾಣ ಕಾರ್ಯಗಳು ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಮಾಡುವ ವೆಚ್ಚಗಳನ್ನು ಯೋಜನಾ ವೆಚ್ಚ ಎನ್ನುತ್ತಾರೆ. ಕೇಂದ್ರ ಸರ್ಕಾರವು ಯೋಜನೆಗಳ ಅಡಿಯಲ್ಲಿ ಕೈಗೊಳ್ಳುವ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಮಾಡುವ ವೆಚ್ಚ ಇದಾಗಿದೆ. ಇದಲ್ಲದೆ ಕೇಂದ್ರ ಸರ್ಕಾರವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಹಾಯವನ್ನು ನೀಡುತ್ತದೆ.

ಕೇಂದ್ರ ಯೋಜನಾ ವೆಚ್ಚದ ಅಡಿಯಲ್ಲಿ ಕೇಂದ್ರ ಸರ್ಕಾರವು ಮೂರು ರೀತಿಯ ಸೇವೆಗಳ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ಹಣವನ್ನು ವೆಚ್ಚ ಮಾಡುತ್ತದೆ. ಅವುಗಳೆಂದರೆ,

1. **ಆರ್ಥಿಕ ಸೇವೆಗಳು :** ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳು, ಕೈಗಾರಿಕೆ, ಸಾರಿಗೆ, ಸಂಪರ್ಕ, ಇಂಧನ, ವಿಜ್ಞಾನ ಮತ್ತು ತಂತ್ರಜ್ಞಾನ, ಗ್ರಾಮೀಣಾಭಿವೃದ್ಧಿ ಇತ್ಯಾದಿ.
2. **ಸಾಮಾಜಿಕ ಸೇವೆಗಳು :** ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಕುಟುಂಬ ಕಲ್ಯಾಣ, ಕುಡಿಯುವ ನೀರು ಪೂರೈಕೆ, ಗೃಹ ನಿರ್ಮಾಣ, ಸಾಮಾಜಿಕ ಕಲ್ಯಾಣ ಇತ್ಯಾದಿ.
3. **ಸಾಮಾನ್ಯ ಸೇವೆಗಳು :** ದೇಶದಲ್ಲಿ ಶಾಂತಿ– ಸುವ್ಯವಸ್ಥೆ ಕಾಪಾಡಲು ಮಾಡುವ ವೆಚ್ಚಗಳು.

**ಸಾರ್ವಜನಿಕ ವೆಚ್ಚಗಳು**




@KTBS NOT TO BE REPUBLISHED

ಬಿ) **ಯೋಜನೇತರ ವೆಚ್ಚ :** ಅಭಿವೃದ್ಧಿ ಕಾರ್ಯಗಳನ್ನು ಹೊರತುಪಡಿಸಿ, ಆಡಳಿತ ನಿರ್ವಹಣೆ, ರಾಷ್ಟ್ರರಕ್ಷಣೆ, ಬಡ್ಡಿ ಪಾವತಿ ಮುಂತಾದ ಬಾಬ್ತುಗಳಿಗೆ ಮಾಡಲಾಗುವ ವೆಚ್ಚವನ್ನು ಯೋಜನೇತರ ವೆಚ್ಚ ಎನ್ನುತ್ತೇವೆ. ಪ್ರಮುಖ ಯೋಜನೇತರ ವೆಚ್ಚಗಳೆಂದರೆ, ನಾಗರಿಕ ಆಡಳಿತ ವೆಚ್ಚ, ರಕ್ಷಣಾ ವೆಚ್ಚ, ಬಡ್ಡಿ ಪಾವತಿ ರಾಜ್ಯಗಳಿಗೆ ಯೋಜನೇತರ ಸಹಾಯ, ಸಹಾಯಧನದ ಮೇಲಿನ ವೆಚ್ಚ ಇತ್ಯಾದಿ.


**II. ಬಂಡವಾಳ ವೆಚ್ಚ :** ಕೃಷಿ, ಕೈಗಾರಿಕೆ, ಸಾರಿಗೆ, ವಿದ್ಯುತ್, ನೀರಾವರಿ ಯೋಜನೆಗಳು ಮುಂತಾದ ಕ್ಷೇತ್ರಗಳ ಅಭಿವೃದ್ಧಿಗಾಗಿ ಮತ್ತು ಹೊಸ ಆಸ್ತಿಗಳ ನಿರ್ಮಾಣಕ್ಕಾಗಿ ಸರ್ಕಾರವು ಹೊಸದಾಗಿ ಬಂಡವಾಳ ಹೂಡಲು ಮುಂದಾಗುತ್ತದೆ. ಇಂತಹ ವೆಚ್ಚಕ್ಕೆ ಬಂಡವಾಳ ವೆಚ್ಚ ಎನ್ನುತ್ತಾರೆ. ಸರ್ಕಾರವು ಈ ವೆಚ್ಚವನ್ನು ತನ್ನ ಬಂಡವಾಳ ಆದಾಯದಿಂದ ಭರಿಸುತ್ತದೆ.

ಬಂಡವಾಳ ವೆಚ್ಚದಲ್ಲಿಯೂ ಯೋಜನಾ ವೆಚ್ಚ ಮತ್ತು ಯೋಜನೇತರ ವೆಚ್ಚಗಳೆಂಬ ಎರಡು ವಿಭಾಗಗಳಿವೆ. ಶಾಶ್ವತ ಅಭಿವೃದ್ಧಿಯ ದೃಷ್ಟಿಯಿಂದ ಕೃಷಿ, ಕೈಗಾರಿಕೆ, ಸಾರಿಗೆ, ನೀರಾವರಿ ಯೋಜನೆ ಮುಂತಾದುವುಗಳ ಮೇಲೆ ಮಾಡಲಾಗುವ ವೆಚ್ಚವನ್ನು ಬಂಡವಾಳದ ಯೋಜನಾ ವೆಚ್ಚವೆಂದು ಕರೆಯಲಾಗುತ್ತಿದೆ. ಸರ್ಕಾರದ ಈ ಅಭಿವೃದ್ಧಿ ಯೋಜನೆಗಳಿಂದಾಗಿ ಸಂತ್ರಸ್ತರಾಗುವ ಜನರಿಗೆ ಶಾಶ್ವತ ಪರಿಹಾರಗಳನ್ನು ಕಲ್ಪಿಸಲು ಮಾಡುವ ವೆಚ್ಚವನ್ನು ಯೋಜನೇತರ ಬಂಡವಾಳ ವೆಚ್ಚ ಎಂದು ಕರೆಯಲಾಗುತ್ತದೆ.

ಹೀಗೆ ಸರ್ಕಾರವು ತನ್ನ ಆಡಳಿತ ನಿರ್ವಹಣೆ, ದೇಶದ ಆರ್ಥಿಕ ಅಭಿವೃದ್ಧಿ ಹಾಗೂ ಜನರ ಕಲ್ಯಾಣದ ಉದ್ದೇಶದಿಂದ ಹಣವನ್ನು ವೆಚ್ಚ ಮಾಡುತ್ತದೆ. ಈ ವೆಚ್ಚಗಳಿಗೆ ಅನುಗುಣವಾಗಿ ತನ್ನ ಆದಾಯವನ್ನು ಸಂಗ್ರಹಿಸಲು ಪ್ರಯತ್ನಿಸುತ್ತದೆ.

**2013–14 ರ ಕೇಂದ್ರ ಸರ್ಕಾರದ ಅಂದಾಜು ವೆಚ್ಚದ ಶೇಕಡಾವಾರು ಪ್ರಮಾಣ**

1. ರಾಜ್ಯ & ಕೇಂದ್ರಾಡಳಿತ ಪ್ರದೇಶಗಳಿಗೆ ಯೋಜನೇತರ ನೆರವು– 4 %
2. ರಾಜ್ಯ &ಕೇಂದ್ರಾಡಳಿತ ಪ್ರದೇಶಗಳಿಗೆ ಯೋಜನಾ ನೆರವು– 7 %
3. ರಕ್ಷಣಾ ವೆಚ್ಚ – 10 %
4. ಯೋಜನೇತರ ವೆಚ್ಚ – 11 %
5. ಸಹಾಯ ಧನ – 12 %
6. ರಾಜ್ಯಗಳಿಗೆ ತೆರಿಗೆ ಪಾಲು – 17 %
7. ಬಡ್ಡಿ ಪಾವತಿ – 18 %
8. ಕೇಂದ್ರ ಯೋಜನಾ ವೆಚ್ಚ – 21 %




NOT TO BE REPUBLISHED ©KTBS


## 3. ಸಾರ್ವಜನಿಕ ಆದಾಯ (Public Revenue)

ಸರ್ಕಾರವು ತನ್ನ ವೆಚ್ಚಗಳನ್ನು ಭರಿಸಲು ವಿವಿಧ ಮೂಲಗಳಿಂದ ಹಣವನ್ನು ಸಂಗ್ರಹಿಸುತ್ತದೆ. ಇದನ್ನು ಸಾರ್ವಜನಿಕ ಆದಾಯ ಎನ್ನುತ್ತಾರೆ. ಸರ್ಕಾರಗಳು ಪ್ರಜೆಗಳ ಕಲ್ಯಾಣಕ್ಕಾಗಿ ನಾನಾ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡಲು ಮತ್ತು ಶೀಘ್ರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಮುಂದಾಗಿವೆ. ಇದರಿಂದ ಸರ್ಕಾರಗಳ ಕಾರ್ಯಕ್ಷೇತ್ರ ವಿಸ್ತರಿಸಿದೆ. ಹಾಗಾಗಿ ಸಾರ್ವಜನಿಕ ವೆಚ್ಚ ಹೆಚ್ಚುತ್ತಿದ್ದು, ಅದಕ್ಕೆ ತಕ್ಕಂತೆ ಸಾರ್ವಜನಿಕ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಭಾರತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮದೇ ಆದ ಆದಾಯದ ಮೂಲಗಳನ್ನು ಹೊಂದಿವೆ. ಸದ್ಯದಲ್ಲಿ ಕೇಂದ್ರ ಸರ್ಕಾರದ ಆದಾಯದ ಮೂಲಗಳ ಬಗ್ಗೆ ತಿಳಿಯೋಣ.

ಕೇಂದ್ರ ಸರ್ಕಾರದ ಆದಾಯದ ಮೂಲಗಳನ್ನು ಬಹುಮುಖ್ಯವಾಗಿ ಕಂದಾಯ ಆದಾಯ ಮತ್ತು ಬಂಡವಾಳ ಆದಾಯ ಎಂದು ವಿಂಗಡಿಸಲಾಗಿದೆ.

**ಕಂದಾಯ ಆದಾಯ (Revenue Receipts) :** ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ಆದಾಯವನ್ನು ಕಂದಾಯ ಆದಾಯ ಎಂದು ಕರೆಯುತ್ತಾರೆ. ಇದು ಸರ್ಕಾರದ ವಾಸ್ತವ ಆದಾಯವಾಗಿರುತ್ತದೆ. ಕಂದಾಯ ಆದಾಯವನ್ನು ಮುಖ್ಯವಾಗಿ ಎರಡು ವಿಧಗಳನ್ನಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ : ತೆರಿಗೆ ಆದಾಯ ಮತ್ತು ತೆರಿಗೆಯೇತರ ಆದಾಯ.

**ಸಾರ್ವಜನಿಕ ಆದಾಯದ ಮೂಲಗಳು**




1) **ತೆರಿಗೆ ಆದಾಯ (Tax Revenue) :** ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಕೆಯನ್ನು ತೆರಿಗೆ ಎನ್ನುತ್ತೇವೆ. ಕೇಂದ್ರ ಸರ್ಕಾರವು ಪ್ರಜೆಗಳ ಮೇಲೆ ನಾನಾ ರೀತಿಯ ತೆರಿಗೆಗಳನ್ನು ವಿಧಿಸಿ ಆದಾಯವನ್ನು ಸಂಗ್ರಹಿಸುತ್ತಿದೆ. ತೆರಿಗೆಗಳು ಸರ್ಕಾರದ ಬಹುಮುಖ್ಯ ಆದಾಯದ ಮೂಲಗಳಾಗಿವೆ.

ಸರ್ಕಾರವು ತೆರಿಗೆಗಳನ್ನು ವಿಧಿಸುವಾಗ ಹೆಚ್ಚು ಆದಾಯವುಳ್ಳವರ ಮೇಲೆ ಹೆಚ್ಚಿನ ತೆರಿಗೆಯನ್ನೂ, ಕಡಿಮೆ ಆದಾಯವುಳ್ಳವರ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸುತ್ತಿದೆ. ಬಡವರಿಗೆ ಆದಾಯ ತೆರಿಗೆಯಲ್ಲಿ ವಿನಾಯಿತಿ ನೀಡಿದೆ. ಅದೇ ರೀತಿಯಲ್ಲಿ ಶ್ರೀಮಂತರು ಬಳಸುವ ಸರಕು-ಸೇವೆಗಳ ಮೇಲೆ ಹೆಚ್ಚಿನ ತೆರಿಗೆಯನ್ನೂ ಮತ್ತು ಸಾಮಾನ್ಯ ಜನರು ಬಳಸುವ ಸರಕು-ಸೇವೆಗಳ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸುತ್ತಿದೆ. ಸರ್ಕಾರ ತೆರಿಗೆ ವಿಧಿಸುವಲ್ಲಿ ಅನುಸರಿಸುವ ಈ ನೀತಿಯನ್ನು **ಪ್ರಗತಿಪರ ತೆರಿಗೆ ನೀತಿ** ಎನ್ನುತ್ತಾರೆ.

ಕೇಂದ್ರ ಸರ್ಕಾರ ವಿಧಿಸುವ ತೆರಿಗೆಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. ಅವುಗಳೆಂದರೆ, ಅ) ಪ್ರತ್ಯಕ್ಷ ತೆರಿಗೆಗಳು ಬ) ಪರೋಕ್ಷ ತೆರಿಗೆಗಳು.

**ಅ) ಪ್ರತ್ಯಕ್ಷ ತೆರಿಗೆಗಳು *(Direct Taxes)* :** ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವಂತಿದ್ದರೆ, ಅಂತಹ ತೆರಿಗೆಯನ್ನು ಪ್ರತ್ಯಕ್ಷ ತೆರಿಗೆ ಎನ್ನುತ್ತಾರೆ. ಈ ತೆರಿಗೆಗಳ ಹೊರೆಯನ್ನು ಇತರರಿಗೆ ವರ್ಗಾಯಿಸಲು ಬರುವುದಿಲ್ಲ. ಸಾಮಾನ್ಯವಾಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳು ಗಳಿಸುವ ವರಮಾನ ಮತ್ತು ಸಂಪತ್ತಿನ ಮೇಲೆ ವಿಧಿಸುವ ತೆರಿಗೆಗಳು ಪ್ರತ್ಯಕ್ಷ ತೆರಿಗೆಗಳಾಗಿವೆ. ಪ್ರಮುಖ ಪ್ರತ್ಯಕ್ಷ ತೆರಿಗೆಗಳೆಂದರೆ, ವರಮಾನ ತೆರಿಗೆ, ಕಂಪನಿ ತೆರಿಗೆ, ಸಂಪತ್ತಿನ ತೆರಿಗೆ, ಸ್ಟಾಂಪು ತೆರಿಗೆ ಇತ್ಯಾದಿ.

**ಬ) ಪರೋಕ್ಷ ತೆರಿಗೆಗಳು *(Indirect Taxes)* :** ಸರ್ಕಾರವು ವಿಧಿಸುವ ತೆರಿಗೆಯ ಹೊರೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಿದ್ದರೆ, ಅಂತಹ ತೆರಿಗೆಯನ್ನು ಪರೋಕ್ಷ ತೆರಿಗೆ ಎನ್ನುತ್ತಾರೆ. ಸಾಮಾನ್ಯವಾಗಿ ಪರೋಕ್ಷ ತೆರಿಗೆಯನ್ನು ಸರಕುಗಳು ಮತ್ತು ಸೇವೆಗಳ ಮೇಲೆ ವಿಧಿಸಲಾಗುತ್ತದೆ. ಉದಾ:- ಸರ್ಕಾರವು ಸರಕು-ಸೇವೆಗಳ ಉತ್ಪಾದನೆಯ ಸಂದರ್ಭದಲ್ಲಿ ಉತ್ಪಾದಕನ

© KTBS NOT TO BE REPUBLISHED

ಮೇಲೆ ತೆರಿಗೆಯನ್ನು ವಿಧಿಸುತ್ತದೆ. ಉತ್ಪಾದಕನು ಈ ತೆರಿಗೆಯ ಹೊರೆಯನ್ನು ಮಾರಾಟಗಾರನ ಮೇಲೆ ವರ್ಗಾಯಿಸುತ್ತಾನೆ. ಮಾರಾಟಗಾರನು ಅಂತಿಮವಾಗಿ ತೆರಿಗೆ ಹೊರೆಯನ್ನು ಬಳಕೆದಾರನ ಮೇಲೆ ವರ್ಗಾಯಿಸುತ್ತಾನೆ. ಅಂದರೆ ಸರ್ಕಾರ ಉತ್ಪಾದಕನ ಮೇಲೆ ತೆರಿಗೆ ವಿಧಿಸಿದರೆ, ಅದರ ಹೊರೆ ಹೊರುವವನು ಬಳಕೆದಾರನಾಗಿರುತ್ತಾನೆ. ಕೇಂದ್ರ ಸರ್ಕಾರ ವಿಧಿಸುವ ಪ್ರಮುಖ ಪರೋಕ್ಷ ತೆರಿಗೆಗಳೆಂದರೆ, ಕೇಂದ್ರ ಅಬಕಾರಿ ತೆರಿಗೆ, ಆಮದು-ರಫ್ತು ಸುಂಕಗಳು, ಸೇವಾ ತೆರಿಗೆ, ವಿದೇಶೀ ಪ್ರವಾಸಿಗರ ಮೇಲಿನ ತೆರಿಗೆ ಇತ್ಯಾದಿ.

ಹೀಗೆ ಕೇಂದ್ರ ಸರ್ಕಾರವು ಹಲವು ರೀತಿಯ ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳನ್ನು ವಿಧಿಸಿ ತನ್ನ ಆದಾಯವನ್ನು ಸಂಗ್ರಹಿಸುತ್ತದೆ. ತೆರಿಗೆಗಳ ಮೂಲಕ ಸರ್ಕಾರವು ಹೆಚ್ಚಿನ ಆದಾಯವನ್ನು ಸಂಗ್ರಹಿಸಲು ಬಯಸುತ್ತದೆ.

**2) ತೆರಿಗೆಯೇತರ ಆದಾಯ (Non-Tax Revenue) :** ಸರ್ಕಾರವು ತೆರಿಗೆಗಳನ್ನು ಹೊರತುಪಡಿಸಿ ಇತರೆ ಮೂಲಗಳಿಂದಲೂ ಆದಾಯವನ್ನು ಸಂಗ್ರಹಿಸುತ್ತದೆ. ಇದಕ್ಕೆ ತೆರಿಗೆಯೇತರ ಆದಾಯ ಎನ್ನುತ್ತಾರೆ. ಕೇಂದ್ರ ಸರ್ಕಾರ ಸಂಗ್ರಹಿಸುವ ಪ್ರಮುಖ ತೆರಿಗೆಯೇತರ ಆದಾಯಗಳೆಂದರೆ,

1. ಭಾರತೀಯ ರಿಸರ್ವ್ ಬ್ಯಾಂಕು ಗಳಿಸುವ ನಿವ್ವಳ ಲಾಭ.
2. ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ.
3. ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಆದಾಯ.
4. ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ.
5. ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ
6. ವಿವಿಧ ರೀತಿಯ ಶುಲ್ಕಗಳು, ದಂಡಗಳು ಇತ್ಯಾದಿ.

**ಬಂಡವಾಳ ಆದಾಯ (Capital Receipts) :**

ಸರ್ಕಾರವು ಅರ್ಥವ್ಯವಸ್ಥೆಯ ವಿವಿಧ ಕ್ಷೇತ್ರಗಳ ಅಭಿವೃದ್ಧಿ ಹಾಗೂ ಹೊಸ ಆಸ್ತಿಗಳನ್ನು ನಿರ್ಮಾಣ ಮಾಡುವ ದೃಷ್ಟಿಯಿಂದ, ಹೊಸದಾಗಿ ಬಂಡವಾಳ ಹೂಡುವ ಸಲುವಾಗಿ ಸಂಗ್ರಹಿಸುವ ಆದಾಯವನ್ನು ಬಂಡವಾಳ ಆದಾಯ ಎನ್ನುತ್ತಾರೆ. ಕೃಷಿ, ಕೈಗಾರಿಕೆ, ನೀರಾವರಿ, ವಿದ್ಯುತ್, ಮೂಲಸೌಲಭ್ಯಗಳು ಮುಂತಾದುವುಗಳ ಅಭಿವೃದ್ಧಿಗಾಗಿ ಬಳಸಲು ಈ ಆದಾಯವನ್ನು ಸಂಗ್ರಹಿಸಲಾಗುತ್ತದೆ.

ಸರ್ಕಾರವು ಬಂಡವಾಳ ಆದಾಯವನ್ನು ಬಹುಮುಖ್ಯವಾಗಿ ಆಂತರಿಕ ಹಾಗೂ ವಿದೇಶಿ ಮೂಲಗಳಿಂದ ಸಾಲ ಎತ್ತುವ ಮೂಲಕ ಸಂಗ್ರಹಿಸುತ್ತದೆ. ದೇಶದಲ್ಲಿರುವ ಪ್ರಜೆಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಉದ್ಯಮ ಸಂಸ್ಥೆಗಳು ಮುಂತಾದುವುಗಳಿಂದ ಸಂಗ್ರಹಿಸುವ ಸಾಲವನ್ನು ಆಂತರಿಕ ಸಾಲ ಎನ್ನುತ್ತಾರೆ. ವಿದೇಶಿ ಸರ್ಕಾರಗಳು, ವಿದೇಶಿ ಹಣಕಾಸು ಸಂಸ್ಥೆಗಳು ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲವನ್ನು ವಿದೇಶಿ ಸಾಲ ಎನ್ನುತ್ತಾರೆ.

ಸರ್ಕಾರವು ಸಾಲವಲ್ಲದೆ ಇತರೆ ಮೂಲಗಳಿಂದಲೂ ಬಂಡವಾಳ ಆದಾಯವನ್ನು ಸಂಗ್ರಹಿಸುತ್ತದೆ. ಅದು ಸಾರ್ವಜನಿಕ ಉದ್ಯಮಗಳಲ್ಲಿ ಹೂಡಿರುವ ತನ್ನ ಬಂಡವಾಳವನ್ನು ಹಿಂದಕ್ಕೆ ಪಡೆಯುತ್ತದೆ. ಇದಕ್ಕೆ ಹೂಡಿಕೆ ಹಿಂತೆಗೆತ ಎನ್ನುತ್ತಾರೆ. ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದಿಂದ ಪಡೆದಿರುವ ಸಾಲ


NOT TO BE REPUBLISHED ©KTBS

ಮತ್ತು ಹಣಕಾಸಿನ ನೆರವನ್ನು ಕಾಲಕಾಲಕ್ಕೆ ಮರುಪಾವತಿ ಮಾಡುತ್ತವೆ. ಹೀಗೆ ಹೂಡಿಕೆ ಹಿಂತೆಗೆತ ಮತ್ತು ಸಾಲ ಮರುಪಾವತಿಯಿಂದ ಸಂಗ್ರಹವಾಗುವ ಹಣವನ್ನು ಸಾಲೇತರ ಬಂಡವಾಳ ಆದಾಯ ಎನ್ನುತ್ತಾರೆ.

ಹೀಗೆ ಕೇಂದ್ರ ಸರ್ಕಾರವು ವಿವಿಧ ಮೂಲಗಳಿಂದ ಆದಾಯವನ್ನು ಸಂಗ್ರಹಿಸುತ್ತದೆ. ಆ ಮೂಲಕ ಸರ್ಕಾರದ ಆಡಳಿತ ನಿರ್ವಹಣೆ ಹಾಗೂ ಅರ್ಥವ್ಯವಸ್ಥೆಯ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಅಗತ್ಯವಿರುವ ಹಣ ಒದಗಿಸಲು ಪ್ರಯತ್ನಿಸುತ್ತದೆ.

**2013–14 ರ ಕೇಂದ್ರ ಸರ್ಕಾರದ ಅಂದಾಜು ಆದಾಯದ ಶೇಕಡಾವಾರು ಪ್ರಮಾಣ**

1. ಸಾಲೇತರ ಬಂಡವಾಳ ಆದಾಯ – 3%
2. ಸೇವಾತೆರಿಗೆ & ಇತರೆ ತೆರಿಗೆಗಳು – 9%
3. ತೆರಿಗೆಯೇತರ ಆದಾಯ – 9%
4. ಆಮದು–ರಫ್ತು ತೆರಿಗೆ – 9%
5. ಕೇಂದ್ರ ಅಬಕಾರಿ ತೆರಿಗೆ – 10%
6. ವರಮಾನ ತೆರಿಗೆ – 12%
7. ಕಂಪನಿ ತೆರಿಗೆ – 21%
8. ಸಾಲ ಮತ್ತಿತರ ಹೊಣೆಗಾರಿಕೆಗಳು – 27%




### 4. ಕೊರತೆಯ ಹಣಕಾಸು (Deficit Financing) :

ಸರ್ಕಾರವು ಮೊದಲು ತನ್ನ ವೆಚ್ಚವನ್ನು ಅಂದಾಜು ಮಾಡಿ, ಅದಕ್ಕೆ ತಕ್ಕಂತೆ ಆದಾಯವನ್ನು ಹೊಂದಿಸುತ್ತದೆ. ಹೀಗೆ ಮಾಡುವಾಗ ಸಾಮಾನ್ಯವಾಗಿ ತನ್ನ ಆದಾಯಕ್ಕಿಂತ ಹೆಚ್ಚಿನ ವೆಚ್ಚವನ್ನು ಮಾಡುತ್ತದೆ. ಇದು ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಉತ್ತಮವಾದುದು. ಸರ್ಕಾರವು ತನ್ನ ಆದಾಯ ಮತ್ತು ವೆಚ್ಚದ ನಡುವಿನ ಅಂತರವನ್ನು ಭಾರತೀಯ ರಿಜ಼ರ್ವ್ ಬ್ಯಾಂಕಿನಲ್ಲಿ ತಾನು ಹೊಂದಿರುವ ನಗದು ಸಂಗ್ರಹವನ್ನು ಹಿಂಪಡೆಯುವುದು, ಆಂತರಿಕ ಮತ್ತು ವಿದೇಶಿ ಮೂಲಗಳಿಂದ ಸಾಲ ಸಂಗ್ರಹಿಸುವುದು, ಭಾರತೀಯ ರಿಜ಼ರ್ವ್ ಬ್ಯಾಂಕಿನಿಂದ ಸಾಲ ಪಡೆಯುವುದು ಮುಂತಾದ ಕ್ರಮಗಳ ಮೂಲಕ ತುಂಬಿಕೊಳ್ಳುತ್ತದೆ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಸರ್ಕಾರದ ಆದಾಯಕ್ಕಿಂತ ಅದರ ವೆಚ್ಚಗಳು ಬಹಳವಾಗಿ ಹೆಚ್ಚುತ್ತಿವೆ. ಇದರಿಂದ ಕೊರತೆಯ ಹಣಕಾಸಿನ ಸನ್ನಿವೇಶಗಳು ಉದ್ಭವವಾಗುತ್ತಿವೆ. ಭಾರತ ಯೋಜನಾ ಆಯೋಗದ ವ್ಯಾಖ್ಯಾನದ ಪ್ರಕಾರ ಕೊರತೆಯ ಹಣಕಾಸು ಎಂದರೆ ಸರ್ಕಾರದ ಆಯ–ವ್ಯಯ ಪತ್ರದ ಕಾರ್ಯಾಚರಣೆ ಮೂಲಕ ಅರ್ಥವ್ಯವಸ್ಥೆಯ ನಿವ್ವಳ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಸರ್ಕಾರವು ತನ್ನ ಆದಾಯಕ್ಕಿಂತಲೂ ವೆಚ್ಚವನ್ನು ಹೆಚ್ಚು ಮಾಡುವುದನ್ನು ಕೊರತೆಯ ಹಣಕಾಸು ಎನ್ನುತ್ತಾರೆ. ಕೊರತೆಯ ಹಣಕಾಸಿನ ಪರಿಣಾಮವಾಗಿ ದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳು ಹೆಚ್ಚಾಗಿ, ಹಣದ ಚಲಾವಣಾ ಪ್ರಮಾಣ ಹೆಚ್ಚುತ್ತದೆ. ಇದರಿಂದ ಜನರ ಕೊಳ್ಳುವ ಶಕ್ತಿ ಹೆಚ್ಚಾಗುತ್ತದೆ. ಕೊರತೆಯನ್ನು ಋಣ(–) ಚಿಹ್ನೆಯಲ್ಲಿ ಗುರುತಿಸಲಾಗುತ್ತದೆ.

@KTBS NOT TO BE REPUBLISHED

ಕೊರತೆಯ ಹಣಕಾಸಿನಲ್ಲಿ ವಿತ್ತೀಯ ಕೊರತೆ, ಆಯವ್ಯಯ ಕೊರತೆ, ಕಂದಾಯ ಕೊರತೆ ಮತ್ತು ಪ್ರಾಥಮಿಕ ಕೊರತೆ ಎಂಬ ನಾಲ್ಕು ವಿಧಗಳನ್ನು ಗುರುತಿಸಲಾಗುತ್ತಿದೆ.

**ವಿತ್ತೀಯ ಕೊರತೆ (Fiscal Deficit) :** ಆಯವ್ಯಯದಲ್ಲಿ ಸರ್ಕಾರದ ಕಂದಾಯ ಆದಾಯ ಮತ್ತು ಸಾಲೇತರ ಬಂಡವಾಳ ಆದಾಯಗಳಿಗಿಂತ ಸರ್ಕಾರದ ಒಟ್ಟು ವೆಚ್ಚ ಹೆಚ್ಚಾಗಿದ್ದರೆ, ಅದನ್ನು ವಿತ್ತೀಯ ಕೊರತೆ ಎನ್ನುತ್ತಾರೆ. ಇಲ್ಲಿ ಸಾಲೇತರ ಬಂಡವಾಳ ಆದಾಯವೆಂದರೆ, ಸರ್ಕಾರ ನೀಡಿದ್ದ ಸಾಲ ಮರುಪಾವತಿ ಹಾಗೂ ಹೂಡಿಕೆ ಹಿಂತೆಗೆತದ ಮೂಲಕ ಸಂಗ್ರಹಿಸುವ ಆದಾಯವಾಗಿದೆ. ಸರ್ಕಾರದ ಒಟ್ಟು ವೆಚ್ಚವು ಅದರ ಕಂದಾಯ ವೆಚ್ಚ ಮತ್ತು ಬಂಡವಾಳ ವೆಚ್ಚವನ್ನು ಒಳಗೊಂಡಿದೆ. ವಿತ್ತೀಯ ಕೊರತೆಯು ಸರ್ಕಾರದ ಖಜಾನೆ ಮೇಲೆ ಬೀಳುವ ವಾಸ್ತವಿಕ ಹೊರೆಯನ್ನು ತಿಳಿಸುತ್ತದೆ. ಅಂದರೆ ಸರ್ಕಾರವು ಆಂತರಿಕ ಮತ್ತು ವಿದೇಶಿ ಮೂಲಗಳಿಂದ ಎಷ್ಟು ಸಾಲ ಸಂಗ್ರಹಿಸಬೇಕಾಗುತ್ತದೆ ಎಂಬುದನ್ನು ತಿಳಿಸುತ್ತದೆ. ಸಾಲ ಸಂಗ್ರಹದ ಮೂಲಕ ವಿತ್ತೀಯ ಕೊರತೆಯನ್ನು ತುಂಬಲು ಸಾಧ್ಯವಾಗದಿದ್ದಾಗ, ಭಾರತೀಯ ರಿಜ಼ರ್ವ್ ಬ್ಯಾಂಕು ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುವ ಮೂಲಕ ಸರ್ಕಾರಕ್ಕೆ ಸಾಲ ನೀಡುತ್ತದೆ. ವಿತ್ತೀಯ ಕೊರತೆಯನ್ನು ಸೂತ್ರ ರೂಪದಲ್ಲಿ ಹೀಗೆ ವ್ಯಕ್ತಪಡಿಸಬಹುದು.

ವಿತ್ತೀಯ ಕೊರತೆ = (ಕಂದಾಯ ಆದಾಯ + ಸಾಲೇತರ ಬಂಡವಾಳ ಆದಾಯ) – ಒಟ್ಟು ವೆಚ್ಚ

**ಆಯವ್ಯಯದ ಇತರೆ ಕೊರತೆಗಳು**

* ಆಯ–ವ್ಯಯ ಕೊರತೆ = ಒಟ್ಟು ಆದಾಯ – ಒಟ್ಟು ವೆಚ್ಚ
* ಕಂದಾಯ ಕೊರತೆ = ಕಂದಾಯ ಆದಾಯ – ಕಂದಾಯ ವೆಚ್ಚ
* ಪ್ರಾಥಮಿಕ ಕೊರತೆ = ವಿತ್ತೀಯ ಕೊರತೆ – ಬಡ್ಡಿಪಾವತಿ

**ಅಭ್ಯಾಸಗಳು**

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಸರ್ಕಾರವು ಸಾರ್ವಜನಿಕ ಹಣಕಾಸನ್ನು ________ ಮೂಲಕ ನಿರ್ವಹಿಸುತ್ತದೆ.
2. ಆಯ–ವ್ಯಯದಲ್ಲಿ ಸರ್ಕಾರದ ಆದಾಯವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದನ್ನು ________ ಎಂದು ಕರೆಯುತ್ತಾರೆ.
3. ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕ ಸಭೆಯಲ್ಲಿ ಮಂಡಿಸುವವರು ________
4. ಸರ್ಕಾರವು ಆಂತರಿಕ ಹಾಗೂ ವಿದೇಶಿ ಸಾಲಗಳ ಮೂಲಕ ಸಂಗ್ರಹಿಸುವ ಆದಾಯವನ್ನು ________ ಎನ್ನುತ್ತಾರೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಸಾರ್ವಜನಿಕ ಹಣಕಾಸಿನ ಅರ್ಥ ತಿಳಿಸಿ.
2. ಆಯವ್ಯಯ ಎಂದರೇನು?
3. ಕೊರತೆಯ ಆಯ–ವ್ಯಯದ ಅರ್ಥ ಬರೆಯಿರಿ.

NOT TO BE REPUBLISHED © KTBS

4. ಪ್ರತ್ಯಕ್ಷ ತೆರಿಗೆ ಎಂದರೇನು?

5. ವಿತ್ತೀಯ ಕೊರತೆಯನ್ನು ಸೂತ್ರ ರೂಪದಲ್ಲಿ ಬರೆಯಿರಿ.

**III. ಮುಂದಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

1. ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸು ನಡುವಿನ ಭಿನ್ನತೆಗಳನ್ನು ಗುರುತಿಸಿ.
2. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಕೇಂದ್ರ ಸರ್ಕಾರದ ಯೋಜನಾ ವೆಚ್ಚಗಳನ್ನು ಪಟ್ಟಿಮಾಡಿರಿ.
4. ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳನ್ನು ತಿಳಿಸಿ.
5. ಕೊರತೆಯ ಹಣಕಾಸು ಎಂದರೇನು? ಅದರ ನಾಲ್ಕು ವಿಧಗಳನ್ನು ತಿಳಿಸಿ.

**IV. ಚಟುವಟಿಕೆಗಳು**

1. ನಿಮ್ಮ ಹತ್ತಿರದ ಗ್ರಾಮಪಂಚಾಯ್ತಿ ಅಥವಾ ತಾಲ್ಲೂಕು ಪಂಚಾಯ್ತಿಗೆ ಭೇಟಿ ನೀಡಿ, ಅಲ್ಲಿನ ಆಯ-ವ್ಯಯದ ಬಗ್ಗೆ ಮಾಹಿತಿ ಸಂಗ್ರಹಿಸಿ.
2. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆಯವ್ಯಯ ಮಂಡನೆಯನ್ನು ದೂರದರ್ಶನದ ಮೂಲಕ ವೀಕ್ಷಿಸಿ. ಆ ಬಗ್ಗೆ ತರಗತಿಯಲ್ಲಿ ಚರ್ಚಿಸಿ.
3. ಆಯ-ವ್ಯಯ ಮಂಡನೆಯಾದ ಮರುದಿನ ದಿನಪತ್ರಿಕೆಯಲ್ಲಿ ಬರುವ ವರದಿಗಳನ್ನು ಸಂಗ್ರಹಿಸಿ. ತರಗತಿಯಲ್ಲಿ ಪ್ರದರ್ಶಿಸಿ.

**V. ಯೋಜನೆ**

1. ನಿಮ್ಮ ಕುಟುಂಬದ ಹಿರಿಯರೊಂದಿಗೆ ಚರ್ಚಿಸಿ ಕುಟುಂಬದ ಆದಾಯದ ಮೂಲಗಳು ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ಅಂದಾಜು ಆಯ-ವ್ಯಯವನ್ನು ಸಿದ್ಧಪಡಿಸಿ.

© KTBS NOT TO BE REPUBLISHED

ವ್ಯವಹಾರ ಅಧ್ಯಯನ

ಅಧ್ಯಾಯ – 32

# ಉದ್ಯಮಶೀಲತೆ

G2Y8P6

**ಈ ಅಧ್ಯಾಯದಲ್ಲಿ ಈ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಉದ್ಯಮಶೀಲತೆಯ ಅರ್ಥ
- ಉದ್ಯಮಶೀಲತೆಯ ಪಾತ್ರ ಮತ್ತು ಪ್ರಾಮುಖ್ಯತೆ.
- ಸ್ವಯಂ ಉದ್ಯೋಗ ಅವಕಾಶಗಳು.
- ಸ್ವಯಂ ಉದ್ಯೋಗದ ವ್ಯವಸ್ಥೆ.

ಇಂದಿನ ಆರ್ಥಿಕ ಮಾರುಕಟ್ಟೆಯ ಮುಂಚೂಣಿಯಲ್ಲಿ ಉದ್ಯಮಶೀಲತೆ ಪ್ರಮುಖಪಾತ್ರ ವಹಿಸುತ್ತದೆ. ಇದು ಪ್ರಮುಖ ಆರ್ಥಿಕ ಚಟುವಟಿಕೆಗಳಾದ ಭೂಮಿ, ದುಡಿಮೆ, ಬಂಡವಾಳ ಮತ್ತು ಸಂಘಟನೆಗಳಲ್ಲಿ ಒಂದಾಗಿದೆ. ಒಂದು ದೇಶದ ವ್ಯಾಪಾರ ಪರಿಸ್ಥಿತಿ ಮತ್ತು ಕೈಗಾರಿಕಾ ಕ್ಷೇತ್ರದ ಬದಲಾವಣೆಗಳಲ್ಲಿ ಪ್ರಬಲವಾದ ಅಂಶವಾಗಿದೆ.

## ಉದ್ಯಮಿಯ ಅರ್ಥ :

ಉದ್ಯಮಿ, ಎಂಬ ಪದವು ಫ್ರೆಂಚ್ ಪದ "ಎಂಟ್ರಪ್ರೆಂಡೆ"ಯಿಂದ ಬಂದಿದೆ. ಅಂದರೆ ಒಂದು ಚಟುವಟಿಕೆಯನ್ನು ಕೈಗೆತ್ತಿಕೊಳ್ಳುವವ ಎಂದಾಗಿದೆ. ಉದ್ಯಮಿಯು ಹೊಸ ಕಲ್ಪನೆಯನ್ನು ವ್ಯವಹಾರದಲ್ಲಿ ರೂಢಿಗೆ ತರುವವನಾಗಿದ್ದು, ಇವನಲ್ಲಿ ವ್ಯವಹಾರ ನಿರ್ವಹಿಸಲು ಆಡಳಿತ ನಿರ್ವಹಣೆಯ ಕೌಶಲ್ಯ ಮತ್ತು ತಂಡವನ್ನು ನಿರ್ಮಿಸುವ ಸಾಮರ್ಥ್ಯ ಮತ್ತು ಮುಂದಾಳತ್ವದ ಗುಣಗಳು ಇರುತ್ತವೆ. (ಉದ್ಯಮಿಯನ್ನು ಉದ್ಯಮ ಶೀಲ ಅಥವಾ ಉದ್ದಿಮೆಗಾರ ಎಂದೂ ಕರೆಯುತ್ತಾರೆ).

ಉದ್ಯಮಿಯು ಯಾವುದಾದರೂ ಒಂದು ಪ್ರತಿಫಲ ಕೊಡುವ ಉದ್ದಿಮೆಯನ್ನು ಸ್ಥಾಪಿಸುವ ಅವಕಾಶಕ್ಕೆ ಕೈ ಹಾಕುತ್ತಾನೆ. ವ್ಯವಹಾರದ ವಿಧಾನದಲ್ಲಿ ಯಾವುದನ್ನು ಹೇಗೆ ಮತ್ತು ಎಷ್ಟು ಉತ್ತಮ ಎಂಬುದನ್ನು ಗಣನೆಗೆ ತೆಗೆದುಕೊಂಡು ಒಂದು ಉದ್ಯಮವನ್ನು ಪ್ರಾರಂಭಿಸುತ್ತಾನೆ ಹಾಗೂ ಪ್ರತಿಸ್ಪಂದನೆ ನಿರ್ಣಯಿಸುತ್ತಾನೆ. ಉದ್ಯಮಿಗಳು ಹೊಸ ವಸ್ತುಗಳ ಬಗ್ಗೆ ಊಹೆಮಾಡಿಕೊಂಡು ಅವುಗಳ ಮಾರುಕಟ್ಟೆ ಮತ್ತು ತಾಂತ್ರಿಕತೆಗಳ ಮತ್ತು ಬದಲಾವಣೆಗಳ ಬಗ್ಗೆ ಕಲ್ಪನೆ ಮಾಡಿಕೊಳ್ಳುತ್ತಾರೆ. ಒಟ್ಟಾರೆ ಹೇಳುವುದಾದರೆ ಉದ್ಯಮಿಯು ಅವಕಾಶಗಳನ್ನು ಅವಲೋಕಿಸಿ ಆ ಅವಕಾಶಗಳನ್ನು ಸ್ವಪ್ರಯೋಜನಗಳಿಗಾಗಿ ಉಪಯೋಗಿಸಿಕೊಂಡು ಅವುಗಳನ್ನು ಸದಾವಕಾಶಗಳಿಂದ ಕ್ರಮವಾಗಿ ಸಂಘಟನೆ ಮಾಡುತ್ತಾನೆ. ಗಣಕಯಂತ್ರಗಳು, ಮೊಬೈಲ್ ದೂರವಾಣಿಗಳು, ಬಟ್ಟೆ ಒಗೆಯುವ ಯಂತ್ರಗಳು. ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡುಗಳು, ಕೊರಿಯರ್ ಸೇವೆ ಮತ್ತು ತತ್‌ಕ್ಷಣದಲ್ಲಿ ತಯಾರಿಸಬಹುದಾದ ಆಹಾರ ಪದಾರ್ಥಗಳು ಉದ್ಯಮಿಗಳ ಕಲ್ಪನೆಗಳಲ್ಲಿ ರೂಢಿಗೆ ಬಂದಿರುವುದಕ್ಕೆ ಉದಾಹರಣೆಗಳಾಗಿವೆ.

## ಉದ್ಯಮಶೀಲತೆ (Entrepreneurship) :

ಒಬ್ಬ ಉದ್ಯಮಿಯು ತನ್ನ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು ಉದ್ಯಮಶೀಲತೆ ಎನ್ನುತ್ತೇವೆ. (ಉದ್ಯಮ ಶೀಲತೆ ಎಂದೂ ಕರೆಯುವುದು ರೂಢಿಯಲ್ಲಿದೆ) ಉದ್ಯಮಶೀಲತೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ. ಇದು ಏನೂ ಇಲ್ಲದುದನ್ನು ಏನಾದರೊಂದಾಗಿ ಸೃಜಿಸುವ ಸಾಮರ್ಥ್ಯವಾಗಿದೆ. ಇದು ಬೇರೆಯವರಿಂದ ಕಷ್ಟಸಾಧ್ಯವಾದ ಗೊಂದಲಮಯ, ವಿರೋಧಾತ್ಮಕ

©KTBS NOT TO BE REPUBLISHED

ಮತ್ತು ಅಸ್ತವ್ಯಸ್ತತೆಯಿಂದ ಕೂಡಿದ ಒಂದು ಅವಕಾಶವನ್ನು ಗುರ್ತಿಸಿ ಅದನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ. ಉದ್ಯಮಶೀಲತೆಯು ಅವಕಾಶಗಳನ್ನು ಅನ್ವೇಷಿಸಿ ಅಥವಾ ಹುಡುಕಿ, ನಷ್ಟಗಳನ್ನು ಲೆಕ್ಕಾಚಾರ ಹಾಕಿ ಅದರಿಂದ ಲಾಭಪಡೆಯಲು ಒಂದು ಸಾಹಸಕಾರ್ಯವನ್ನು ಸ್ಥಾಪಿಸುವುದೇ ಆಗಿದೆ. ಉದ್ಯಮಶೀಲತೆ ಒಂದು ಕಾರ್ಯವಿಧಾನವಾಗಿದೆ. ಇದು ಕೆಲವು ಅಪರೂಪದ ಸಂಘಟನೆಗಳ ಸಂಯೋಜನೆಯಲ್ಲಿ ಉದ್ದೇಶ ಹೊಂದಿರುವ ಮತ್ತು ಸಂಘಟಿತವಾದ ಬದಲಾವಣೆಗಳಿಗಾಗಿ ಒಂದು ಅನ್ವೇಷಣೆಯನ್ನು ಕ್ರಮಬದ್ಧವಾದ ಪರಿಸರದಲ್ಲಿ ವಿಶ್ಲೇಷಿಸುವ ಕಾರ್ಯವಾಗಿದೆ. ಇದು ಒಂದು ತತ್ವಜ್ಞಾನವಾಗಿದೆ. ಇದು ಒಬ್ಬ ಮನುಷ್ಯನು ಯೋಜಿಸುವ ಮತ್ತು ಪ್ರವೃತ್ತಿಸುವ ಕಾರ್ಯವಾಗಿದ್ದು, ವ್ಯಾಪಾರ ಸಂಸ್ಥೆಯಲ್ಲಾಗಲಿ, ಸರ್ಕಾರದಲ್ಲಾಗಲಿ, ವಿದ್ಯಾಭ್ಯಾಸ ಕ್ಷೇತ್ರದಲ್ಲಾಗಲಿ ವಿಜ್ಞಾನ ಮತ್ತು ತಾಂತ್ರಿಕತೆಯಲ್ಲಾಗಲಿ, ಬಡತನ ನಿವಾರಣೆಯಲ್ಲಾಗಲೀ ಅಥವಾ ಯಾವುದೇ ಇತರೆ ಕೆಲಸಗಳಲ್ಲಾಗಲಿ ಕಂಡು ಬರುತ್ತದೆ.

**ಉದ್ಯಮಶೀಲತೆಯ ಗುಣಲಕ್ಷಣಗಳು :**

- ಸೃಜನಾತ್ಮಕ
- ಕ್ರಿಯಾತ್ಮಕ
- ಗುಂಪುಕಟ್ಟುವುದು.
- ಸಮಸ್ಯೆಯ ಪರಿಹಾರ
- ನಷ್ಟಭರಿತಕ್ಕೆ ಸಿದ್ಧ
- ವಚನಬದ್ಧತೆ.
- ಹೊಸ ಪದ್ಧತಿಯನ್ನು ರೂಢಿಸಿತರುವುದು.
- ನಾಯಕತ್ವ
- ಪ್ರಚೋದನೆಯ ಸಾಧನೆ
- ಗುರಿಮುಟ್ಟುವಿಕೆ
- ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು.

**ಉದ್ಯಮಿಯ ಕಾರ್ಯಗಳು (Functions of an entrepreneur) :**

ಉದ್ಯಮಿಯು ಅವಕಾಶಗಳನ್ನು ಅವಲೋಕಿಸಿ, ಯೋಜನೆ ಮಾಡಿ, ಸಂಪನ್ಮೂಲಗಳನ್ನು ಸಂಘಟಿಸಿ, ಉತ್ಪಾದನೆ, ಮಾರುಕಟ್ಟೆ ಮತ್ತು ಇತರೆ ಅಧಿಕಾರಿಗಳ ಜೊತೆ ಸಂಪರ್ಕ ಇಟ್ಟುಕೊಳ್ಳಬೇಕಾಗುತ್ತದೆ. ಅತ್ಯಂತ ಮುಖ್ಯವಾಗಿ ಮಾರ್ಪಾಡುಗಳನ್ನು ಮಾಡಿ ನಷ್ಟಗಳಾದಾಗ ಎದುರಿಸಬೇಕಾಗುತ್ತದೆ. ಉದ್ಯಮಿಯ ಮುಖ್ಯಕಾರ್ಯಗಳಾವುವೆಂದರೆ :

- ಉದ್ಯಮಿಯು ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುತ್ತಾನೆ.
- ಉದ್ಯಮಿಯು ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ.
- ಉದ್ಯಮಗಾರನು ಉತ್ಪಾದಿಸುವ ವಸ್ತುಗಳ ಬಗ್ಗೆ, ತಾಂತ್ರಿಕತೆ ಬಗ್ಗೆ, ಮಾರುಕಟ್ಟೆ ಮತ್ತು ಉದ್ಯೋಗ ಮುಂತಾದವುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ.
- ಉದ್ಯಮಿಯು ಎಲ್ಲ ಅಂಶಗಳನ್ನು ಸಮಂಜಸವಾಗಿ ಸಂಯೋಜಿಸುತ್ತಾನೆ.
- ಉದ್ಯಮಿಯು ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
- ಉದ್ಯಮಿಯು ತನ್ನ ಉದ್ಯಮದ ಹಣಕಾಸಿನ ಆಯವ್ಯಯವನ್ನು ನಿಭಾಯಿಸುತ್ತಾನೆ.
- ಉದ್ಯಮಿಯು ಕಷ್ಟನಷ್ಟಗಳನ್ನು ಮತ್ತು ಅನಿಶ್ಚಿತತೆ ಎದುರಿಸುತ್ತಾನೆ.
- ಉದ್ಯಮಿಯು ವ್ಯಾಪಾರದ ಮಾರ್ಗಗಳನ್ನು ತಿಳಿಸಿ ಅದು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳ್ಳುವಂತೆ ಮಾರ್ಗದರ್ಶನ ನೀಡುತ್ತಾನೆ.

NOT TO BE REPUBLISHED @KTBS

## ಉದ್ಯಮಿಯ ಪಾತ್ರ ಮತ್ತು ಪ್ರಾಮುಖ್ಯತೆ :

**ಉದ್ಯಮಿಯ ಪಾತ್ರ :** ಉದ್ಯಮಿಗಳು ವ್ಯಾಪಾರದ ಧುರೀಣರಾಗಿದ್ದು ವಿವಿಧ ಅನಿಸಿಕೆಗಳನ್ನು ಗಮನಿಸಿ ಅವುಗಳನ್ನು ಕಾರ್ಯ ರೂಪಕ್ಕೆ ತಂದು ಆರ್ಥಿಕಪ್ರಗತಿ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳುತ್ತಾರೆ. ಭಾರತದ ಆರ್ಥಿಕ ಪ್ರಗತಿಯಲ್ಲಿ ಉದ್ಯಮಿಗಳ ಪಾತ್ರ ಬಹುಮುಖ್ಯವಾಗಿದೆ. ಇವರು ಕೈಗಾರಿಕಾ ಕ್ಷೇತ್ರದ ಪರಿವರ್ತನೆಯೇ ಅಲ್ಲದೆ ವ್ಯವಸಾಯ ಮತ್ತು ಸೇವಾಕ್ಷೇತ್ರಗಳ ಅಭಿವೃದ್ಧಿಯಲ್ಲೂ ಮುಖ್ಯ ಪಾತ್ರ ವಹಿಸುತ್ತಾರೆ. ಉದ್ಯಮಿಗಳು ಆರ್ಥಿಕ ಕ್ಷೇತ್ರದ ಅಭಿವೃದ್ಧಿಗೆ ಈ ಕೆಳಗಿನಂತೆ ಪಾತ್ರವಹಿಸುತ್ತಾರೆ.

1) ಉದ್ಯಮಿಗಳು ಜನರ ಅನುಪಯುಕ್ತ ಉಳಿತಾಯಗಳನ್ನು ಬಂಡವಾಳ ರೂಪದಲ್ಲಿ ನಿರ್ಮಾಣ ಮಾಡುತ್ತಾರೆ. ಅವರು ಸಂಪನ್ಮೂಲಗಳನ್ನು ಉದ್ದಿಮೆಗಳನ್ನು ಪ್ರಾರಂಭಿಸಲು ಉಪಯೋಗಿಸುತ್ತಾರೆ.
2) ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸುವುದರ ಮೂಲಕ ಉದ್ಯಮಿಗಳು ಕುಶಲಕರ್ಮಿಗಳಿಗೆ, ತಾಂತ್ರಿಕ ಯೋಗ್ಯತೆ ಉಳ್ಳವರಿಗೆ ಮತ್ತು ಕಸಬುದಾರರಿಗೆ ಅಧಿಕ ಪ್ರಮಾಣದ ಉದ್ಯೋಗಗಳನ್ನು ಒದಗಿಸುತ್ತಾರೆ.
3) ಉದ್ಯಮಿಗಳು ಒಂದು ದೇಶದ ನಿವ್ವಳ ದೇಶಿಯ ಉತ್ಪನ್ನ **(GDP)** ಮತ್ತು ಜನರ ತಲಾವರಮಾನ ಹೆಚ್ಚಿಸುತ್ತಾರೆ.
4) ಉದ್ಯಮಿಗಳು ಬಂಡವಾಳ ಮತ್ತು ಕೌಶಲ್ಯವನ್ನು ಪ್ರಯೋಜನಕಾರಿಯಾಗಿ ಒಟ್ಟುಗೂಡಿಸಿ ಹೊಸವಸ್ತುಗಳನ್ನು ಮತ್ತು ಸೇವೆಗಳನ್ನು ರೂಢಿಸಿ ತಂದು ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.
5) ಉದ್ಯಮಿಗಳು ಉತ್ತಮ ವಸ್ತುಗಳನ್ನು ಕಡಿಮೆದರದಲ್ಲಿ ಜನರಿಗೆ ಒದಗಿಸಿ ಅವರ ಜೀವನಮಟ್ಟ ಉತ್ತಮಗೊಳ್ಳಲು ಶ್ರಮಿಸುತ್ತಾರೆ.
6) ಉದ್ಯಮಿಗಳು ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ. ಅವರು ಪ್ರಾಂತೀಯ ತಾರತಮ್ಯಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕ ನಿವಾರಿಸುತ್ತಾರೆ.
7) ಉದ್ಯಮಿಗಳು ಆದಾಯ ಮತ್ತು ಸಂಪತ್ತು ಒಂದು ಪ್ರದೇಶದಲ್ಲಿ ಕೇಂದ್ರೀಕೃತವಾಗುವುದನ್ನು ಕಡಿಮೆ ಮಾಡಿ ಸಮಾಜದ ಏಳಿಗೆಗೆ ಸಹಾಯ ಮಾಡುತ್ತಾರೆ.
8) ಉದ್ಯಮಿಗಳು ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.
9) ಉದ್ಯಮಿಗಳು ಹೊಸ ಬದಲಾವಣೆಗಳನ್ನು ರೂಢಿಗೆ ತಂದು ತಾಂತ್ರಿಕತೆಯನ್ನು ಬದಲಾಯಿಸಿ ಹೆಚ್ಚು ಲಾಭದಾಯಕವಾಗಲು ಶ್ರಮಿಸುತ್ತಾರೆ.

### ಉದ್ಯಮಿಗಳ ಪ್ರಾಮುಖ್ಯತೆ :

ಉದ್ಯಮಿಗಳು ಮಾರುಕಟ್ಟೆಯ ಆರ್ಥಿಕ ಸ್ಥಿತಿಯಲ್ಲಿ ಕೇಂದ್ರ ಸ್ಥಾನವನ್ನು ಅಲಂಕರಿಸಿದ್ದಾರೆ. ಈ ಉದ್ಯಮಿಗಳಲ್ಲಿ ಆರ್ಥಿಕತೆಯ ಯಂತ್ರದಲ್ಲಿ ವಿದ್ಯುತ್ತನ್ನು ಸಂಚರಿಸಲು ಸಹಕಾರಿಯಾಗುವ ಅಗ್ನಿಬಿರಟೆ **(spark plug)**ಯಂತೆ ಆರ್ಥಿಕ ಚಟುವಟಿಕೆಗಳಿಗೆ ಚೇತನ ಕೊಡುವ ಸಾಧಕರಾಗಿದ್ದಾರೆ.

© KTBS NOT TO BE REPUBLISHED

ಒಂದು ದೇಶದ ಆರ್ಥಿಕ ಯಶಸ್ಸು ವಿಶ್ವದಾದ್ಯಂತ ಹಬ್ಬಲು ಉದ್ಯಮಗಳನ್ನು ಉತ್ತೇಜಿಸಿ ಅವುಗಳಿಗೆ ಸರಿಯಾದ ಬಹುಮಾನ ಕೊಡಬೇಕಾದುದು ಅಗತ್ಯವಾಗಿದೆ. ಏಕೆಂದರೆ ಉದ್ಯಮಿಗಳು ಮತ್ತು ಅವರ ಚಟುವಟಿಕೆಗಳು ದೇಶದ ಯಶಸ್ಸು, ಅಭಿವೃದ್ಧಿ, ಬೆಳವಣಿಗೆ ಮತ್ತು ಸಮಯೋಚಿತ ವಿಮರ್ಶಾತ್ಮಕ ನಿರ್ಣಯಗಳಾಗಿರುತ್ತವೆ. ಜಗತ್ತಿನ ಅತಿ ಕ್ರಿಯಾತ್ಮಕ ಅಥವಾ ಚಲನಾತ್ಮಕ ಸಮಾಜಗಳು ಅತಿ ಹೆಚ್ಚು ಉದ್ಯಮಿಗಳಿಂದ ಕೂಡಿರುವುದಾಗಿವೆ ಹಾಗೂ ಆರ್ಥಿಕ ಮತ್ತು ಕಾನೂನಿನ ರಚನೆಗಳು ಉದ್ಯಮಿಗಳನ್ನು ಇನ್ನೂ ಗಣನೀಯ ಚಟುವಟಿಕೆಗಳನ್ನು ಕೈಗೊಳ್ಳಲು ಉತ್ತೇಜಿಸುತ್ತದೆ. ಉದ್ಯಮಿಗಳು ಜನರ ಪ್ರಯೋಜನಕಾರಿಯಲ್ಲಿರದ ಉಳಿತಾಯಗಳಿಂದ ಬಂಡವಾಳವನ್ನು ಬೆಳೆಸುತ್ತಾರೆ. ಅವರು ತಮ್ಮದೇ ಆದ ಮತ್ತು ಎರವಲು ಪಡೆದ ಸಂಪನ್ಮೂಲಗಳ ಮೂಲಕ ಉದ್ಯಮವನ್ನು ಸ್ಥಾಪಿಸುತ್ತಾರೆ. ಈ ರೀತಿಯ ಉದ್ಯಮಗಳು ಒಂದು ದೇಶದ ಮೌಲ್ಯಾಧಾರಿತ ಸಂಪತ್ತನ್ನು ಸೃಜಿಸುತ್ತವೆ. ಆರ್ಥಿಕ ಮತ್ತು ಕೈಗಾರಿಕಾಭಿವೃದ್ಧಿಗೆ ಬೇಕಾದ ಹೊಸ ವಸ್ತುಗಳನ್ನು ಮತ್ತು ಸೇವೆಗಳನ್ನು ಮಾರಾಟಕ್ಕೆ ಸಹಾಯ ಮಾಡುತ್ತಾರೆ.

ಉದ್ಯಮಿಗಳ ಸಾಮರ್ಥ್ಯ ಮತ್ತು ಪ್ರಚೋದನೆ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಉದ್ಯಮಿಯು ತನ್ನ ಉದ್ಯಮದ ನಷ್ಟಭರಿಕೆಯನ್ನು ಹೊರುತ್ತಾನೆ. ಲಾಭವನ್ನು ಹುಡುಕುತ್ತಾ ಹೋಗುತ್ತಾನೆ. ಅವಕಾಶಗಳನ್ನು ಹುಡುಕುತ್ತಾನೆ. ಲಾಭಗಳಿಸಿ ಇನ್ನೂ ತೃಪ್ತಿಕಾಣದ ಅಗತ್ಯಗಳನ್ನು ಪೂರೈಸಲು ಶ್ರಮಿಸುತ್ತಾನೆ.

**ಉದ್ಯಮಿಗಳಿಗೆ ಸ್ವಂತ ಉದ್ಯೋಗ ಅವಕಾಶಗಳು :**

ಸ್ವಂತ ಉದ್ಯೋಗಿಗಳು ಅಥವಾ ಸ್ವಉದ್ಯೋಗದಾರರು ದೇಶದ ಬೆನ್ನೆಲುಬಾಗಿದ್ದಾರೆ. ಒಂದು ರಸ್ತೆಯ ಮೂಲೆಯಲ್ಲಿನ ಚಹಾ ಅಂಗಡಿಯಿಂದ ಹಿಡಿದು, ಮಾಮ್ ಅಂಡ್ ಪಾಪ್ ಕಿರಾಣಿ ಅಂಗಡಿ, ಗುಜರಿವ್ಯಾಪಾರಿ, ಅಂತರ್ಜಾಲದ ಸೈಬರ್ ಅಂಗಡಿಗಳು ಮುಂತಾದುವೆಲ್ಲ ಸ್ವಉದ್ಯೋಗ ಸಂಸ್ಥೆಗಳಾಗಿವೆ. ಈ ಉದ್ದಿಮೆಗಳಿಗೆ ಉತ್ತೇಜನ ಬೇಕಾಗಿದೆ. ಇದರಿಂದಾಗಿ ಜಾಗತೀಕರಣ ಆರ್ಥಿಕ ವ್ಯವಸ್ಥೆಯೊಂದಿಗೆ ಪೈಪೋಟಿ ನಡೆಸಲು ಸಾಧ್ಯವಾಗುತ್ತದೆ. ಭಾರತ ಸರ್ಕಾರವು ಖಾಸಗಿ ರಂಗದ ಉದ್ಯಮಗಳಿಗೆ ಹೆಚ್ಚು ಪ್ರೋತ್ಸಾಹ ನೀಡಿ ಅವುಗಳಿಗೆ ಬೇಕಾದ ಸಾಮಾಜಿಕ, ಆರ್ಥಿಕ ವ್ಯವಸ್ಥೆ ಮತ್ತು ಪರಿಸರದ ಹೊಸಪದ್ಧತಿಯನ್ನು ಉತ್ತೇಜಿಸುತ್ತಿದೆ. ಒಬ್ಬ ಮನುಷ್ಯನು ಸ್ವಉದ್ಯಮದಿಂದ ಉದ್ಯಮಶೀಲನಾಗಲು ಅನೇಕ ಸೇವಾಸಂಸ್ಥೆಗಳನ್ನು ಕೇಂದ್ರಸರ್ಕಾರದ ಅತಿ ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ವ್ಯವಹಾರ ಸಂಸ್ಥೆಗಳ, ಮಂತ್ರಿಮಂಡಲ ಈ ಬದಲಾವಣೆಗೆ ಶ್ರಮಿಸುತ್ತದೆ. ಬಹಳಷ್ಟು ಹೊಸ ವ್ಯವಹಾರಸಂಸ್ಥೆಗಳು ಕಡಿಮೆ ಬಂಡವಾಳದಿಂದ ಪರಮಾವಧಿಯ ಪದಕ್ರಮಣಗೊಳ್ಳಲು ಸಾಧ್ಯವಾಗಿದೆ.

ಯಾರೇ ಒಬ್ಬ ಮನುಷ್ಯನಾಗಲಿ ಸ್ವಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇಷ್ಟಪಟ್ಟಲ್ಲಿ ಈ ಕೆಳಗಿನ ಯಾವುದಾದರೂ ವ್ಯವಹಾರ ಸಂಸ್ಥೆಗಳನ್ನು ಆರಿಸಿಕೊಂಡು ಸ್ಥಾಪಿಸಲು ಅನುಕೂಲತೆಗಳಿವೆ. ಅವುಗಳಲ್ಲಿ ಮುಖ್ಯವಾದುವೆಂದರೆ :

1. ಜಾಹಿರಾತು ಸೇವಾಸಂಸ್ಥೆಗಳು
2. ಮಾರುಕಟ್ಟೆ ಸಲಹಾ ಸಂಸ್ಥೆ
3. ಕೈಗಾರಿಕಾ ಸಲಹಾ ಸಂಸ್ಥೆ
4. ವಸ್ತುಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆಗೆ ನೀಡುವ ಸಂಸ್ಥೆಗಳು
5. ಛಾಯಾಪ್ರತಿ ತೆಗೆಯುವ ಕೇಂದ್ರಗಳು **(Photo copying center)**
6. ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳು

©KTBS NOT TO BE REPUBLISHED

7. ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು
8. ಅಂತರ್ಜಾಲ ಮತ್ತು ಸಂಹವನ ಅಂಗಡಿಗಳು
9. ದೂರದರ್ಶನ ಜಾಲ ಬಂಧದ ಸೇವಾಕ್ಷೇತ್ರಗಳು
10. ಕ್ರೆಚ್ ಮತ್ತು ಬ್ಯೂಟಿಪಾರ್ಲರ್‌ಗಳು

**ಸ್ವಯಂ ಉದ್ಯೋಗಕ್ಕಾಗಿ ಯೋಜನೆಗಳು :** ಯಾವುದೇ ಉದ್ಯಮ ಪ್ರಾರಂಭಿಸಲು ಹಣಕಾಸಿನ ಅವಶ್ಯಕತೆ ಮುಖ್ಯವಾಗಿದೆ. ಸಾಕಷ್ಟು ಬಂಡವಾಳ ಇಲ್ಲದೇ ಹೋದಲ್ಲಿ ಯಾವುದೇ ಉದ್ಯಮ ಸ್ಥಾಪಿಸಲು ಮತ್ತು ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ. ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಉದ್ದಿಮೆಗಳ ಸ್ಥಾಪನೆ ಅಭಿವೃದ್ಧಿ ಮತ್ತು ಅವುಗಳನ್ನು ಕಾಲಕ್ಕೆ ತಕ್ಕಂತೆ ಮಾರ್ಪಡಿಸಲು ಅನೇಕ ಹಣಕಾಸಿನ ಸಂಸ್ಥೆಗಳನ್ನು ಸ್ಥಾಪಿಸಿವೆ. ಈ ಸಂಸ್ಥೆಗಳು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೂ ಕೂಡ ಸಾಲರೂಪದಲ್ಲಿ ಹಣ ಸಹಾಯ ಮಾಡುತ್ತದೆ. ಈ ಸಂಸ್ಥೆಗಳಲ್ಲಿ ಮುಖ್ಯವಾದುವೆಂದರೆ :

1. ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು (IDBI)
2. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು (NABARD)
3. ಆಮದು ಮತ್ತು ರಫ್ತು ಬ್ಯಾಂಕು (EXIM BAND)
4. ಭಾರತೀಯ ಸಣ್ಣಕೈಗಾರಿಕಾ ಅಭಿವೃದ್ಧಿ ಬ್ಯಾಂಕು (SIDBI)
5. ಭಾರತೀಯ ಕೈಗಾರಿಕಾ ಹಣಕಾಸು ನಿಗಮ (IFCI)
6. ಭಾರತೀಯ ಕೈಗಾರಿಕೆಗೆ ಹಣಕಾಸಿನ ಹೂಡಿಕೆ ಮತ್ತು ಸಾಲದ ನಿಗಮ (ICICI)
7. ಭಾರತೀಯ ಕೈಗಾರಿಕಾ ಮರು ನಿರ್ಮಾಣ ಬ್ಯಾಂಕು
8. ಭಾರತೀಯ ವಾಣಿಜ್ಯ ಮತ್ತು ಇತರೆ ಬ್ಯಾಂಕುಗಳು
9. ರಾಜ್ಯ ಹಣಕಾಸು ನಿಗಮಗಳು (SFC)
10. ಭಾರತೀಯ ಜೀವ ವಿಮಾ ನಿಗಮ (LIC)
11. ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ (UTI)

**ಉದ್ಯಮಿಗಳ ಪ್ರವರ್ತಕ (Promotional) ಸಂಸ್ಥೆಗಳು :**

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅವುಗಳ ಮಟ್ಟದಲ್ಲಿ ಉದ್ಯಮಿಗಳನ್ನು ಬೆಂಬಲಿಸಲು, ಬೆಳೆಸಲು ಮತ್ತು ಅಭಿವೃದ್ಧಿಪಡಿಸಲು ಅನೇಕ ಕಾರ್ಯಗಳನ್ನು ಕೈಗೊಂಡಿವೆ. ಸರ್ಕಾರವು ಉದ್ಯಮಗಳನ್ನು ಸ್ಥಾಪಿಸಲು ಅನೇಕ ಸಂಸ್ಥೆಗಳನ್ನು ಮತ್ತು ಕಾರ್ಯಕರ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ಈ ಸಂಸ್ಥೆಗಳು ಉದ್ದಿಮೆಗಳನ್ನು ಹುಟ್ಟುಹಾಕಲು ಮತ್ತು ಸ್ಥಾಪಿಸಲು ಸಹಾಯ ಮಾಡುತ್ತವೆ. ಅದರಲ್ಲೂ ಸಣ್ಣ ಪ್ರಮಾಣದ, ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು ಸ್ಥಾಪಿಸಲು ಉದ್ಯಮಿಗಳಿಗೆ ಬೇಕಾದ ಹಣಕಾಸು, ತರಬೇತಿ, ಮಾರುಕಟ್ಟೆ ಮುಂತಾದವುಗಳಿಗೆ ನೆರವು ನೀಡುತ್ತದೆ. ಅವುಗಳಲ್ಲಿ ಮುಖ್ಯವಾದುವೆಂದರೆ :

1) ಜಿಲ್ಲಾ ಕೈಗಾರಿಕೆ ಕೇಂದ್ರಗಳು
2) ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ
3) ರಾಷ್ಟ್ರೀಯ ಸಣ್ಣ ಕೈಗಾರಿಗೆಗಳ ನಿಗಮ ನಿಯಮಿತ

©KTBS NOT TO BE REPUBLISHED

4) ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆ
5) ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆ
6) ಕೈಗಾರಿಕಾ ಪ್ರದೇಶಗಳು
7) ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ
8) ತಾಂತ್ರಿಕ ಸಲಹಾ ಸಂಸ್ಥೆಗಳು

**1) ಜಿಲ್ಲಾ ಕೈಗಾರಿಕಾ ಕೇಂದ್ರಗಳು :**

ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತ ಮತ್ತು ಸಮಗ್ರತೆಯನ್ನು ಕೇಂದ್ರೀಕರಿಸಲು ಈ ಸಂಸ್ಥೆಯನ್ನು ಸರ್ಕಾರವು 1978 ರಲ್ಲಿ ಸ್ಥಾಪಿಸಿತು. ಈ ಕೇಂದ್ರಗಳು ಸರ್ಕಾರದ ವಿವಿಧ ಇಲಾಖೆಗಳೊಡನೆ ಸಂಯೋಜಕರಾಗಿ ಕೆಲಸ ಮಾಡುತ್ತವೆ ಮತ್ತು ಸೇವೆಗಳನ್ನು ಒದಗಿಸುವ ಕೇಂದ್ರಗಳಾಗಿವೆ. ಈ ಕೇಂದ್ರಗಳು ಏಕಗವಾಕ್ಷ ರೀತಿಯಲ್ಲಿ ಪರಸ್ಪರ ಕಾರಬಾರಿ ಸೇವೆಯನ್ನು ಹೊಸದಾಗಿ ಉದ್ಯಮವನ್ನು ಪ್ರಾರಂಭಿಸುವವರಿಗೆ ಜಿಲ್ಲಾಮಟ್ಟದಲ್ಲಿ ಈ ಕೆಳಗಿನ ಸೇವೆಗಳನ್ನು ಒದಗಿಸುತ್ತವೆ.

1) ಉದ್ದಿಮೆಯನ್ನು ಸ್ಥಾಪಿಸಲು ಮೊದಲು ಸಿದ್ಧಪಡಿಸಬೇಕಾದ ಯೋಜನಾವರದಿ.
2) ಯಂತ್ರಗಳು ಮತ್ತು ಸಾಧನ ಸಲಕರಣೆಗಳ ಬಗ್ಗೆ ಮಾಹಿತಿ.
3) ಹೊಸದಾಗಿ ಕೈಗಾರಿಕಾ ಪ್ರದೇಶಗಳ ರಚನೆ.
4) ವಿಶೇಷ ರೀತಿಯ ಯೋಜನಾ ವರದಿಗಳನ್ನು ಅಂಗೀಕರಿಸುವುದು.
5) ಉದ್ದಿಮೆ ಅಭಿವೃದ್ಧಿ ಕಾರ್ಯಕ್ರಮದೆಡೆ ತರಬೇತಿ.
6) ಕಚ್ಚಾಪದಾರ್ಥಗಳ ಹಂಚಿಕೆ.
7) ಸ್ವಯಂ ಉದ್ಯೋಗದಡಿಯಲ್ಲಿನ ವ್ಯವಸ್ಥೆಯಲ್ಲಿ ಹಣಕಾಸಿನ ನೆರವು.
8) ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಯಮದ ಮೂಲಕ ಸಾಧನ ಸಲಕರಣೆಗಳನ್ನು ಗುತ್ತಿಗೆ ಮೂಲಕ ವ್ಯವಸ್ಥೆಮಾಡುವುದು.
9) ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾರುಕಟ್ಟೆ ಸಹಾಯ.
10) ಸರ್ಕಾರದ ಅಧೀನ ಕೈಗಾರಿಕೆಗಳ ಜೊತೆಗೂಡಿ ಸಹಾಯಕ ಸಂಸ್ಥೆಗಳಿಗೆ ನೆರವು ನೀಡುವುದು.
11) ವಸ್ತು ಪ್ರದರ್ಶನಗಳಲ್ಲಿ, ವ್ಯಾಪಾರಿ ಜಾತ್ರೆಗಳಲ್ಲಿ ಮತ್ತು ಕೊಳ್ಳುವವರು ಮತ್ತು ಮಾರುವವರು ಸಂಧಿಸುವ ಭೇಟಿಗಳಲ್ಲಿ ಮಾರುಕಟ್ಟೆ ವ್ಯವಸ್ಥೆ ಮಾಡುವುದು.
12) ಸಣ್ಣ ಕೈಗಾರಿಕೆಗಳ ನೋಂದಣಿ ವ್ಯವಸ್ಥೆಯಲ್ಲಿ, ಬ್ಯಾಂಕು ಸಾಲಗಳಲ್ಲಿ ಮತ್ತು ಉತ್ಪಾದಿತ ವಸ್ತುಗಳ ಮಾರುಕಟ್ಟೆ ಸಮಸ್ಯೆಗಳ ಕಡೆ ಗಮನಹರಿಸುವುದು.
13) ಉದ್ದಿಮೆಯನ್ನು ಆಧುನಿಕರಿಸುವಲ್ಲಿ ಸಹಾಯ ಮಾಡುವುದು.
14) ವಸ್ತುಗಳನ್ನು ರಫ್ತು ಮಾಡಲು ಸಹಾಯ ಮಾಡುವುದು.
15) ಅತಂತ್ರಗೊಳ್ಳುತ್ತಿರುವ ಉದ್ದಿಮೆಗಳಿಗೆ ಸಹಾಯ ಮಾಡುವುದು.

NOT TO BE REPUBLISHED ©KTBS

16) ಬದಲಾವಣೆ ಅಥವಾ ಮಾರ್ಪಾಡು ಮಾಡಿರುವ ವಸ್ತುಗಳಿಗೆ ಉತ್ತೇಜನ ಕೊಟ್ಟು ರಾಷ್ಟ್ರೀಯಮಟ್ಟದಲ್ಲಿ ಪ್ರಶಸ್ತಿಗಳನ್ನು ಕೊಡಲು ಪ್ರಯತ್ನಿಸುವುದು.

17) ಸಾಂಪ್ರದಾಯಿಕವಲ್ಲದ ಶಕ್ತಿಸಾಧನಗಳನ್ನು ಉಪಯೋಗಿಸಿ ವಸ್ತುಗಳ ತಯಾರಿಕೆಗೆ ಉತ್ತೇಜನ ಕೊಡುವುದು.

18) ಪ್ರಮಾಣಬದ್ಧ ವಸ್ತುಗಳ ತಯಾರಿಕೆಯಲ್ಲಿ ಸಹಾಯ ಮಾಡುವುದು.

19) ಕುಶಲಕೈಗಾರಿಕಾ ವಸ್ತುಗಳ ತಯಾರಿಕೆಯಲ್ಲಿ ಮಾದರಿ ವಸ್ತುಗಳ ತಯಾರಿಕೆಗೆ ಸಹಾಯ ಮಾಡುವುದು.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಉದ್ಯಮಿ ಎಂಬ ಪದವು ಫ್ರೆಂಚ್ ಪದ __________ ನಿಂದ ಬಂದಿದೆ.
2. ಉದ್ಯಮಿಯು ಉದ್ದಿಮೆ ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು __________ ಎನ್ನುತ್ತೇವೆ.
3. ಜಿಲ್ಲಾ ಕೈಗಾರಿಕಾ ಕೇಂದ್ರವನ್ನು __________ ರಲ್ಲಿ ಸ್ಥಾಪಿಸಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಉದ್ಯಮಿ ಎಂದರೇನು ?
2. ಉದ್ಯಮಶೀಲತೆಯು ಸಾಹಸ ಕಾರ್ಯವಾಗಿದೆ. ಹೇಗೆ ?
3. ಉದ್ಯಮಶೀಲತೆಯ ಗುಣಲಕ್ಷಣಗಳಾವುವು ?
4. ಉದ್ಯಮಿಯ ಪ್ರಾಮುಖ್ಯತೆಯನ್ನು ವಿವರಿಸಿ.
5. ಉದ್ಯಮಗಳ ಅಭಿವೃದ್ಧಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಪಾತ್ರವನ್ನು ವಿವರಿಸಿ.

**III. ಚಟುವಟಿಕೆಗಳು :**

1. ಹತ್ತಿರದ ಉದ್ಯಮ ಕೇಂದ್ರಕ್ಕೆ ಭೇಟಿ ನೀಡಿ ಉದ್ಯಮ ಸಂಸ್ಥೆಯಲ್ಲಿರುವ ಕಾರ್ಮಿಕರ ವಿವರವನ್ನು ಪಡೆಯಿರಿ.
2. ಅಂತರ್ಜಾಲದ ನೆರವಿನಿಂದ ವಿವಿಧ ಉದ್ಯಮ ಸಂಸ್ಥೆಗಳ ಪಟ್ಟಿ ತಯಾರಿಸಿ.
3. ಭಾರತದಲ್ಲಿರುವ ಪ್ರಖ್ಯಾತ ಉದ್ದಿಮೆದಾರರ ಭಾವಚಿತ್ರಗಳನ್ನು ಸಂಗ್ರಹಿಸಿ.

**IV. ಯೋಜನೆ :**

1. ನಿಮಗೆ ಹತ್ತಿರವಾಗಿರುವ ಉದ್ಯಮದಾರರೊಂದಿಗೆ ಸಂದರ್ಶನ ನಡೆಸಿ ಉದ್ಯಮವನ್ನು ಕಟ್ಟಿದ ವಿವರ ಪಡೆದು ವರದಿ ಸಿದ್ಧಪಡಿಸಿ.

NOT TO BE REPUBLISHED @KTBS

## ಅಧ್ಯಾಯ – 33

# ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

F8Y2T4

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಗ್ರಾಹಕರು, ಗ್ರಾಹಕರ ಹಕ್ಕುಗಳು, ಶೋಷಣೆ ಮತ್ತು ಗ್ರಾಹಕ ಜಾಗೃತಿ.
- ಗ್ರಾಹಕ ಸಂರಕ್ಷಣೆಯ ಕಾಯಿದೆಯ ಮುಖ್ಯಾಂಶಗಳು ಮತ್ತು ಮಹತ್ವ.
- ವಸ್ತು ಮತ್ತು ಸೇವೆಗಳನ್ನು ಪಡೆಯುವಾಗ ಮುಂಜಾಗ್ರತೆ ವಹಿಸುವ ಅಭ್ಯಾಸ.
- ಗ್ರಾಹಕ ಶಿಕ್ಷಣದ ಮಹತ್ವ ತಿಳಿದು ಗ್ರಾಹಕ ನ್ಯಾಯಾಲಯಗಳಿಗೆ ದೂರು ಸಲ್ಲಿಸುವ ವಿಧಾನ ಹಾಗೂ ಅವುಗಳ ಕಾರ್ಯ ನಿರ್ವಹಣೆ.

### ಬಳಕೆದಾರ ಮತ್ತು ಪೂರೈಕೆದಾರ

ಸೇವೆ ಮತ್ತು ವಸ್ತುಗಳನ್ನು ಬಳಸುವವರನ್ನು ಸ್ವಯಂಸೇವಾ ಸಂಸ್ಥೆಗಳು 'ಬಳಕೆದಾರ' ಎಂದು ಕರೆದವು. ಬಳಕೆದಾರರಿಂದ ಹಣ ಪಡೆದು ವಸ್ತು ಅಥವಾ ಸೇವೆಗಳನ್ನು ನೀಡುವವನೇ 'ಪೂರೈಕೆದಾರ'. ಗ್ರಾಹಕ ಸಂರಕ್ಷಣಾ ಕಾಯಿದೆಯಲ್ಲಿ ಬಳಕೆದಾರರನ್ನು ಗ್ರಾಹಕರೆಂದು ಕರೆದಿದೆ. ಗ್ರಾಹಕನು ನೀಡುವ ಹಣಕ್ಕೆ ಪ್ರತಿಫಲವಾಗಿ ಯೋಗ್ಯಮಟ್ಟದ ವಸ್ತು ಮತ್ತು ಸೇವೆಗಳನ್ನು ಒದಗಿಸುವುದು ಪೂರೈಕೆದಾರರ ಹಾಗೂ ವ್ಯಾಪಾರಿಗಳ ಕರ್ತವ್ಯವಾಗಿದೆ. ಇದನ್ನು ಪಡೆಯುವ ಹಕ್ಕು ಪ್ರತಿಯೊಬ್ಬ ಗ್ರಾಹಕನಿಗಿದೆ. ವ್ಯಾಪಾರಿಗಳು ಅಥವಾ ಪೂರೈಕೆದಾರರು ಗ್ರಾಹಕರಿಗೆ ಅನೇಕ ರೀತಿಯಲ್ಲಿ ಶೋಷಣೆ ಮಾಡುತ್ತಾರೆ. ಇದನ್ನು ತಪ್ಪಿಸಲು ಕೆಲವು ಸ್ವಯಂ ಸೇವಾ ಸಂಸ್ಥೆಗಳು, ಕೆಲವು ಆಂದೋಲನಗಳನ್ನು ಪ್ರಾರಂಭಿಸಿದರು. ಗ್ರಾಹಕ ಸಂರಕ್ಷಣೆಯ ಆಂದೋಲನ ಮೊದಲಿಗೆ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಾರಂಭವಾಯಿತು. ಭಾರತದಲ್ಲಿ ಯೋಜನಾ ಆಯೋಗವು ಭಾರತದ ಗ್ರಾಹಕ ಸಂಘದ ಸ್ಥಾಪನೆಗೆ 1956ರಲ್ಲಿ ಒತ್ತು ಕೊಟ್ಟಿತು. ಅನೇಕ ಕಾರಣಗಳಿಂದಾಗಿ ಇದು ಫಲಕಾರಿಯಾಗಲಿಲ್ಲ. ಮೊಟ್ಟ ಮೊದಲಿಗೆ ಭಾರತದಲ್ಲಿ 1965ರಲ್ಲಿ ಮುಂಬೈ ಪಟ್ಟಣದ ಕೆಲವು ಮಹಿಳೆಯರು "ಅವೇರ್" (AWARE) (The Association of Women Against Rising Expenses) ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಚಳವಳಿಯು ದೇಶದ ವಿವಿಧ ಭಾಗಗಳಲ್ಲಿ ರಾಷ್ಟ್ರೀಯ ಮಟ್ಟದ ಸೇವಾ ಸಂಸ್ಥೆಗಳು ಪ್ರಾರಂಭವಾಗಲು ಕಾರಣವಾಯಿತು. ಇವುಗಳಲ್ಲಿ ಮುಖ್ಯವಾದುವು "ರಾಷ್ಟ್ರೀಯ ಗ್ರಾಹಕ ಸಂಘಟನೆ" ಮತ್ತು "ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ಕೌನ್ಸಿಲ್" ಮುಂತಾದವು.

### ಬಳಕೆದಾರರ ಶೋಷಣೆಗೆ ಕಾರಣಗಳು

ಒಂದು ಹಂತದಲ್ಲಿ ಉತ್ಪಾದಕರು ಸೇವೆ ಮತ್ತು ಸರಕುಗಳನ್ನು ಗ್ರಾಹಕರಿಗೆ ನೇರವಾಗಿ ತಲುಪಿಸುತ್ತಿದ್ದರು. ಉದಾಹರಣೆಗೆ: ಹಾಲು, ಹಣ್ಣು, ತರಕಾರಿ ಮುಂತಾದವು. ಇಲ್ಲಿ ಮಧ್ಯವರ್ತಿಗಳ ಹಾವಳಿ ಇರಲಿಲ್ಲ. ಬೇಸಾಯದ ಉದ್ಯಮ ಹಲವು ರೀತಿಗಳಲ್ಲಿ ಬೆಳೆದಂತೆ ಮಾರಾಟ ವಿಧಾನವು ಬದಲಾಯಿತು. ಗ್ರಾಹಕ ಮತ್ತು ಪೂರೈಕೆದಾರರ ನಡುವಿನ ಅಂತರ ಹೆಚ್ಚಾಗಿ ಇವರಿಬ್ಬರ ನಡುವೆ ನೇರ ವ್ಯವಹಾರ ಇಲ್ಲವಾಯಿತು. ಉತ್ಪಾದಕರು ಹಾಗೂ ಗ್ರಾಹಕರು ಕೂಡಿ ನಿರ್ಧರಿಸಬೇಕಾದ ಬೆಲೆಯನ್ನು ಮಧ್ಯವರ್ತಿಗಳೇ ನಿರ್ಧರಿಸತೊಡಗಿದರು. ಇದರಿಂದ ಗ್ರಾಹಕರಿಗೆ ಕಷ್ಟ, ನಷ್ಟ ಮತ್ತು ಸಮಸ್ಯೆಗಳಾದವು. ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದ ಇಂದು ಮನೆಯಲ್ಲೇ ಕುಳಿತು ವಸ್ತುಗಳನ್ನು ಕೊಳ್ಳಬಹುದಾಗಿದೆ. ಇದನ್ನು 'ಟೆಲಿಷಾಪಿಂಗ್' ಎನ್ನುತ್ತಾರೆ.

© KTBS NOT TO BE REPUBLISHED

**ಟೆಲಿಶಾಪಿಂಗ್**

ಗ್ರಾಹಕರು ವಸ್ತುಗಳನ್ನು ಕೊಳ್ಳಲು ವ್ಯಾಪಾರ ಮಳಿಗೆಗಳಿಗೆ ಹೋಗುವ ಬದಲು ದೂರದರ್ಶನ ಅಥವಾ ಇತರೇ ಮಾಧ್ಯಮಗಳಲ್ಲಿ ಭಿತ್ತರಗೊಳ್ಳುವ ಜಾಹಿರಾತುಗಳನ್ನು ಗಮನಿಸಿ. ಅಂತರ್ಜಾಲ, ಎಸ್.ಎಂ.ಎಸ್ ಅಥವ ದೂರವಾಣಿಯ ಮೂಲಕ ಜಾಹಿರಾತುದಾರರನ್ನು ಸಂಪರ್ಕಿಸಿ ಬೇಕಾದ ವಸ್ತುಗಳನ್ನು ಆಯ್ಕೆ ಮಾಡಿಕೊಂಡು ಪೂರೈಸಲು ಬೇಡಿಕೆಗಳನ್ನು ಸಲ್ಲಿಸಬಹುದು. ವಸ್ತುಗಳು ಕೈಸೇರಿದ ನಂತರ ಹಣವನ್ನು ಪಾವತಿ ಮಾಡಬಹುದು. ಈ ರೀತಿಯ ವ್ಯವಹಾರವನ್ನು 'ಟೆಲಿಷಾಪಿಂಗ್' ಎನ್ನುತ್ತಾರೆ.

**ಗ್ರಾಹಕ:**

ಗ್ರಾಹಕರೆಂದರೆ ವಸ್ತುಗಳನ್ನು ಕೊಳ್ಳುವವರು ಅಥವಾ ಸೇವೆಗಳನ್ನು ಬೆಲೆಯ ರೂಪದಲ್ಲಿ ಹಣ ಅಥವಾ ವೇತನ ಪ್ರತಿಫಲ ಕೊಟ್ಟು ಕೆಲಸ ಮಾಡಿಸಿಕೊಳ್ಳುವವರಾಗಿದ್ದಾರೆ ಅಥವಾ ಪದಾರ್ಥಗಳನ್ನು ಬಳಸಿಕೊಳ್ಳುವವರಾಗಿದ್ದಾರೆ. ಯಾವುದೇ ವ್ಯವಹಾರವನ್ನು ಲಾಭದ ಉದ್ದೇಶಕ್ಕಾಗಿ ಮಾಡಿದರೆ ಅದನ್ನು ವ್ಯಾಪಾರ ಎನ್ನುತ್ತೇವೆ. ಗ್ರಾಹಕರು ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಲು ವಸ್ತುಗಳನ್ನು ಕೊಳ್ಳುತ್ತಾರೆ. ಉತ್ಪಾದಕರ ಕರ್ತವ್ಯವು ಗ್ರಾಹಕರ ಅವಶ್ಯಕತೆಗಳನ್ನು ಪೂರೈಸುವುದೇ ಆಗಿದೆ. ನಮ್ಮಲ್ಲಿ ಮುಕ್ತ ಆರ್ಥಿಕ ನೀತಿ ರೂಢಿಯಲ್ಲಿದೆ. ಗ್ರಾಹಕರನ್ನು 'ಮಾರುಕಟ್ಟೆಯ ರಾಜ' ಎಂಬುದು ಆಕರ್ಷಕವಾದ ಘೋಷಣೆಯಾಗಿದೆ. ಆದುದರಿಂದ ಗ್ರಾಹಕನು ಅತ್ಯಂತ ಪ್ರಮುಖ ಸ್ಥಾನವನ್ನು ಅಲಂಕರಿಸಿದ್ದಾನೆ. ಆದರೆ ಅನೇಕ ಸಂದರ್ಭಗಳಲ್ಲಿ ಮಾರಾಟಗಾರರು ಗ್ರಾಹಕರನ್ನು ನಿರ್ಲಕ್ಷ್ಯ ಮಾಡುತ್ತಾರೆ, ಅವರನ್ನು ಶೋಷಿಸುತ್ತಾರೆ ಹಾಗೂ ಮೋಸಗೊಳಿಸುತ್ತಾರೆ.

**'ವಿಶ್ವಗ್ರಾಹಕ ದಿನಾಚರಣೆ':**

ವಿಶ್ವಗ್ರಾಹಕ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15, 1962 ಒಂದು ಮಹತ್ವದ ದಿನವಾಗಿದೆ. ಅಂದು ಅಂದಿನ ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ ಅವರು ಅಲ್ಲಿನ ನಾಗರಿಕರಿಗೆ ಸಂರಕ್ಷತೆ, ಮಾಹಿತಿ, ನಿವೇದನೆ ಮತ್ತು ಪರಿಹಾರ ಎಂಬ ನಾಲ್ಕು ಹಕ್ಕುಗಳನ್ನು ನೀಡುವ ವಿಧೇಯಕವನ್ನು ಅಂಗೀಕರಿಸಿದರು. ಈ ಕಾರಣದಿಂದ ಪ್ರತಿ ವರ್ಷವು ಮಾರ್ಚ್ 15ನೇ ತಾರೀಖಿನಂದು ವಿಶ್ವಗ್ರಾಹಕರ ಹಕ್ಕುಗಳ ದಿನ ಆಚರಿಸಲಾಗುತ್ತದೆ.

**ಗ್ರಾಹಕ ರಕ್ಷಣೆ:**

ಗ್ರಾಹಕರನ್ನು ಉತ್ಪಾದಕರ ಮತ್ತು ವ್ಯಾಪಾರಿಗಳ ಶೋಷಣೆಯಿಂದ ರಕ್ಷಿಸಲು ಕೈಗೊಂಡಿರುವ ಕಾರ್ಯಗಳನ್ನು ಗ್ರಾಹಕ ರಕ್ಷಣೆ ಎನ್ನುತ್ತಾರೆ. ಶೋಷಣೆಯಿಂದ ಮುಕ್ತಗೊಳಿಸಲು ಗ್ರಾಹಕ ರಕ್ಷಣೆ ಅಗತ್ಯವಾಗಿದೆ. ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸಲು ಅನೇಕ ಹಕ್ಕುಗಳನ್ನು ಮತ್ತು ಭರವಸೆಗಳನ್ನು ಕೊಡಲಾಗಿದೆ. ಈ ಭರವಸೆಗಳನ್ನು ಗ್ರಾಹಕರ ಹಕ್ಕುಗಳು ಎನ್ನುತ್ತೇವೆ.

**ಗ್ರಾಹಕ ಸಂರಕ್ಷಣಾ ಕಾಯ್ದೆ:**

ನಿರಂತರ ಶೋಷಣೆಯಿಂದ ಬೇಸತ್ತ ಕೆಲವರು ಬಳಕೆದಾರರ ಅಸಹಾಯಕತೆಯನ್ನು ಅರಿತು ಗ್ರಾಹಕರ ಪರವಾದ ಹೋರಾಟ, ಚಳವಳಿಗಳನ್ನು ಆರಂಭಿಸಿದರು. (ಕೆಲವನ್ನು ಈ ಅಧ್ಯಾಯದ ಮೊದಲ ಪ್ಯಾರಾಗ್ರಾಫಿನಲ್ಲಿ ಕೊಡಲಾಗಿದೆ) ಈ ರೀತಿಯ ಒತ್ತಡಗಳಿಂದ ಸರ್ಕಾರ ಎಚ್ಚೆತ್ತುಕೊಂಡು

©KTBS NOT TO BE REPUBLISHED

ಗ್ರಾಹಕರ ಪರವಾದ ಹೊಸ ಕಾಯಿದೆಗಳನ್ನು ರೂಪಿಸಿತು. ಕಳೆದ ಐದು ದಶಕಗಳಲ್ಲಿ ಸುಮಾರು ಮೂವತ್ತಕ್ಕಿಂತ ಹೆಚ್ಚು ಕಾಯ್ದೆಗಳು ಅನುಷ್ಠಾನಗೊಂಡಿವೆ. ಉದಾಹರಣೆ – ಅಗತ್ಯ ವಸ್ತುಗಳ ಕಾಯ್ದೆ, ತೂಕ ಮತ್ತು ಅಳತೆ ಕಾಯ್ದೆ, ಆಹಾರ ಕಲಬೆರಕೆ ಪ್ರತಿಬಂಧಕ ಕಾಯ್ದೆ ಇತ್ಯಾದಿ. ಭಾರತ ಸರ್ಕಾರವು 1986ರಲ್ಲಿ ಜಾರಿಗೆ ತಂದ ಗ್ರಾಹಕ ಸಂರಕ್ಷಣಾ ಕಾಯ್ದೆ ಈ ದಿಸೆಯಲ್ಲಿ ಅತ್ಯಂತ ಮಹತ್ವದ್ದಾಗಿದೆ.

**ಕಾಯ್ದೆಯ ಮುಖ್ಯ ಉದ್ದೇಶಗಳು**

- ಗ್ರಾಹಕ ಸಂರಕ್ಷಣಾ ಕಾಯ್ದೆಯು ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಪ್ರಾಶಸ್ತ್ಯ ನೀಡುವುದು.
- ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟವನ್ನು ತಪ್ಪಿಸುವುದು.
- ಮಾರುಕಟ್ಟೆಯಲ್ಲಿ ನಡೆಯಬಹುದಾದ ಅನುಚಿತ ವ್ಯವಹಾರ ಪದ್ಧತಿಗಳನ್ನು ತಡೆಗಟ್ಟುವುದು.
- ಗುಣಮಟ್ಟ, ಅಳತೆ, ತೂಕ, ಬೆಲೆ ಇತ್ಯಾದಿಗಳ ಮೇಲೆ ನಿಗಾವಹಿಸುವುದು.
- ಬಳಕೆದಾರರು ತಾವು ಖರೀದಿಸುವ ವಸ್ತು ಅಥವಾ ಸೇವೆಗಳಿಂದ ತೊಂದರೆಗೆ ಒಳಗಾದಲ್ಲಿ ಅವರಿಗೆ ಸೂಕ್ತ ಪರಿಹಾರ ಕೊಡಿಸುವುದು.
- ಗ್ರಾಹಕ ಶಿಕ್ಷಣ ನೀಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.

ಒಟ್ಟಿನಲ್ಲಿ ಆರೋಗ್ಯಕರ ಸ್ಪರ್ಧೆಯೊಂದಿಗೆ ಯೋಗ್ಯ ಬೆಲೆಗೆ ಉತ್ತಮ ಗುಣಮಟ್ಟದ ವಸ್ತು ಅಥವಾ ಸೇವೆ ದೊರೆಯುವಂತೆ ಮಾಡುವುದು ಈ ಕಾಯ್ದೆಯ ಮುಖ್ಯ ಉದ್ದೇಶವಾಗಿದೆ.

©KTBS NOT TO BE REPUBLISHED

ಗ್ರಾಹಕ ಸಂರಕ್ಷಣಾ ಕಾಯಿದೆಯು ಭಾರತದ ಎಲ್ಲ ಪ್ರದೇಶಗಳಿಗೂ ಅನ್ವಯವಾಗುತ್ತದೆ. ಈ ಕಾಯಿದೆಯು ಈ ಮುಂದೆ ಕೊಟ್ಟಿರುವಂತೆ ಗ್ರಾಹಕ ಹಿತಾಸಕ್ತಿಗಳನ್ನು ಕಾಪಾಡುತ್ತದೆ.

- ಗ್ರಾಹಕರ ಜೀವನ ಮತ್ತು ಆಸಕ್ತಿಗೆ ಅಪಾಯಕಾರಿಯೆನಿಸುವ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕು.
- ಮಾಹಿತಿ ಪಡೆಯುವ ಹಕ್ಕು : ಸರಕುಗಳ ಮತ್ತು ಸೇವೆಗಳ ಗುಣಮಟ್ಟ, ಪ್ರಮಾಣ, ಶಕ್ತಿ ಸಾಮರ್ಥ್ಯ, ಪರಿಶುದ್ಧತೆ ಮತ್ತು ಬೆಲೆಗಳ ವಿರುದ್ಧ ಮಾಹಿತಿ ಪಡೆಯುವ ಹಕ್ಕು.
- ವಸ್ತುಗಳ ಆಯ್ಕೆಯ ಹಕ್ಕು : ಸ್ಪರ್ಧಾತ್ಮಕ ಬೆಲೆಗಳಲ್ಲಿ ವೈವಿಧ್ಯಮಯವಾದ ಸರಕುಗಳನ್ನು ಆರಿಸಿಕೊಳ್ಳುವ, ಅಥವಾ ಆಯ್ಕೆ ಮಾಡುವ ಹಕ್ಕು.
- ವಸ್ತುಗಳ ಬಗ್ಗೆ ಆಲಿಸುವ ಹಕ್ಕು : ಗ್ರಾಹಕರ ಇಷ್ಟಗಳನ್ನು ಕೇಳಿ ತಿಳಿದುಕೊಂಡು ಅವನ್ನು ಸೂಕ್ತ ರೀತಿಯಲ್ಲಿ ಪರಿಗಣಿಸುವ ಹಕ್ಕು.
- ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು : ಗ್ರಾಹಕರಿಗೆ ವಂಚನೆ ಅಥವಾ ಮೋಸಮಾಡುವ ಆಚರಣೆಗಳ ವಿರುದ್ಧ ಹಕ್ಕು ಪಡೆಯುವುದು.
- ಗ್ರಾಹಕ ಶಿಕ್ಷಣದ ಹಕ್ಕು : ಗ್ರಾಹಕರಿಗೆ ಅವರ ಹಕ್ಕುಗಳ ಬಗ್ಗೆ ಸರಿಯಾದ ತಿಳುವಳಿಕೆ ಪಡೆಯುವ ಹಕ್ಕು.
- ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು.
- ಗ್ರಾಹಕರಿಗೆ ಉತ್ತಮ ಆರೋಗ್ಯಕರ ಮತ್ತು ಭೌತಿಕ ಪರಿಸರಗಳನ್ನು ಉಂಟುಮಾಡಿ ಅವರ ಜೀವನ ರೀತಿಗಳನ್ನು ಉತ್ತಮ ಪಡಿಸಿಕೊಳ್ಳುವ ಹಕ್ಕು.

ಗ್ರಾಹಕ ಸಂರಕ್ಷಣಾ ಕಾಯಿದೆಯು ಕೇಂದ್ರ ಸಂರಕ್ಷಣಾ ಮಂಡಲಿಯ ಸ್ಥಾಪನೆಗೆ ಎಡೆಮಾಡಿಕೊಟ್ಟಿತು. ಈ ಕಾಯಿದೆಯ ಪ್ರಕಾರ ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ವೇದಿಕೆ, ರಾಜ್ಯಮಟ್ಟದಲ್ಲಿ ರಾಜ್ಯ ಗ್ರಾಹಕ ಸಂರಕ್ಷಣಾ ವೇದಿಕೆ, ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಗ್ರಾಹಕರ ಸಂರಕ್ಷಣಾ ಮಂಡಲಿಗಳನ್ನು ಸ್ಥಾಪಿಸಿದೆ. ಕೇಂದ್ರ ಸರ್ಕಾರದ ಗ್ರಾಹಕರ ಕಲ್ಯಾಣ ಇಲಾಖೆಯ ಮಂತ್ರಿಗಳು ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ವೇದಿಕೆಯ ಅಧ್ಯಕ್ಷರಾಗಿರುತ್ತಾರೆ. ಇದೇ ರೀತಿ ರಾಜ್ಯ ಸರ್ಕಾರದ ಗ್ರಾಹಕ ಸಂಬಂಧಿ ಇಲಾಖೆಯ ಮಂತ್ರಿಗಳು ರಾಜ್ಯ ಗ್ರಾಹಕ ಸಂರಕ್ಷಣಾ ವೇದಿಕೆಯ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಗ್ರಾಹಕ ಸಂರಕ್ಷಣಾ ಮಂಡಲಿಗೆ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ.

ಗ್ರಾಹಕ ಸಂರಕ್ಷಣೆಯ ಕಾಯ್ದೆಯ ಪ್ರಕಾರ ಗ್ರಾಹಕರ ಸಂರಕ್ಷಣೆಗೆ ಈ ಕೆಳಗಿನ ವೇದಿಕೆಗಳನ್ನು ನಿರ್ಮಿಸಲಾಗಿದೆ.

i) ಜಿಲ್ಲಾ ವೇದಿಕೆ (District Forum)

ii) ರಾಜ್ಯ ಆಯೋಗ (State commission)

iii) ರಾಷ್ಟ್ರೀಯ ಆಯೋಗ (National Commission)

**ಈ ವೇದಿಕೆ ಅಥವಾ ಆಯೋಗಗಳ ಕಾರ್ಯಭಾರಗಳು:**

**i) ಜಿಲ್ಲಾ ವೇದಿಕೆ (District Forum):** ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ವೇದಿಕೆ ಇರುತ್ತದೆ ಜಿಲ್ಲಾವೇದಿಕೆಯ ನ್ಯಾಯ ಪೀಠಕ್ಕೆ ರಾಜ್ಯ ಸರ್ಕಾರದಿಂದ ನಾಮಾಂಕಿತಗೊಂಡ ಜಿಲ್ಲಾ ನ್ಯಾಯಾಧೀಶರ ಅರ್ಹತೆಯುಳ್ಳ ವ್ಯಕ್ತಿಯು ಅಧ್ಯಕ್ಷರಾಗಿರುತ್ತಾರೆ. ಈ ವೇದಿಕೆಯು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರದ ಗ್ರಾಹಕರ ದೂರುಗಳನ್ನು ತೆಗೆದುಕೊಳ್ಳುತ್ತದೆ. ಇದರಲ್ಲಿ ಇಬ್ಬರು ಸದಸ್ಯರಿದ್ದು ಅವರಲ್ಲಿ ಒಬ್ಬರು ಮಹಿಳೆಯಾಗಿರುತ್ತಾರೆ.

**ii) ರಾಜ್ಯ ಆಯೋಗ (State commission)** : ಈ ಆಯೋಗಕ್ಕೆ ರಾಜ್ಯದ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾಗಲೀ ಅಥವಾ ಹಾಲಿ ನ್ಯಾಯಾಧೀಶರಾಗಲಿ ಅಧ್ಯಕ್ಷರಾಗಿರುತ್ತಾರೆ. ಇದರಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಸಾಮರ್ಥ್ಯವನ್ನು ಹೊಂದಿರುವ ಇಬ್ಬರು ಸದಸ್ಯರಿರುತ್ತಾರೆ. ಅವರಲ್ಲಿ ಒಬ್ಬರು ಮಹಿಳಾ ಸದಸ್ಯರಾಗಿರುತ್ತಾರೆ. ಈ ಆಯೋಗವು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದ್ದು ಒಂದು ಕೋಟಿ ರೂಪಾಯಿಯವರೆಗಿನ ಮೌಲ್ಯದ ಗ್ರಾಹಕ ದೂರುಗಳನ್ನು ತೆಗೆದುಕೊಳ್ಳುತ್ತದೆ.

**iii) ರಾಷ್ಟ್ರೀಯ ಆಯೋಗ (National Commission) :** ಈ ಆಯೋಗವು ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟ ಸರ್ವೋಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶರ ಅಧ್ಯಕ್ಷತೆಯಿಂದ ಕೂಡಿರುತ್ತದೆ. ಇಲ್ಲಿ ಇತರೆ ನಾಲ್ಕು ಸದಸ್ಯರಿರುತ್ತಾರೆ. ಇವರು ಸಾರ್ವಜನಿಕ ವ್ಯವಹಾರ ಅಥವ ಆಡಳಿತದಲ್ಲಿ ನುರಿತವರಾಗಿರಬೇಕು. ಇವರಲ್ಲಿ ಒಬ್ಬರು ಮಹಿಳಾ ಸದಸ್ಯರಿರುತ್ತಾರೆ. ಈ ಆಯೋಗವು ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಮೌಲ್ಯದಿಂದ ಕೂಡಿದ್ದರೆ ಅಂತಹ ದೂರುಗಳನ್ನು ಇತ್ಯರ್ಥ ಮಾಡುತ್ತದೆ.

NOT TO BE REPUBLISHED ©KTBS

## ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳು

- ದೂರುಗಳು ಕೈಬರಹದ ಅಥವಾ ಬೆರಳಚ್ಚಿನ ಮಾದರಿಯಲ್ಲಿರಬೇಕು.
- ಈ ಮಾಹಿತಿಯಲ್ಲಿ ದೂರುಕೊಡುವವನ ಹೆಸರು, ವಿಳಾಸ ಮತ್ತು ದೂರವಾಣಿಯ ಸಂಖ್ಯೆ ಸರಿಯಾಗಿ ನಮೂದಿಸಿರಬೇಕು.
- ಯಾವ ವ್ಯಾಪಾರಿ ಅಥವಾ ಪೂರೈಕೆದಾರನ ವಿರುದ್ಧ ದೂರು ಕೊಡಬೇಕೆಂಬುದನ್ನು ಪೂರ್ಣವಾಗಿ ನಮೂದಿಸಿರಬೇಕು.
- ಯಾವ ವಸ್ತುವಿನಿಂದ ನಷ್ಟವಾಗಿದೆ ಅಥವಾ ಮೋಸವಾಗಿದೆ ಎಂಬುದು ಮತ್ತು ನಷ್ಟ ಹೊಂದಿರುವ ಮೊಬಲಗೆಷ್ಟೆಂಬುದನ್ನು ಸರಿಯಾಗಿ ನಮೂದಿಸಿರಬೇಕು.
- ನಷ್ಟದ ಸೂಕ್ತ ಪರಿಹಾರದ ಮೊಬಲಗು ಹಾಗೂ ಇದಕ್ಕೆ ಸಂಬಂಧಪಟ್ಟ ರಸೀದಿ ಅಥವ ಬಿಲ್ಲನ್ನು ಲಗತ್ತಿಸಬೇಕು.
- ದೂರಿಗೆ ಯಾವುದೇ ಶುಲ್ಕ ಅಥವಾ ನೋಂದಾವಣಿ ಶುಲ್ಕ ಇರುವುದಿಲ್ಲ.
- ಗ್ರಾಹಕನೇ ನೇರವಾಗಿ ತನ್ನ ದೂರನ್ನು ಅಧ್ಯಕ್ಷರ ಮುಂದೆ ವಾದಿಸಬಹುದು ವಕೀಲರು ಬೇಕಾಗಿಲ್ಲ.

NOT TO BE REPUBLISHED @KTBS

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಗ್ರಾಹಕನಿಗಿರುವ ಮತ್ತೊಂದು ಹೆಸರು __________ .
2. ಹಣಪಡೆದು ವಸ್ತು ಅಥವಾ ಸೇವೆಯನ್ನು ನೀಡುವಾತ __________ .
3. ಪ್ರತಿವರ್ಷ ವಿಶ್ವ ಗ್ರಾಹಕರ ದಿನವನ್ನು __________ ರಂದು ಆಚರಿಸುತ್ತೇವೆ.
4. ಪರಿಹಾರ ಮೊತ್ತವು 20 ಲಕ್ಷ ರೂಪಾಯಿಗಳನ್ನು ಮೀರಿದ್ದರೆ ದೂರನ್ನು __________ ಆಯೋಗಕ್ಕೆ ಸಲ್ಲಿಸಬೇಕು.


**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಗ್ರಾಹಕ ಎಂದರೆ ಯಾರು?
2. ಗ್ರಾಹಕ ಆಂದೋಲನದ ಮೂಲ ಆಶಯ ಯಾವುದು?
3. ಪ್ರತಿಯೊಬ್ಬ ಗ್ರಾಹಕನಿಗಿರುವ ಹಕ್ಕು ಯಾವುದು?
4. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಯಾವಾಗ ಜಾರಿಗೆ ಬಂತು?
5. ಜಿಲ್ಲಾ ಗ್ರಾಹಕ ನ್ಯಾಯಪೀಠದ ಅಧ್ಯಕ್ಷರನ್ನು ಯಾರು ನೇಮಿಸುತ್ತಾರೆ?

**III.** **ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳೇನು?
2. ಬಳಕೆದಾರರ ಶೋಷಣೆಗೆ ಕಾರಣಗಳಾವುವು?
3. ಗ್ರಾಹಕ ಸಂರಕ್ಷಣಾ ಕಾಯ್ದೆಯ ನಾಲ್ಕು ಮುಖ್ಯ ಉದ್ದೇಶಗಳನ್ನು ತಿಳಿಸಿರಿ.
4. ಗ್ರಾಹಕ ಸಂರಕ್ಷಣಾ ಪರಿಷತ್ತಿನ ಮುಖ್ಯ ಕಾರ್ಯವೇನು?
5. ಮೂರು ಹಂತದ ಗ್ರಾಹಕ ನ್ಯಾಯಾಲಯಗಳನ್ನು ತಿಳಿಸಿರಿ.
6. ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳಾವುವು?

**IV.** **ಇಲ್ಲಿ ಕೊಟ್ಟಿರುವ ಚಿತ್ರವನ್ನು ಗಮನಿಸಿ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**




1. ಪ್ಯಾಕೆಟ್ ಮೇಲೆ ನಮೂದಿಸಿದ ಉತ್ಪಾದನಾ ಸಂಸ್ಥೆಯ ಹೆಸರೇನು?
2. ನಮೂದಿಸಿರುವ ಗರಿಷ್ಠ ಮಾರಾಟದ ಬೆಲೆ ಎಷ್ಟು?
3. ಈ ವಸ್ತುವನ್ನು ತಯಾರಿಸಿದ ದಿನಾಂಕ ಯಾವುದು?
4. ಯಾವ ದಿನಾಂಕದೊಳಗೆ ಇದನ್ನು ಬಳಸಬೇಕು?

**V. ಚಟುವಟಿಕೆಗಳು :**

1. ನಿಮ್ಮ ಜಿಲ್ಲಾ ಕೇಂದ್ರದಲ್ಲಿರುವ ಜಿಲ್ಲಾ ಗ್ರಾಹಕ ವೇದಿಕೆಗೆ ಶಿಕ್ಷಕರೊಂದಿಗೆ ಭೇಟಿ ನೀಡಿ, ಅಲ್ಲಿನ ಕಾರ್ಯವಿಧಾನಗಳನ್ನು ಗಮನಿಸಿ ಮಾಹಿತಿ ಸಂಗ್ರಹಿಸಿರಿ.
2. ಗ್ರಾಹಕ ಜಾಗೃತಿ ಮೂಡಿಸಬಲ್ಲ ನಾಲ್ಕು ಘೋಷಣೆಗಳನ್ನು ಸಿದ್ಧಪಡಿಸಿರಿ.
3. ವಿಶ್ವಗ್ರಾಹಕ ದಿನಾಚರಣೆಯಂದು ಜಾಥ ಕೈಗೊಂಡು ಗ್ರಾಹಕ ಜಾಗೃತಿಯಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿರಿ.
4. ವಿವಿಧ ರೀತಿಯ ರಶೀದಿ(ಬಿಲ್ಲು)ಗಳನ್ನು ಸಂಗ್ರಹಿಸಿರಿ.

**VI. ಕಾರ್ಯಯೋಜನೆ :**

ವಸ್ತುವೊಂದರ ಖರೀದಿಯಲ್ಲಿ ನೀವು ಮೋಸಹೋದ ಒಂದು ಸಂದರ್ಭವನ್ನು ಕಲ್ಪಿಸಿಕೊಂಡು ಜಿಲ್ಲಾ ಗ್ರಾಹಕ ವೇದಿಕೆಗೆ ಸಲ್ಲಿಸುವ ದೂರನ್ನು ಸಿದ್ಧಪಡಿಸಿರಿ. ಸೂಕ್ತ ದಾಖಲೆಗಳನ್ನು ನೀವೇ ಸೃಷ್ಟಿಸಿಕೊಳ್ಳಿರಿ.

* * *

© KTBS NOT TO BE REPUBLISHED